
ಡಿಗರ ಮನೆ ಮನೆಯ ವಾರಪತ್ರಿಕೆ
26–4–92, ರೂ. 4–5
ರಾ ಂ ಗ ಮ
ಈ ವಾರದ
ಸಂಪೂರ್ಣ ಕಾದಂಬರಿ
ಪಯಣದ ಹಾದಿ
ರೇಖಾ ಕಾಖಂಡಕಿ

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 26–4–92 | ರಾಗ : 9

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ	ಕಲೆ
ಎನ್. ಸುಂದರ್ ರಾಜನ್	ಜೆ...
ಸಂಪಾದಕಿ	ಮುಖಪುಟ
ಕಮಲಾ ಸುಂದರ್ ರಾಜನ್	ಮಾಧುರಿ
ಸಹಾಯಕ ಸಂಪಾದಕಿ	ವರ್ಣ ಪಾರದರ್ಶಿಕೆ
ಎಸ್. ರೇಖಾ	ಕೆ. ಪ್ರವೀಣ ನಾಯಕ್

ಸಂಗಮ ಪ್ರಕಾಶನ

ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
13 ಸಂಚಿಕೆಗಳು (3 ತಿಂಗಳು)	ರೂ. 60
ಬಿಡಿ ಪ್ರತಿಯ ಬೆಲೆ	ರೂ. 4.50

ಕಾದಂಬರಿ

ವಿಭಾಗ



ರೇಖಾ ಕಾಖಂಡಕಿ

ಸಂಪೂರ್ಣ ಕಾದಂಬರಿ



ಪಯಣದ ಹಾದಿ



ರೇಖಾ ಕಾಖಂಡಕಿ



ಸಂದೀಪ


"ನನ್ನ ಜೀವನದಲ್ಲಿ ಕಲಾವಿದರಿಗೆ ಸ್ಥಾನವಿಲ್ಲ. ನಾನು ಚಿತ್ರಕಲೆಯಾಗಲಿ, ಯಾವುದೇ ಕಲೆ ಇರಲಿ ಅದನ್ನು ದ್ವೇಷಿಸುತ್ತೇನೆ. ನೀನು ಈ ಮನೆಯಲ್ಲಿ ಇರುವವರೆಗೆ ಕಲೆಯ ಕನಸನ್ನೆಲ್ಲ ಗಂಟು ಕಟ್ಟಿ ಕಸದ ಬುಟ್ಟಿಯಲ್ಲಿಡು."

"ಯಾವುದನ್ನೂ ತಲೆಗೆ ಹಚ್ಚಿಕೊಳ್ಳಬೇಡ. ನಿನ್ನ ಮಗಳು ಬಾಲ್ಯದಲ್ಲೇ ಆ ಕುಟುಂಬದಲ್ಲಿ ಬೆಳೆದದ್ದರಿಂದ ಮನ ಅತ್ತ ಎಳೆಯಬಹುದು; ನೀನು ಏರಬೇಕಾದ ಉನ್ನತಿ ಈಕಡೆ ಇದೆ. ಚಿತ್ರಕಲೆಯಲ್ಲಿ ನಿನ್ನನ್ನು ಗುರುತಿಸಿಕೋ."



ವಿವೇಕ

"ನಾನು ಇಂದು ಒಂಟಿ. ನಿಜ ವಿವೇಕ ನೀನು ನನ್ನನ್ನು ಒಂಟಿಯಾಗಿರಲು ಬಿಡುವುದಿಲ್ಲ. ಆದರೆ ನನ್ನ ಸ್ನೇಹದಿಂದಾಗಿ ನಿನ್ನ ಬಾಳು ಬಾಡಿ ಹೋಗುವುದನ್ನು ನಾನು ಸಹಿಸುವುದಿಲ್ಲ. ಇನ್ನೆಂದೂ ನನ್ನನ್ನು ಭೇಟಿ ಮಾಡಲು ಯತ್ನಿಸಬೇಡ."



ನಂದಿನಿ

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

ಗಾಢವಾದ ಕತ್ತಲೆಯನ್ನು ಗುದ್ದುತ್ತ ಗಳಿಗೆ ಗಳಿಗೆಗೂ ಬೆಳಕಿನ ಬೆಂಕಿಯನ್ನು ರಸ್ತೆಗೆ ತೂರುತ್ತ ರೈಲು ಹಳಿಗುಂಟ ಸಾಗುತ್ತಿತ್ತು. ಗಂಟೆ ಎಷ್ಟಾಗಿರಬೇಕು ನೋಡುವ ತಾಳ್ಮೆಯೂ ನನಗಿರಲಿಲ್ಲ. ಈ ಪಯಣದ ಗುರಿ ಏನಾಗಬಹುದು, ಏನಾಗಬೇಕು ಎಂದುಕೊಂಡಿರಲಿಲ್ಲ. ನನ್ನ ಕನಸಿನ ಬಣ್ಣಗಳನ್ನು ಇಲ್ಲಿ ಅರಳಿಸಬೇಕು. ಕಲೆ ನನ್ನ ಬದುಕಾಗಬೇಕು ಎಂದುಕೊಂಡವಳು ನಾನು. ಶಾಂತಿನಿಕೇತನದ ಪ್ರಶಾಂತ ವಾತಾವರಣದ ಬೆಳಕಿನಡಿ ನನ್ನ ಕತ್ತಲ ಜೀವನವನ್ನು ಮರೆಯಬೇಕು. ಅಲ್ಲಿಯ ಆಶ್ರಮ, ಪರಿಸರ, ಹಸಿರು ತಾಣ; ಕಲೆ ಸೃಷ್ಟಿಗೊಳ್ಳುವುದು ಅಂಥ ಸನ್ನಿಧಿಯಲ್ಲಿ. ಬೆಳ್ಳಿಯ ಬೆಳಕು ಬಣ್ಣ ಹಿಡಿಯುತ್ತದೆ ಅಲ್ಲಿ. ಮೂಗನೂ ಸಂಗೀತವನ್ನು ಹಾಡಬಲ್ಲನೆಂಬ ಪ್ರಭಾವದ ಚೈತನ್ಯದಲ್ಲಿ ತನ್ನ ಬರಡಾದ ಕನಸುಗಳು ಬಯಲಾದ ಭಾವಗಳು ಬಣ್ಣ ತುಂಬಿ ನಿಲ್ಲಲಾರದೆ?

ಎಲ್ಲವನ್ನು, ಎಲ್ಲರನ್ನು ತೊರೆದು ನಾನು ಬಂದದ್ದೇಕೆ? ಕಲೆಗಾಗಿಯೆ?

ಹುಚ್ಚಿ ಕಲೆಗಾರರೆಲ್ಲ ಸಂಸಾರ ತೊರೆದು ಕಲೆಯ ಗುರಿಯನ್ನರಸಿಕೊಂಡು ಹೋಗುವುದಿಲ್ಲ. ಎಲ್ಲ ಸಂಬಂಧಗಳ ಸೂಕ್ಷ್ಮತೆಯ ಬಿಗುವಿನಲ್ಲಿ, ಬಂಧನದಲ್ಲಿ, ಅನುಭವದ ಸಾಕ್ಷಾತ್ಕಾರದಲ್ಲಿ, ಕಲೆಯ ಸಾರ್ಥಕತೆ ಪಡೆಯುತ್ತಾರೆ.

ನಿಜ.

ತಾನು ಹಾಗಾಗಬೇಕೆಂದೇ ಅಲ್ಲವೆ ಬಯಸಿದ್ದು.

ಆದರೆ ಏನಾಗಿತ್ತು?

ಮದ್ರಾಸ್ ಬಿಟ್ಟು ಬರುವಾಗ ಬಸ್ ನಿಲ್ದಾಣಕ್ಕೆ ಬಂದಿದ್ದ ವಿವೇಕ ನಿರ್ಜೀವವಾಗಿದ್ದ. ತನ್ನ ಕೈಯನ್ನು ತನ್ನ ಅಂಗೈಯಲ್ಲಿ ಹಿಡಿದುಕೊಂಡಿದ್ದ, ಎಷ್ಟೊಂದು ಭರವಸೆ, ಆತ್ಮೀಯತೆ, ನಂಬಿಕೆ, ಆತ್ಮವಿಶ್ವಾಸವಡಗಿತ್ತು ಆ ಒಂದು ಹಿಡಿತದಲ್ಲಿ.

"ನಂದೂ, ನೀನ್ಯಾಕೆ ಇದ್ದಕ್ಕಿದ್ದಂತೆ ಈ ನಿರ್ಧಾರ ಮಾಡಿದ್ದೀಯಾ, ಇಲ್ಲಿಯೇ ಇರು. ನಿನ್ನ ಕಲಾಜೀವನಕ್ಕೆ ನಾನೆಂದೂ ಧಕ್ಕೆ ತರೋಲ್ಲ, ನಿನ್ನ ಕನಸಿನ ಬಣ್ಣಗಳನ್ನೇ ರಾಡಿ ಮಾಡೋಲ್ಲ, ಈ ನಿನ್ನ ಅಪರೂಪದ ಬೆರಳುಗಳಿಂದ ಎಂತೆಂತಾ ಚಿತ್ರಗಳು ಮೈ ತಳೆದು ಬರಬೇಕೊ ಅವೆಲ್ಲಕ್ಕೂ ನಾಂದಿ ಹಾಡುತ್ತೇನೆ ನಾನು, ಇಲ್ಲಿಯೇ ಇರು'' ಎಂದಿದ್ದ.

ನಾನು ಏನೂ ಮಾತನಾಡಲಿಲ್ಲ, ಏನು ಮಾತನಾಡಲು ಸಾಧ್ಯವಿತ್ತು?

ನಮ್ಮಿಬ್ಬರ ಸಂಬಂಧದಲ್ಲಿ ಕಲ್ಮಶವಿರಲಿಲ್ಲ. ತಿಳಿ ಸುವಾಸನೆಗೆ ಹಾಕಿದ ಸ್ವಚ್ಛವಾದ ಬಿಳಿ ಹಾಳೆಯಂತೆ ನಮ್ಮ ಸಂಬಂಧ. ವಿವೇಕ, ಆದರೂ ಜನ ಇದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಇದನ್ನು ಜನ ವಿವಾಹ ಬಾಹಿರ ಸಂಬಂಧ ಎಂದುಕೊಳ್ಳುತ್ತಾರೆ.

ಎಷ್ಟೋ ಬಾರಿ ವೇದನೆಗೊಂಡ ತನ್ನನ್ನು ಎದೆಗೊತ್ತಿಕೊಂಡಿದ್ದ, ತಲೆ ನೇವರಿಸಿ ಸಂತೈಸಿದ್ದ.

"ಅವರಿವರ ಮಾತು ನೀನು ಕೇಳಬೇಡ ನಂದಿನಿ. ನಿನಗೆ ನಿನ್ನ ಗಂಡನೆಂಬುವನ ಮನೆಯ ಬಾಗಿಲು ಎಂದಿಗೆ ಮುಚ್ಚಿತೋ, ಅಂದೇ ನಿನ್ನ ಅವನ ಸಂಬಂಧ ಮುಗಿಯಿತು. ನಿನಗೆ ನಾನಿದ್ದೇನೆ. ಗೆಳೆಯನೆಂದುಕೋ, ಬಂಧುವೆಂದುಕೋ, ಆತ್ಮೀಯ ಸ್ನೇಹಿತನೆಂದುಕೋ ನೀನು ಬಯಸುವತನಕ ನೀನಿಲ್ಲಿ ಯೋಚನೆಯಿಲ್ಲದೆ ಇರು'' ಎಂದು ತನ್ನ ಮನೆಯ ಬಾಗಿಲನ್ನು

ವಿಶಾಲವಾಗಿ ತೆರೆದಿಟ್ಟಿದ್ದ.

ಈ ಅನಂತ ಸ್ನೇಹವನ್ನು ಅರ್ಥ ಮಾಡಿಕೊಳ್ಳುವವರು ಯಾರಿದ್ದರು?

"ಅವಳು ಹೆಣ್ಣಲ್ಲ, ಹದ್ದು ಮೀರಿದವಳು. ಬಣ್ಣದ ಗೀಳಿಗೆ ಬಿದ್ದವಳಿಗೆ ಮನೆ, ಮಠ, ಮಕ್ಕಳು ಯಾಕೆ? ಬಣ್ಣದ ಬೀಸಣಿಗೆ ಅವಳು'' ಎಂದಿದ್ದನಂತಲ್ಲ ಗಂಡ. ಅದೂ ತನ್ನೆಲ್ಲ ಬಂಧುಗಳ ಎದುರು, ಸ್ನೇಹಿತರ ಎದುರು ಯಾವ ಬಾಯಿಂದ ಹಾಗೆ ಹೇಳಿದ್ದ.

ಆ ಮಾತು ಕೇಳಿದ ಒಂದು ಗಳಿಗೆ ತನ್ನದೆ ಅಗ್ನಿಕುಂಡವಾಗಿತ್ತು, ಜ್ವಾಲಾಮುಖಿಯಾಗಿತ್ತು. ನಾನೇನು ತಪ್ಪು ಮಾಡಿದ್ದೆ? ಯಾವ ದಾರಿಯಲ್ಲಿ ತಪ್ಪಿದೆ? ಇವನು ಗಂಡಸಾದ ಮಾತ್ರಕ್ಕೆ ಕೈ ಹಿಡಿದವಳ ಆಶೆ ಕನಸು, ಬಯಕೆಗಳನ್ನು ಕಡ್ಡಿ ಗೀರಿ ಸುಟ್ಟು ಬಿಡಬೇಕಿತ್ತೆ? ಯಾವುದರಲ್ಲಿ ತಪ್ಪಿದ್ದೆ. ಇವನನ್ನು ಓಲೈಸುವುದರಲ್ಲೇ, ಇವನ ಬಯಕೆಗಳನ್ನು ಪೂರೈಸುವುದರಲ್ಲೆ? ಇವನ ಪಾದವಿಟ್ಟ ಕಡೆಯಲ್ಲೆಲ್ಲ ದೂಳೊರಸಿ ನಿಲ್ಲುವುದರಲ್ಲೆ?

ಏನು ತಪ್ಪು ಕಂಡಿದ್ದ ನನ್ನಲ್ಲಿ.

ಡಬ್ಬಿಯಲ್ಲಿ ಲೈಟುಗಳನ್ನೆಲ್ಲ ನಂದಿಸಿದರು. ಕಣ್ಣಿಗೆ ಗಾಢ ಕತ್ತಲು ಕವಿಯಿತು. ಆಗಾಗ ಹೊರಗಿನ ಊರಾಚೆಯ ದೀಪದ ಬೆಳಕಿನಲ್ಲಿ ಗಿಡ, ಮರ, ಪೊದೆಗಳನ್ನು ಹಿಂದೆ ಹಾಕಿ ರೈಲು ಓಡುತ್ತಿತ್ತು. ಹಿಂದಿನ ನೆನಪುಗಳ ಒಂದೊಂದಾಗಿ ತೆರೆದುಕೊಳ್ಳುತ್ತಿದ್ದವು.

ನನಗೆ ಅಂದಿನ ದಿನ ಚೆನ್ನಾಗಿ ನೆನಪಿದೆ.

ವಸಂತದ ಮೊದಲಿನ ದಿನಗಳಿರಬಹುದು. ಪ್ರಕೃತಿ ಹಸಿರಿನಿಂದ ತುಂಬಿ ತುಳುಕುತ್ತಿತ್ತು. ಮದುಮಗಳಂತೆ ಹೂವಿನ ರಾಶಿಗಳಲ್ಲಿ ಅಲಂಕರಿಸಿಕೊಂಡಿತ್ತು. ವಸಂತದ ಬೆನ್ನೇರಿ ಬಂದ ಮನಮೋಹಕ ಬಣ್ಣದಿಂದ ಕೂಡಿತ್ತು. ಒಂದು ಸಲ ಚೆನ್ನಾಗಿ, ಮತ್ತೊಂದು ಸಲ ಹೊಂಬಣ್ಣವಾಗಿ ಬದಲಾಯಿಸುವ ಬೆಳಕಿನ ಕಿರಣಗಳು.

ಮುಂದಿನ ಆವರಣದಲ್ಲಿ ಅಂಗಳದ ಹಸಿರು ಹುಲ್ಲಿನ ಮೇಲೆ ಕ್ಯಾನ್‌ವಾಸ್ ಇಟ್ಟುಕೊಂಡು ಬಣ್ಣಗಳನ್ನು ಹರಡಿಕೊಂಡು ಕುಳಿತಿದ್ದೆ. ಎದುರಿನ ಬಿಳಿ ಹಾಳೆಯ ಮೇಲೆ ಗೆರೆಗಳಿಂದ ಚಿತ್ರ ಹಾಕಿಕೊಂಡು ಅದಕ್ಕೀಗ ಬಣ್ಣ ತುಂಬಬೇಕಿತ್ತು. ಇದೊಂದು ಅಭಿಸಾರಿಕೆಯ ಚಿತ್ರ. ನೇರುಮರದ ಹಿನ್ನಲೆಯಲ್ಲಿ ಒಂದು ಕಾಂಡಕ್ಕೊರಗಿಕೊಂಡು ಅರೆನಿಮೀಲಿತ ಕಣ್ಣುಗಳಿಂದ ಪ್ರಿಯನ ಆಗಮನವನ್ನು ನಿರೀಕ್ಷಿಸುತ್ತಿದ್ದಾಳೆ.

ಅವಳ ಕಣ್ಣುಗಳಲ್ಲಿ ಏನಿತ್ತು ಏನಿಲ್ಲ? ಅರೆ ನಿಮೀಲಿತ ಕಣ್ಣುಗಳಲ್ಲಿ ಕನಸುಗಳಿದ್ದವು. ಹಾಸ್ಯವಾಡುವ ತುಟಿಗಳಲ್ಲಿ ಉಯ್ಯಾಲೆಯಾಡುವ ನಗು ತುಟಿಯಂಚಿನಿಂದ ಹರಿದು ಕೆನ್ನೆಗಳಲ್ಲಿ ಹೆಪ್ಪುಗಟ್ಟಿತ್ತು. ನೀಡಿದಾದ ತೋಳುಗಳಲ್ಲಿ ಉಯ್ಯಾಲೆಯಾಡುವ ನಗು ತುಟಿಯಂಚಿನಿಂದ ಹರಿದು ಕೆನ್ನೆಗಳಲ್ಲಿ ಹೆಪ್ಪುಗಟ್ಟಿತ್ತು. ನಿಡಿದಾದ ತೋಳುಗಳಲ್ಲಿ ಪ್ರಿಯಕರನನ್ನು ಆಲಂಗಿಸಿಕೊಳ್ಳುವ ಹಂಬಲವಿತ್ತು. ಈ ಆಕಾರಕ್ಕೀಗ ಬಣ್ಣ ಕೊಡಬೇಕಿತ್ತು. ಬಣ್ಣದ ಕುಂಚವನ್ನು ನೀರಿನಲ್ಲದ್ದಿ ನಿಧಾನವಾಗಿ ಬಣ್ಣದ ಪೆಟ್ಟಿಗೆಯಲ್ಲಿದ್ದ ನೀಲಿ ಬಣ್ಣದ ಮೇಲೆ ಸವರಿದೆ.

"ನಂದೂ.'' ಹಿಂದೆ ಧ್ವನಿಯಾಯ್ತು, ತಿರುಗಿದೆ. ಹಿಂದೆ ಪಪ್ಪ ನಿಂತಿದ್ದರು. ಅವರ ಕಣ್ಣುಗಳು ಚಿತ್ರವನ್ನೇ ನೋಡುತ್ತಿದ್ದವು, ಅದರಲ್ಲಿ ಮೆಚ್ಚುಗೆಯಿತ್ತು, ಅಭಿಮಾನವಿತ್ತು.

"ನಂದೂ, ಚಿತ್ರಕಲೆ ನಿನಗೆ ಸಂಪೂರ್ಣ ಒಲಿದಿದೆ ಮಗಳೆ.''

"ಇಲ್ಲಣ್ಣ ಇಲ್ಲ, ಸಂಪೂರ್ಣವೆನ್ನುವದು ಏನೂ ಇಲ್ಲ. ಇಡಿ ಜೀವಮಾನವಿಡೀ ತಪಸ್ಸು ಮಾಡಿದರೂ ಕಲೆಯು ಪೂರ್ಣತೆಯಾಗಿದೆ ಎನಿಸುವುದಿಲ್ಲ. ಅಣ್ಣ, ಇದಕ್ಕಾಗಿ ಇಡಿ ಜೀವಮಾನವನ್ನು ತೇಯ್ದುವರಿದ್ದಾರೆ, ಮುಡಿಪಿಟ್ಟಿದ್ದಾರೆ ಅಣ್ಣ. ವಾನಗೋನ ಬದುಕಿನ ರೀತಿ ಕೇಳಿದ್ದಿರಾ? ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಉಪವಾಸದಿಂದ ನರಳಿ ಅವನು ಬಣ್ಣಗಳನ್ನು ಕೊಳ್ಳುತ್ತಿದ್ದ. ಬಣ್ಣಗಳಲ್ಲಿ ಅಂತಾ ಶಕ್ತಿ ಇದೆ ಅಣ್ಣ."

ಪಪ್ಪ ಮಾತನಾಡಲಿಲ್ಲ. ಹತ್ತಿರದ ಕುರ್ಚೆಯಲ್ಲಿ ಬಂದು ಕುಳಿತರು. ಅವರ ಕಣ್ಣುಗಳು ಇದೀಗ ಆಗಸದ ಅಂಚಿನಲ್ಲಿ ಮುಳುಗುವ ಸೂರ್ಯನನ್ನು, ಅದರ ಸುತ್ತಲೂ ಎರಚಿದ ಕೆಂಪು ಹೊಂಬಣ್ಣ ಮಿಳಿತ ರಂಗನ್ನೇ ನೋಡುತ್ತಿತ್ತು. ಅವರು ಏನೋ ಹೇಳಲು ಬಯಸಿಯೇ ಇಲ್ಲಿಗೆ ಬಂದಿರಬಹುದು ಎನಿಸಿತು.

"ಏನಾದರೂ ಹೇಳುವದಿದೆಯೇ ಅಣ್ಣ."

"ನಂದೂ, ನಿನ್ನ ಓದಾಯ್ತು ನೋಡು. ನಿನ್ನ ತಾಯಿ ಹೋದಾಗನಿಂದ ಅಮ್ಮ, ಅಪ್ಪ ನಾನೇ ಆಗಿ ನಿನ್ನನ್ನು ಓದಿಸಿದೆ. ನಿನ್ನ ಯಾವ ಆಶೆಯನ್ನೂ ನಾನು ಅಪೂರ್ಣಗೊಳಿಸಲಿಲ್ಲ. ಚಿತ್ರಕಲೆಯಲ್ಲಿ ಆಸಕ್ತಿ ತೋರಿಸಿದೆ ಅದನ್ನು ಕಲಿಸಿದೆ. ನನಗೆ ನಿನ್ನನ್ನು ಬಿಟ್ಟು ಇನ್ಯಾರಿದ್ದಾರೆ ಮಗೂ. ನಿನ್ನದೊಂದು ಜವಾಬ್ದಾರಿ ಮುಗಿಯಿತೆಂದರೆ ನಾನು ಹಾಯಾಗಿ ರಾಮಾಕೃಷ್ಣ ಅಂತ ಓಡಾಡಿಕೊಂಡಿರಬಹುದು."

"ನನ್ನ ಜವಾಬ್ದಾರಿ ಅಂದರೆ ಏನಣ್ಣ?"

"ಏನು ಮಗೂ ಹೀಗೆ ಹೇಳುತ್ತಿ, ನೀನು ವಯಸ್ಸಿಗೇ ಬಂದಿದ್ದೀಯಾ. ನಿನಗೊಂದು ಒಳ್ಳೆಯ ಗಂಡನನ್ನು ನೋಡಿ ಮದುವೆ ಮಾಡಿಕೊಟ್ಟು ನೀನು ಸಂತೋಷವಾಗಿ ಇದ್ದೀಯಾ ಎಂದು ಕೇಳುವವರೆಗೂ ನನ್ನ ಕರ್ತವ್ಯ ನಾನು ಪೂರೈಸಿದಂತೆ."

"ಇಷ್ಟು ಬೇಗ ನನ್ನ ಮದುವೆಯೆ?"

"ಬೇಗವೆಂದರೆ ಮದುವೆ ವಯಸ್ಸಲ್ಲವೆ ನಿನಗೆ ನಂದೂ. ಈ ಇದೀಗ ಒಳ್ಳೆಯ ಹುಡುಗ ಸಿಕ್ಕಿದ್ದಾನೆ. ನನ್ನ ಸ್ನೇಹಿತನ ಪರಿಚಯದವನು. ದೊಡ್ಡ ಫ್ಯಾಕ್ಟರಿಯಲ್ಲಿ ಮ್ಯಾನೇಜರ್ ಆಗಿದ್ದಾನೆ. ತುಂಬ ಹಾರ್ಡ್ ವರ್ಕರ್, ಬಹಳ ಬೇಗನೆ ಮುಂದಕ್ಕೆ ಬಂದವ. ಕೈ ತುಂಬ ಸಂಬಳ ಬರುತ್ತೆ, ಹುಡುಗನಿಗೆ ಯಾರಿಲ್ಲ ಅಂದರೆ ತಾಯಿಯೊಬ್ಬಳಿದಳು, ಈಗ ವರ್ಷದ ಹಿಂದೆ ಅವಳು ತೀರಿಹೋದಳು. ದೊಡ್ಡ ಬಂಗ್ಲೆ, ಕೈ ತುಂಬ ಹಣ, ನೋಡಲು..."

"ಅಣ್ಣ, ಬದುಕಿನಲ್ಲಿ ಸುಖವಾಗಿರುವುದಕ್ಕೆ ಇಷ್ಟಿದ್ದರೆ ಸಾಕೆ, ಇವಿಷ್ಟೇ ಅವಶ್ಯಕವೇ?" ನಾನು ಬಟ್ಟೆಯಿಂದ ಕೈಗೆ ಹತ್ತಿದ ಬಣ್ಣವನ್ನು ಒರೆಸಿಕೊಳ್ಳುತ್ತ ಕೇಳಿದೆ.

"ಹಾಗಲ್ಲ ಮಗೂ, ಶ್ರೀಮಂತನ ಕೈ ಹಿಡಿದರೆ ನಿನ್ನ ಕಲೆಗೂ..."

"ಹಾಗಲ್ಲ ಅಣ್ಣ, ನಾನು ಮದುವೆಯಾಗುವುದಾದರೆ ನನ್ನ ಬಣ್ಣಗಳಿಗೆ ಜೀವ ತುಂಬುವವರನ್ನು ಮಾತ್ರ" ಎಂದಿದ್ದೆ.

"ಅದೇ ಕಣಮ್ಮಾ ನಾನು ಹೇಳುವುದು. ಸಂದೀಪ ಶ್ರೀಮಂತ, ಹೆಚ್ಚಾಗಿ ದುಡ್ಡುಳ್ಳವರೇ ಕಲೆಯನ್ನು ಪ್ರೋತ್ಸಾಹಿಸುತ್ತಾರೆ, ಪೋಷಿಸುತ್ತಾರೆ. ಸಂದೀಪನಾದರೆ ಬಣ್ಣಗಳಿಂದಲೇ ನಿನಗೆ ಅಭಿಷೇಕ ಮಾಡಿಬಿಡುತ್ತಾನೆ ನೋಡು" ಎಂದು ನಕ್ಕಿದ್ದರು. "ನಾನು ಸ್ವಲ್ಪ ವಾಕಿಂಗ್ ಹೋಗಿ



ಬರುತ್ತೇನಮ್ಮ. ಎರಡು ದಿನವಲ್ಲ, ನಾಲ್ಕು ದಿನ ಯೋಚಿಸಿ ಒಂದು ನಿರ್ಧಾರಕ್ಕೆ ಬಾ. ಆಮೇಲೆ ಸಂದೀಪನನ್ನು ಭೇಟಿ ಮಾಡಿಸುತ್ತೇನೆ'' ಎಂದು ಮೃದುವಾದ ಹುಲ್ಲಿನ ಹಾಸಿಗೆಯ ಮೇಲೆ ನಡೆಯುತ್ತ ಹೊರಟು ಹೋದರು.

ಎದುರು ಬಾನಿನಂಚಿನಲ್ಲಿ ಸೂರ್ಯ ಮುಳುಗಿ, ಅಡಗಿಸಿಟ್ಟ ವಜ್ರದಿಂದ ಬೆಳಕು ಹೊರಚೆಲ್ಲುವಂತೆ ಅವನ ಹೊಂಬಣ್ಣ ಮಾತ್ರ ಆಗಸದಂಚಿಗೆ ಮೆತ್ತಿಕೊಂಡಿತ್ತು. ಇನ್ನೇನು ಕತ್ತಲು ಕವಿಯಬಹುದು ಎಂದುಕೊಂಡು ಬಣ್ಣದ ಪೆಟ್ಟಿಗೆ, ಕ್ಯಾನ್‌ವಾಸ್, ಪೆನ್ಸಿಲ್ ಎಲ್ಲ ಸರಂಜಾಮು ಎತ್ತಿಕೊಂಡು ಒಳಬಂದೆ. ಪಪ್ಪ ಬರುವುದರಲ್ಲಿ ಅಡುಗೆಯಾದರೂ ಮುಗಿಸಬೇಕೆಂದುಕೊಂಡು ಒಳ ಹೋದೆ.

ರಾತ್ರಿಯೆಲ್ಲ ನಿದ್ದೆಯಿಲ್ಲದೆ ಹೊರಳಾಡಿದ್ದೆ, ಪಪ್ಪ ಹೇಳಿದ ಮಾತುಗಳೇ ಕಿವಿಯಲ್ಲಿ ಗುಂಯ್ಗುಡುತ್ತಿದ್ದವು. ಸಂದೀಪ ಹ್ಯಾಗಿದ್ದಾನೊ? ತುಂಬ ಶ್ರೀಮಂತನಂತೆ. ರೂಪವತನಂತೆ, ಒಳ್ಳೆಯ ಅಧಿಕಾರಿ. ಇವಿಷ್ಟೇ ಸಾಕಿತ್ತೆ ನನ್ನ ಬದುಕು ಪರಿಪೂರ್ಣತೆಯಾಗಲು, ನನಗೆ ಮುಖ್ಯವಾಗಿ ನನ್ನ ಕಲೆಗೆ ಪ್ರೋತ್ಸಾಹ ನೀಡುವ ಸಂಗಾತಿ ಬೇಕಿತ್ತು. ಚಿಕ್ಕಂದಿನಿಂದ ಪಪ್ಪ ನನಗೆ ನನ್ನ ಆಸಕ್ತಿ ತಿಳಿದು ಅದಕ್ಕೆ ಒತ್ತಾಸೆಯಾಗಿ ನಿಂತಿದ್ದರು "ನೀನು ಬಣ್ಣಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಬಳಸಬೇಕು ಮಗು. ಇದು ಇನ್ನೂ ಗಾಢವಾಗಿದ್ದರೆ ಚೆನ್ನಾಗಿತ್ತು, ಹಿನ್ನಲೆ ಯಾವಾಗಲೂ ತೆಳುವಾಗಿರಲಿ'' ಎಂದು ತಿದ್ದುತ್ತಿದ್ದರು.

ಶಾಲೆ ಕಾಲೇಜಿನಲ್ಲಿ ಚಿತ್ರಕಲೆಯ ಸ್ಪರ್ಧೆಯಿದ್ದಾಗ ಯಾವಾಗಲೂ ನನಗೆ ಪ್ರಥಮ ಬಹುಮಾನವಿರುತ್ತಿತ್ತು. ಕಾಲೇಜಿನಲ್ಲಿ ವರ್ಷೋತ್ಸವದ ದಿನ ನನ್ನ ಚಿತ್ರಗಳ ಪ್ರದರ್ಶನವಿರುತ್ತಿತ್ತು. ಇದು ನನ್ನ ಸಹಪಾಠಿಗಳ ಗೆಳೆಯ, ಗೆಳತಿಯರ ಅಪೇಕ್ಷೆ ಕೂಡ. ನನ್ನ ಆತ್ಮೀಯ ಗೆಳೆಯ ವಿವೇಕ ಯಾವಾಗಲೂ ಹೇಳುತ್ತಿದ್ದ,

"ನಂದಿನಿ, ನಿಮ್ಮ ಕೈಯಲ್ಲಿ ಅದ್ಯಾವ ಮೋಡಿಯಿದೆಯೋ, ಚಿತ್ರಗಳು ಸಜೀವವಾಗಿ ಬಂದು ನಿಲ್ಲುತ್ತವೆ. ನೋಡುವವರ ಮನ ಮಿಡಿಯುತ್ತವೆ. ಬಣ್ಣಗಳ ಜಗತ್ತು ಎಷ್ಟು ಆಕರ್ಷಣೀಯ. ಈ ಕಲೆಯ ಸಂಪತ್ತನ್ನು ನೀವು ಯಾವಾಗಲೂ ಕಾಪಾಡಿಕೊಂಡು ಬರಬೇಕು ನಂದಿನಿ'' ಎನ್ನುತ್ತಿದ್ದ. ನನ್ನ ಚಿತ್ರಗಳನ್ನು ವಿಮರ್ಶಿಸಿ ಮೆಚ್ಚುತ್ತಿದ್ದ. ಬೇರೆ ಕಡೆ ಎಲ್ಲಿಯಾದರೂ ಚಿತ್ರಕಲಾ ಪ್ರದರ್ಶನವಿದ್ದರೆ



"ಮಗು ಇಲ್ಲಿಟ್ಟಿದ್ದ ಗಡಿಯಾರ ಎಲ್ಲಿ ಹೇಳು?''

"ನಂಗೊತ್ತಿಲ್ಲಪ್ಪ.''

"ಸುಳ್ಳು ಹೇಳುತ್ತೀಯಾ ನಿನ್ನ ಪ್ರಾಣ ತೆಗೆದುಬಿಡುತ್ತೇನೆ.''

"ಅಪ್ಪಾ ನನ್ನ ಪ್ರಾಣ ತೆಗೆ ಆದರೆ ಜೀವ ಮಾತ್ರ ಉಳಿಸು.''

—ರಾಜಾ ಸಾಹೇಬ್ ಕೊಳಚಿ


ಒಮ್ಮೊಮ್ಮೆ ಇಬ್ಬರೂ ಜೊತೆಯಾಗಿ ಹೋಗುತ್ತಿದ್ದೆವು.

"ನಂದಿನಿ, ನಿಮ್ಮ ಯಾವುದಾದರೂ ಚಿತ್ರವನ್ನು ಇಡಲೇಬೇಕು" ಎಂಬ ಒತ್ತಾಯದೊಂದಿಗೆ ಆ ಚಿತ್ರವನ್ನು ಒಯ್ಯುವ ಜವಾಬ್ದಾರಿಯನ್ನು ತಾನೇ ಹೊತ್ತು, ಮುಂದೆ ನಿಂತು ಏನೆಲ್ಲ ಮಾಡುತ್ತಿದ್ದ.

ಒಮ್ಮೆ ತಮ್ಮ ಓಡಾಟ ಕಂಡು ಅಪ್ಪ ಕೇಳಿದ್ದರು "ನಂದೂ, ಅದ್ಯಾವ ಹುಡುಗ ನಿನ್ನ ಸ್ನೇಹಿತ, ನೀವಿಬ್ಬರೂ ಯಾವಾಗಲೂ ಜೊತೆಯಲ್ಲಿರುತ್ತೀರಂತೆ. ನಿನಗೆ ಒಪ್ಪಿಗೆಯಿದ್ದರೆ ಹೇಳಮ್ಮಾ..." ಅವರ ಮಾತು ಕೇಳಿ ನಾನು ನಕ್ಕಿದ್ದೆ.

"ಜೊತೆಯಲ್ಲಿ ಓಡಾಡಿದವರೆಲ್ಲ ಮದುವೆಯಾಗಲು ಸಾಧ್ಯವೇನಣ್ಣಾ. ನಮ್ಮ ಸ್ನೇಹ ಮದುವೆ ಮಟ್ಟಕ್ಕೆ ಏರಿಲ್ಲಣ್ಣ, ನಾನು ಕಲಾವಿದೆ. ಅವನು ಕಲಾವಿದರನ್ನು ಗೌರವಿಸುವವ. ನಮ್ಮ ಪ್ರಪಂಚದಲ್ಲಿ ಚಿತ್ರಗಳು, ಬಣ್ಣಗಳು ಬಿಟ್ಟು ಇನ್ನೇನಿಲ್ಲ. ಈ ಪವಿತ್ರ ಸ್ನೇಹಕ್ಕೆ ಮದುವೆಯ ಬಣ್ಣ ಬಳಿಯಲು ನಾವು ಸಿದ್ಧರಿಲ್ಲಣ್ಣ" ಎಂದಿದ್ದೆ.

ಅವರು ಮಾತನಾಡಲಿಲ್ಲ.



ವೇದನೆ

ದಿನಗಳು
ರುಳುತ್ತವೆ
ಬರಿಯ
ನೋವಿನಲ್ಲಿ
ನಾ
ಕಾಣಲಿ
ನಗುವನೆಲ್ಲಿ?

—ನಾರಾಯಣ ರೈ ಕುಕ್ಕುವಳ್ಳಿ

ಈಗ ಸಂದೀಪನ ಪ್ರಪೋಜಲ್ ತೆಗೆದುಕೊಂಡು ಬಂದಿದ್ದಾರೆ. ನಿರ್ಧರಿಸುವುದು ತನಗೆ ಬಿಟ್ಟದ್ದು.

ನಾಲ್ಕುದಿನಗಳ ಅನಂತರ ಅವರೆದುರು ನಿಂತು ನಾನು ಹೇಳಿದ್ದೆ.

"ಅಣ್ಣ, ಸಂದೀಪ ನಿಮಗೆ ಒಪ್ಪಿಗೆಯಾದರೆ, ಯೋಗ್ಯನೆನಿಸಿದರೆ ಸರಿಯಣ್ಣ."

ನಗುತ್ತ ಹೇಳಿದ್ದರು ಅವರು "ಒಪ್ಪಿಗೆಯಾಗಬೇಕಾದ್ದು ನನಗಲ್ಲಮ್ಮ ನಿನಗೆ. ಸಾಯಂಕಾಲವೇ ಶ್ರೀಪತಿಯನ್ನು ಭೇಟಿ ಮಾಡುತ್ತೇನೆ. ಮುಂದಿನದನ್ನು ನಿರ್ಧರಿಸೋಣ" ಎಂದು ಎದ್ದು ಹೋಗಿದ್ದರು.

ಆದಾದ ನಾಲ್ಕುದಿನಕ್ಕೆ ಅಲ್ಲವೆ ನಾನು ಸಂದೀಪನನ್ನು ನೋಡಿದ್ದು. ನಾನು, ಅಪ್ಪ, ಶ್ರೀಪತಿ ಅಂಕಲ್ ಅವನ ಬಂಗಲೆಗೆ ಕಾಲಿಟ್ಟದ್ದು. ಮನೆ ಏನೋ ದೊಡ್ಡದು, ಬಂಗಲೆಯೋ ಕಂಪನಿ ಕೊಟ್ಟದ್ದು. ಓಡಾಡಲು ಕಾರು ಕೂಡ. ನಾವು ಹೋದಾಗ ಮುಂದಿನ ಅಂಗಳದಲ್ಲಿ ಮಾಲಿ ಗಿಡಗಳಿಗೆ ಪಾತಿ ಮಾಡುತ್ತಿದ್ದ. ನಮ್ಮನ್ನು ಸ್ವಾಗತಿಸಿದ್ದು ಸಂದೀಪನೇ,

"ಬನ್ನಿ, ಮನೆಯಲ್ಲಿ ಹಿರಿಯರೆನ್ನುವರು ಯಾರಿಲ್ಲ. ಬನ್ನಿ ಅಂಕಲ್" ಎನ್ನುತ್ತ

ಒಳಕರೆದೊಯ್ದ.

"ಬಾಮ್ಮ ನಾಚಿಕೊಳ್ಳಬೇಡ'' ಎಂದರು ಶ್ರೀಪತಿ ಅಂಕಲ್. ದೊಡ್ಡದಾದ ವಿಶಾಲವಾದ ಹಾಲು, ಶ್ರೀಮಂತಿಕೆಯನ್ನು ಎತ್ತಿ ತೋರುವ ನವೀನ ರೀತಿಯ ಸೋಫಾಗಳು, ಮೂಲೆಯಲ್ಲಿ ಇಟ್ಟಿದ್ದ ಟೀವಿ, ಇನ್ನೊಂದು ಮೂಲೆಯಲ್ಲಿ ನವೀನ ರೀತಿಯ ದೀಪಸ್ತಂಭ. ಚಿತ್ರಗಳಿಲ್ಲದ ಬರಿದಾದ ತಿಳಿ ಗುಲಾಬಿ ಬಣ್ಣದ ಗೋಡೆಗಳು ಬಟ್ಟಬಯಲಿನಂತೆ ಅನ್ನಿಸಿದವು. ಗೋಡೆಗಳನ್ನಲಂಕರಿಸುವ ಒಂದಾದರೂ ಚಿತ್ರಗಳಿರಬಾರದೆ? ಅವನ ಹೃದಯವು ಹೀಗೆಯೋ ಕಾಲಿ ಕಾಲಿ ಭಾವನೆಗಳಿಲ್ಲದ ಬರಿಗೋಡೆಯಂತೆ. ನಾನು ಕತ್ತು ತಿರುಗಿಸಿ ಅಪ್ಪನೆಡೆ ನೋಡಿದೆ. ಮನೆಯ, ಸಂದೀಪನ ವೀಕ್ಷಣೆಯಲ್ಲಿ ತೊಡಗಿದ್ದರವರು. ನನ್ನ ಭಾವನೆಗಳನ್ನು ಅರ್ಥಮಾಡಿಕೊಳ್ಳಲಾರರು ಇವರು ಎನಿಸಿತು. ಆಳೊಬ್ಬನ ಕೈಯಲ್ಲಿ ತಿಂಡಿ, ಕಾಫಿಗಳನ್ನು ತೆಗೆಯಿಸಿಕೊಂಡು ಬಂತ ಆತ. ನಮ್ಮೆದುರೇ ಕುಳಿತ. "ತೆಗೆದುಕೊಳ್ಳಿ'' ಎಂದು ಒತ್ತಾಯಿಸಿದ.

ಮೋಹಿಸುವ ಹಾಗಿರುವ ಅವನ ರೂಪ, ನಡೆ, ನುಡಿ. ನಾನು ಕತ್ತೆತ್ತಿ ಅವನ ಕಡೆ ನೋಡಿದೆ. ಕಣ್ಣುಗಳಲ್ಲೇ ತಿನ್ನುವಂತೆ ನೋಡಿದ ಆ ನೋಟ. ತಟ್ಟನೆ ತಲೆ ತಗ್ಗಿಸಿದೆ. ನಾನೇನೂ ಸಾಧಾರಣ ರೂಪವತಿ ಆಗಿರಲಿಲ್ಲ. ಚಿತ್ರಗಳಲ್ಲಿ ಬಿಡಿಸುವಂಥ ಮೋಹಕ ರೂಪು ನನ್ನದಿತ್ತು. "ಬೆಳದಿಂಗಳಲ್ಲಿ ಮಿಂದು ಬಂದಿದ್ದೀಯಾ'' ಎಂದು ಕೇಳುತ್ತಿದ್ದರು ಗೆಳತಿಯರು. "ನೀನು ಯಾವಾಗಲೂ ಸಾದಾ ಸಿಂಪಲ್, ತುಟಿಗೇನಾದರೂ ಬಣ್ಣ ಬಳಿದಿದ್ದಿಯೇನೆ?'' ಎನ್ನುತ್ತಿದ್ದರು ನನ್ನ ನಸು ಗುಲಾಬಿ ಬಣ್ಣದ ತುಟಿಗಳನ್ನು ನೋಡಿ.


ಇನ್ನು ಸಂದೀಪ ತನ್ಮಯತೆಯಿಂದ ನೋಡುವುದರಲ್ಲಿ ಏನಾಶ್ಚರ್ಯ? ಆದೂ ಮದುವೆಯಾಗಬೇಕಾದ ಹುಡುಗ. ಅವನ ನೋಟದಿಂದ ನಾಚಿ ತಲೆ ಕೆಳಗೆ ಹಾಕಿದ್ದೆ.

" ಏನಾದರೂ ಕೇಳುವದಿದ್ದರೆ ಕೇಳಯ್ಯ'' ಎಂದರು ಅಂಕಲ್.

"ಏನು ಕೇಳುವುದು, ಅವರನ್ನು ನೋಡಿದರೆ ಏನೆಲ್ಲ ಕೇಳಲು ಮನಸ್ಸಾಗುತ್ತಿಲ್ಲ'' ಎಂದು ನಕ್ಕ.

"ಆದರೂ ಐದು ನಿಮಿಷ ನಮಗೆ ಏಕಾಂತ ಬಿಟ್ಟು ಕೊಡಿ'' ಎಂದ.

"ಆಲ್ ರೈಟ್'' ಎನ್ನುತ್ತ ಅಪ್ಪ, ಅಂಕಲ್ ಎದ್ದು ಮುಂದಿನ ಅಂಗಳಕ್ಕೆ ಹೋಗಿ ಕುಳಿತರು.



ಕೃತಿ, ಪ್ರೀತಿ

ಪ್ರೀತಿ
ಮಾಡಲು
ಹೋದಾಗ
ರಚಿಸ
ಬೇಕಾಯಿತು
ಹಲವು
ಕೃತಿ.

—ಎಂ. ವಿ. ವೆಂಕಟೇಶ್

ಸಂದೀಪ ನಿಧಾನವಾಗಿ ಎದ್ದು ಬಂದ. ಗಾಬರಿಯಿಂದ, ನಾಚಿಕೆಯಿಂದ, ಹೃದಯದ ಬಡಿತದೊಡನೆ ನಾನು ಎದ್ದುನಿಂತೆ. ಆತನ ಬಿಸಿಯುಸಿರು ನನ್ನ ಕೆನ್ನೆಗೆ ತಾಗುವಷ್ಟು ಹತ್ತಿರ ನಿಂತ.

"ಮಿಸ್ ನಂದಿನಿ, ನಾನು ಈ ಮನೆಗೆ ಒಂಟಿ ಜೀವಿ, ಈ ಮನೆ ನಿಮ್ಮಿಂದ ತುಂಬಬೇಕು.''

ನಾನು ಮಾತನಾಡಲಿಲ್ಲ.

"ನೀವು ಮಾತನಾಡಬೇಡಿ, ಮುಖವೆತ್ತಿ ನನ್ನ ಕಣ್ಣುಗಳನ್ನೇ ನೋಡಿ, ಅವೇ ಮಾತನಾಡುತ್ತವೆ. ನೀವು ಉತ್ತರ ಕೊಡಿ.''

ನಾನು ಮುಖವೆತ್ತಿ ಅವನ ಕಡೆ ನೋಡಿದೆ. ಏನಿತ್ತೋ ಅವನ ಕಣ್ಣುಗಳಲ್ಲಿ ಆ ಮೋಡಿ, ಆ ಮೋಹಕತೆ, ಕಾತುರ, ನನ್ನ ಸಮಸ್ತ ಚೇತನವನ್ನು ಹೀರಿ ತನ್ನೊಳಗೆ ಹಿಡಿದಿಟ್ಟುಕೊಳ್ಳುವಂಥ ಬಯಕೆ.

ಏನಾಗಿದ್ದೆ ನಾನು, ಬರೀ ಒಂದು ಶೂನ್ಯವಾಗಿದ್ದೆ. ನನ್ನ ಕೈ ಹಿಡಿದ. ನಾನು ಏನಾದರೂ ಹೇಳುವ ಮುನ್ನವೇ ತನ್ನ ತುಟಿಗಳನ್ನು ನನ್ನ ಕೆನ್ನೆಗೆ ಒತ್ತಿ "ನಿಮ್ಮ ಒಪ್ಪಿಗೆ ಇದೆ ಎಂದು ತಿಳಿದಿದ್ದೇನೆ'' ಎನ್ನುತ್ತ ಮುಂದಿನ ಅಂಗಳಕ್ಕೆ ಹೋದ. ಅವನೆದುರು ನನ್ನ ಸಮಸ್ತ ಚೈತನ್ಯ ಉಡುಗಿ ಹೋಗಿತ್ತು. ಎಷ್ಟೊಂದು ಹೇಳಬೇಕು, ಕೇಳಬೇಕು ಎಂದುಕೊಂಡಿದ್ದೆನಲ್ಲ. ನನ್ನ ಕಲೆಯ ಬಗ್ಗೆ, ನನ್ನ ಚಿತ್ರಗಳ ಬಗ್ಗೆ, ನನ್ನ ಬಣ್ಣಗಳ ಬಗ್ಗೆ, ನನ್ನ ಕನಸುಗಳ ಬಗ್ಗೆ.

"ಸಂದೀಪ ನೀನು ನನ್ನ ಬಣ್ಣಗಳ ಆಗರವಾಗು. ಅವುಗಳಿಗೆ ಜೀವ ತುಂಬು, ನನ್ನ ಕುಂಚವಾಗು. ನನ್ನ ನಿರ್ಜೀವ ಚಿತ್ರಗಳಿಗೆ ಬಣ್ಣ ಹರಡು, ಬಯಕೆ ತುಂಬು, ಇನ್ನು ಏನೇನೂ ಆಗು. ಅವೆಲ್ಲ ಎಲ್ಲಿ ಹೋದವು ಹೇಳಬೇಕೆಂದುಕೊಂಡ ಮಾತುಗಳು.

ತಿರುಗಿ ಮನೆಗೆ ಬಂದಾಗ ಅಪ್ಪ ಸಂತೋಷದಲ್ಲಿದ್ದರು. "ಸಂದೀಪ ನಿನ್ನನ್ನು ತುಂಬ ಮೆಚ್ಚಿದ್ದಾನಮ್ಮ, ಮುಂದಿನ ತಿಂಗಳಲ್ಲೆ ಲಗ್ನವಿಡೋಣ'' ಎಂದಿದ್ದರು.

ಮುಂದೆ ತಿಂಗಳಲ್ಲಿ ಎರಡು ಬಾರಿ ಮಾತ್ರ ಅವನು ಸಂಧಿಸಿದ್ದ. ನನಗೆ ಬರಲು ಕಾರು ಕೊಟ್ಟು ಕಳುಹಿಸಿದ್ದ. ಪಾರ್ಕು, ಸಿನಿಮಾ ಎಂದು ತಿರುಗಾಡಿಸಿದ್ದ.



ಅನುಭವದ ಶಾಲೆಯ ಫೀಜು ತುಂಬ ಹೆಚ್ಚು. ಆದರೆ ದಡ್ಡರು ಇನ್ನೆಲ್ಲೂ ಕಲಿಯರು.

—ಬೆಂಜಮಿನ್ ಫ್ರಾಂಕ್ಲಿನ್

ಅನುಚಿತ ಆರಂಭ ಉಚಿತವಲ್ಲದ ಮುಕ್ತಾಯ ತರುತ್ತದೆ.

—ಯೂರಿಪಿಡೀಸ್

ಮೊದಲ ಕಾಸನ್ನು ಸಂಪಾದಿಸುವುದು ಎರಡನೇ ಲಕ್ಷ ಸಂಪಾದಿಸುವುದಕ್ಕಿಂತ ಕಷ್ಟ.

—ಜೆ. ಜೆ. ರೂಸೋ

ಸ್ವಂತ ಮನೆಯಲ್ಲಿನ ಹೊಗೆ ಪಕ್ಕದ ಮನೆಯ ಬೆಂಕಿಗಿಂತ ಲೇಸು.

—ಸ್ಪೇಯಿನ್ ಗಾದೆ

ಸಂಗ್ರಹ : ಯು. ಕೆ. ಆರ್. ಮಂಜುನಾಥ್

ಇದೇ ಜೀವನದ ಸಾರ. ಇದೇ ಸಂತೋಷದ ಹಾದಿ ಎನ್ನುವ ಹಾಗಿದ್ದರೆ ನಾನಿವತ್ತು ಎಲ್ಲವನ್ನೂ, ಎಲ್ಲರನ್ನೂ ತೊರೆದು ಜೀವನದ ಆಗುಹೋಗುಗಳ ಸಂಬಂಧವೇ ಇಲ್ಲದ ಹಾಗೆ ಶಾಂತಿನಿಕೇತನವನ್ನರಿಸಿ ಹೋಗುತ್ತಿದ್ದನೆ? ಗಾಡಿ ಬಹುಮೆಲ್ಲಗೆ ಹೋಗುತ್ತಿದೆ ಎನಿಸುತ್ತಿದೆ. ನಾನು ಸೇರುವ ತೀರ ಎಲ್ಲಿ?

ಎದುರು ಸೀಟಿನಲ್ಲಿ ಎಳೆಯ ದಂಪತಿ ತಮ್ಮದೇ ಲೋಕದಲ್ಲಿ ವಿಹರಿಸುತ್ತಿದ್ದಾರೆ. ಹೊಸದಾಗಿ ಮದುವೆಯಾದವರಿರಬೇಕು. ತಮ್ಮಿಬ್ಬರಿಗಿಂತ ಬೇರೆ ಲೋಕವೇ ಇಲ್ಲ ಎನ್ನುವ ದಿನಗಳು. ಎಷ್ಟು ಆಪ್ಯಾಯ, ಎಷ್ಟು ಅನನ್ಯತೆ, ಎಷ್ಟು ತನ್ಮಯತೆ ಅವನಲ್ಲಿ. ಮುಗ್ಧವಾದ ಬಾಲೆ ಅವಳು. ಎಷ್ಟು ಬೇಗ ಈ ಗಂಡಸಿಗೆ ವಶವಾಗಿ ಬಿಡುತ್ತಾರೆ. ಅವರ ಭಾವನೆಗಳಿಗೆ ಸ್ಪಂದಿಸಿ ಬಿಡುತ್ತಾರೆ, ಅವನಿಲ್ಲದೆ ತಮ್ಮ ಉಸಿರೇ ಆಡುವುದಿಲ್ಲ ಎನ್ನುವ ಸಮರ್ಪಣೆ. ಬಹುಶಾ ಗಂಡು ಬಯಸುವುದೂ ಇದೇ.

ಕಿಟಕಿಯಲ್ಲಿ ಹಾರಿ ಬರುವ ಕಿಡಿಗಳಂತೆ ನೆನಪುಗಳು ಸಿಡಿದು ಬಂದು ಚುಚ್ಚುತ್ತವೆಯಲ್ಲ, ನೆನಪುಗಳು ಎಂದೂ ನಿರ್ಜೀವಗಳಾಗಲು ಸಾಧ್ಯವಿಲ್ಲ. ನೀನಿರುವ ತನಕ ನಿನ್ನ ಸಂಗಾತಿಗಳೇ ನಾವು ಎನ್ನುತ್ತ ಬೆನ್ನು ಹತ್ತುತ್ತವೆ.

ಎಲ್ಲವನ್ನು, ಎಲ್ಲರನ್ನೂ ಮರೆಯಬೇಕೆಂದೆ ಬಂದವಳಲ್ಲವೆ? ಅದ್ಹೇಗೆ ಸಾಧ್ಯ. ಈ ಬದುಕಿನ ಪಯಣದಲ್ಲಿ ಭೂತಕ್ಕೂ, ಭವಿಷ್ಯಕ್ಕೂ ವರ್ತಮಾನ ಎಂಬ ರೈಲು ಹಳಿಗಳು ಹೊಂದಿಕೊಂಡೇ ಹೋಗುತ್ತಿರುತ್ತವೆ. ಆ ಜೋಡಣೆ ಮುರಿದರೆ ಬದುಕಿನ ಕೊಂಡಿ ಮುರಿದಂತೆಯೆ? ಈ ಪಯಣ ವರ್ತಮಾನವಾಗಿರಬಹುದು, ರೈಲುಗಾಡಿಯಾಗಿರಬಹುದು, ಆದರದು ಚಲಿಸುತ್ತಿರುವುದು ಭೂತಕಾಲದ ಹಳಿಗಳ ಮೇಲೆ. ಮುಂದಿನ ಭವಿಷ್ಯದ ದಾರಿಗೆ ಈ ಹಳಿಗಳೇ ಜೋಡಿಯಾಗಿ ಹೋಗುವಾಗ ನಾವು ಮರೆಯುತ್ತೇವೆ ಎನ್ನುವುದು ಏನನ್ನು, ನಾನು ಏನನ್ನು ಮರೆಯುಲು ಸಾಧ್ಯವಿತ್ತು.

ಅವನೊಡನೆ ಮದುವೆಯಾಗಿ ಬಂದದ್ದು, ಸಪ್ತಪದಿ ತುಳಿದದ್ದು, ಅಗ್ನಿಸಾಕ್ಷಿಯಾಗಿ ತಾಳಿ ಕಟ್ಟಿಸಿಕೊಂಡದ್ದು. ಅವನ ಕೈ ಹಿಡಿದಾಗ ಅನ್ನಿಸುತ್ತಿದ್ದು,

ಆ ಕೈಯಲ್ಲಿ ಭರವಸೆಯಿರಲಿಲ್ಲ, ನಂಬುಗೆ ಇರಲಿಲ್ಲ, ಆತ್ಮ ವಿಶ್ವಾಸವಿರಲಿಲ್ಲ ಎಂಬುದನ್ನು ನಾನೇಕೆ ತಿಳಿಯಲಿಲ್ಲ. ಅಂದು ಮೊದಲ



ದುರಾಸೆ, ಕಾಮ, ಕ್ರೋಧ, ದ್ವೇಷ, ಅಜ್ಞಾನ ಹೃದಯದಿಂದ ನಾಶವಾದರೆ ಜ್ಞಾನೋದಯವಾಗಿ ಶಾಂತಿ, ತೃಪ್ತಿ, ಸುಖ, ಶ್ರೇಷ್ಠತೆ ಲಭಿಸುತ್ತದೆ.

—ಬುದ್ಧ

ಯಾವ ದಿವಸ ನಾವು ಒಬ್ಬ ಹೊಸ ಮಿತ್ರನನ್ನು ಸಂಪಾದಿಸುವದಿಲ್ಲವೋ ಆ ದಿವಸವು ಜೀವನದಲ್ಲಿ ವ್ಯರ್ಥವಾದಂತೆ.

—ಜಾನ್ಸನ್

ಸಂಗ್ರಹ : ಬ. ಮ. ಜಂಗಳಿ

ರಾತ್ರಿ.

ಚೆನ್ನಾಗಿ ನೆನಪಿದೆ ನನಗೆ.

ಅಪ್ಪನ ಆಶೆಯ್ಮಂತೆ ನಮ್ಮ ಮನೆಯಲ್ಲೇ ನಡೆದಿತ್ತು. ಅವನ ಬದುಕಿಗೆ ಪಾದಾರ್ಪಣ ಮಾಡುತ್ತಿದ್ದ ಮೊದಲರಾತ್ರಿ. ಕಿಟಕಿಯಿಂದ ತೂರಿಬಂದು ನೆಲದ ತುಂಬೆಲ್ಲ ಹರಡಿದ ಬೆಳದಿಂಗಳು. ಪ್ರೇಮಿಗಳಿಗೆ, ನವದಂಪತಿಗಳಿಗೆ ಅಮೃತವರ್ಷವೆನ್ನುತ್ತಾರೆ ಈ ಬೆಳದಿಂಗಳ ಬೆಳಕು.

ಆದರೆ ನಮಗೆ?

ನಮಗೇನಾಗಿತ್ತು ಆ ರಾತ್ರಿ.

ಎಷ್ಟೊಂದು ಕನಸುಗಳನ್ನು ದಾಂಪತ್ಯದ ರಥದಲ್ಲಿ ಹೊತ್ತುಕೊಂಡು ಶೃಂಗಾರ ಭಾವನೆಗಳ ಅಲಂಕಾರ ಮಾಡಿಕೊಂಡು ಅವನೆಡೆ ಹೋಗಿದ್ದೆ.

ಅವನ ಕನಸುಗಳಿಗೆ ನನ್ನ ಬಣ್ಣಗಳನ್ನು ತುಂಬಬೇಕು ಎನ್ನುವ ಭ್ರಮೆ. ಎಷ್ಟೊಂದು ಆಶೆಗಳ ತವರೂರಾಗಿತ್ತು. ತನ್ನ ಮನೆ ಗೋಡೆಯ ತುಂಬೆಲ್ಲ ನಾನೇ ಚಿತ್ರಿಸಿದ್ದ ನಾನಾ ತರಹದ ಚಿತ್ರಗಳು. ನಾನಾ ಬಣ್ಣಗಳ ಛಾಯೆಯಲ್ಲಿ ಹಿನ್ನೆಲೆಯಲ್ಲಿ ಸಜೀವವೆಂಬತೆ ನಗುತ್ತ ನಿಂತಿದ್ದವು.



"ಕೆಲಸದ ಸಮಯ ಮುಗಿಯಿತು ಇನ್ನು ಆಫೀಸ್‌ನ ಬಾಗಿಲು ಹಾಕಬಹುದೇ ಸಾರ್!''
"ಒಂದು ತಾಸು ತಡೆ ನನ್ನದಿನ್ನೂ ನಿದ್ರೆ ಪೂರ್ತಿಯಾಗಿಲ್ಲ.''
—ವೈ. ಎಚ್. ಸಂಗಪ್ಪ

ಪಪ್ಪ ಯಾವಾಗಲೂ ಹೇಳುತ್ತಿದ್ದರು.

"ನಿನ್ನ ರೂಮಿಗೆ ಬಂದರೆ ದಿಗ್ಭ್ರಮೆಯಾಗುತ್ತಮ್ಮಾ, ಇದೇನು ಕಲಾಪರಿಷತ್ತೋ ಏನೋ ಅನ್ನಿಸುತ್ತದೆ. ಗೋಡೆಯ ತುಂಬೆಲ್ಲ ನಿನ್ನ ಕಲಾಸೃಷ್ಟಿಯ ಎಷ್ಟೊಂದು ಭಾವನೆಗಳಿವೆ ಕಣಮ್ಮಾ ನಿನ್ನ ಮನದಲ್ಲಿ. ನನಗೆ ಹೆಮ್ಮೆಯಾಗುತ್ತದೆ. ನಾಳೆ ನಿನ್ನ ಗಂಡನಾಗುವವನು ಚಿತ್ರ ಬರೆಯದಿದ್ದರೂ ಚಿತ್ರಕಲೆಯನ್ನು ಆರಾಧಿಸಿ ಮೆಚ್ಚಿದರೆ ಸಾಕು'' ಎಂದಿದ್ದರು.

ತಾನು ಹೆಮ್ಮೆಯಿಂದ ನಕ್ಕಿದ್ದೆ.

ಈ ಬಣ್ಣದ ಕನಸುಗಳು ಎಷ್ಟೊಂದು ಸುಂದರವಾಗಿರುತ್ತದೆಂದು ಇವನಿಗೇನು ಗೊತ್ತು?

ಮಂಚದ ಮೇಲೆ ತುಂಬು ತೋಳಿನ ಜುಬ್ಬಾ, ಶುಭ್ರವಾದ ಶರಾಯಿಯಲ್ಲಿ ಮೋಹಕವಾಗಿ ಕುಳಿತಿದ್ದ ಅವನ ಕಣ್ಣುಗಳು ಗೋಡೆಯ ಮೇಲಿನ ಚಿತ್ರಗಳಲ್ಲಿ ನೆಟ್ಟಿತ್ತು. ನಾನು ಬಾಗಿಲು ಹಾಕಿಕೊಂಡು ಒಳಬಂದ ಸದ್ದಿಗೆ ಈಚೆ ತಿರುಗಿ ಹುಬ್ಬೆತ್ತಿದ್ದ. ನನ್ನ ಸರ್ವಾಂಗದಲ್ಲಿ ಆಶೆ, ಭರವಸೆ ತುಂಬಿಕೊಂಡು ಅವನ ಹತ್ತಿರ ಹೋಗಿದ್ದೆ.

ಎದ್ದು ನಿಂತ, ಹತ್ತಿರ ಬಂದು ಕೈ ಹಿಡಿದುಕೊಂಡು ಮಂಚದ ಹತ್ತಿರ ಕರೆದೊಯ್ದು ಕೂಡಿಸಿದ.

"ಸಂದೂ ಎನ್ನುವ ಹೆಸರಿನಲ್ಲಿ ಎಷ್ಟೊಂದು ಅರ್ಥವಿದೆ'' ಎಂದ.

"ಏನಿದೆ?''

"ಅಂದರೆ ಈ ನಿನ್ನ ಸರ್ವಸ್ವವೆಲ್ಲ ನಂದು'' ಎನುತ್ತ ತೋಳುಗಳಲ್ಲಿ ಬಂಧಿಸಿದ. "ಯಾವುದಕ್ಕೂ ನನಗೆ ಅಪ್ಪಣೆ ಕೇಳುವ ರೂಡಿಯಿಲ್ಲ. ಬಡಿಸಿಟ್ಟ ತಟ್ಟೆ ನನ್ನದೇ ಎಂದ ಮೇಲೆ ಊಟ ಮಾಡಲು ಯಾರಪ್ಪಣೆ ಯಾಕೆ ಬೇಕು.''

ಬೆಟ್ಟದ ಮೇಲಿಂದ ಯಾರೋ ಎತ್ತಿ ಪಾತಾಳಕ್ಕೆ ಎಸೆದಂತಾಯ್ತು ನನ್ನ ಸ್ಥಿತಿ. ಮೊದಲ ರಾತ್ರಿ ಮೊದಲ ಬಾರಿಯೇ, ಇವನಿಂದ ಇಂಥ ಮಾತುಗಳೇ, ತಡವರಿಸಿ ನಾನು ಹೇಳಿದ್ದೆ.

"'ಮೊದಲ ಬಾರಿಯೇ ನಿಮ್ಮ ಮನೆಗೆ ಬಂದಾಗಲೇ ನನಗರ್ಥವಾಯಿತು.''

"ಏನರ್ಥವಾಯ್ತು?''

"ಅಪ್ಪಣೆಯಿಲ್ಲದೆ ನೀವು ಎಲ್ಲವನ್ನು ಕೊಳ್ಳೆ ಹೊಡೆಯುವ ಜಾತಿ ಎಂದು. ನನ್ನ ಅಪ್ಪಣೆಯಿಲ್ಲದೆ ನನ್ನನ್ನು ಮುತ್ತಿಟ್ಟುಬಿಟ್ಟರಲ್ಲ.''

"ಇಲ್ಲಿ ಬಾ'' ಎನ್ನುತ್ತ ಹತ್ತಿರ ಎಳೆದುಕೊಂಡ. ನನ್ನ ಮುಖವೆತ್ತಿ ಗೋಡೆಯ ಕಡೆ ತಿರುಗಿಸಿದ್ದ. ಗೋಡೆಯ ಮೇಲೆ ಸಜೀವವಾಗಿ ನಿಂತಂತಿದ್ದ ಒಬ್ಬ ಅಭಿಸಾರಿಕೆಯ ಚಿತ್ರ.

ಚಿತ್ರವನ್ನು ನೋಡಿದರೆ ಚಿತ್ತ ಚಾಂಚಲ್ಯವಾಗಬೇಕು. ತೆಳುವಾದ ದುಕೂಲ ಹೊದ್ದು ತನ್ನವನಿಗಾಗಿ ನಿರೀಕ್ಷಿಸುತ್ತ ಕುಳಿತ ಅಭಿಸಾರಿಕೆ. ಅವಳ ಅರೆತೆರೆದ ಕಣ್ಣುಗಳಲ್ಲಿ ತುಂಬಿದ ಕನಸುಗಳು. ಆಗಸದ ನಕ್ಷತ್ರದ ಕನಸುಗಳು. ತುಂಬಿ ಚೆಲ್ಲಿದ ಬೆಳದಿಂಗಳಲ್ಲಿ ಪ್ರಿಯಕರನ ತೋಳುಗಳಿಗಾಗಿ ಹಂಬಲಿಸುವ ಅನಂತ ಕನಸು.

ಚಿತ್ರದೆಡೆ ಕೈ ತೋರಿದ.

"ಬಹಳ ಸುಂದರವಾಗಿದೆಯಲ್ವೆ ಆ ಚಿತ್ರ ನಂದೂ, ಅದೂ ನೀನೇ ಆಗಿರಬಹುದೆ?'' ಎಂದ.

"ಇಲ್ಲ ಸಂದೀಪ, ಗೋಡೆಯ ಮೇಲಿನ ಚಿತ್ರ ನಾನಾಗಲು ಇಷ್ಟವಿಲ್ಲ. ನಾನು ಅರಳಿ ನಿಲ್ಲಬೇಕು. ಬಣ್ಣಗಳಲ್ಲಿ ಜೀವ ತುಂಬುವುದಷ್ಟೆ ನನ್ನ ಕೆಲಸ. ನಾನು ಗೋಡೆಯ ಮೇಲಿನ ಚಿತ್ರವಲ್ಲ. ನನ್ನ ಕನಸು ಅರಳಿ ನಿಲ್ಲುವ ಕನಸು'' ಎನ್ನುತ್ತ ಅವನ ಹೆಗಲ ಮೇಲೆ ತಲೆಯಿಟ್ಟೆ. ಆ ಆಸರೆಯಲ್ಲಿ ನಾನು ಬಯಸಿದ್ದ ಭರವಸೆ, ನಂಬಿಕೆ, ಸ್ಫೂರ್ತಿ, ಚೈತನ್ಯ, ನನ್ನ ಬಣ್ಣದ ಕನಸುಗಳ ಬಗ್ಗೆ ಅನಂತ ನಂಬುಗೆ ಇಟ್ಟು ನಾನು ಉಸುರಿದ್ದೆ.

"ಸಂದೀಪ ಆ ಚಿತ್ರ ನಾನೇ ಬಿಡಿಸಿದ್ದು. ಅವಳ ಕೆನ್ನೆಯಲ್ಲಿ ನಾಚಿಗೆ ತುಂಬಿದ್ದು, ಅವಳ



"ರೋಗಿ ಸತ್ತು ಹೋಗಿದ್ದಾನೆ. ಹೊರಗೆ ಹಾಕಿ.''

"ಇಲ್ಲ ಸಾರ್ ನಾನು ಸತ್ತಿಲ್ಲ ಸುಮ್ಮನೆ ಮಲಗಿದ್ದೆ ಸಾರ್.''

"ಶಟಪ್, ಸುಮ್ಮನಿರಯ್ಯಾ ಡಾಕ್ಟರಿಗಿಂತ ನಿನಗೇ ಹೆಚ್ಚು ಗೊತ್ತಿದೆಯಾ?''

–ಎಚ್. ಎಂ. ಕೆ. ಮಂಗಳೂರು

ಕಣ್ಣುಗಳಲ್ಲಿ ಕನಸು ತುಂಬಿದ್ದು, ಅವಳೆದೆಯಲ್ಲಿ ನಿರೀಕ್ಷೆ ತುಂಬಿದ್ದು. ಆದರೆ ಅವು ಬಣ್ಣಗಳ ಕನಸಾಗಿ ಒಡೆದದ್ದು ನನ್ನ ಕೈ ಬೆರಳುಗಳಲ್ಲಿ.'' ಹೇಳುತ್ತ ಹೆಮ್ಮೆಯಿಂದ ನನ್ನ ನೀಳವಾದ ಬೆರಳುಗಳನ್ನು ನೋಡಿಕೊಂಡೆ.

"ಏನು?'' ನನ್ನನ್ನು ತಳ್ಳಿದ. ಅವನ ಕೈಗಳು ವಿಚಿತ್ರವಾಗಿ ನಡುಗಿದವು. "ನನಗೆ ಬಣ್ಣಗಳ ಕನಸು, ವರ್ಣಗಳ ಹುಚ್ಚು ಕನಸು ಸಾಧ್ಯವಿಲ್ಲ ನಂದಿನಿ, ಸಾಧ್ಯವಿಲ್ಲ. ನಾನು ಬಣ್ಣಗಳನ್ನು ದ್ವೇಷಿಸುತ್ತೇನೆ. ನನಗೆ ನನ್ನದೇ ಆದ ಬದುಕು ಬೇಕು. ಬದುಕು ಕೊಡುವ ಸಂಗಾತಿ ಬೇಕು. ಅವಳು ನನ್ನವಳು ಮಾತ್ರ ಆಗಿರಬೇಕು.''

"ನಾನು ಯಾವತ್ತಿಗೂ ನಿಮ್ಮವಳೇ ಅಲ್ಲವೆ?''

"ಅದ್ಹೇಗೆ ಸಾಧ್ಯ, ಒಳ್ಳೆಯ ಕಲಾವಿದ ಯಾವಾಗಲೂ ಪಬ್ಲಿಕ್ ಪ್ರಾಪರ್ಟಿ ಇದ್ದ ಹಾಗೆ. ಅಲ್ಲದೆ ನಂದಿನಿ ನಿನ್ನ ಬೆರಳುಗಳಿಗೆ ಬಣ್ಣ ಮೆತ್ತಿಕೊಳ್ಳುವುದನ್ನು ನೋಡಲು ನನಗೆ ಇಷ್ಟವಿಲ್ಲ. ಅದರ ಬಗ್ಗೆ ನನಗೆ ದ್ವೇಷವಿದೆ. ಬಣ್ಣಗಳು ನನ್ನ ಶತ್ರುಗಳು ನಂದಿನಿ.''

'ರಾಗಸಂಗಮ'

ಲಾಟರಿ ಡ್ರಾ – ೧೧ನೇ ವಿಜೇತರು



ಬಿ. ಟಿ. ಮೀನಾಕ್ಷಿ
ಕೆಂಗುಂಟೆ – 577 531
ಚಿತ್ರದುರ್ಗ ಜಿಲ್ಲೆ.

ನಾನು ಮತ್ತೆ ಮಾತನಾಡಲಿಲ್ಲ. ಏನು ಮಾತನಾಡಲು ಸಾಧ್ಯವಿತ್ತು ಇಂಥವನೊಡನೆ? ಅವನ ಕ್ರೋಧದ ಉದ್ರೇಕದ ಮಾತುಗಳು ನನ್ನನ್ನು ತಣ್ಣಗೆ ಕೊರೆಯುತ್ತಿತ್ತು. ಬಣ್ಣಗಳನ್ನು ದ್ವೇಷಿಸುವವರು ಬದುಕಲು ಕೂಡ ಅನರ್ಹರೆಂದು ನನ್ನ ಭಾವನೆಯಾಗಿತ್ತು.

"ನಿಮಗೆ ಯಾಕಿಷ್ಟು ದ್ವೇಷ ಅದರ ಬಗ್ಗೆ?''

"ನಿನಗೆ ಗೊತ್ತೆ ನಂದಿನಿ?''

"ಏನು?''

"ಬಣ್ಣಗಳು ಯಾವತ್ತಿಗೂ ನನ್ನ ಜೀವನದಲ್ಲಿ ರಂಗನ್ನು ತುಂಬಲಿಲ್ಲ. ಕೆಲವು ವರ್ಷಗಳು ಹಿಂದೆ ನಾನೂ ಹಲವು ಕನಸು ಕಂಡಿದ್ದೆ. ಪ್ರೇಮದ ಬಗ್ಗೆ, ಹರೆಯದ ಭಾವಗಳ ಬಗ್ಗೆ, ಪ್ರೀತಿ ತುಂಬಿದ ಬದುಕಿನ ಬಗ್ಗೆ. ನಾನು ಮೋಹಿನಿ ಎಂಬ ಹುಡುಗಿಯನ್ನು ಪ್ರೀತಿಸಿದ್ದೆ. ಅವಳೇ ಸರ್ವಸ್ವವೆಂದುಕೊಂಡಿದ್ದೆ. ಅವಳಿಲ್ಲದೆ ನನಗೆ ಜೀವನವೇ ಇರಲಿಲ್ಲ. ನನ್ನ ಕನಸುಗಳಿಗೆ, ಆಶೆಗಳಿಗೆ ಚೇತನ ತುಂಬಿದವಳೇ ಅವಳು. ಇದೇ ಬಣ್ಣಗಳ ಮೋಹದಿಂದ ನನ್ನನ್ನು ತೊರೆದು ಹೋದಳು. ಅವಳು ಕಲಾವಿದೆಯಂತೆ. ಮುಖಕ್ಕೆ ಬಣ್ಣ ಬಳಿಯುವ ಕನಸು ಹೊತ್ತು, ನನ್ನ ಆಶೆಗಳಿಗೆ ನಿರ್ಜೀವ ಬಣ್ಣ ತುಂಬಿ ಹೊರಟು ಹೋದಳು. ನನ್ನ ಮುಖಕ್ಕೆ ಉಳಿದದ್ದು ಮಾತ್ರ

ಕಪ್ಪು ಬಣ್ಣ. ಅಂದಿನಿಂದಲೇ ನಾನು ಬಣ್ಣದ ಬದುಕನ್ನು ದ್ವೇಷಿಸುತ್ತೇನೆ.''

"ನೀವು ದ್ವೇಷಿಸುತ್ತಿದ್ದುದು ಬಣ್ಣಗಳನ್ನಲ್ಲ ಸಂದೀಪ. ಅವಳಲ್ಲಿದ್ದ ಕಲೆಯನ್ನು. ನೀವು ಗೌರವಿಸಿದ್ದರೆ ಅವಳಿಗೆ ಸ್ಫೂರ್ತಿಯಾಗಿ ನಿಂತಿದ್ದರೆ, ಮೋಹಿನಿ ಎಂದೆಂದಿಗೂ ನಿಮ್ಮವಳಾಗಿ ಉಳಿಯುತ್ತಿದ್ದಳು.''

ನಾನು ಹೇಳುತ್ತಿದ್ದ ಮಾತುಗಳಲ್ಲಿ ಸತ್ವವಿರಲಿಲ್ಲ. ವಿಷಣ್ಣ ಭಾವವಿತ್ತು. ಮೊದಲರಾತ್ರಿಯೇ ಗಂಡನ ಬಗ್ಗೆ ಹಲವು ಸುಂದರ ಕನಸುಗಳನ್ನು ಕಾಣುತ್ತ ಹೋದ ಹೆಣ್ಣಿಗೆ, ಅವನ ಬದುಕಿನಲ್ಲೂ ಇನ್ನೊಬ್ಬ ಹೆಣ್ಣಿನೊಡನಿದ್ದ ಪ್ರೇಮದ ಅನುಭವದ ಬಗ್ಗೆ ತಿಳಿದಾಗ ಏನನ್ನಿಸಬೇಡ. ಹಾಗಾದರೆ ಇವನ ಪ್ರೀತಿ ಜೀವನಕ್ಕೆ ತಾನು ಮೊದಲಿನವಳಲ್ಲ. ಯಾರೋ ಬಿಟ್ಟು ಹೋದ, ಕಾಲಿಯಾದ ಉಳಿದ ಜಾಗಕ್ಕೆ ತಾನು ದಾಖಲಾಗುತ್ತಿದ್ದೇನೆ. ಅದು ಹಲವು ಹನ್ನೊಂದು ಶೃಂಖಲೆಗಳನ್ನು ಕಟ್ಟಿಕೊಂಡು ಸಂದೀಪ ಪ್ರೀತಿಸುವುದು ಸುಂದರ ಹೆಣ್ಣನ್ನು ಮಾತ್ರ, ಅವಳ ಕಲೆಯನ್ನಲ್ಲ. ಅವಳ ಚೈತನ್ಯವನ್ನಲ್ಲ, ಅವಳ ಭಾವನೆಗಳನ್ನಲ್ಲ. ನಾನು ಹೇಳಿದ್ದಕ್ಕೆ ಏನೋ ಹೇಳಿದ್ದ ಆತ,

"ಕಲೆ, ಸ್ಫೂರ್ತಿ ಇವೆಲ್ಲ ನನ್ನ ಮಟ್ಟಿಗೆ ಬರಡು ಭಾವನೆಗಳು. ನನ್ನ ಮೆಟ್ಟಿಗೆ ನನ್ನ ಹೆಂಡತಿಯಾಗುವವಳು ನನ್ನ ವಲಯದಲ್ಲಿ ಮಾತ್ರ ಇರಬೇಕು. ಆ ಚೌಕಟ್ಟು ದಾಟಿ ಹೋದರೆ ಮಾತ್ರ ನಾನು ಮನುಷ್ಯನಲ್ಲ.''

ಅವನ ಮಾತುಗಳನ್ನು ಕೇಳುತ್ತಿರುವ ನನ್ನ ದೇಹ ಎಲ್ಲ ಶಕ್ತಿಯನ್ನು ಕಳೆದುಕೊಂಡು ನಿಸ್ಸತ್ವವಾಗಿತ್ತು. ಮಾತನಾಡಲು ಶಕ್ತಿಯೇ ಇಲ್ಲವೇನೋ ಎಂಬಂತೆ ನಾಲಿಗೆ ಉಡುಗಿ ಹೋಗಿತ್ತು. ಕಣ್ಣು ಕತ್ತಲ್ಲಿಟ್ಟಂತೆ, ಗೋಡೆಯ ಮೇಲಿನ ಚಿತ್ರಗಳೆಲ್ಲ ಬಣ್ಣಕಳೆದುಕೊಂಡು ನಿರ್ಜೀವ ಪ್ರೇತಗಳಾದಂತೆ ನನ್ನ ಸುತ್ತ ಹೊರಳಾಡುತ್ತಿರುವ ಭ್ರಮೆಯಾಯ್ತು.

ತನ್ನ ಕಬ್ಬಿಣದಂಥಹ ತೋಳುಗಳ ಶೃಂಖಲೆಯಲ್ಲಿ ನನ್ನನ್ನು ಬಿಗಿದ. ಏನು ಹೇಳಿದ ಆತ?

"ನಂದಿನಿ ಆ ಬಣ್ಣಗಳ ಕನಸು ಬಿಡು. ವಾಸ್ತವಕ್ಕೆ ಬಾ, ನಮ್ಮ ಸಂಸಾರದ ಮಟ್ಟಿಗೆ ಎಲ್ಲ ಸಿಮೀತವವಾಗಿರಲಿ.'' ನೀನೂ ಕೂಡ ಎಂಬ ಭಾವನೆಯಲ್ಲಿ ಮಾತನಾಡಿದ್ದ.

ಅವನು ಕಕ್ಕಿದ ವಿಷವನ್ನು ಅರಗಿಸಿಕೊಳ್ಳುವ ಶಕ್ತಿ ನನಗಿರಲಿಲ್ಲ. ಬಣ್ಣಗಳ ಕನಸು ಕಂಡ ಕಲಾವಿದರೆಲ್ಲ ಸಂಸಾರ ಬಿಡಬೇಕೆಂಬ ತತ್ವವೂ



ಅಯ್ಯೋ ಪಾಪ

ಚೆಲುವೆ ನಿನ್ನ ಮುಖಾರವಿಂದ
ಹೊಳೆವ ಹುಣ್ಣಿಮೆಯ ಚಂದ್ರ
ತಿಂಗಳು ಕಳೆವುದು ನಾ ಬಂದಾಗ
ನೀನು ಅಮಾವಾಸ್ಯೆಯ ಚಂದ್ರ.

—ವಿ. ಸು. ಭ.




ನನ್ನದಲ್ಲ. ಎರಡನ್ನೂ ಸಮತೋಲನವಾಗಿ ಕಾಪಾಡಿಕೊಂಡು ಬರುವ ಶಕ್ತಿಯೂ ನನಗಿತ್ತು. ನನ್ನ ಸಂಸಾರದ ಚೌಕಟ್ಟಿನಲ್ಲಿ ನನ್ನ ಅನುಭವಕ್ಕೆ ಬಂದುದನ್ನೆಲ್ಲ ಕಲೆಯಲ್ಲಿ ಅಳವಡಿಸಬೇಕು.

ಮುಂದೆ ಮಾತನಾಡುವ ಶಕ್ತಿಯಾಗಲಿ, ಸಂಭ್ರಮವಾಗಲಿ ನನ್ನಲ್ಲಿರಲಿಲ್ಲ. ನೆಲದ ಮೇಲೆ ಬಿದ್ದ ಬೆಳದಿಂಗಳು ಸರಿಯುತ್ತ ನಡೆದಿತ್ತು. ಗೋಡೆಯ ಮೇಲೆ ನಿಧಾನವಾಗಿ ಕವಿದುಕೊಂಡ ಕತ್ತಲಲ್ಲಿ ಚಿತ್ರಗಳೆಲ್ಲ ಮಾಯವಾದಂತೆ ತೋರುತ್ತಿತ್ತು.

ಆ ರಾತ್ರಿಯೇ ನನ್ನ ಅನುಭವಕ್ಕೆ ಬಂದದ್ದು ಸಂದೀಪನಿಗೆ ಬೇಕಾದದ್ದು ನನ್ನ ಭಾವನೆಗಳಲ್ಲ, ನನ್ನ ಕಲೆಯಲ್ಲ, ಅವನಿಗೆ ಬೇಕಾದದ್ದು ನನ್ನ ಸಪೂರ ದೇಹ ಮಾತ್ರ. ನನ್ನ ಚೆಲುವು, ಆ ಚೆಲುವಿನಲ್ಲಿ ಮೂಡುವ ಬಣ್ಣಗಳಲ್ಲ. ಅದರಲ್ಲಿ ತುಂಬಿದ ಬದುಕಿನ ಭರವಸೆಯಲ್ಲ.

ಅಂಥ ರಾತ್ರಿಗಳು ಎಷ್ಟೋ ಕಳೆದು ಹೋದವು. ಎಷ್ಟೋ ನಿರ್ಜೀವ, ನಿರ್ಭಾವ, ಭಾವರಹಿತವಾಗಿದ್ದವು. ಆ ರಾತ್ರಿಗಳು. ಆಗೊಮ್ಮೆ ಈಗೊಮ್ಮೆ ನನ್ನನ್ನು ಪರೀಕ್ಷಿಸುವಂತೆ ಗಮನಿಸುತ್ತಿದ್ದ. "ಯಾಕೆ ಚಿತ್ರಗಳನ್ನು ಬರೆಯುತ್ತಿಲ್ಲ" ಎಂದು ಒಮ್ಮೆಯಾದರೂ ಕೇಳಿದನೆ? ಅವನು ಕೇಳಲಿಲ್ಲವೆಂದು ನನ್ನಲ್ಲಿ ಮೂಡುವ ಭಾವನೆಗಳನ್ನು ಒತ್ತಿಕೊಂಡು ಬರುವ ಕಲ್ಪನೆಗಳನ್ನು ನಿರ್ಜೀವ ರಹಿತವಾಗಿ ಬಿಡಲು ಹೇಗೆ ಸಾಧ್ಯ? ಪ್ರತ್ಯೇಕ ರೂಮಿನಲ್ಲಿ ಕಾಯುತ್ತ ತನ್ನ ಖಾಲಿ ಮೈ ತೆರೆದಿಟ್ಟು ಕುಳಿತ ಕ್ಯಾನ್‌ವಾಸ್ ನನ್ನ ಮನಸ್ಸನ್ನು ಎಳೆಯುತ್ತಿತ್ತು. ಅದರಲ್ಲಿ ಮೂಡುವ ನನ್ನ ಕಲ್ಪನೆಯ ಚಿತ್ರಗಳು ಪ್ರಕೃತಿ, ಆಕಾಶ, ಹಸಿರು ಗುಡ್ಡ ಬೆಟ್ಟಗಳು ನದಿ, ನೆಲ, ಹೊಲ ಚಿಗುರು ಕಲ್ಪನೆಯ ಜೀವಂತ ಪ್ರತಿಮೆಗಳು. ಬಣ್ಣಗಳು ಖಾಲಿಖಾಲಿಯಾಗಿ ನಿಂತು ನನ್ನನ್ನು ಬಾ ಎಂದು ಕರೆಯುತ್ತಿದ್ದವು. ಪರದೆಯ ಹಿಂದೆ ಮುಸುಗು ಹಾಕಿಕೊಂಡು ನಿಂತ ಅರ್ಧಂಬರ್ಧ ಚಿತ್ರಗಳು ನನ್ನ ಮನಸ್ಸಿನಾಳವನ್ನು ಬಗೆಯುತ್ತಿದ್ದರೂ ಅವುಗಳೆಲ್ಲ ಮುಸುಗು ತೆರೆದು ಹೊರಜಗತ್ತಿಗೆ ಬರಬೇಕೆಂದು ಅಳುತ್ತಿರುವಂತೆ ಕಾಣುತ್ತಿತ್ತು.

ಪಪ್ಪನಿಗೆ ಮದುವೆಗೆ ಮೊದಲು ಎಷ್ಟೋ



ರೋಗ ಮನುಷ್ಯನನ್ನು ಕೊಲ್ಲುವುದಕ್ಕಿಂತ ಹೆಚ್ಚು ರೋಗದ ಭಯವು ಅವನನ್ನು ಕೊಲ್ಲುತ್ತದೆ.
—ರೂಸೊ

ತಿಳಿಯದುದರ ಬಗ್ಗೆ ನಾನು ಅಜ್ಞಾನಿ ಎಂದು ಹೇಳಿಕೊಳ್ಳಲು ನನಗೆ ನಾಚಿಕೆ ಇಲ್ಲ.
—ಜೆ. ಜೆ. ರೂಸೋ

ನಿನ್ನ ಬೆನ್ನನ್ನು ನೀನೇ ತಟ್ಟಿಕೊಂಡು ನೀನು ಮುನ್ನಡೆಯಲಾರೆ.
—ಚೀನೀ ಗಾದೆ

ವಿಚಾರ ಸ್ವಾತಂತ್ರ್ಯ ಜೀವನದ ಆತ್ಮ.
—ವಾಲ್ಟೇರ್

ಅನುಭವವೇ ಬುದ್ಧಿವಂತಿಕೆಯ ಆಪ್ತ ಸ್ನೇಹಿತ.
—ಯಾಂಗ್

ಸಂಗ್ರಹ : ದೇವಿ ಕೋಟ್ಯಾಳಿ

ಸಾರಿ ಹೇಳಿದ್ದೆ. "ನಾನು ಮದುವೆಯಾಗುವುದಿಲ್ಲ. ಮದುವೆಯಾದರೂ ನನ್ನ ಬಣ್ಣಗಳಿಗೆ ಜೀವ ತುಂಬುವವರನ್ನು ಮಾತ್ರ'' ಎಂದು ಹೇಳಿದ್ದರೂ ಪಪ್ಪ,

"ಸಂದೀಪ ಶ್ರೀಮಂತ, ಹೆಚ್ಚಾಗಿ ದುಡ್ಡುಳ್ಳವರೇ ಕಲೆಯನ್ನು ಪ್ರೋತ್ಸಾಹಿಸುತ್ತಾರೆ'' ಎಂದರು.

ಹೌದು ಸಂದೀಪ ಶ್ರೀಮಂತ ನಿಜ, ಯಾತಕ್ಕಾಗಿ ಅವನ ದುಡ್ಡು. ಪಾರ್ಟಿ, ಕ್ಲಬ್ಬು ಹುಡುಗಿಯರು, ಕುಣಿತ ಇಂಥವುಗಳಿಗಾಗಿಯೆ?

ಸಂದರ್ಭಗಳು ತನ್ನನ್ನು ಎಷ್ಟು ಜಡವಾಗಿ ಮಾಡಿಬಿಟ್ಟಿದ್ದುವಲ್ಲ. ತನ್ನೆದೆಯ ಭಾವನೆಗಳನ್ನು ಹೊರತೆಗೆದು ಹರಹುವಷ್ಟು ಸ್ವತಂತ್ರವಿರಲಿಲ್ಲವೆ ತನ್ನಲ್ಲಿ.

ಈ ಜಡತ್ವ, ಈ ನಿರ್ಭಾವ ಎಲ್ಲಿಂದ ಬಂತು?

ನೆನಪಿಸಿಕೊಳ್ಳಲು ಯತ್ನಿಸಿದೆ.

ಗಾಡಿ ಒಂದೇ ಸಮನೆ ಹಳಿಯ ಮೇಲೆ ಓಡುತ್ತಿದೆ ದಡ ದಡ ಸಪ್ಪಳ ಮಾಡುತ್ತ ತನ್ನದೇ ಆದ ದರ್ಪದಲ್ಲಿ. ತನ್ನೆದೆಯ ಭಾವನೆಗಳಿಗೆ ಸಂದೀಪ ಸ್ಪಂದಿಸಿದ್ದರೆ ತಾನೀ ರೀತಿ ಸಂಸಾರ ಮಕ್ಕಳು ಬಿಟ್ಟು ಶಾಂತಿನಿಕೇತನಕ್ಕೆ ತನ್ನ ಗುರಿ ಅರಸಿಕೊಂಡು ಬರುತ್ತಿದ್ದೆನೆ?



ಹೊಟ್ಟೆ

ವಡೆ, ಪಕೋಡ, ಜಿಲೇಬಿಗಳು
ಬಯಸಿದಾಗ ದೊರೆತರೆ
ನಿಶ್ಚಿಂತನಪ್ಪ ಆಚಾರ ಸೀನಪ್ಪ
ಡೊಳ್ಳೊಟ್ಟೆ ಬೆಳೆಯೋದು ಪ್ರಭುಜ್ಞ
ಕಾಣನಪ್ಪ.

–ಪ್ರೊ. ಪ್ರಭು ಗಂಜೀಹಾಳ್

ಕಿವಿಗಡಚಿಕ್ಕುವ ರೈಲಿನ ಸಪ್ಪಳ.

ರೈಲು ಡಬ್ಬಿಯಲ್ಲಿ ಸೀಟಿಗೊರಗಿ ತೂಕಡಿಸುವ, ನಿದ್ರಿಸುವ ಪ್ರಯಾಣಿಕರು. ಮೂಲೆಯಲ್ಲಿ ಕಾರಾಶೇವ ಮಾರುವವನೊಬ್ಬ ಕಣ್ಮುಚ್ಚಿಕೊಂಡು ತೂಕಡಿಸುತ್ತಿದ್ದಾನೆ. ಮೇಲಿನ ಬರ್ಥ್ ಮೇಲೆ ಗುಜರಾತಿ ಯುವಕನೊಬ್ಬ ಯಾವುದೊ ಇಂಗ್ಲಿಷ್ ಮ್ಯಾಗಜಿನ್ ಓದುತ್ತಿದ್ದವನು ನಿದ್ದೆಯ ಮಂಪರು ಬಂದಂತೆ ಸಣ್ಣ ಜೀರೋ ಲೈಟನ್ನು ಆರಿಸಿ ಹೊದಿಕೆ ಹೊದ್ದುಕೊಂಡು ಮಲಗಲು ಯತ್ನಿಸುತ್ತಿದ್ದ.

ಗಾಡಿ ತನ್ನದೇ ಗತಿಯಲ್ಲಿ ಸಾಗತಿತ್ತು. ಸುತ್ತಲೆಲ್ಲ ಕತ್ತಲು ತುಂಬತೊಡಗಿತ್ತು. ದೂರದ ಗುಡ್ಡ, ಮರ, ಬೆಟ್ಟ ಕತ್ತಲಿನಲ್ಲೂ ಅಸ್ಪಷ್ಟವಾಗಿ ಕಾಣುತ್ತಿದ್ದವು. ಎದುರು ಸೀಟಿನ ಮೇಲೆ ತಾಯಿ ಮಗುವೊಂದಕ್ಕೆ ಎದೆಹಾಲನ್ನು ಕುಡಿಸುತ್ತ ತನ್ಮಯತೆಯಿಂದ ಕಣ್ಮುಚ್ಚಿ ತಾಯ್ತನದ ಸುಖ ಅನುಭವಿಸುತ್ತಿದ್ದಳು. ಅವಳ ಕಣ್ಣುಗಳಲ್ಲಿ ಸುಖಾನುಭವದ ಕನಸು.

ಬ್ಯಾಗಿನಿಂದ ಕಾಗದ ಪೆನ್ಸಿಲ್ ತೆಗೆದುಕೊಂಡು ಸ್ಕೆಚ್ ಹಾಕಿಕೊಳ್ಳಬೇಕೆನಿಸಿತು. ಆದರೆ ಕೈ ಕಾಲುಗಳಲ್ಲಿ ಕ್ರಿಯಾಶಕ್ತಿ ಅಡಗಿದೆಯೇನೊ ಎನ್ನಿಸಿತ್ತು. ಒಂದು ರೀತಿಯ ಜಡತೆ ತನ್ನನ್ನು

ಅವರಿಸಿದೆ ಎನಿಸುತ್ತಿತ್ತು.

ವಿವೇಕ ಯಾವಾಗಲೂ ಹೇಳುತ್ತಿದ್ದ.

"ಕಲಾವಿದ ಯಾವಾಗಲೂ ತೆರೆದ ಮನಸ್ಸಿನಿಂದ ಸನ್ನಿವೇಶಗಳನ್ನು ಒಪ್ಪಿಕೊಳ್ಳುತ್ತ ಹೋಗಬೇಕು ನಂದಿನಿ. ಜಡತ್ವವನ್ನು ಬಿಡು, ತೆರೆದ ದಾರಿಯತ್ತ ಹೆಜ್ಜೆ ಹಾಕುತ್ತ ಹೋಗು" ಎಂದಿದ್ದ.


ಯಾವ ದಾರಿ ತೆರೆದಿತ್ತು ನನ್ನ ಪಾಲಿಗೆ ಎನಿಸುತ್ತಿತ್ತು. ಸಂದೀಪ ನನ್ನ ಪಾಲಿಗೆ ಎಲ್ಲ ಬಾಗಿಲು, ಕಿಟಕಿಗಳನ್ನು ಹಾಕುತ್ತ ನಡೆದಿದ್ದ. ಕತ್ತಲಿನಾಳದಿಂದ ಒಂದೇ ಒಂದು ಬೆಳಕಿನ ಕಿಂಡಿ ಅದೂ ವಿವೇಕನೆಂಬ ಬೆಳಕಿನ ಕಿರಣ. ನನಗೆ ಚೈತನ್ಯ ನೀಡಲೆಂದೇ ಬಂಧನ? ಅದಕ್ಕೂ ಮೊದಲು ನನ್ನ ಜೀವನದಲ್ಲಿ ಚೈತನ್ಯವಿರಲಿಲ್ಲವೆಂದಲ್ಲ, ಸಂದೀಪನನನ್ನು ಮದುವೆಯಾದ ಮೂರು ವರ್ಷಕ್ಕೆ ನನ್ನ ಜೀವನದಲ್ಲೂ ಚಿತ್ರಗಳು ಪಲ್ಲವಿಸಿದವು. ಇಂಥದೇ ತಾಯ್ತನದ ಸುಖ ಹೊಂದಿದ್ದೆ.

ವಸಂತ, ಚೈತ್ರ ನನಗಿಷ್ಟವಾದ ಋತು. ಒಣಗಿ ಹೋದ ಜೀವನದ ಪಸೆಗೆ ನೀರೆರೆದು ಮತ್ತೆ ನನ್ನಲ್ಲಿ ಹಸಿರನ್ನು ತುಂಬಿದವರು.

ಸಂದೀಪನದು ನೂರೆಂಟು ವ್ಯವಹಾರಗಳು. ಬಿಜಿನೆಸ್ಸು, ಮೀಟಿಂಗ್, ಪಾರ್ಟಿ, ಕ್ಲಬ್ಬು, ಟೂರು ಎಂದು ತನ್ನದೇ ಆದ ಲೋಕದಲ್ಲಿ ನನ್ನನ್ನು ಮರೆತು ಬಿಟ್ಟರೂ ನನ್ನ ಬೆನ್ನ ಹಿಂದೆ ಅವನ ಎರಡು ಕಣ್ಣುಗಳು ಸದಾ ಕಾವಲಿದ್ದುದು ನನಗೆ ಗೋಚರವಾಗುತ್ತಿತ್ತು. ಮೋಹಿನಿಯೆಂಬ ತಕ್ಕಡಿಯಲ್ಲಿ ನನ್ನನ್ನಿಟ್ಟು ಸದಾ ತೂಗುತ್ತಿದ್ದ ಅವನ ಮನಸ್ಸು, ಪಾರ್ಟಿ, ಕ್ಲಬ್ಬುಗಳಲ್ಲಿ ಕುಡಿಯುತ್ತ ಹುಡುಗಿಯರೊಡನೆ ನರ್ತಿಸುವ ಅವನ ಚರ್ಯೆ ಮನೆಗೆ ಬಂದೊಡನೆ ಸಾದಾ ಸೀದಾ ಗಂಡನಾಗಿ ಬಿಡುತ್ತಿದ್ದ ಅವನ ರೀತಿ.

ಚೈತ್ರ, ವಸಂತನನ್ನು ಬೆಳೆಸುತ್ತಿದ್ದ ದಿನಗಳಲ್ಲಿ ಗೃಹಿಣಿಯಾಗಿ ನನ್ನ ಕರ್ತವ್ಯ ನಾನು ಮಾಡುತ್ತಿದ್ದೇನೆ ಮಕ್ಕಳಿಬ್ಬರ ಮಮತೆಯ ತಾಯಿಯಾಗಿದ್ದು ನಿಜ. ಆದರೆ ಹೆಂಡತಿಯಾಗಿ ಹಾಸಿಗೆಯಲ್ಲಿ ಮಾತ್ರ ನಾನು ಪಾಲು ಪಡೆಯುತ್ತಿದ್ದ ನಾನು, ಹೆಂಡತಿಯಲ್ಲ ಅವನ ಸೂಳೆ ಮಾತ್ರ ಅನ್ನಿಸುತ್ತಿತ್ತು.

ಗಂಡ ಹೆಂಡತಿ ಎಂಬ ಸಂಬಂಧದಲ್ಲಿ ವ್ಯಾಪಕವಾದ ಒಂದು ಚೌಕಟ್ಟಿನಲ್ಲಿ ಯಾವ ಅರ್ಥದಲ್ಲಿ ನನ್ನನ್ನು ನಡೆಸಿಕೊಂಡು ಬರುತ್ತಿದ್ದಾನ



"ಪೋಲೀಸ್ ಕೇಂದ್ರದ ಉದ್ಘಾಟನೆಗಾಗಿ ಹೋದರೂ ಈ ಹೊಡೆತ ಹೇಗೆ ಬಿದ್ದವು?"
"ಮಾನ್ಯ ಪೋಲೀಸ್ ಮಿತ್ರರೇ ಎಂದು ಪ್ರಾರಂಭಿಕ ಭಾಷಣ ಮಾಡುವಾಗ, ಆ ಹಾಳು ಮೈಕು 'ಪೋಲೀಸ್' ಶಬ್ದದಲ್ಲಿನ 'ಸ್' ಉಚ್ಚರಿಸಲಿಲ್ಲ."
—ಮಾ. ವಿ. ಸತೀಶ

ಎನಿಸಿದಾಗ ವ್ಯಥೆಯಾಗುತ್ತಿತ್ತು.

ನನ್ನ, ವಿವೇಕನ ಪವಿತ್ರ ಸ್ನೇಹವನ್ನು ಎಲ್ಲಿಗೆ ಒಯ್ದು ಹಚ್ಚೆದ್ದ.

ನನಗಿನ್ನೂ ಚೆನ್ನಾಗಿ ನೆನಪಿದೆ.

ನನ್ನ, ವಿವೇಕನ ಮರುಭೇಟಿಯ ದಿನ.

ಒಂದು ಸಂಜೆ ಚಿತ್ರಕಲಾ ಪರಿಷತ್ತಿನಲ್ಲಿ ರಾಜ್ಯ ಮಟ್ಟದ ಚಿತ್ರ ಪ್ರದರ್ಶನವಿತ್ತು. ಮಕ್ಕಳಿಬ್ಬರನ್ನು ಕರೆದುಕೊಂಡೆ ನಾನು ಹೋಗಿದ್ದೆ.

ನಾನಾ ವರ್ಣದ ತೈಲ ಚಿತ್ರಗಳು.

ಹೆಸರಾಂತ ಕಲಾವಿದರ ಚಿತ್ರಗಳು.

ನಾನು ಪ್ರೀತಿಸುವ ಬಣ್ಣಗಳ ಆಗರವಾಗಿತ್ತು ಅದು. ಮದುವೆಯಾದ ಮೇಲೆ ಮೊದಲ ಬಾರಿಗೆ ಮುಕ್ತವಾಗಿ ಹರಿದು ಬಿಟ್ಟಿದ್ದ ಸಂತಸದ ವಾಹಿನಿ.

ಮತ್ತೆ ಅದೇ ಗಳಿಗೆಯಲ್ಲಿ ನನ್ನ ಚಿತ್ರಗಳೆನ್ನಲ್ಲ ರೂಮಿನಲ್ಲಿ ಕೂಡಿ ಹಾಕಿದ್ದ ನೆನಪು. ಅದೇ ಮೊದಲ ಬಾರಿ ಸಂದೀಪನನ್ನು ಬಹಳ ದ್ವೇಷಿಸಿದ್ದೆ.

ಅಲ್ಲಿಯೇ ಅಲ್ಲವೆ ವಿವೇಕ ನಕ್ಕಿದ್ದು.

ಎಷ್ಟು ಸಂತಸದಿಂದ ಕಣ್ಣರಳಿಸಿ ನುಡಿದ.

"ಅರೇ ನಂದಿನಿ, ನೀವು. ವ್ಹಾಟ್ ಎ ಸರಪ್ರೈಜ್. ಎಲ್ಲಿ ನಿಮ್ಮ ಯಾವ ಚಿತ್ರಗಳೂ ಇಲ್ಲ. ನಾನು ಆಗಿನಿಂದಲೇ ಹುಡುಕುತ್ತಲೇ ಇದ್ದೇನೆ'' ಎಂದ.

ಎಷ್ಟೋ ವರ್ಷಗಳಿಂದ ಬಂಜರು ಬಿದ್ದ ಭೂಮಿಗೆ ಹನಿಸಿದಂತ ಅವನ ಮಾತು. ಕಾಲೇಜಿನಲ್ಲಿದ್ದಾಗ ಎಷ್ಟು ಒಳ್ಳೆಯ ಸ್ನೇಹಿತನಾಗಿದ್ದ. ನನ್ನ ಚಿತ್ರಗಳನ್ನು ವಿಮರ್ಶಿಸುವ ಧೈರ್ಯ, ಹಕ್ಕು ಅವನಿಗೆ ಮಾತ್ರ ಇತ್ತು. ನಾನು ಬಣ್ಣ ಹಾಕುವ ರೀತಿಯನ್ನು ಮೆಚ್ಚುತ್ತಿದ್ದ. ತಪ್ಪಿದ್ದರೆ ಖಂಡಿಸುತ್ತಿದ್ದ. ಎಲ್ಲಿ ಪ್ರದರ್ಶನವಿದ್ದರೂ ನಾವಿಬ್ಬರೂ ಜೊತೆಯಾಗಿ ಹೊರಡುವುದಿತ್ತು.

ನಂದಿನಿ ನಿಮ್ಮ ಚಿತ್ರಗಳು ಇರಲೇಬೇಕೆಂಬ ಒತ್ತಾಯದಿಂದ ಪ್ರದರ್ಶನಕ್ಕೆ ಒಯ್ಯುವ ಜವಾಬ್ದಾರಿಯನ್ನು ಅವನೇ ಹೊತ್ತುಕೊಳ್ಳುತ್ತಿದ್ದ.

ಇಂಥ ನಮ್ಮ ಸ್ನೇಹ ಮದುವೆ ಮಟ್ಟಕ್ಕೆ ಯಾಕೆ ಏರಲಿಲ್ಲ. ಯಾವಾಗಲೂ ನನ್ನ ಒಡನಾಡಿಯಾಗಿ ನನ್ನ ಕಲೆಗೆ ಸ್ಫೂರ್ತಿ ಕೊಡುತ್ತಿದ್ದ ವಿವೇಕ. ಈಗ ಮತ್ತೆ ನನ್ನ ನಿರ್ಜೀವ



ತಾನು ಪ್ರೀತಿಸುವ ಪುರುಷನಿಗಾಗಿ ರುಚಿಯಾದ ಊಟ ಸಿದ್ಧಪಡಿಸಿ ಉಣಬಡಿಸಬೇಕೆಂದು ಶ್ರದ್ಧೆಯಿಂದ ಅಡುಗೆಯಲ್ಲಿ ನಿರತಳಾದ ಹೆಣ್ಣಿಗಿಂತಲೂ ಆಕರ್ಷಕವಾದ ಚಿತ್ರ ಈ ಜಗತ್ತಿನಲ್ಲಿ ಬೇರೊಂದಿಲ್ಲ.

—ಬೆಂಜಮಿನ್ ಫ್ರಾಂಕ್ಲಿನ್

ಈ ಜಗತ್ತಿನಲ್ಲಿ ವಿದ್ಯೆಯಂಥ ದೃಷ್ಟಿಯಿಲ್ಲ, ಸತ್ಯದಂಥ ತಪವಿಲ್ಲ, ಆಸಕ್ತಿಯಂಥ ದುಃಖವಿಲ್ಲ ಮತ್ತು ತ್ಯಾಗದಂಥ ಸುಖ ಇನ್ಯಾವುದೂ ಇಲ್ಲವೇ ಇಲ್ಲ.

—ಲಾಂಗ್ ಫೆಲೋ

ಸಂಗ್ರಹ : ಶಂಕರಗೌಡ ಪೈ. ಪಾಟೀಲ

ಚಿತ್ರಗಳಲ್ಲಿ ಬಣ್ಣಗಳನ್ನು ಹರಡಲೆಂದೆ ಬಂದನೆ?

ಅವನ ಪ್ರಶ್ನೆಗೆ ಏನುತ್ತರ ಕೊಡಬೇಕೋ ತಿಳಿಯಲಿಲ್ಲ. ಚೈತ್ರ, ವಸಂತರನ್ನು ಮುಂದೆ ತಳ್ಳಿ, "ಈಗ ಇವೇ ನನ್ನ ಅಮೂಲ್ಯ ಚಿತ್ರಗಳು" ಎಂದೆ.

ಏನನ್ನಿಸಿತೋ ವಿವೇಕ ಗಾಢವಾದ ನೋಟದಿಂದ ನನ್ನೆಡೆ ನೋಡಿದ್ದ. ನನಗಲ್ಲಿ ಅಳು ಉಕ್ಕಿ ಬರುತ್ತದೇನೊ ಎನಿಸಿ ಮುಖ ತಿರುವಿದೆ ನಾನು.

"ನೀವು ಕಾಗದದಲ್ಲಿ ಬಿಡಿಸಿದ ಚಿತ್ರಗಳಿಗಿಂತ ಅಮೂಲ್ಯವಾದ ಚಿತ್ರಗಳಿವು" ಎಂದು ಮಕ್ಕಳನ್ನು ತಬ್ಬಿ ಮುತ್ತಿಟ್ಟ "ಹ್ಯಾಗಿದ್ದೀರಾ ನೀವು, ನಿಮ್ಮ ಚಿತ್ರಗಳು ಒಂದೂ ಇಲ್ಲ ಎಂದರೆ ಆಶ್ಚರ್ಯವಾಗುತ್ತದೆ" ಎಂದು ಆಪ್ಯಾಯಮಾನದಿಂದ ಕೇಳಿದವನಿಗೆ ಏನು ಹೇಳಬೇಕಿತ್ತು ನಾನು.

"ಮನೆಗೆ ಬನ್ನಿ" ಎಂದು ಸಂತಸದಿಂದ ಮನೆಗೆ ಕರೆತಂದೆ. ಮುಂದಿನ ಪೋರ್ಟಿಕೋದಲ್ಲಿ ಈಜೀಚೇರಿನ ಮೇಲೆ ನಿರ್ಲಕ್ಷವಾಗಿ ಕಾಲು ಹರಡಿಕೊಂಡು ಕೈಯಲ್ಲಿ ಮ್ಯಾಗಜಿನ್ ಹಿಡಿದುಕೊಂಡು ಕುಳಿತ ಸಂದೀಪ,

"ಇವತ್ತೇನು ಬೇಗ ಬಂದುಬಿಟ್ಟಿ"ಎನ್ನುವ ಪ್ರಶ್ನೆಗೆ ಉತ್ತರವಾಗಿ ನನ್ನನ್ನು ಸುಟ್ಟುಬಿಡುವಂತೆ ನೋಡಿದ್ದ. ವಿವೇಕನನ್ನು ಕರೆತಂದು ಪರಿಚಯಿಸಿದ್ದೆ.



ತೀರಿದ ಬರ

ಕನಕಾಂಬರ ಮುಡಿದ ಕನ್ಯೆ
ಕೊಡು ನಿನ್ನ ಮುದ್ದಾದ ಕೆನ್ನೆ
ಎಂದ್ಹೇಳುತ್ತ ಅವಳ ಕೆನ್ನೆಗೆ
ಮುತ್ತಿಟ್ಟ ಪ್ರಿಯಕರ
ತೀರಿಸಿಕೊಂಡ ತನ್ನಾಸೆಯ ಬರ.

—ಸಿ. ಕೆ. ಗಂಗೇಗೌಡ

"ವಿವೇಕ ನನ್ನ ಕಾಲೇಜ್‌ಮೇಟ್. ಇವತ್ತು ಚಿತ್ರಕಲಾ ಪರಿಷತ್‌ನಲ್ಲಿ ಪ್ರದರ್ಶನವಿತ್ತು ಹೋಗುತ್ತೇನೆಂದು ಹೇಳಿದ್ದೆನಲ್ಲ, ಅಲ್ಲಿ ಭೇಟಿಯಾದರು."

"ಹಲೋ" ಎಂದಷ್ಟೇ ಹೇಳುವ ಮರ್ಯಾದೆ ತೋರಿದ.

"ನಾವಿಬ್ಬರೂ ಚಿತ್ರಕಲೆಯ ಸ್ನೇಹಿತರು. ನಂದಿನಿಯವರಂತೆ ನನಗೆ ಚಿತ್ರ ಬರೆಯಲು ಬರುವುದಿಲ್ಲ. ಆದರೆ ಚಿತ್ರಕಲೆಯನ್ನು ಪ್ರೀತಿಸುತ್ತೇನೆ, ಆರಾಧಿಸುತ್ತೇನೆ, ಗೌರವಿಸುತ್ತೇನೆ ಕೂಡ" ಎಂದ. ಎಷ್ಟು ನಿಷ್ಕಳಂಕ ಮಾತು ಅವನದು.

"ಹಂ." ತುಟಿಯಂಚಿನಿಂದ ತಿರಸ್ಕಾರವಾಗಿಬಿಟ್ಟ ಆ ಧ್ವನಿ ನನ್ನೆದೆಯ ದಳ್ಳುರಿಯ ಹೊಗೆ ವಿವೇಕನನ್ನು ತಟ್ಟಬಾರದು ಎಂದು ಕೊಂಡಿದ್ದೆ.

ಆದರೆ ನನ್ನ ಚಿತ್ರಗಳಲ್ಲಿ ಸೂಕ್ಷ್ಮವಾಗಿ ಕೊರತೆ ಕಂಡು ಹಿಡಿಯುತ್ತಿದ್ದ ವಿವೇಕ, ತನ್ನ ದಾಕ್ಷಿಣ್ಯತನದಿಂದ ನನ್ನ ದಾಂಪತ್ಯದ ಗುಟ್ಟನ್ನು

ಅರಿತುಬಿಟ್ಟಿರಬೇಕು.

ನನ್ನ ಚಿತ್ರಗಳಿದ್ದ ರೂಮಿಗೆ ಕರೆದುಕೊಂಡು ಹೋದಾಗ ಏನು ಹೇಳಿದ,

"ನೀವು ಹೀಗೆ ನಿಮ್ಮ ಕಲೆಯನ್ನು ಕೊಲೆ ಮಾಡಿಕೊಳ್ಳಬಾರದು ನಂದಿನಿ, ಕಲೆಗಾಗಿ ಬದುಕು ತೇಯ್ದುವರಿದ್ದಾರೆ. ವ್ಯಾನಗೋನ ಬದುಕು ಕೇಳಿದ್ದೀರಾ, ಉಪವಾಸ ಬಿದ್ದು ಅವನು ಬಣ್ಣಗಳನ್ನು ಕೊಳ್ಳುತ್ತಿದ್ದ. ಬಣ್ಣಗಳಲ್ಲಿ ಅಂಥ ಶಕ್ತಿ ಇದೆ ನಂದಿನಿ'' ಎನ್ನುವ ಮಾತುಗಳೊಡನೆ ನನ್ನ ಮನಸ್ಸಿನಲ್ಲಿ ಸ್ಫೂರ್ತಿಯನ್ನು ಅರಳಿಸಿದ್ದ.

ಅರ್ಧಂಬರ್ಧವಾಗಿ ಮೂಡಿದ ಚಿತ್ರಗಳ ಮೇಲೆ ಕೈಯಾಡಿಸಿ ವ್ಯಥೆಗೊಂಡಿದ್ದ.

ಗಾಡಿ ಸುರಂಗದ ನಡುವೆ ಹಾಯ್ದು ಹೋಗುತ್ತಿರಬೇಕು. ದಡ ದಡ ಎಂಬ ವಿಚಿತ್ರ ಶಬ್ದದೊಡನೆ ಭಯಾನಕವಾದ ಕತ್ತಲು. ಎದುರಿನ ಮಗು ಕುಸು ಕುಸು ಅಳುತ್ತಿದೆ. ನಿದ್ದೆಗಣ್ಣಲ್ಲೇ ತಾಯಿ ಅದರ ಬಾಯಿಗೆ ಮೊಲೆಯಿಟ್ಟಿದ್ದಾಳೆ. ಪಚ ಪಚ ಶಬ್ದ ಮಾಡುತ್ತ ಹಾಲು ಕುಡಿಯುತ್ತಿದೆ ಆ ಮಗು.



"ರಾಜು ಯಾಕೋ ಈ ರಂಗನ ಎಲ್ಲ ಹೋಂವರ್ಕ್ ನೀನು ಬರೆದಿದ್ದೀಯಲ್ಲ?''

"ನೀವೇ ಹೇಳಿದ್ರಲ್ಲ ಸಾರ್, ಗೆಳೆಯರಿಗ ಕಷ್ಟದ ಕಾಲದಲ್ಲಿ ಪರಸ್ಪರ ಸಹಾಯ ಮಾಡಬೇಕೆಂದು.''

–ಬಿ. ಜಿ. ಗಾಣಿಗೇರ

ಎಂಥ ಸುಖವಿತ್ತು ತಾಯ್ತನದಲ್ಲಿ.

ಸುರಂಗ ದಾರಿಯಿಂದ ಹೊರಬಂದ ಗಾಡಿಯ ಸುತ್ತ ಮತ್ತೆ ಬೆಳಕಿನ ಹೊದಿಕೆ.

ತನ್ನ ಜೀವನಕ್ಕೆ ಬೆಳಕಾಗಿಯೇ ಬಂದ ವಿವೇಕ, ಎಲ್ಲಿಂದ ಬಂದು ಹೇಗೆ ತನ್ನ ಬದುಕಿಗೆ ಅಂಟಿಕೊಂಡ. ನೆನಪಾದಾಗಲೆಲ್ಲ ಬರುತ್ತಿದ್ದ.

ಮಕ್ಕಳೊಡನೆ ಮಗುವಾಗಿ ಆಡುತ್ತಿದ್ದ.

ಬಣ್ಣ ಅದ್ದಿದ ಬ್ರಶ್‌ಗಳನ್ನು ನನ್ನ ಕೈಗೆ ಕೊಡುತ್ತಿದ್ದ.

"ಮಕ್ಕಳನ್ನು ನಿಂಗಿ ನೋಡಿಕೊಳ್ಳುತ್ತಾಳೆ, ನಾನಿದ್ದೇನೆ. ಚಿತ್ರ ಬರೆದರೆ ನಿಮ್ಮ ಮುಖದಲ್ಲಿ ಕಾಣುವ ಬದಲಾವಣೆಯೇ ಬೇರೆ. ನಿಮ್ಮ ರೂಮಿಗೆ ಹೋಗಿ'' ಎನ್ನುತ್ತ ನನ್ನ ನಿರ್ಜೀವ ಕೈಗಳಿಗೆ ಜೀವ ತುಂಬುತ್ತಿದ್ದ.

ಹಿಂದೆಯೇ ನನ್ನ ಚಿತ್ರಗಳ ವಿಮರ್ಶೆ ಕೂಡ ಮಾಡುತ್ತಿದ್ದ.

ಒಂದು ಸ್ಫುಟವಾದ ನಿಷ್ಕಳಂಕ ಸಂಬಂಧದ ತೆರೆ ನಮ್ಮಿಬ್ಬರನ್ನು ಸುತ್ತುವರೆಯುತ್ತಿದ್ದ ಭ್ರಮೆ. ಆ ಭ್ರಮೆಯಲ್ಲಿ ಹಂಬಲವಿತ್ತು, ಆತಂಕವಿತ್ತು, ಅಂತರಂಗದ ಗುಟ್ಟಿತ್ತು. ಆ ಗುಟ್ಟಿನಲ್ಲಿ ಹನಿದು ಬೀಳುತ್ತಿದ್ದ ಮಾತುಗಳಲ್ಲಿ ಸ್ಪಷ್ಟ ಗುರಿಯಿತ್ತು.

ಆದರೆ ಸಂದೀಪನ ವಿಚಿತ್ರ ಮೌನ ನನ್ನ ಜೀವ ಹಿಂಡುತ್ತಿತ್ತು.

ನಮ್ಮಿಬ್ಬರ ಸ್ನೇಹದ ಬಗ್ಗೆ ಏನಾದರೂ ಹೇಳುವುದು ಕೇಳುವುದು ಅಥವಾ ಮಾತನಾಡಿದರೆ ತನ್ನ ಪ್ರತಿಷ್ಠೆಯ ಮೆಟ್ಟಿಲಿಳಿದು ಬರಬೇಕಾಗುತ್ತದೆ.

ಮೌನದ ನೋಟದಲ್ಲೇ ಆ ಎಲ್ಲ ಹೀನ ಭಾವನೆಗಳನ್ನು ತುಂಬಿ ನೋಡುವ ಆ ನೋಟದಲ್ಲಿ ಏನಿರುತ್ತಿತ್ತು?

ನನ್ನ ಸತೀತ್ವದ ನೈರ್ಮಲ್ಯವನ್ನು ಹಿಂಡುವ ಆ ಕಠೋರ ನೋಟ. ಇಷ್ಟು ಕೀಳು ಮಟ್ಟದ್ದೇ ಎಂದುಕೊಂಡಿದ್ದೆ.

ಬಹಳ ಕಠೋರವಾದ ದಿನಗಳು ನನ್ನ ಪಾಲಿಗೆ ಬರುತ್ತದೆಂದು ನಾನಂದುಕೊಂಡಿರಲಿಲ್ಲ.

ನಾನು ಮೊದಲು ನಡೆದ ಹಾದಿಯಲ್ಲಿ ಎಷ್ಟು ಸುಖವಿತ್ತು, ಎಷ್ಟು ತಂಪಿತ್ತು, ಎಷ್ಟು ಸೌಜನ್ಯದ ಒಡನಾಟವಿತ್ತು.

ನಾನು ನಡೆದ ಹಾದಿಯಲ್ಲಿ ಹೂವಿದ್ದರೂ ಕೂಡ ತನ್ನ ಮಗಳ ಕಾಲಿಗೆ ನೆಡುತ್ತದೇನೋ ಎನ್ನುತ್ತಿದ್ದ ಪಪ್ಪನ ಮಾತಿನ ರೀತಿ.

ಆದರೆ ಪಪ್ಪ ಎಷ್ಟು ಬೇಗ ಗೆಳೆಯನ ಮಾತಿಗೆ ನಂಬಿಕೆಗೆ ಮೋಸಹೋಗಿ ಸಂದೀಪನಿಗೆ ನನ್ನನ್ನು ಕಟ್ಟಿಬಿಟ್ಟಿದ್ದರಲ್ಲ.

ಮುಂದೆ ತಾವು ದುಡುಕಿ ಮಾಡಿದ ಕಾರ್ಯಕ್ಕೆ ಅವರೆಂದೂ ನೋಯಬಾರದು, ಕೊರಗಬಾರದು, ಪಶ್ಚಾತ್ತಾಪ ಪಡಬಾರದೆಂದೇ ನಾನು ಆದಷ್ಟು ನನ್ನ ನೋವುಗಳ ದಗೆ ಅವರಿಗೆ ತಟ್ಟಲಾರದಂತೆ ನೋಡಿಕೊಂಡೆ.

ಆದರೆ ಇವತ್ತಿಗೆ ಅವರಿಲ್ಲ, ಇದ್ದಿದ್ದರೆ ಸಂದೀಪನ ಕೈಯಲ್ಲಿ ಹೊಸಗುತ್ತಿದ್ದ ನನ್ನ ಬಾಳಿನ ರೀತಿ ನೋಡಿದ್ದರೆ ಒಂದು ಗಳಿಗೆಯೂ ಅವರು ನನ್ನನ್ನಿಲ್ಲಿ ಬಿಡುತ್ತಿರಲಿಲ್ಲ.

ಎಂಥ ದುರ್ದಿನ ಅವತ್ತು ನನ್ನ ಪಾಲಿಗೆ.

ನನ್ನ ಕರುಳ ಕುಡಿ ಬಾಳಿನಲ್ಲಿ ವಸಂತ, ಚೈತ್ರ ಇಬ್ಬರೇ ನನ್ನ ಸರ್ವಸ್ವವೆಂದುಕೊಂಡಿದ್ದೆನಲ್ಲ. ವಸಂತನ ಸಾವಿನೊಡನೆ ಇಷ್ಟೆಲ್ಲ ಆಗುತ್ತದೆಂದು ನನಗೆ ತಿಳಿದಿರಲಿಲ್ಲ. ಸುಳುಹು ಕೊಡದೆ ಅವನ ಸಾವು ಇಷ್ಟು ಬೇಗ ಸನ್ನಿಹಿತವಾಗುತ್ತದೆಂದು ನನಗಾದರೂ ತಿಳಿದಿತ್ತೆ?

ಸಂದೀಪ ಟೂರ್ ಮೇಲಿದ್ದ. ಆ ವೇಳೆ ಕಲಾ ಪ್ರದರ್ಶನವಿತ್ತು. ಹೋಗಬೇಕೆಂಬ ಹಂಬಲವನ್ನು ನನ್ನಿಂದ ಯಾರೂ ತಡೆಯಲು ಸಾಧ್ಯವಿರಲಿಲ್ಲ.



ನೀವು ನಿಮ್ಮ ವೈರಿಯನ್ನು ಸುಡುವುದಕ್ಕಾಗಿ ಹಚ್ಚಿದ ಬೆಂಕಿಯೂ ಅವರಿಗಿಂತಲೂ ನಿಮ್ಮನ್ನೇ ಹೆಚ್ಚು ಸುಡುತ್ತಿರುತ್ತದೆ.

—ಸೂಕ್ತಿ

ಐಶ್ವರ್ಯವು ಬರುವಾಗಲೂ ದುಃಖ, ಖರ್ಚು ಮಾಡುವಾಗಲೂ ದುಃಖ.

—ಪಂಚತಂತ್ರ

ಸಂಗ್ರಹ : ಭೀಮಣ್ಣ

ವಸಂತ ಶಾಲೆಯಿಂದ ಬರುವುದು ಸಂಜೆಯೇ. ಅವನನ್ನು ನಿಂಗಿ ಶಾಲೆಯಿಂದ ಕರೆತರುತ್ತಾಳೆ. ಕರೆತರುವ ಕೆಲಸ ಅವಳದೇ ನಿಂಗಿಗೆ ಹೇಳಿ ಮೂರು ವರ್ಷದ ಚೈತ್ರಳನ್ನೆತ್ತಿಕೊಂಡು ವಿವೇಕನೊಡನೆ ಹೊರಟಿದ್ದೆ.

ಚಿತ್ರಕಲಾ ಪರಿಷತ್ತಿನಲ್ಲಿ ಕಾಲಿಟ್ಟರೆ ಎಲ್ಲವೂ ಮರೆತುಹೋಯ್ತು. ಒಂದು ಅದ್ಭುತ ಲೋಕಕ್ಕೆ ಕಾಲಿಟ್ಟ ಅನುಭವ.

ಚಿತ್ರ ಪ್ರದರ್ಶನ ನೋಡುತ್ತ, ನೋಡುತ್ತ ನನ್ನ ಸ್ಮೃತಿಗೆ ಯಾವ ಅರಿವೂ ತಟ್ಟಲಿಲ್ಲ. ವಿವೇಕ ಚೈತ್ರಳನೆತ್ತೊಂಡು ಅವಳದೇ ಭಾಷೆಯಲ್ಲಿ ಏನೇನೊ ಮಾತನಾಡುತ್ತಿದ್ದ.

ಒಂದೊಂದೂ ಅದ್ಭುತ ಚಿತ್ರಗಳು. ಅದನ್ನು ಬಿಡಿಸಿದ ರೀತಿ, ವಿನ್ಯಾಸ, ವರ್ಣವಿನ್ಯಾಸ, ನವಿರಾಗಿ ತುಂಬಿದ ಛಾಯೆ, ಆರೇಳು ವರ್ಷಗಳಿಂದ ನನ್ನಲ್ಲಿ ಹೆಪ್ಪುಗಟ್ಟಿದ್ದ ಭಾವನೆಗಳು ನೀರಾಗಿ ಕರಗಿ ಹೋದವು. ಇನ್ನು ಚಿತ್ರಗಳನ್ನು ಬಿಡಿಸದೆ ನನ್ನ ಕಲ್ಪನೆಗಳಿಗೆ ಮೆರುಗು ಕೊಡದೆ ನಾನು ಬದುಕಲಾರೆ ಎನ್ನುವಷ್ಟು ತೀವ್ರತೆ ನನ್ನವನ್ನಾವರಿಸಿತ್ತು.

ಅವರ ಭಾಷಣ ಕೇಳಿ ಹೊರಬಂದಾಗ ಆಗಸದಲ್ಲಿ ಕಟ್ಟಿದ್ದ ಮೋಡಗಳಿಂದ, ಧಾರಾಕಾರವಾದ ಮಳೆ. ಹುಚ್ಚು ಮಳೆ ಸುರಿಯುತ್ತಿತ್ತು.

ಪ್ರದರ್ಶನಕ್ಕೆ ಬಂದ ಜನ ಅಲ್ಲಲ್ಲಿ ಗುಂಪು ಗೂಡಿ ಮಾತಾಡುತ್ತಿದ್ದರು. ಕೆಲವರು ಕೊಡೆ ಹಿಡಿದುಕೊಂಡು ಹೊರಟು ಹೋದರು. ಕಾರಿನಲ್ಲೆ ಬರಬಹುದಿತ್ತು. ಆದರೆ ಸಂದೀಪ ಊರಿಗೆ ಹೋದುದರಿಂದ ಎರಡು ದಿನಗಳಿಂದ ಡ್ರೈವರ್ ಬಂದಿರಲಿಲ್ಲ. ಧಾರಾಕಾರವಾದ ಮಳೆ. ಪಕ್ಕದಲ್ಲಿ ಚೈತ್ರಳನ್ನೆತ್ತಿಕೊಂಡು ನಿಂತ ವಿವೇಕ.

ಮೋಡದಿಂದ ಆಕಾಶವಿನ್ನೂ ಶುಭ್ರವಾಗಿರಲಿಲ್ಲ. ಇನ್ನೂ ಹೊಡೆಯುತ್ತಲೇ ಇರುವ ಇರಚಲು. ಬೀಸಿ ಬರುವ ಗಾಳಿ ಮೋಡವನ್ನು ಆ ಕಡೆ ತಳ್ಳಿಕೊಂಡು ಹೋಗುತ್ತಿವೆ.

ವಸಂತನ ನೆನಪು.

ಶಾಲೆಯಿಂದ ಇನ್ನು ಬಂದಿದ್ದಾನೋ ಇಲ್ಲವೋ ಎನ್ನುವ ಚಿಂತೆ. ಮಳೆಯಲ್ಲಿ ನಿಂಗಿ ಹೋಗಿದ್ದಾಳೋ ಇಲ್ಲವೋ, ತಾನು ಊರಲ್ಲಿಲ್ಲದಾಗ ಕಾರಿನ ಅವಶ್ಯಕತೆ ಇಲ್ಲವೆಂದು ಡ್ರೈವರ್ ಬರುವ ಕಾರಣವೂ ಇಲ್ಲವೆಂದು ಸಂದೀಪ ಹೇಳಿರುತ್ತಿದ್ದ. ಡ್ರೈವರನಾದರೂ ಬಂದಿದ್ದರೆ ವಸಂತನನ್ನು ಸ್ಕೂಲಿನಿಂದ ಕರೆದುಕೊಂಡು ಬರಲು ಹೇಳಬಹುದಿತ್ತು.

ಎದೆಯಿಂದ ದೊಡ್ಡದಾದ ನಿಟ್ಟುಸಿರು ಹೊರಬಂತು.

"ಯಾಕೆ ನಂದಿನಿ" ಎಂದ ವಿವೇಕ.

"ವಿವೇಕ, ಸಂಸಾರದ ಎಳೆತ, ಬಣ್ಣಗಳ ಮೋಹ ಎರಡು ದಂಡೆಗಳ ನಡುವೆ ಹರಿದು ಹೋಗುತ್ತಿದ್ದ ನನ್ನ ಜೀವವಾಹಿನಿಯನ್ನು..." ನನ್ನ ಮಾತನ್ನು ಅರ್ಧಕ್ಕೆ ತಡೆದ ಆತ.

"ಅದಕ್ಕಷ್ಟು ಚಿಂತೆಯೆ, ಕಲಾವಿದರ್‍ಯಾರೂ ಸಂಸಾರ ಮಾಡಿಕೊಂಡಿಲ್ಲವೆ, ನಿನ್ನ ಜೀವನದಲ್ಲಿ ಎರಡೂ ಮುಖ್ಯ ನಂದಿನಿ, ಯಾವುದನ್ನೂ ನೀನು ನಿರ್ಲಕ್ಷಿಸಬಾರದು." ಬೆನ್ನ ಹಿಂದೆ ರಕ್ಷಣೆಗೆ ನಿಂತಂತೆ ನಿಂತು ಹೇಳಿದ್ದ ವಿವೇಕ.

"ವಿವೇಕ ಇಷ್ಟು ಮಳೆಯಲ್ಲಿ ನಿಂಗಿ ಶಾಲೆಗೆ ಹೋಗಿ ವಸಂತನನ್ನು ಕರೆತಂದಿರುತ್ತಾಳೋ ಇಲ್ಲವೊ?"

"ಗಾಬರಿಯಾಗಬೇಡ ನಂದಿನಿ, ಕಡೆತರದೆ ಏನು, ಅದವಳ ದಿನದ ಕೆಲಸ, ವಸಂತ ಬಂದೇ ಬಂದಿರುತ್ತಾನೆ. ಬಾ, ಈ ಮಳೆ ನಿಲ್ಲುವುದಿಲ್ಲ. ರಿಕ್ಷಾ ಮಾಡಿಕೊಂಡು ಹೋಗೋಣ" ಎಂದ. ಚೈತ್ರ ಅವನ ಹೆಗಲ ಮೇಲೆ ಯಾವ ಅರಿವಿಲ್ಲದೆ ನಿಶ್ಚಿಂತೆಯಿಂದ ಮಲಗಿತ್ತು. ರಿಕ್ಷಾ ಮಾಡಿಕೊಂಡು ಮನೆಗೆ ಬಂದಾಗ ನಿಂಗಿ ತಲೆಗೆ ಕೈ ಹೊತ್ತು ಕುಳಿತಿದ್ದಳು. ಅವಳ ಮುಖವೆಲ್ಲ ಹುಚ್ಚು ಕಳೆಯಿಂದ ಸುರಿಯುತ್ತಿತ್ತು.



ಸೂರ್ಯನ ಬಗ್ಗೆ ಪಾಠ ಮಾಡಿ ಮುಗಿಸಿದ ವಿಜ್ಞಾನದ ಮೇಡಮ್ ಕೇಳಿದರು,

"ಈಗ ನಿಮಗೆಲ್ಲ ಸೂರ್ಯನ ಪ್ರಾಮುಖ್ಯತೆ ಎಷ್ಟೆಂದು ತಿಳಿಯಿತಲ್ಲವೆ? ರಮೇಶ್ ಈಗ ನೀನು ಹೇಳು ನೋಡೋಣ. ಸೂರ್ಯನಿಲ್ಲದಿದ್ದರೆ ಏನಾಗುತ್ತಿತ್ತು?"

"ಮೇಡಂ ವಿದ್ಯುತ್ ಬಿಲ್ ಜಾಸ್ತಿ ಬರುತ್ತಿತ್ತು."

—ಬಿ. ಎಸ್. ಸಾವಿತ್ರಿ

ಮಳೆಯಲ್ಲಿ ನನೆದೊ ಏನೋ ಒದ್ದೆಯಾಗಿದ್ದ ಸೀರೆಯನ್ನು ಬಿಚ್ಚದೆ ಹಾಗೆಯೆ ತಲೆ ಕೆದರಿಕೊಂಡು ಕುಳಿತಿದ್ದಳು.

ಅವಳ ಅವಸ್ಥೆ ನೋಡಿ ನನಗೆ ಎಲ್ಲಿಲ್ಲದ ಆತಂಕ ಶುರುವಾಗಿತ್ತು. ಸುತ್ತಲೂ ಗಾಬರಿಯಿಂದ ಕಣ್ಣಾಡಿಸಿದೆ. ವಸಂತನ ಸುಳಿವೇ ಇಲ್ಲ.

"ವಸಂತ ಎಲ್ಲೇ ನಿಂಗಿ, ಬರಲಿಲ್ವೆ?"

ಯಾವುದೋ ಒಂದು ಆಘಾತ ನನ್ನನ್ನು ಇಡಿಯಾಗಿ ಕಬಳಿಸುತ್ತಿದೆ ಎನಿಸುತ್ತಿತ್ತು. ನಿಂಗಿ ಅಳುತ್ತ ಹೇಳಿದ್ದಳು.

"ಅವ್ವಾ ಅವರೇ, ನಾನು ಹೋಗ್ಬೇಕಾದ್ರೆ ಮಳೆ ಸುರಿತಾ ಇತ್ತು. ಆದರೂ ಕೊಡೆ ತಗೊಂಡು ಇಸ್ಕೂಲ ಹತ್ರ ಹೋದೆ. ಅದೇ ಇಸ್ಕೂಲು ಗಂಟೆ ಬಾರಿಸಿತ್ತು. ಹುಡುಗರೆಲ್ಲ ಹೊಂಟೋಗಿದ್ರು. ವಸಂತಪ್ಪನವರು ಇರಲಿಲ್ಲ ಅವ್ವಾರೆ. ನನ್ನದಿ ದಸಕ್ಕಂತು ಅವ್ವರೆ, ಎಲ್ಲ ಕಡಿ ನೋಡ್ದೆ, ಅವ್ರು ಕಾಣಸ್ಲಿಲ್ಲ."


ನಿಂಗಿಯ ಮಾತುಗಳನ್ನು ಕೇಳುತ್ತ



ಕುರ್ಚಿಯಲ್ಲಿ ಕುಸಿದು ಕುಳಿತೆ. ಇಂಥ ಧಾರಾಕಾರ ಮಳೆಯಲ್ಲಿ ಎಲ್ಲಿ ಹೋಯ್ತೋ ಮಗು, ದೇವರೇ ಏನು ಮಾಡಲಿ?

"ನನ್ನ ಕಂದ, ನನ್ನ ವಸಂತ." ಬೊಗಸೆಯಲ್ಲಿ ಮುಖವಿಟ್ಟು ಸರ್ವಚೈತನ್ಯವೂ ಉಡುಗಿ ಹೋದಂತೆ ಕುಳಿತ್ತಿದ್ದೆ.

ವಿವೇಕ ನಿದ್ದೆ ಮಾಡುತ್ತಿದ್ದ ಚೈತ್ರಳನ್ನು ಒಳಗೆ ಮಂಚದ ಮೇಲೆ ಮಲಗಿಸಿ ನನ್ನ ಹತ್ತಿರ ಬಂದ "ಡೋಂಟ್ ವರಿ ನಂದಿನಿ, ಗಾಬರಿಯಾಗ್ಬೇಡ. ವಸಂತ ಎಲ್ಲಿದ್ದರೂ ನಾನು ಹುಡುಕಿ ತರುತ್ತೇನೆ" ಎನ್ನುತ್ತ ಮೂಲೆಯಲ್ಲಿದ್ದ ಕೊಡೆಯನ್ನು ಬಿಡಿಸಿಕೊಂಡು ಗೇಟು ತೆಗೆದು ಹೊರಹೋದ.



ನೆರಳು ಕೈಗೆ ಸಿಗದ, ಶಕ್ತಿಯಿಲ್ಲದ ವಸ್ತು. ಆದರೂ ಎಂಥ ಸೂರ್ಯನೂ ಅದನ್ನು ಓಡಿಸಲಾರ.

—ಸ್ವೀಡನ್ ಗಾದೆ

ಕಾಲ ನಿನಗೆ ಅನುಕೂಲ ಆಗದಿದ್ದಲ್ಲಿ ನೀನೇ ಕಾಲಕ್ಕೆ ಹೊಂದಿಕೋ.

—ಟರ್ಕೀ ಗಾದೆ

ದೂರದ ನೆಂಟರಿಗಿಂತ ಹತ್ತಿರದ ನೆರೆ ಲೇಸು.

—ರಷ್ಯನ್ ಗಾದೆ

ನೋವೆಲ್ಲಿ ಎಂದು ತಿಳಿಯಬೇಕಾದರೆ ರೋಗಿಯನ್ನು ಕೇಳು, ಡಾಕ್ಟರನ್ನಲ್ಲ.

—ಪೋಲೆಂಡ್ ಗಾದೆ

ಸಂಗ್ರಹ: ಯು. ಕೆ. ಆರ್. ಮಂಜುನಾಥ್

ಆತಂಕದಿಂದ ಬಾಗಿಲಿಗೆ ಬಂದು ನಿಂತೆ. ದೇವರೇ ನನ್ನ ಕಂದನಿಗೆ ಏನೂ ಆಗದಿರಲಿ ನನ್ನೆದೆ ಹೊಡೆದುಕೊಳ್ಳುತ್ತಿತ್ತು.

ನಸುಗತ್ತಲು ಹರಡುತ್ತಿತ್ತು. ಕವಿದುಕೊಂಡು ಬರುತ್ತಿದ್ದ ಮೋಡ ಅದರ ಹಿಂದೆಯೇ ಅಸಾಧ್ಯವಾಗಿ ಹೊಡೆಯುವ ಮಳೆ. ಗುಡುಗು ಸಿಡಿಲಿನ ಆರ್ಭಟ, ಸಂದೀಪನೇ ಎದುರು ನಿಂತು ಆರ್ಭಟಿಸುತ್ತಿದ್ದಾನೋ ಎನ್ನುವ ಭ್ರಮೆ.

"ಎಲ್ಲಿ ಮಗು, ಎಲ್ಲಿ?" ಅವನು ಕೆಂಗಣ್ಣಿನಿಂದ ಕೈಯಲ್ಲಿ ಚಾಟಿ ಹಿಡಿದು ಕೇಳುವಂತಿತ್ತು. ನಡುಗುತ್ತಿದ್ದ ದೇಹ, ಎದೆಯ ಮೇಲೆ ಕೈಯಿಟ್ಟುಕೊಂಡೆ.

"ಮಮ್ಮಾ, ಮಮ್ಮಾ" ಎನ್ನುತ್ತ ಓಡಿ ಬರುವ ನನ್ನ ಕಂದನೆಲ್ಲಿ? ಈ ಕತ್ತಲೆಯಲ್ಲಿ ಈ ಹುಚ್ಚು ಮಳೆಯಲ್ಲಿ ಎಲ್ಲಿ ದಾರಿ ತಪ್ಪಿಸಿಕೊಂಡು ಅಲೆಯುತ್ತಿದೆಯೋ, ಸಂದೀಪ ಬೇರೆ ಊರಲ್ಲಿಲ್ಲ. ನಾಳೆ ಮಗು ಸಿಗದೆ ತಪ್ಪಿಸಿಕೊಂಡರೆ, ಇವನು ಜೀವಂತ ಸುಡುತ್ತಾನೆ ನನ್ನನ್ನು.

ಮನಸ್ಸಿನ ತುಮುಲ ಹೆಚ್ಚಾದಂತೆ ಒಳಹೊರಗೆ ಕಾಲು ಸುಟ್ಟ ಬೆಕ್ಕಿನಂತೆ ಓಡಾಡಿದೆ. ಮುಂದೆ ಅರ್ಧ ಗಂಟೆಯಲ್ಲೇ ವಿವೇಕ ವಸಂತನ ಕೈ ಹಿಡಿದುಕೊಂಡು ಅವನ ತಲೆಗೆ ಛತ್ರಿ ಮರೆ ಮಾಡಿ ಕರೆತರುತ್ತಿರುತ್ತಿದ್ದುದು ಕಾಣಿಸಿಕೊಂಡಾಗ

ನನ್ನೆದೆಯ ಮೇಲಿದ್ದ ಹೆಬ್ಬಂಡೆ ಕರಗಿತು.

"ಎಲ್ಲಿಗೆ ಹೋಗಿದ್ದೆ ಕಂದ?'' ಎನ್ನುತ್ತ ಅವನನ್ನು ತಬ್ಬಿದೆ.

"ಡೋಂಟ್ ಬಿ ಎಗ್ಜೈಟ್ ನಂದು, ಕೂತ್ಕೊ ಹೇಳ್ತಿನಿ'' ಎನ್ನುತ್ತ ವಿವೇಕ ಮಗುವಿನ ಒದ್ದೆಯಾದ ಬಟ್ಟೆ ಬಿಚ್ಚಿದ. "ನಿಂಗಮ್ಮ ಇವನ ಬಟ್ಟೆ ಕೊಡು. ಹಾಗೇ ಹಾಲು ಕಾಯಿಸಿಕೊಂಡು ಬಾ. ಒಂದು ಟವೆಲ್ಲು ಕೊಡು'' ಎನ್ನುತ್ತ ತಾನೇ ಮಗುವಿನ ಬಟ್ಟೆ ಬಿಚ್ಚಿ ಟವೆಲ್ಲಿನಿಂದ ತಲೆ ಮೈಯನ್ನೆಲ್ಲ ಚೆನ್ನಾಗಿ ಒರೆಸಿ, ನಿಂಗಿ ತಂದ ಹಾಲನ್ನು ಕುಡಿಸಿದ.

"'ಶಾಲೆ ಬಿಟ್ಟ ತಕ್ಷಣ ನಿಂಗಿಗೂ ಕಾಯದೆ ಅವನ ಗೆಳೆಯರೊಡನೆ ಹೊರಟನಂತೆ. ತಾನೊಬ್ಬನೆ ಮನೆಗೆ ಬರಬೇಕು ಎನ್ನುವ ಆತುರ. 'ಈ ಮಳೆಯಲ್ಲಿ ನಿಂಗಿ ಬರುವುದಿಲ್ಲವೋ. ನೀನೆ ಹೋಗು' ಎಂದು ಗೆಳೆಯರೆಲ್ಲ ಅವರವರ ಪಾಡಿಗೆ ಅವರ ತಂದೆ, ಮನೆಯಾಳುಗಳೊಡನೆ ಕೊಡೆ ಬಿಡಿಸಿಕೊಂಡು ಹೊರಟುಹೋದರಂತೆ. ಹುಚ್ಚು ಮಳೆಯಲ್ಲಿ ಎಲ್ಲಿಯೂ ದಾರಿ ತಿಳಿಯದೆ ಬೀದಿ ದೀಪಗಳಿಲ್ಲದ ಕತ್ತಲೆಯಲ್ಲಿ ಹೆದರಿಕೊಂಡು ನಡುದಾರಿಯಲ್ಲಿ ನಿಂತಿದ್ದ. ಅದು ಶಾಲೆಯ ಹಿಂಭಾಗದ ಸರ್ಕಲಿನ ಹತ್ತಿರ. ದಿನವೂ ಬರುವ ದಾರಿಯಾಗಿದ್ದರೆ ನಿಂಗಿಗೂ ಗೊತ್ತಾಗುತ್ತಿತ್ತು. ಏನಿವೇ ಅವನನ್ನು ಏನೂ ಅನ್ನಬೇಡ ನಂದು. ಹುಡುಗ ಹೆದರಿದೆ, ಬೆಚ್ಚಗೆ ಮಲಗಿಸು ನಾನಿನ್ನು ಬರುತ್ತೇನೆ'' ಎನ್ನುತ್ತ ಅದೇ ಮಳೆಯಲ್ಲಿ ಕೊಡೆ ಬಿಡಿಸಿಕೊಂಡು ಮರೆಯಾದ.



ಆಯ್ಕೆ

ಯಾವನಾದರೂ ರಾಮನನ್ನು
ವರಿಸಬೇಕೆಂದು
ಕಾದಿದ್ದ ಹುಡುಗಿ
ಮೊನ್ನೆ ಮೊನ್ನೆ ಸಿಕ್ಕಿದ್ದಳು
ಸಿನಿಮಾದಲ್ಲಿ
ನಮ್ಮ ಕ್ಲಾಸಿನ ರಾವಣನೊಂದಿಗೆ.

—ಪ್ರೊ. ಪ್ರಭು ಅ. ಗಂಜೀಹಾಳ್

ನಡುಗುತ್ತಿದ್ದ ವಸಂತನನ್ನು ಹತ್ತಿರ ಎಳೆದುಕೊಂಡು ರಾತ್ರಿ ಇನ್ನೊಮ್ಮೆ ಬಿಸಿ ಹಾಲು ಕುಡಿಸಿ ರಗ್ಗು ಹೊದ್ದಿಸಿ ಮಲಗಿಸಿದ್ದೆ. ಆದರೆ ರಾತ್ರಿ ಏರಿದಂತೆ ನಡುರಾತ್ರಿಯಲ್ಲಿ ವಸಂತನಿಗೆ ಚಳಿ ಏರಿ, ಮೈ ಬಿಸಿ ಏರಿದ್ದು ಇಳಿಯಲೇ ಇಲ್ಲ. ರಾತ್ರಿಯೆಲ್ಲ ಅವನನ್ನು ಹಿಡಿದುಕೊಂಡು ಜಾಗರಣೆ ಮಾಡಿದ್ದೆ.

ಬೆಳಿಗ್ಗೆ ವಿವೇಕ ಬಂದಾಗ ವಸಂತ್ ಇನ್ನೂ ನಡುಗುತ್ತಲೇ ಇದ್ದ. ತಾನೇ ಟೆಂಪರೇಚರ್ ನೋಡಿ ಡಾಕ್ಟರನ್ನು ಕರೆತಂದ. ಡಾಕ್ಟರು ಪರೀಕ್ಷಿಸಿ ಇಂಜೆಕ್ಷನ್ ಔಷಧಿ ಕೊಟ್ಟು ಎರಡು ದಿನ ಕಾಯೋಣ ಎಂದು ಮಾತ್ರೆ, ಔಷದಿ ಬರೆದು ಕೊಟ್ಟು ಹೋದರು.

ಜ್ವರದಲ್ಲಿ ಮಗು ನರಳುತ್ತಲೇ ಇತ್ತು. ನನ್ನ ಸರ್ವಸ್ವ ಉಡುಗಿ ಹೋಗಿತ್ತು. ಮನೆ

ತುಂಬೆಲ್ಲ ಕಳೆ ಕಳೆಯಾಗಿ ಆಡಿಕೊಂಡಿದ್ದ ಕಂದ ಜ್ವರದ ರಾವಿನಲ್ಲಿ ಸೊರಗಿ ಸಪ್ಪೆಯಾಗಿ ಬಿಳುಚಿಕೊಂಡಿತ್ತು.

"ವಸಂತ್‌ಗೆ ಏನೂ ಆಗೋಲ್ಲ ತಾನೆ ವಿವೇಕ್?'' ನನ್ನ ಧ್ವನಿ ನಡುಗುತ್ತಿತ್ತು.

"ಏನೂ ಆಗೋಲ್ಲ ನಂದೂ, ಧೈರ್ಯವಾಗಿರು. ಮಗು ಮಳೆಯಲ್ಲಿ ನೆಂದು ಶೀತ ಭಾಧಿಸಿದೆ. ಕಡಿಮೆಯಾಗುತ್ತದೆ'' ಎಂದಿದ್ದ.

ಆದರೆ ಏರಿದ ಜ್ವರ ಇಳಿಯಲೇ ಇಲ್ಲ. ಹಗಲು, ರಾತ್ರಿ ನರಳಿ ನರಳಿ ಆದರ ಧ್ವನಿ ನಿಶ್ಶಕ್ತವಾಯ್ತು.

"ಮಮ್ಮಾ ಪಪ್ಪ ಎಲ್ಲಿ?'' ಎಂದಿತು ನೋವಿನ ಧ್ವನಿಯಲ್ಲಿ.

"ಬರುತ್ತಾರೆ ಕಂದ.'' ನನ್ನ ಸಂತೈಕೆ.

ಆದರ ಮರುದಿನ ಸಂದೀಪ ಬಂದಿದ್ದ, ಮನೆಯಲ್ಲಿ ಮೌನ ಹೆಪ್ಪುಗಟ್ಟಿತ್ತು. ಪಪ್ಪ ಎನ್ನುತ್ತ ಚೈತ್ರ ಅವನ ಕೊರಳಿಗೆ ಬಿದ್ದಿತು. ಮಗುವಿನ ಹಾಸಿಗೆಯ ಬದಿ ಕುಳಿತ ನಾನು ಆದರ ಆ ಕಡೆ ಪಕ್ಕದಲ್ಲಿ ಕುಳಿತ ವಿವೇಕ ಮಗುವಿಗೆ ಗಂಜಿ ಕುಡಿಸುತ್ತಿದ್ದ.

ಆ ಗಳಿಗೆಯಲ್ಲಿ ಸಂದೀಪನ ಕಣ್ಣುಗಳು ಕೆಂಡವಾಗಿ ಅರಳಿದ್ದವು.

"ಏನಾಯ್ತು?'' ಅಂದಿದ್ದ ಸಿಡಿಲಿನಂತಾ ಧ್ವನಿಯಿಂದ.

ಮಾತನಾಡಲು ನನ್ನಲ್ಲಿ ಶಕ್ತಿ ಇರಲಿಲ್ಲ, ಧ್ವನಿಯೂ ಇರಲಿಲ್ಲ. ವಿವೇಕನೇ ಧೈರ್ಯ ಮಾಡಿ ಸಂದರ್ಭದ ಚಿತ್ರಣ ಹೇಳಿದ.

ಸಂದೀಪ ಬಂದುದನ್ನು ನೋಡಿ ಮಗು ಒಂದು ಬಾರಿ ಕಣ್ತೆರೆದು "ಪಪ್ಪಾ'' ಎಂದಿತು ಪಾತಾಳದಲ್ಲಿದ್ದಂತೆ. ಸಂದೀಪ ಹತ್ತಿರ ಬಂದ. ಮಗುವಿನ ಹತ್ತಿರ ಕುಳಿತು "ಏನಾಯ್ತಮ್ಮ, ಏನಾಯ್ತು ಚಿನ್ನ. ನೋಡು ನಿಂಗೆ ಕ್ರಿಕೆಟ್ ಸೆಟ್ ತಂದಿದ್ದೇನೆ, ಬೇಗ ಹುಶಾರಾಗು ನಿನ್ನ ಫ್ರೆಂಡ್ಸ್ ಜೊತೆ ಆಡಬೇಡವೆ?'' ಎಂದು ಸಂತೈಸಿದ.

ಆದರೆ ಮಗು ಎರಡು ದಿನ ನರಳಿ ಕಣ್ಮುಚ್ಚಿತ್ತು. ಯಾವ ಡಾಕ್ಟರರ ಔಷಧಿ, ಮಾತ್ರೆ, ಭರವಸೆ ಅವನನ್ನು ಉಳಿಸಿಕೊಳ್ಳಲಿಲ್ಲ.

ಅವನ ಪುಟ್ಟ ದೇಹವನ್ನು ತಬ್ಬಿ ಹಿಡಿದ ನನ್ನ ಕೈಗಳಲ್ಲಿ ಬಲವಿರಲಿಲ್ಲ. ಬದುಕಿಸಿಕೊಳ್ಳುತ್ತೇನೆಂಬ ದೃಢತೆಯಿರಲಿಲ್ಲ. ಅಳಬೇಕೆಂದರೆ



ರಾಜಕೀಯ

ಒಣ ಬೇರೂ
ಚಿಗುರೊಡೆವುದು
ಒಂದು ದಿನ
ಹಸಿ ಚಿಗುರ
ಆಯುಷ್ಯ
ಎಷ್ಟು ದಿನ?
ಜೀವರಾಶಿಗಳೆಲ್ಲದರಲ್ಲೂ
ರಾಜಕೀಯ.

—ಗಾಯತ್ರಿ ಎಮ್. ಭಟ್

ಎದೆಯ ಮೇಲೆ ಬಂಡೆಗಲ್ಲನ್ನು ಹೇರಿದಂತಾಗಿತ್ತು. ಹುಚ್ಚಿಯಂತೆ ಎಲ್ಲವನ್ನು ಕಳೆದುಕೊಂಡ ಭಿಕಾರಿಯಾಗಿ ಗೋಡೆಗೊರಗಿ ಕುಳಿತುಕೊಂಡಿದ್ದೆ.

ಎಲ್ಲಿ ಹೋಯ್ತು ನನ್ನ ಚಿನ್ನ? ಸಂದೀಪ ತುದ ಕ್ರಿಕೆಟ್ ಸೆಟ್ಟು ಅನಾಥವಾಗಿ ಮೂಲೆಯಲ್ಲಿ ಬಿದ್ದಿತ್ತು.

ಮಮ್ಮ ನಾನು ಗವಾಸ್ಕರ್ ಆಗುತ್ತೇನೆ ಅನ್ನುತ್ತಿತ್ತು. ಈ ಸಲ ರ್‍ಯಾಂಕ್ ಬಂದರೆ ನನಗೇನು ಕೊಡುತ್ತೀ ಮಮ್ಮ ಎನ್ನುತ್ತಿತ್ತು. ನಾನು ದೊಡ್ಡವನಾದ ಮೇಲೆ ನಿನ್ನಂತೆ ಚಿತ್ರ ಬರೆಯುತ್ತೇನೆ ಮಮ್ಮ ಎನ್ನುತ್ತಿತ್ತು.

ನನ್ನ ಭವಿಷ್ಯದ ಭಂಡಾರದಲ್ಲಿ ಆಶೆಗಳನ್ನು ತುಂಬಿ ಎಲ್ಲಿ ಹೋಯಿತು ನನ್ನ ವಸಂತ್? ಮಗೂ ನೀನಿಲ್ಲದೆ ಹೇಗೆ ಬದುಕಲಿ ಕಂದ? ಸತ್ತುಹೋದ ನನ್ನ ಕನಸುಗಳಿಗೆ ಜೀವ ತುಂಬಲು ನೀನಿರಬೇಕಿತ್ತು. ರಾಡಿಯಾಗಿ ಹೋದ ನನ್ನ ಬಣ್ಣಗಳಲ್ಲಿ ಕಾಮನ ಬಿಲ್ಲು ಮೂಡಿಸಲಾದರೂ ನೀನಿರಬೇಕಿತ್ತು. ಅನಾಥವಾಗಿ ಬಿದ್ದ ನನ್ನ ಚಿತ್ರಗಳಿಗೆ ಚೈತನ್ಯ ತುಂಬಲು ನೀನಿರಬೇಕಿತ್ತು ಕಂದ.

ಆ ಭಂಡಾರದಲ್ಲಿ ನೀನು ತುಂಬಿದ ಕನಸು ಭರವಸೆ, ಆಶೆಗಳೆಲ್ಲ ಯಾರು ಲೂಟಿ ಮಾಡಿದರು. ನನ್ನೆದೆಗೆ, ನನ್ನ ಕೊರಳಿಗೆ ಯಾರೋ ಹೆಬ್ಬಂಡೆ ಕಟ್ಟಿದಂತಿತ್ತು ಯಾರಾದರೂ ಹತ್ತಿರ ಬರಬಾರದೆ? ನನ್ನ ನೋವನ್ನು, ನನ್ನ ಎದೆಭಾರವನ್ನು ಹಗುರ ಮಾಡಬಾರದೆ?

ಆದರೆ ನನ್ನವರೆನ್ನುವವರು 'ಯಾರಿದ್ದರು ಇಲ್ಲಿ, ಇರುವವ ವಿವೇಕ ಒಬ್ಬನೇ. ತನ್ನ ಪಾಲಿಗೆ ತಂದೆ, ಅಣ್ಣ, ಸ್ನೇಹಿತ, ಬಂಧು, ಬಳಗ ಎಲ್ಲ ಅವನೇ ಆಗಿದ್ದ. ಆದರೆ ಹತ್ತಿರ ಬಂದು ಸಂತೈಸುವ ಅವನ ಕೈಗಳಿಗೆ ಸಮಾಜ ಒಂದು ಬೇಡಿಯನ್ನು ಹಾಕಿತ್ತು. ಅದು ಸಮಾಜದ ರೀತಿ, ನೀತಿ, ಸಂಪ್ರದಾಯಗಳ ಬೇಡಿ.

ಸಂದೀಪನ ಕಲ್ಮಶ ನೋಟದ ಬೇಡಿ.

ಸಂದೀಪನಾದರೂ ಮಾತನಾಡಬಾರದಿತ್ತೆ? ಆದರೆ ಬಂದ ಮೇಲೆ ಒಂದು ದಿನವೂ ಸಂದೀಪ ನನ್ನೊಡನೆ ಮಾತನಾಡಿರಲಿಲ್ಲ. ಬಂದ ದಿನ ಮನೆಯಲ್ಲಿ ವಿವೇಕನನ್ನು ವಸಂತನ ಹಾಸಿಗೆ ಹತ್ತಿರ ನೋಡಿದ ಮೇಲೆ ಅವನೆದೆಯಲ್ಲಿ ಮಾತ್ಸರ್ಯದ ಬೆಂಕಿ ಹತ್ತಿಕೊಳ್ಳುತ್ತಿತ್ತು.



ಜನ ಸಾಮಾನ್ಯವಾಗಿ ಒಪ್ಪುವುದು ತಮಗೆ ಹೊಳೆದ ಕಾರಣಗಳನ್ನೇ ಹೊರತು ಇತರರಿಗೆ ಹೊಳೆದ ಸಕಾರಣಗಳನ್ನಲ್ಲ.

—ಪಾಸ್ಕಲ್

ನಿನ್ನ ಇಷ್ಟದಂತೆ ಎಲ್ಲ ನಡೆಯಬೇಕೆಂದು ಕೇಳಿಕೊಳ್ಳಬೇಡ. ಅವು ಹೇಗೆ ಸಂಭವಿಸುತ್ತವೆಯೋ ಹಾಗೆಯೇ ಸಂಭವಿಸಲಿ ಎಂದು ಕೋರು. ಆಗ ನಿನ್ನ ಕೆಲಸ ಸುಗಮವಾಗುತ್ತದೆ.

—ಎಪಿಕ್ಟೆಟಸ್

ಸಂಗ್ರಹ : ಯು. ಕೆ. ಆರ್. ಮಂಜುನಾಥ್

ಅದು ಯಾವಾಗ ಬೆಂಕಿಯುಗುಳಿ ನಮ್ಮ ಮೇಲೆ ಬೀಳುವುದೋ ಅರಿವಿರಲಿಲ್ಲ.


ವಸಂತ, ಚೈತ್ರ ನನ್ನ ಸರ್ವಸ್ವವಾಗಿದ್ದರು. ಅಂತಹ ವಸಂತನನ್ನು ಕಳೆದುಕೊಂಡು ಚೈತನ್ ಉಡುಗಿದವಳಂತೆ ಕುಳಿತ ನನ್ನ ಹತ್ತಿರ ಒಂದು ದಿನವೂ ಬರಲಿಲ್ಲ ನನ್ನ ಗಂಡನಾದವ.

"ಧೈರ್ಯ ತೆಗೆದುಕೋ ನಂದಿನಿ, ಹುಟ್ಟು ಸಾವು ನಮ್ಮ ಕೈನ ಮಾತೇ. ನಮ್ಮ ಬಾಳಲ್ಲಿ ಅದೇ ವಸಂತ ಹುಟ್ಟಿ ಬರಲಿ ಎಂದು ಕೇಳಿಕೊಳ್ಳೋಣ'' ಎಂದು ಸಂತೈಸಲಿಲ್ಲ.

ಆದರೆ ಎಲ್ಲ ತಪ್ಪನ್ನು ನನ್ನ ಮೇಲೆ ಹಾಕಿ ವಟಗುಟ್ಟಿದ್ದ. ಕಾಲಿಯಾಗಿ ಹೋದ ನನ್ ಹೃದಯದಲ್ಲಿ ಮತ್ತೇನನ್ನು ಪ್ರಜ್ವಲಿಸಿ ಉರಿಸಬೇಕೆಂದು ಅವನಷ್ಟು ಮಾತನಾಡಿದ್ದ.

ಅಂದಿನ ದಿನದ ನೆನಪಾದರೆ ನನ್ನೆದೆ ಹೇಗೆ ಉರಿಯುತ್ತದೆಲ್ಲ ಎನಿಸಿತು. ಗಾಡಿ ಎಷ್ ನಿಧಾನವಾಗಿ ಸಾಗುತ್ತಿದೆ, ಯಾವೂರು ಬಂದೀತೋ, ಗಾಡಿ ನಿಲ್ಲುವ ಸೂಚನೆ ಅಥವಾ ಯಾವುದಾದರೂ ಕ್ರಾಸಿಂಗ್ ಇರಬೇಕುದೆ? ಎದುರು ಸೀಟಿನಲ್ಲಿದ್ದ ತಾಯಿ, ಮಗು ಈಗ ಆರಾಮವಾಗಿ ಮಲಗಿದ್ದಾರೆ. ಅವರ ಪಕ್ಕದಲ್ಲೇ ಎಳೆಯ ದಂಪತಿಗಳು. ಒಬ್ಬರನ್ನೊಬ್ಬರು ಒರಗಿ ಹೆಗಲ ಮೇಲೆ ತಲೆಯಿಟ್ಟು ಸವಿಗನಸು ಕಾಣುತ್ತಿದ್ದಾರೆ. ಅವರ ಪಕ್ಕ ವೃದ್ಧರೊಬ್ಬರು ಗೂನು ಬೆನ್ನು ಮಾಡಿಕೊಂಡು ಕುಳಿತು ತೂಕಡಿಸುತ್ತಿದ್ದಾರೆ. ಕಾರಾ ಶೇಂಗಾ ಮಾರುವವನು ಗಾಡಿ ನಿಲ್ಲುವ ಸೂಚನೆಯೊಡನೆ ಬೇರೆ ಡಬ್ಬಿಗೆ ನಡೆದು ಹೋದ.

ಗಾಡಿ ಎಲ್ಲಿ ನಿಲ್ಲುತ್ತದೋ ಎಲ್ಲಿ ಓಡುತ್ತದೊ? ನಿಂತ ನಿಲ್ದಾಣಗಳಿಗೆ ಲೆಕ್ಕವಿರಲಿಲ್ಲ ಓಡುವುದೊಂದೇ ಅದರ ಗತಿ.



ವಿಚಿತ್ರ

ಬದುಕಿನ ಪುಸ್ತಕದಲ್ಲಿ
ಘಟನೆಗಳ ನೆಸಪಿನ ಚಿತ್ರ
ಅದು ತುಂಬದಂತ
ಮರೆವಿನ ಪಾತ್ರ ಬಲು ವಿಚಿತ್ರ.

—ವಿ. ಸು. ಭಟ್

ಮುಂದೆ ಬರುವುದು ಯಾವ ನಿಲ್ದಾಣವೋ? ಇಂಥ ಮನಸ್ಥಿತಿಯಲ್ಲಿ ನಿದ್ದೆಯಂತೂ ಬರುವುದೇ ಇಲ್ಲ. ಬೆಂಗಳೂರು ಬಿಟ್ಟು ಎಷ್ಟು ದಿನಗಳಾದವು ತಿಂಗಳಾದವೋ, ವರ್ಷಗಳಾದವೊ ಲೆಖ್ಖವಿಡ ಲಿಲ್ಲ. ನನಗೆ ಆಸರೆ ಕೊಟ್ಟ ಸಂದೀಪನೆನ್ನುವನವನ ಮನೆ ನನ್ನದೆಂದುಕೊಂಡಿದೆ. ಗಂಡ ಹೆಂಡತಿ ಎಂದರೆ ಮನೆಗೆ ಸಮಾನ ಅಧಿಕಾರಿಗಳು ಎಂದುಕೊಂಡಿದ್ದೆ. ಆದರೆ ನನಗೆ ಅರಿವಿರಬಾರದಿತ್ತೆ ಹೆಣ್ಣಿಗೆ ತನ್ನದೆನ್ನುವ ಮನೆ ಯಾವತ್ತೂ ಇರುವುದಿಲ್ಲ, ಇರಲಾರದು ಕೂಡ ಎಂದು. ಗಂಡಸಿನ ಸರ್ವಾಧಿಕಾರಕ್ಕೆ ಒಳಪಟ್ಟ ಒಂದು ಗೂಡಿಗೆ, ಹೆಣ್ಣು ಅವನ ಬಯಕೆಯ ಹಕ್ಕಿಯಾಗಿ ಬರುತ್ತಾಳೆ. ಯಾವಾಗ ಹೆಣ್ಣಿನ ರೆಕ್ಕೆಗಳನ್ನು ಕತ್ತರಿಸಿ ಹೊರಗೆ ಹಾಕುತ್ತಾನೋ ಯಾರಿಗೆ ಗೊತ್ತು. ಅದು ಆ ಗಂಡಸಿನ ತಿಳಿವಿಗೆ ಸೇರಿದ್ದು.

ಸಂದೀಪ ಮಾಡಿದ್ದು ಅದನ್ನೇ ಅಲ್ಲವೇ? ಹೇಗೆ ನನ್ನನ್ನು ಹೊರ ಹಾಕಿ

ತೊಳೆದುಕೊಂಡಿದ್ದ.

ವಸಂತ್ ಹೋಗಿ ನಾಲ್ಕು ದಿನಗಳಾಗಿರಬೇಕು ಒಡಲ ಕುಡಿಯನ್ನು ಕಳೆದುಕೊಂಡ ದುಃಖ, ಸಂಕಟ ನನಗಿರಲಿಲ್ಲವೆ? ಇತ್ತು, ಎದೆ ತುಂಬಿ ಭಾರವಾಗಿ ಹೊರ ಚೆಲ್ಲಿ ಹೋಗುವಷ್ಟು.

ಮನೆತುಂಬ ಓಡಾಡುವ ಅವನ ನೆನಪು.

"ಮಮ್ಮ ಯೂನಿಫಾರಂ ನೀನೇ ಹಾಕು. ನನ್ನ ಸಾಕ್ಸ್ ಒಗೆದೇ ಇಲ್ಲ, ಹೆಡ್ ಮೇಡಂ ಚೆಕ್ ಮಾಡುತ್ತಾರೆ. ಬೇರೆ ಹೊಸ ಜೊತೆ ಕೊಡು."

"ಮಮ್ ನಿನ್ನೆ ಎಲ್ಲ ಹೋಂವರ್ಕ್ ಮುಗಿಸಿಬಿಟ್ಟೆ ಇವತ್ತು ಟೀಚರ್ ನನಗೆ ವೆರಿಗುಡ್ ಕೊಡುತ್ತಾರೆ. ಡಬ್ಬಲ್ ಸ್ಟ್ಯಾರ್ ಹಾಕುತ್ತಾರೆ. ನೀನೇನು ಕೊಡುತ್ತಿ ಮಮ್ಮ."

ಅವನ ಮಾತು, ನಗು ಎಲ್ಲ ಇನ್ನೂ ನನ್ನೆದೆಯಲ್ಲಿ ಗೂಡು ಕಟ್ಟಿದಂತಿದೆ.

"ಮಮ್ಮ ನೀನು ಎಷ್ಟು ಚೆನ್ನಾಗಿ ಚಿತ್ರ ಬರೆಯುತ್ತಿ, ನನಗೂ ಕಲಿಸಿಕೊಡು. ಈ ಸಲ ಡ್ರಾಯಿಂಗ್ ಕಾಂಪಿಟೇಶನ್‌ನಲ್ಲಿ ನಾನೆ ಫಸ್ಟ್ ಪ್ರೈಜ್ ತೆಗೆಯಬೇಕು."



"ನಿದ್ರೆ ಮಾಡುವುದಾದರೆ ಒಳಗಡೆ ಕೋಣೆಯಲ್ಲಿ ಮಂಚ ರೆಡಿಯಾಗಿದೆ ಅಲ್ಲಿ ಮಲಗಲು ಹೋಗುವಿರಾ ಸಾರ್?"

"ಮಂಚದ ಮೇಲೆ ಮಲಗಿ ನಿದ್ರೆ ಮಾಡುವುದಕ್ಕಿಂತಲೂ ಹೀಗೆ ಕುಳಿತೇ ನಿದ್ರೆ ಮಾಡುವುದರಲ್ಲಿ ಎಂತಹ ಹಿತವಿದೆ ಅಂತ ನಿನಗಿನ್ನೂ ಗೊತ್ತಿಲ್ಲ."

–ವೈ. ಎಚ್. ಸಂಗಪ್ಪ

"ಆಗಲಿ ಚಿನ್ನ, ನೀನೆ ಫಸ್ಟ್ ಬರುತ್ತಿ" ಎಂದು ಬರಸೆಳೆದು ಅಪ್ಪುತ್ತಿದ್ದೆ.

ಮನೆತುಂಬ ತನ್ನ ನಗು ತುಂಬಿ, ನನ್ನೆದೆಯನ್ನು ಹಗುರ ಮಾಡುತ್ತಿದ್ದ ನನ್ನ ಕಂದ ಎಲ್ಲಿ? ಮನಸ್ಸಿನ ಬೇಗುದಿ ತಾಳದೆ ಅವನ ರೂಮಿಗೆ ಹೋಗುತ್ತಿದ್ದೆ. ಅವನ ಬಟ್ಟೆ ಅವನ ಪುಸ್ತಕ, ಆಟಿಗೆ ಸಾಮಾನು ಒಂದೇ ಎರಡೇ, ಎಲ್ಲವೂ ಅನಾಥರಂತೆ ಬಿದ್ದು ನನ್ನ ಕಂದ ಇನ್ನಿಲ್ಲ ಎಂದು ಸಾರುತ್ತಿದ್ದವು. ಸಂದೀಪನೊಡನೆ ನನಗೆ ಬದುಕು ಸಾಕಾದಾಗ ತನ್ನ ಬರುವಿನಿಂದ ನನ್ನದೆಯ ಬರಡು ಭೂಮಿಗೆ ಹಸಿರು ತಂದಿದ್ದ. ವಸಂತದಂತೆಯೇ ಬಂದಿದ್ದ ನನ್ನ ಸಂಸಾರದಲ್ಲಿ.

ಎಷ್ಟು ಬಣ್ಣಗಳನ್ನು ತುಂಬಿಕೊಂಡು ಬಂದಿದ್ದ ನನ್ನ ಬದುಕಿನ ಆಗಸದಲ್ಲಿ.

ಎಲ್ಲಿ ಹೋದ ನನ್ನ ಚಿನ್ನ, ನನ್ನನ್ನು ಬಿಟ್ಟು ಎಲ್ಲಿ ಹೋದೆಯೋ ಕಂದ.

ಆ ನಾಲ್ಕು ದಿನಗಳು ನಾನು ನಾನಾಗಿರಲಿಲ್ಲ. ಒಂದು ನಿರ್ಜೀವ ಯಂತ್ರವಾಗಿದ್ದೆ. ನನ್ನ ಉಸಿರಾಟ ಮಾತ್ರ ನನಗೆ ಕೇಳುವಷ್ಟು ನಿಗೂಢ. ಮೌನದ ಮೂಟೆಯಾಗಿದ್ದೆ, ಒಂದು ಸಂಜೆ ಆದೇ ಹಾಲಿನಲ್ಲಿ ಕುಳಿತಿದ್ದೆ.

ಚೈತ್ರ ಮುಂದಿನ ಕಾರ್ಪೆಟ್ ಮೇಲೆ ಆಟಿಗೆ ಸಾಮಾನು ಹರವಿಕೊಂಡು ಆಟವಾಡುತ್ತಿತ್ತು.

ಸಂದೀಪ ಪೇಪರ್ ಹಿಡಿದು ಸೋಫಾದ ಮೇಲೆ ಕುಳಿತಿದ್ದ, ಎಂದಿನಂತೆ ವಿವೇಕ ಬಂದ.

"ಹೇಗಿದ್ದೀರಾ ನಂದಿನಿ?" ಎಂದ.

ಅವನೊಡನೆ ಮಾತನಾಡುವಷ್ಟು ವ್ಯವಹಾರಿಕತೆ ಸಂದೀಪ ತೋರಲಿಲ್ಲ.

ವಿವೇಕನ ಆಪ್ಯಾಯಮಾನವಾದ ಮಾತಿನಿಂದ ನನ್ನ ಕಂಗಳು ಮತ್ತೆ ತುಂಬಿಬಂದವು ಒಂದು ಅನುನಯದ ಮಾತು ಸಾಕಾಗಿತ್ತು. ನನ್ನೆದೆಯಲ್ಲಿ ತುಂಬಿದ ಅಳಲು ಜರಿಯಂತೆ ಹರಿದು ಹೋಗಲು.

"ಇಲ್ಲ ವಿವೇಕ್, ನನ್ನ ವಸಂತನನ್ನು ನಾನು ನಾನು ಮರೆಯಲು ಸಾಧ್ಯವಿಲ್ಲ. ಹೇಗ ಮರೆಯಲಿ?ನನ್ನ ಬದುಕನ್ನು ಸಹ್ಯವಾಗಿಸಿದವನೇ ಅವನು. ಇದು ಅವನು ಸ್ಕೂಲಿಂದ ಬರುವ ಹೊತ್ತು. ಮಮ್ಮೀ ಎನ್ನುತ್ತ ಓಡಿ ಬರುತ್ತಿತ್ತು. ಯು. ಟಿ. ಯಲ್ಲಿ ನಾನೇ ಹೈಯೆಸ್ಟ್ ಮಾರ್ಕ್ಸ್ ತೆಗೆದದ್ದು ಎನ್ನುತ್ತಿತ್ತು ವಿವೇಕ್ ನನ್ನ ಕಂದ, ನನ್ನ..."

"ಅಂಥ ಮಗುವನ್ನು ಮರೆಯಲು ಯಾರಿಗೂ ಸಾಧ್ಯವಿಲ್ಲ ನಂದಿನಿ. ಆದರೆ ನೀವು ಅಳುತ್ತ ಕೂಡುವುದರಿಂದ ವಸಂತ ತಿರುಗಿ ಬರುತ್ತಾನೆಯೇ, ನಿಮ್ಮ ಹೃದಯದ ಅಳಲು ಅರ್ಥವಾಗುತ್ತದೆ. ನೀವು ಚೈತ್ರಳಿಗಾಗಿ..." ವಿವೇಕ ಮಾತನಾಡುತ್ತಿದ್ದಂತೆ ಸಂದೀಪ ಒಳಹೋದ. ವಿವೇಕನನ್ನು ನೋಡುತ್ತ ಚೈತ್ರ ಅಂಕಲ್ ಎನ್ನುತ್ತ ಹತ್ತಿರ ಹೋಯ್ತು ಅವಳನ್ನೆತ್ತಿಕೊಂಡು ಮುತ್ತಿಟ್ಟ ವಿವೇಕ.

"ನೀವು ದುಃಖವನ್ನು ಮರೆಯುವುದರಲ್ಲೇ ನಿಮ್ಮೆಲ್ಲರ ಹಿತವಿದೆ ನಂದಿನಿ" ಎಂದ. ಮಾತನಾಡಲು ನನಗೆ ಆಗದಷ್ಟು ದುಃಖ ಗಂಟಲು ಒತ್ತಿಕೊಂಡು ಬರುತ್ತಿತ್ತು.

ಮುಂದೆ ಅರ್ಧ ಗಂಟೆಯಾಗಿರಬಹುದು. ಸಂದೀಪ ನನ್ನ ಬಟ್ಟೆ ತುಂಬಿದ ಸೂಟ್‌ಕೇಸು, ಕಾಗದ, ಬಣ್ಣದ ಪೆಟ್ಟಿಗೆ ಎಲ್ಲವನ್ನೂ ನನ್ನ ಮುಂದೆ ತಂದಿಟ್ಟ

ಪ್ರಶ್ನಾರ್ಥಕವಾಗಿ ನಾನು ಅವನೆಡೆ ನೋಡಿದೆ. ಆತ ವಿವೇಕನ ಕೈಯಲ್ಲಿದ್ದ ಚೈತ್ರಳನ್ನು ಎಳೆದು ಎತ್ತಿಕೊಂಡು ಎಂತಾ ಹೃದಯ ಒಡೆಯುವ ಮಾತನಾಡಿದ್ದ.

"ಏನು ನಡೆಯಿತು ಎಂದು ನನಗೆ ಗೊತ್ತಿದೆ ನಂದಿನಿ. ನಿನ್ನ ಮದುವೆಯಾದಾಗಲೇ ನಾನು ಹೇಳಿದ್ದೆ ಈ ಬಣ್ಣದ ಹುಚ್ಚು ಬಿಟ್ಟು ಬಿಡು ಎಂದು. ಆದರೆ ನೀನು?"

"ನಾನು ಏನು ಮಾಡಿದೆ, ಏನು ಮಾಡಿದೆ ಹೇಳಿ? ನಿಮಗಾಗಿ ಎಲ್ಲ ಆಶೆಗಳನ್ನು ಒತ್ತಿಟ್ಟು



'ತೃಪ್ತಿ, ನೀನು ಮಾತುಮಾತಿಗೂ ಸುಳ್ಳು ಹೇಳಬೇಡ. ಹೀಗೆ ಸುಳ್ಳು ಹೇಳುತ್ತ ಹೋದರ ನಿನ್ನ ತಲೆಯಲ್ಲಿ ಕೋಡು ಮೂಡುತ್ತದೆ."

"ಅಮ್ಮ ನೀನೀಗ ಎಂತಹ ಸುಳ್ಳನ್ನು ಹೇಳುತ್ತಿದ್ದೆಯಲ್ಲ!"

—ಬಿ. ವಾಸುದೇವ ವರ್ಣೀ

ಕೊಂಡೆ. ಇಲ್ಲಿ ಬರುವಾಗಲೇ ನನ್ನ ಬೆರಳಿಗೆ ಅಂಟಿದ್ದ ಬಣ್ಣವನ್ನು ತೊಳೆದುಕೊಂಡು ಬಂದೆ. ವಿಶಿಷ್ಟ ಚಿತ್ರಗಳಾಗಬೇಕಾಗಿದ್ದ ನನ್ನ ಚಿತ್ರಗಳನ್ನು ಅರೆ ಜೀವವಾಗಿ ಮಾಡಿ ರೂಮಿನಲ್ಲಿ ಕೂಡಿ ಹಾಕಿದೆ. ನನ್ನ ಗಂಡ, ನನ್ನ ಮಕ್ಕಳು ಎಂದು ಎಲ್ಲವನ್ನೂ ಒತ್ತಿಟ್ಟೆ. ಸಂದೀಪ, ಪ್ರಪಂಚದಲ್ಲಿ ಬೇಕಾದಷ್ಟು ಕಲೆಗಾರರು ಇದ್ದಾರೆ. ಆದರೆ ಅವರಿಗೆಂದೂ ಸಂಸಾರದಿಂದ ಇಂಥ ನಿರಾಶೆ ಸಿಕ್ಕಿರಲಿಕ್ಕಿಲ್ಲ. ಸಂಸಾರ ನನ್ನ ಕಲೆ ಎರಡನ್ನೂ ಸರಿದೂಗಿಸಿಕೊಳ್ಳುವ ಶಕ್ತಿ ನನಗಿತ್ತು ಸಂದೀಪ, ಆದರೆ ನನ್ನಿಂದ ಏನು ತಪ್ಪಾಗಿದೆ. ನಾನು ಏನು ಮಾಡಿದೆ?'' ಹೇಳುತ್ತ ಹೇಳುತ್ತ ನನ್ನೆದೆ ಉದ್ವೇಗದಿಂದ ಏರಿಳಿಯುತ್ತಿತ್ತು.

ಎಷ್ಟು ನಿಷ್ಠುರವಾಗಿ ಹೇಳಿದ್ದ.

"ನಂದಿನಿ ಆ ಯಾವ ಮಾತೂ ನನಗೆ ಬೇಡ. ನೀನು ಚಿತ್ರ ಪ್ರದರ್ಶನ ಅದು ಇದು ಎಂದು ಹೋಗದಿದ್ದರೆ ವಸಂತನನ್ನು ಕಳೆದು ಕೊಳ್ಳಲು ಸಾಧ್ಯವಿತ್ತೇನು?''



ರೂಪಾಂತರ

ಭ್ರಷ್ಟರ ನಡುವೆ
ಚಾರಿತ್ರ್ಯ ಅರಸ ಹೋದ
ಕನ್ನಡಿ ಎದುರು ನಿಂತಾಗ
ಪತಿತವಾಗಿದ್ದೆ!

—ದೊಡ್ಡರಂಗೇಗೌಡ

ಬರಸಿಡಿಲು ಬಡಿದಿತ್ತು ನನಗೆ. ಯಾರೋ ಬಲವಾಗಿ ನನ್ನೆದೆಗೆ ಗುದ್ದಿದಂತಾಯ್ತು.

"ಅಂದರೆ ಅಂದರೆ ನನ್ನ ಕಂದನ ಸಾವಿಗೆ, ಇಲ್ಲ ಸಂದೀಪ ತಪ್ಪು ನನ್ನದೊಂದೇ ಅಲ್ಲ. ಈ ಅಪವಾದ ನನ್ನ ಮೇಲೆ ಹೊರಿಸಬೇಡ.''

ನನ್ನ ಅಳಲನ್ನು ಆತ ಕೇಳುತ್ತಿಲ್ಲ, ನನ್ನ ದುಃಖ ಅವನೆದೆ ಹಿಂಡುತ್ತಿಲ್ಲ, ಎಂತಾ ಗಂಡಸು. ಸ್ವಲ್ಪವಾದರೂ ಕರುಣೆ ಇರಲಿಲ್ಲವೆ ಅವನ ಹೃದಯದಲ್ಲಿ. ಮಗುವನ್ನು ಕಳೆದುಕೊಂಡ ತಾಯಿಯ ಎದೆ ಹೇಗೆ ಬೇಯುತ್ತದೆ ಎನ್ನುವ ಅರಿವಾದರೂ ಇಲ್ಲವೆ?

"ವಸಂತನನ್ನು ಕಳೆದುಕೊಂಡಿದ್ದೇನೆ. ಇನ್ನು ಮುಂದೆ ಚೈತ್ರಳನ್ನು, ನನ್ನನ್ನು ಕೂಡ ಕಳೆದುಕೊಳ್ಳಲು ನನಗಿಷ್ಟವಿಲ್ಲ. ನಿನ್ನ ಬದುಕು, ನಿನ್ನ ಚಿತ್ರಕಲೆ, ನಿನ್ನ ಬಣ್ಣಗಳು ನಿನ್ನದು. ಇವತ್ತಿಗೆ ಈ ಮನೆಯ ಹೊಸ್ತಿಲನ್ನು ತುಳಿದು ನನ್ನಿಂದ ತಾಳಿ ಕಟ್ಟಿಸಿಕೊಂಡಿದ್ದೆ ಎನ್ನುವುದನ್ನು ಮರೆತುಬಿಡು!' ಎಂದಿದ್ದ.

ನಾನು ನಿಷ್ಕ್ರಿಯಳಾಗಿದ್ದೆ.

ವಿವೇಕನೇ ಮುಂದೆ ಬಂದ. "ಸರ್, ನೀವು ದುಃಖದಲ್ಲಿದ್ದೀರಿ, ಆವೇಗದಲ್ಲಿದ್ದೀರಿ, ನೀವು ಏನು ಮಾತಾಡುತ್ತಿದ್ದೀರಿ ನಿಮಗೆ ಅರಿವಿದೆಯೆ? ನಂದಿನಿ ನಿಮ್ಮ ಕೈ ಹಿಡಿದ ಹೆಂಡತಿ. ಅವರಿಗೂ ದುಃಖವಿದೆ. ದಯವಿಟ್ಟು ಮನಸ್ಸನ್ನು ಶಾಂತವಾಗಿಟ್ಟುಕೊಂಡು...''

"ಇದು ನಮ್ಮ ಗಂಡ ಹೆಂಡತಿಯ ಸಂಬಂಧದ ಮಾತು, ನೀವು ಮಧ್ಯೆ ಮಾತನಾಡಬೇಡಿ''

ಎಂದ ಸಂದೀಪ.

"ಅದೇ ಸರ್, ಆ ಸಂಬಂಧ ನಿಂತ ಕಾಲ ಮೇಲೆ ಹೆಂಡತಿಯನ್ನು ಹೊರ ಹಾಕುವಷ ಪೊಳ್ಳಾಗಿಲ್ಲ ಸರ್."

"ಈ ನೀತಿ ತತ್ವ ನನಗೆ ಬೇಕಾಗಿಲ್ಲಯ್ಯ. ಇಲ್ಲಿಂದ ಇಬ್ಬರೂ ಹೊರಟು ಹೋಗಿ ದಯವಿಟ್ಟು ಕತ್ತು ಹಿಡಿದು ದಬ್ಬುವ ಅವಕಾಶವನ್ನು ಇಬ್ಬರೂ ಮಾಡಿಕೊಡಬೇಡಿ" ಎಂದ ಚೈತ್ರಳನ್ನು ಒಳಗೆ ಕರೆದುಕೊಂಡು ಹೊರಟು ಹೋಗಿದ್ದ.

ಬಿಕ್ಕಿ ಬಿಕ್ಕಿ ಅಳಬೇಕೆಂಬ ಪ್ರಜ್ಞೆಯೂ ನನ್ನಿಂದ ಹೊರಟು ಹೋಗಿತ್ತು. ಬಣ್ಣ ಹಿಡಿದ ಬದುಕುವವರ್‍ಯಾರೂ ಸಂಸಾರ ಮಾಡುವುದೇ ಇಲ್ಲವೆ?

ನಾನು ತಪ್ಪಿದ್ದಾದರೂ ಎಲ್ಲಿ?

ಇವನು ನನ್ನ ಕಲೆ, ಬಣ್ಣಗಳನ್ನು ದ್ವೇಷಿಸುತ್ತಾನೆಂದ ದಿನವೇ ಅಲ್ಲವೆ ನಾನು ರೂಮಿನಲ್ಲಿ ಎಲ್ಲ ಕೂಡಿಹಾಕಿ ನನ್ನ ಮನಸ್ಸು ಎಳೆಯುತ್ತಿದ್ದರೂ ನಾನು ಆ ಕರೆಗೆ ಮೂಕಳಾಗಿದ್ದು.

ಯಾವಾಗಲಾದರೂ ಕಲ್ಪನೆಗಳು ಗರಿಗೆದರಿ ಅದನ್ನು ಕಾಗದದ ಮೇಲೆ ತರುವ ಒತ್ತಾ ಅತಿಯಾಗಿ ರೂಮಿನ ಬಾಗಿಲು ತೆಗೆದು ಅದೂ ಸಂದೀಪನಿಲ್ಲದಾಗ ಕೈಯಲ್ಲಿ ಬ್ರಶ್ ಹಿಡಿಯುತ್ತ ಲಿದ್ದೆ. ಆ ಗಳಿಗೆ ಸಂಸಾರಕ್ಕೆ ಅಡ್ಡಿಯಾಗುತ್ತದೆಂದ ನಾನು ತಿಳಿದಿರಲಿಲ್ಲ.

ಎಷ್ಟೋ ಪರಿಚಯದವರು ಭೇಟಿ ಯಾದಾಗಾಲೆಲ್ಲ ಕೇಳುತ್ತಿದ್ದರು "ಏನು ಮಿಸೆಸ್ ಸಂದೀಪ ಹೊಸ ಚಿತ್ರ ಯಾವುದು ಬರೆದಿರಿ ನಿಮ್ಮ ಚಿತ್ರಗಳಲ್ಲಿ ವರ್ಣಗಳ ವಿನ್ಯಾಸ ಬಹಳ ಚೆನ್ನಾಗಿರುತ್ತೆ. ಮದುವೆಗೆ ಮೊದಲು ಯಾವ ಪ್ರದರ್ಶನವಾದರೂ ನಿಮ್ಮ ಚಿತ್ರಗಳು ಇದ್ದೇ ಇರುತ್ತಿದ್ದವು."

ನಾನು ಬರಿ ನಕ್ಕು ಪಕ್ಕದಲ್ಲಿದ್ದ ಸಂದೀಪನ ಮುಖ ನೋಡುತ್ತಿದ್ದೆ ಮಾತ್ರ. ಆತ ಗುಳ್ಳೆ ನರಿ ನಗು ನಕ್ಕು ಪಕ್ಕದಲ್ಲಿದ್ದ ಚೈತ್ರ, ವಸಂತನನ್ನು ತೋರಿ,

"ಇವೆರಡಕ್ಕಿಂತ ಅಮೂಲ್ಯವಾದ ಚಿತ್ರ ಗಳನ್ನು ಅವಳು ಬಿಡಿಸಲು ಸಾಧ್ಯವೆ?" ಎನ್ನುತ್ತಿದ್ದ.

ನನ್ನ ಪಾಲಿಗೆ ಚೈತ್ರ, ವಸಂತ ಅಮೂಲ್ಯ ಚಿತ್ರಗಳೇ ನಿಜ. ಆದರೂ ನನ್ನೆದೆಯಲ್ಲಿ ಹುಟ್ಟುವ ಭಾವನೆಗಳಿಗೆ ಕಲ್ಪನೆಗಳಿಗೆ ಮರಗು ಕೊಟ್ಟು



ತನ್ನ ನೆರೆಮನೆಯವನು ಉಪವಾಸ ಬಿದ್ದಾಗ, ಹೊಟ್ಟೆ ತುಂಬ ಉಂಡು ಸುಖವಾಗಿ ನಿದ್ರೆ ಮಾಡುವವನು ಎಂದೂ ನಮ್ಮವನಾಗಿರಲಾರ.

—ಮಹಮ್ಮದ್ ಪೈಗಂಬರ್

ಸತ್ಯವನ್ನು ನೇರವಾಗಿ ಅರಿತು, ಆತ್ಮ ಸಾಕ್ಷಾತ್ಕಾರವಾಗುವ ಮುನ್ನ ಯಾವ ವ್ಯಕ್ತಿಯೂ ಮೋಕ್ಷಕ್ಕೆ ಅರ್ಹನಾಗಲಾರ.

—ರಮಣ ಮಹರ್ಷಿ

ಸಂಗ್ರಹ : ನಿರ್ಮಾಲ ಬಿ. ಬಂಗೀ



ಪ್ರಕೃತಿಯ ಪ್ರತಿರೂಪವನ್ನು ಅದರ ಮಡಿಲಲ್ಲಿ ಉಸಿರಾಡುವ ಮಾನವ ಜೀವಿಗಳ ವಿಭಿನ್ನ ರೀತಿಯನ್ನು ನನ್ನದೆ ಕುಂಚದಲ್ಲಿ ಬಿಡಿಸಿಡುವ ಈ ಮನಸ್ಸಿನ ಒತ್ತಡವನ್ನು ನಾನು ತಡೆಯಲು ಸಾಧ್ಯವಿತ್ತೆ? ಅದರೂ ತಡೆದಿದ್ದೆನಲ್ಲ ಇವನಿಗಾಗಿ.

ಮದುವೆಯಾದ ಇಷ್ಟು ವರ್ಷಗಳಲ್ಲಿ ನಾಲ್ಕೋ ಎಂಟೋ ಚಿತ್ರ ಬರೆದಿರಬಹುದು. ಅಷ್ಟೇ ಪ್ರದರ್ಶನ ನೋಡಲು ಹೋಗಿರಬಹುದು.

ಅಂದಾಕ್ಷಣ ನಾನು ಸಂಸಾರದ ಚೌಕಟ್ಟನ್ನು ಮೀರಿ ನಡೆದುಬಿಟ್ಟೇನೇ?

ಬಣ್ಣ ಹಿಡಿದು ಬದುಕುವವರು ಯಾರೂ ಸಂಸಾರ ಮಾಡುವುದೇ ಇಲ್ಲವೆ?

ಎಷ್ಟು ರೀತಿಯಿಂದ ಅವರಿಗೆ ಗಂಡ, ಮಕ್ಕಳು, ಬಳಗ ಪ್ರೋತ್ಸಾಹ ಕೊಟ್ಟಿಲ್ಲ?

ನನ್ನೊಡನೆ ಕಲಾ ಶಾಲೆಗೆ ಚಿತ್ರ ಕಲೆಯಲು ಬರುತ್ತಿದ್ದ ಕುಮದಿನಿಗೆ ಮದುವೆಯಾಗಿದೆ. ಗಂಡ ಹೆಂಡಿರು ನಗುನಗುತ್ತ ಪ್ರದರ್ಶನದ ತುಂಬೆಲ್ಲ ಓಡಾಡಿದ್ದರು. ಅವಳೇ ಹೇಳಿದ್ದಳಲ್ಲ.

"ನಂದೂ ನಾನು ತುಂಬ ಲಕ್ಕಿ ಕಣೆ, ನನ್ನ ಗಂಡ ನನ್ನ ಕಲೆಗೆ ಪ್ರೋತ್ಸಾಹ ಕೊಡುತ್ತಾರೆ. ನೀನೇನೂ ಸಂಸಾರದ ಜವಾಬ್ದಾರಿ ತಲೆಗೆ ಹಚ್ಚಿಕೊಳ್ಳಬೇಡ ಮಹಾರಾಯ್ತಿ, ಒಳ್ಳೊಳ್ಳೆ ಚಿತ್ರ ಬಿಡಿಸು ಸಾಕು ಎನ್ನುತ್ತಾರೆ'' ಎಂದು ಎಷ್ಟು ಹೆಮ್ಮೆಯಿಂದ ಹೇಳಿದ್ದಳು. ನನ್ನ ಬಗಲಲ್ಲಿದ್ದ ಚಿತ್ರಗಳನ್ನು ಮುದ್ದಿಟ್ಟು "ತುಂಬ ಸ್ವೀಟ್ ಬೇಬಿ, ಎಷ್ಟು ಮಕ್ಕಳು?''

"ಇಬ್ಬರು.''

"ನನಗೂ ಬೇಕೆಂಬ ಆಶೆ ಕಣೆ. ಆದರೆ ಇನ್ನೂ ಎರಡು ವರ್ಷ ಬೇಡ, ನೋಡು ಶಾಂತಿ ನಿಕೇತನಕ್ಕೆ ಹೋಗಿ ಎರಡು ವರ್ಷ ನಿನ್ನ ಕಲೆಯ ಅಭ್ಯಾಸ ಮುಗಿಸಿಕೊಂಡು ಬಾ. ಆಮೇಲೆ ಮಕ್ಕಳು ಮರಿ ಎನ್ನುತ್ತಾರೆ. ಬರ್ತೀನಿ ನಮ್ಮವರು ಕಾಯ್ತಿದ್ದಾರೆ.'' ಎನ್ನುತ್ತ ದೂರದಲ್ಲಿ ಯಾರೊಡನೆಯೂ ಮಾತನಾಡುತ್ತಿದ್ದ ಗಂಡನ ತೋಳು ಹಿಡಿದುಕೊಂಡು ನಗುತ್ತ ಹೊರಟು ಹೋಗಿದ್ದಳು.

ಕಂಡಿತವಾಗಿಯೂ ನನಗೆ ಅಸೂಯೆ ಯಾಗಿರಲಿಲ್ಲ. ಅವಳ ಗಂಡನ ಬಗ್ಗೆ ಅಭಿಮಾನ, ಗೌರವ ಮೂಡಿತ್ತು. ಇದೇ ಅಲ್ಲವೆ ಗಂಡ ಹೆಂಡತಿ ಸಂಬಂಧ ಅಂದರೆ ಮದುವೆಗೆ ಮೊದಲು ನಾನು ಕಂಡ ಕನಸು. ಶಾಂತಿನಿಕೇತನಕ್ಕೆ ಹೋಗುವ ಹಂಬಲ, ಬರೋಡಾದ ಕಲಾ ಶಾಲೆಯಿಂದ ಕಲಿತು ಬಂದವರ ಸಖ್ಯ ಬೆಳೆಸಿ ಆ ಕಲೆಯನ್ನೆಲ್ಲ ನನ್ನದು ಮಾಡಿಕೊಂಡಿದ್ದೆ.



"ಮಗ್ಗಿ ಕಲ್ತುಕೊಂಡು ಬರ್ದಿದ್ರೆ ನಾಳೆಯಿಂದ ಶಾಲೆಗೆ ಸೇರ್ಸೋದಿಲ್ಲ ಅಂತ ಹೆಡ್‌ಮೇಸ್ಟ್ರು ಬೈದ್ರು ಮಮ್ಮಿ.''

"ಅಯ್ಯೋ ಕತ್ತೆ ಹೆಡ್‌ಮೇಸ್ಟ್ರು ಬೈದ್ರು ಅಂತ ಹೇಳೋಕೆ ಸ್ವಲ್ಪಾನೂ ನಾಚಿಕೆ ಆಗಲ್ವ?''

"ಬೈದದ್ದು ನನಗಲ್ಲ ಮಮ್ಮಿ ಗಣಿತದ ಮೇಷ್ಟ್ರಿಗೆ.''

—ಎಂ. ಮುಡಬೂದಿ

"ನನ್ನಂಥ ಬಡವನ ಹೊಟ್ಟೆಯಲ್ಲಿ ಹುಟ್ಟಬಾರದಿತ್ತು ನಂದೂ'' ಎಂದಿದ್ದರು ಪಪ್ಪ. ತನ್ನ ಕಲಿಯಬೇಕೆಂಬ ಹಂಬಲ, ಉತ್ಸಾಹ ಕಂಡು ನನ್ನ ಕಲೆ ಅರಳಿಸಲೆಂದೆ ಬಯಸಿದ್ದರು.

ಆದರೆ ಆದದ್ದೇನು?

ನೆಂಟರೊಬ್ಬರ ಮದುವೆಯಲ್ಲಿ ನನ್ನನ್ನು ನೋಡಿದ್ದ ಈತ. ಶ್ರೀಪತಿ ಅಂಕಲ್ ಹತ್ತಿರ ಹೇಳಿದ್ದನಂತೆ. ಅವರು ಇವನ ತಂದೆಯೂ ಮೊದಲು ಬಾಲ್ಯ ಸ್ನೇಹಿತರಾಗಿದ್ದರು. ಆದರೆ ಎರಡು ವರ್ಷಗಳ ಹಿಂದೆಯೇ ತನ್ನ ತಂದೆಯನ್ನು ಕಳೆದುಕೊಂಡ ಈತನಿಗೆ ಆಗ ಯಾರಿರಲಿಲ್ಲ.

ಶ್ರೀಪತಿ ಅಂಕಲ್ ಅಪ್ಪನನ್ನು ಕೇಳಿದ್ದರು. ಅಂದು ಅಂಗಳದಲ್ಲಿ ಕ್ಯಾನವಾಸ್ ಹರಡಿಕೊಂಡು ಬಣ್ಣಗಳಲ್ಲಿ ಕುಂಚ ಅದ್ದುತ್ತ ಕುಳಿತ ನನಗೆ ಏನು ಹೇಳಿದ್ದರು ಪಪ್ಪ.

ಸಂದೀಪ ಶ್ರೀಮಂತ. ನಿನ್ನ ಕಲೆಯನ್ನು ಪೋಷಿಸುತ್ತಾನೆ. ದುಡ್ಡಿದ್ದವರೇ ಕಲೆಯನ್ನು ಪೋಷಿಸುವವರು ಕಂದ. ಸಂದೀಪ ನಿನ್ನನ್ನು ಬಣ್ಣಗಳಿಂದ ಅಭೀಷೇಕ ಮಾಡಿ ಬಿಡುತ್ತಾನೆ.

ಪಪ್ಪನ ಮಾತನ್ನು ನಾನು ನಂಬಿದ್ದೆ. ಇವನ ಕೊರಳಿಗೆ ಮಾಲೆ ಹಾಕಿದೆ, ಆದರೆ ಅದುದೇನು? ಮೊದಲ ರಾತ್ರಿಯೇ ಗೊತ್ತಾಯ್ತಲ್ಲ ಈತ ಬಣ್ಣಗಳ ದ್ವೇಷಿಯೆಂದು.

ಆದರೆ ಏನಾಗಿದ್ದ ಈತ ನನ್ನ ಪಾಲಿಗೆ, ಗಂಡನಾದನೆ, ಸ್ನೇಹಿತನಾದನೆ, ಪ್ರೀತಿಸಿದವನಾದನೆ, ಏನಾದ? ಬರಿ ನನ್ನ ದೇಹದ ಹಕ್ಕು ಮಾತ್ರ ಹಮ್ಮಿನಿಂದ ಪಡೆದಿದ್ದ.

ನಾಲ್ಕು ದಿನ ಉಪವಾಸ ಕೆಡವಿದ್ದರೂ ನಾನು ಬದುಕುತ್ತಿದ್ದೆ. ಆದರೆ ಈ ಬಣ್ಣಗಳ ಕಲೆಯನ್ನು ಅದರ ಸೆಳೆತವನ್ನು ಅಲಕ್ಷಿಸಿ ನಾನು ಹೇಗಿದ್ದೆ? ನಾನು ಚಿತ್ರಗಳನ್ನು ಬರೆಯಲೇಬೇಕು. ನನ್ನ ಕಲ್ಪನೆಗೆ ಮೆರುಗು ಕೊಡಬೇಕು. ಅದಕ್ಕೆ ಜೀವ ತುಂಬದೆ ಇರುವುದು ನನ್ನಿಂದ ಸಾಧ್ಯವಿಲ್ಲ ಸಂದೀಪ. ನನಗೆ ಉಸಿರಾಡಲು ಶಕ್ತಿ ಕೊಡು ಎಂದಿದ್ದೆ.

ಆದರೆ ಯಾವದೋ ಪ್ರತಿಜ್ಞೆ ಮಾಡಿದವನಂತೆ ತನ್ನ ಛಲ ಸಾಧಿಸುತ್ತಲೇ ಹೋದ.

ಈಗ, ಈಗ ಕೈ ಹಿಡಿದ ಹೆಂಡತಿಯನ್ನು ತನಗೆ ಏನೂ ಸಂಬಂಧವೇ ಇಲ್ಲದಂತೆ ಕಸ ಹಾಕಿದಂತೆ ಹೊರಗೆ ಹಾಕುವುದೆ?

"ನನ್ನ ಮಾತು ಕೇಳಿಸಿತೋ ಇಲ್ವೋ, ಹೇಳಿದೆನಲ್ಲ ನಾನು ಕತ್ತು ಹಿಡಿದು ದಬ್ಬುವ



ಬಾಳು

ಬಾಳಿನಲ್ಲಿ
ಹೂ ಹಣ್ಣು
ಎರಡೂ
ಉಂಟು,
ಹೌದು
ಬಾಳಿನುದ್ದಕ್ಕೂ
ಇವುಗಳದ್ದೇ
ಬಿಡಿಸಲಾಗದ
ನಂಟು.

—ನಾರಾಯಣ ರೈ ಕುಕ್ಕುವಳ್ಳಿ

ಮೊದಲೇ ಹೊರಟು ಹೋಗಿ.''

"ನಾನು ನಿನ್ನ ಕೈ ಹಿಡಿದ ಹೆಂಡತಿ ಸಂದೀಪ.''

"ಆ ಒಂದು ಸಂಬಂಧದಿಂದಲೆ ಇಷ್ಟು ದಿನ ನಿನಗೆ ಅನ್ನ ಹಾಕಿದ್ದೇನೆ.''

"ಇಷ್ಟು ಕಠೋರನಾಗಬೇಡ.''

"ಜಾಸ್ತಿ ಮಾತನಾಡುವುದು ನನಗೂ ಇಷ್ಟವಿಲ್ಲ. ನಾನೊಂದು ಪಾರ್ಟಿಗೆ ಹೋಗಬೇಕಾಗಿದೆ. ಕಾಯಲು ನನಗೆ ಸಮಯವಿಲ್ಲ.''

ಮಗ ಸತ್ತು ನಾಲ್ಕು ದಿನಗಳು ಕಳೆದಿಲ್ಲ. ಆಗಲೇ ಇವನಿಗೆ ಪಾರ್ಟಿಯ ಹುಚ್ಚು. ವಿಷಾದದಿಂದ ನಗು ಬಂತು. ಮುಂದೊಂದು ಗಳಿಗೆಯಲ್ಲಿ ವಿವೇಕ ಎದ್ದು ಮುಂದೆ ಬಂದ, ನನ್ನ ಬ್ಯಾಗು, ಚಿತ್ರಗಳು, ಬಣ್ಣಗಳ ಪ್ಯಾಕೆಟ್‌ಗಳನ್ನು ಎತ್ತಿಕೊಂಡು ನನ್ನ ಕೈ ಹಿಡಿದು ಎಬ್ಬಿಸಿದ.

"ನಡೆಯಿರಿ ನಂದಿನಿ, ನೀವಿರಲು ಇದು ಯೋಗ್ಯವಾದ ಸ್ಥಳವಲ್ಲ.''



ಏರುಪೇರು

ಮೂರು ಮುಖದ
ಬಹ್ಮದೇವ
ಸೃಷ್ಟಿಸಿದ ಮಾನವ
ನೂರಾರು ಮುಖ
ವಾದ
ಹಾಕುತ್ತಾನೆಂಬ ಅರಿವಿದ್ದರೆ?
ಹೆದರಿಕೊಳ್ಳುತ್ತಿದ್ದನೇನೋ
ಬ್ರಹ್ಮ ಈ
ಸೃಷ್ಟಿಗೆ.

—ಗಾಯತ್ರಿ ಎಮ್. ಭಟ್

ಕೈ ಕಾಲುಗಳು ನಿಸತ್ವವಾಗಿ ನಿಶ್ಯಕ್ತತೆ ಆವರಿಸಿತ್ತು. ಎದ್ದು ಒಂದು ಗಳಿಗೆ ಚೇತರಿಸಿಕೊಂಡೆ.

"ವಿವೇಕ್, ಚೈತ್ರ...'' ನಾನು ನಿರ್ಜೀವ ಧ್ವನಿಯಲ್ಲಿ ಕೇಳಿದೆ.

"ಈಗ ಯಾವ ಮಾತೂ ಆಡಬೇಡ. ನೀನು ಚೈತ್ರಳನ್ನು ಕೇಳಿದರೆ ಇನ್ನೂ ಆಕ್ರೋಶಗೊಳ್ಳುತ್ತಾರೆ. ಕೊನೆಯವರೆಗೂ ನಿನಗೆ ಚೈತ್ರ ಸಿಗದಂತೆ ಮಾಡುತ್ತಾರೆ, ಈಗ ನಡೆ'' ಎಂದು ಮೃದುವಾಗಿ ಹೇಳುತ್ತ ಹೊರಗೆ ಕರೆತಂದ.

ಗುಹೆಯಿಂದ ಹೊರಬಂದ ಅನುಭವ.

ಈ ಮಹಲನ್ನು ಹೊಕ್ಕಾಗ ಎಷ್ಟಾಸೆ, ಭರವಸೆ ಕನಸುಗಳನ್ನು ತುಂಬಿಕೊಂಡು ಬಂದಿದ್ದೆ. ಆದರೆ ಅವು ಇಲ್ಲಿಯೇ ಸುಟ್ಟು ಭಸ್ಮವಾಗುತ್ತವೆ ಎಂದು ತಿಳಿದಿರಲಿಲ್ಲ.

ಒಂದು ರಿಕ್ಷಾ ಮಾಡಿ ವಿವೇಕ ನನ್ನನ್ನು ತನ್ನ ಮನೆಗೆ ಕರೆದೊಯ್ದು. ನನ್ನ ಮುಂದೆ ನಿಂತು, ಅನುನಯದ ಧ್ವನಿಯಲ್ಲಿ ಹೇಳಿದ್ದ.

"ನಂದಿನಿ, ನಾವು ಇಷ್ಟು ದಿನ ಬರಿ ಸ್ನೇಹಿತರೇ ಆಗಿದ್ದೆವು. ನನ್ನ ಸ್ನೇಹವೇ ನಿನ್ನ ಬಾಳನ್ನು ಒಡೆದಿದ್ದರೆ ಅದೇ ನಿನಗೆ ಬಾಳನ್ನು ಕೊಡುತ್ತದೆ'' ಎಂದಿದ್ದ. ಕತ್ತೆತ್ತಿ ಅವನ ಮುಖ ನೋಡಿದ್ದೆ. ಯಾವ ಬಯಕೆಯ ಕಲ್ಮಶವೂ ಇಲ್ಲದ ಸ್ನೇಹ ಸೂಸುವ ಕಣ್ಣುಗಳು. ಎರಡು

ಕೈಯಿಂದ ಅವನ ತಲೆ ನನ್ನೆಡೆಗೆ ಬಾಗಿಸಿಕೊಂಡು ಅವನ ಹಣೆಗೆ ಸ್ನೇಹಪೂರ್ವಕವಾಗಿ ಮುತ್ತಿಟ್ಟು ಹೇಳಿದೆ.

"ಬೇಡ ವಿವೇಕ್, ನಮ್ಮ ಸ್ನೇಹಕ್ಕೆ ಅಂಥ ಕಳಂಕ ಹಚ್ಚುವುದು ಬೇಡ. ದೈಹಿಕ ಸಂಬಂಧದಿಂದಲೇ ಗಂಡ ಹೆಂಡಿರಾಗುತ್ತಾರೆಂಬ ನಂಬಿಕೆಯನ್ನು ನಾನೆಂದೋ ಕಳೆದುಕೊಂಡಿದ್ದೇನೆ. ಮಾನಸಿಕವಾಗಿ ನಾವಿಬ್ಬರೂ ಗಂಡ ಹೆಂಡಿರಾಗಿ ಬಿಟ್ಟಿದ್ದೀವಿ. ಅದಕ್ಕೆ ದೈಹಿಕ ಸಂಬಂಧದ ಕಳಂಕ ಹಚ್ಚುವುದು ಬೇಡ. ಆದರೆ ವಿವೇಕ್ ನನ್ನಿಂದ ನಿನ್ನ ಬಾಳು ಬರಡಾಗುವುದು ಬೇಡ. ನನ್ನ ಸುಖ, ಸಂತೋಷ ನಿನಗೆ ಹೇಗೆ ಮುಖ್ಯವೋ, ಹಾಗೇ ನಿನ್ನ ಸುಖ, ಸಂತೋಷವೂ ನನಗೆ ಮುಖ್ಯ ವಿವೇಕ್. ಕೆಲವು ದಿನ ಮಾತ್ರ, ನನ್ನನ್ನು ನನ್ನ ಪಾಡಿಗೆ ಬಿಟ್ಟು ನೀನು ಬೇರೆ ಮದುವೆಯಾಗು. ನೀನೂ ನಿನ್ನ ಹೆಂಡತಿ ಸಂಸಾರ ಮಕ್ಕಳು ಎಂಬ ಸುಖದಲ್ಲಿ ಸಂತೋಷವಾಗಿರಬೇಕು."

"ನಾನಷ್ಟು ಸ್ವಾರ್ಥಿಯಲ್ಲ ನಂದೂ, ನೀನೇ ಹೇಳಿದೆ ಮಾನಸಿಕವಾಗಿ ನಾವಿಬ್ಬರೂ ಎಂದೋ ಗಂಡ ಹೆಂಡತಿಯಾಗಿದ್ದೇವೆ ಎಂದು. ಅಂದ ಮೇಲೆ ನನಗೆ ಮತ್ತೆ ಮದುವೆಯೆ?" ಎಂದು ನಕ್ಕ.

"ಆದರೆ ನನ್ನಿಂದ ನಿನಗೆ ಯಾವ ಸುಖವೂ ಸಿಗಲಾರದು ವಿವೇಕ್. ಸಂದೀಪನೊಡನೆ ಕಳೆದ ಒಂದೊಂದು ರಾತ್ರಿಯಲ್ಲೂ ನಾನು ಈ ಗಂಡ ಹೆಂಡತಿಯ ಸಂಬಂಧದ ಬಗ್ಗೆ ಹೇಸಿ ಬಿಟ್ಟಿದ್ದೇನೆ. ಆ ರಾತ್ರಿಗಳನ್ನು ನೆನಪಿಸಿಕೊಂಡರೆ ನನ್ನ ಮೈ ಮೇಲೆ ಮುಳ್ಳುಗಳೇಳುತ್ತವೆ. ದೈಹಿಕ ಸಂಬಂಧವೆಂದರೆ ನನಗೆ ಅಸಹ್ಯವಾಗಿ ಹೋಗಿದೆ ವಿವೇಕ್."

ಯಾವ ಭಾವೋದ್ವೇಗವಿಲ್ಲದೆ ನಾನು ಇವನೆದುರು ಈ ಮಾತುಗಳನ್ನು ಹೇಗೆ ಆಡಿದೆ, ನಾಚಿಕೆ ಆಗಬಾರದಿತ್ತೆ ನನಗೆ.

ದಿನಗಳು ಕಳೆಯುತ್ತಿದ್ದರೂ ನನ್ನ ಮನಸ್ಸಿನ ತೊಳಲಾಟ ಶಾಂತವಾಗಲಿಲ್ಲ. ಕಣ್ಮುಚ್ಚಿದರೆ ಚೈತ್ರ ಎದುರಿಗೆ ಬರುತ್ತಿದ್ದಳು. "ಮಮ್ಮ ಎತ್ತಿಕೋ" ಎನ್ನುತ್ತಿತ್ತು. ಎಷ್ಟೋ ರಾತ್ರಿ ನಿದ್ದೆ ಬಾರದೆ ಹೊರಳಾಡಿ ಬಾಲ್ಕನಿಯಲ್ಲಿ ಬಂದು ಕುಳಿತಾಗ ವಿವೇಕ ತನ್ನ ರೂಮಿನಿಂದ ಎದ್ದು ಬರುತ್ತಿದ್ದ.



ನಮ್ಮಲ್ಲಿರುವ ಒಂದು ದುರ್ಗುಣವನ್ನು ಸರಿಪಡಿಸಿಕೊಳ್ಳುವುದಕ್ಕಿಂತ ಸಾವಿರ ಸುಗುಣಗಳನ್ನು ಹೊಂದುವುದು ಸುಲಭ.

—ಜೀನ್ ಬ್ರೇಯರ್

ಒಂದು ವಿಷಯ ತಿಳಿದಿರುವಾಗ ಅದು ತಿಳಿದಿದೆಯೆಂದು, ತಿಳಿಯದೆ ಇದ್ದಾಗ ಅದು ತಿಳಿದಿಲ್ಲವೆಂದೂ ಅರ್ಥ ಮಾಡಿಕೊಳ್ಳಬಲ್ಲ ಚೈತನ್ಯವೇ ನಿಜವಾದ ಜ್ಞಾನ.

—ಕನ್‌ಫ್ಯೂಷಿಯಸ್

ಆಹಾರವನ್ನು ಹೆಚ್ಚು ರುಚಿಕರ ಮಾಡುವುದು ಹಸಿವು. ಪಾನೀಯವನ್ನು ಹೆಚ್ಚು ರುಚಿಕರ ಮಾಡುವುದು ತೃಷೆ.

—ಸಾಕ್ರಟೀಸ್

ಸಂಗ್ರಹ : ಶಂಕರಗೌಡ ವೈ. ಪಾಟೀಲ

“ಯಾಕೆ ನಿದ್ದೆ ಬರಲಿಲ್ಲವೆ, ಮನಸ್ಸನ್ನು ಶಾಂತವಾಗಿಡು ನಂದೂ. ನಿನಗೆ ಬೇಸರವಾಗಿದ್ದರೆ ಎಲ್ಲಿಯಾದರೂ ಹೋಗೋಣ. ಸ್ಥಳ ಬದಲಾವಣೆ ಆಗುತ್ತೆ, ಮನಸ್ಸು ಶಾಂತವಾಗುತ್ತೆ” ಎಂದು ತನ್ನ ಆಫೀಸಿಗೆ ರಜ ಹಾಕಿ ಸುಂದರ ಸ್ಥಳಗಳನ್ನೆಲ್ಲ ಸುತ್ತಿಸಿದ. ಅವನೊಡನೆ ಜೋಗದ ಜಲಪಾತ ನೋಡಿದ್ದೆ. ಅವನ ಭುಜಕ್ಕೊರಗಿ ರಭಸದಿಂದ ಬೀಳುವ ನೀರು ನೋಡಿದ್ದೆ. ಮಲ್ಪೆಯ ಸಮುದ್ರದಲ್ಲಿ ಅಲೆಗಳೊಡನೆ ಆಟವಾಡಿ ಚಿಕ್ಕ ಹುಡುಗಿಯಂತೆ ಚಪ್ಪಾಳೆ ತಟ್ಟಿದ್ದೆ. ಆಯಾಸದಿಂದ ಅವನ ಎದೆಗೊರಗಿದಾಗ ಪುಟ್ಟ ಮಕ್ಕಳನ್ನು ಸಂತೈಸಿದಂತೆ ನನ್ನ ಮುಂಗುರುಳು ಸರಿಸಿ ನಕ್ಕಿದ್ದ.

ಏನಿತ್ತು ನಮ್ಮ ಈ ಅರ್ಥವಾಗಲಾರದ ಸಂಬಂಧದಲ್ಲಿ? ಎಷ್ಟೋ ಸಲ ಒಬ್ಬಳೇ ಕುಳಿತು ಈ ಸಂಬಂಧದಲ್ಲಿ ಅರ್ಥ ಹುಡುಕಲು ಯತ್ನಿಸಿದ್ದೆ. ವಿವೇಕನ ಹಣೆಗೆ ಅಭಿಮಾನದಿಂದ ಮುತ್ತಿಡುವಾಗ ಅವನ ಭುಜಕ್ಕೊರಗಿ ನಗುವಾಗ, ಅವನ ಕೈ ಹಿಡಿದು ಹೆಜ್ಜೆ ಹಾಕುವಾಗ ಅವನ ಮಾನಸಿಕ ವಿಚಾರ ಯಾಕೆ ಗೊತ್ತಾಗುವದಿಲ್ಲ? ನನಗೇನೋ ಸರಿ ಆದರೆ ಅವನಿಗೇನನ್ನಿಸುತ್ತಿರಬಹುದು. ಇಂಥ ಪ್ರಾಯದ ಗಳಿಗೆಯಲ್ಲಿ ಎಲ್ಲ ಆಶೆ, ಬಯಕೆಗಳನ್ನು ಒತ್ತಿಟ್ಟು ಅವನು ಹೇಗೆ ಶಾಂತಿಯಿಂದಿದ್ದಾನೆ ಅಥವಾ ನನಗಾಗಿ ಎಲ್ಲ ಒತ್ತಿಟ್ಟುಕೊಂಡು ಮಾನಸಿಕವಾಗಿ ಹೊಯ್ದಾಡುತ್ತಿದ್ದಾನೋ?

ಹಾಗೆನ್ನಿಸಿದಾಗ ಒಂದು ದಿನ ರಾತ್ರಿ ಅವನ ರೂಮಿಗೆ ಹೋದೆ. ಬೆಡ್‌ಲ್ಯಾಂಪ್ ಮಾತ್ರ ಹಚ್ಚಿಕೊಂಡು ಮಂಚದ ಮೇಲೆ ಅರ್ಧ ಒರಗಿ ಕುಳಿತು ಯಾವುದೋ ಪುಸ್ತಕ ಓದುವುದರಲ್ಲಿ ಮಗ್ನನಾಗಿದ್ದ. ಅವನ ರೂಮಿನ ತುಂಬೆಲ್ಲ ಕಿಟಕಿಯಿಂದ ಬಂದ ಬೆಳದಿಂಗಳ ಬೆಳಕು ನೆಲದ ತುಂಬೆಲ್ಲ ಹರಡಿತ್ತು. ಬೆಡ್‌ಲ್ಯಾಂಪಿನ ಅರ್ಧ ಬೆಳಕು ಮಾತ್ರ ಅವನ ಮುಖದ ಮೇಲೆ ಬಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು. ಎಂಥ ಶಾಂತತೆಯಿತ್ತು ಅವನ ಮುಖದಲ್ಲಿ. ಹತ್ತಿರ ಹೋದೆ. ಅವನ ಪಕ್ಕ ಕುಳಿತು ಅವನ ಕೈಯಲ್ಲಿದ್ದ ಪುಸ್ತಕ ತೆಗೆದೆ.

ಸ್ವಾಮಿ ವಿವೇಕಾನಂದರ ಪುಸ್ತಕವೊಂದನ್ನು ಓದುತ್ತಿದ್ದ. ತತ್ವಜ್ಞಾನದ ಬಗ್ಗೆ ವಿವೇಕಾನಂದರು ಮಾಡಿದ ಭಾಷಣದ ಬಗ್ಗೆ ಓದುತ್ತಿದ್ದ.

ಪುಸ್ತಕ ಮುಚ್ಚಿ ಅವನ ಮುಖ ನೋಡಿದ್ದೆ. ಶಾಂತ ಸರೋವರದಂಥ ಕಣ್ಣುಗಳಲ್ಲಿ ನಾನು ಹುಡುಕುತ್ತಿದ್ದುದು ಏನು? ಮನುಷ್ಯನ ಐಹಿಕ ಆಶೆಗಳ ಬಯಕೆಯೆ?



ಉಪನಿಷತ್ತಿನ ಸಂದೇಶ ನಮ್ಮ ಮುಕ್ತಿಗೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಪ್ರಪಂಚದಲ್ಲಿ ಗೌರವದಿಂದ ಬಾಳಬೇಕೆಂದು ಆಶಿಸುವವನಿಗೆ.

—ಭಗವದ್ಗೀತಾ

ಒಲವೇ ಜೀವನ, ದೌರ್ಬಲ್ಯವೇ ಮರಣ.

—ಸ್ವಾಮಿ ವಿವೇಕಾನಂದ

ಜೀವನದಲ್ಲಿ ಒಂದು ಸಲವಾದರೂ ಬೇರೊಬ್ಬರಿಗಾಗಿ ಚಿಂತಿಸು.

—ಸ್ವಾಮಿ ವಿವೇಕಾನಂದ

ಸಂಗ್ರಹ : ಮಲ್ಲಿಕಾರ್ಜುನ ಬಾಳದ

"ಯಾಕೆ ನಂದೂ ನಿದ್ದೆ ಬರಲಿಲ್ವಾ?'' ಅಂಥ ವೇಳೆಯಲ್ಲೂ ಪ್ರಾಯದ ಹೆಣ್ಣು ಪಕ್ಕಕ್ಕೆ ಕುಳಿತರೂ ವಿಚಲಿತನಾಗದ ಅವನ ನಿರ್ಭಾವ.

"ಇಲ್ಲ ವಿವೇಕ್, ನಾನು ಏನೋ ಹೇಳಬೇಕೆಂದು ಬಂದೆ.''

"ಹೇಳಬಹುದಲ್ಲ ಯಾಕೆ ಈ ಸಂಕೋಚ, ನನ್ನ ಹತ್ತಿರವೂ ನಿನಗೆ ಪರಭಾವನೆಯೆ?''

ಅವನ ಮಾತಿನಲ್ಲೇ ತಟ್ಟುತ್ತಿದ್ದ ಅನುನಯ, ಆತ್ಮೀಯತೆ ಅಪ್ಯಾಯ ಮಾನತೆಗಳ ಬಂಧವನ್ನು ನಾನು ಹೇಗೆ ಬಿಡಿಸಿಕೊಳ್ಳಲು ಸಾಧ್ಯವಿತ್ತು?

"ವಿವೇಕ್ ನಿನ್ನ ಹರೆಯದ ವಯಸ್ಸು ಹೀಗೆಯೇ ಕಳೆದು ಹೋಗಬೇಕೆ, ನಾನಿಲ್ಲದಿದ್ದರೆ? ನಾನು ನಿನಗೆ ಸಿಕ್ಕಿರದೆ ಇದ್ದರೆ ನೀನು ಮದುವೆಯಾಗಿ ಸುಖವಾಗಿ, ನಿನ್ನ ಹೆಂಡತಿ, ಮಕ್ಕಳು, ಸಂಸಾರ ಎಂದು ಸುಖವಾಗಿರಬೇಕಿತ್ತು. ನನ್ನಿಂದ ನಿನ್ನ ಬಾಳು, ಈ ವಯಸ್ಸು ಹಾಳಾಗುವುದು ನನಗಿಷ್ಟವಿಲ್ಲ, ನೀನು ಬೇರೆ ಮದುವೆಯಾಗು ವಿವೇಕ್.''



"ಶ್ಯಾಮು ನಮಗೆ ಸ್ವಾತಂತ್ರ್ಯ ಸಿಕ್ಕಿದ್ದು ಯಾವಾಗ?''

"ನಾವು ಮಲಗಿದ್ದಾಗ ಸಾರ್.''

—ಬಿ. ಎ. ಮೋಹನ್

"ಹುಚ್ಚಿ ಒಬ್ಬ ಹೆಂಡತಿಯಿದ್ದು, ಇನ್ನೊಂದು ಮದುವೆಯಾಗುವುದು ಕಾನೂನಿಗೆ ವಿರುದ್ಧ.''

"ಒಬ್ಬ ಹೆಂಡತಿ?''

"ಹೌದು, ನೀನು ಹೇಳಿದೆಯಲ್ಲ ಮಾನಸಿಕವಾಗಿ ನಾವಿಬ್ಬರೂ ಎಂದೋ ಗಂಡ ಹೆಂಡತಿಯಾಗಿದ್ದೇವೆ ಎಂದು. ನಮ್ಮ ಸುತ್ತಲಿನ ಜನ ನಮ್ಮನ್ನು ತಿಳಿದದ್ದು ಹಾಗೆಯೇ ಅಲ್ಲವೆ?''

"ವಿವೇಕ್ ನಿನ್ನ ಬಾಳು ಹಾಳಾಗಲು ನನಗಿಚ್ಛೆಯಿಲ್ಲ ಎಂದೆನಲ್ಲವೆ. ನೀನು ಬೇರೆ ಮದುವೆಯಾಗುವುದನ್ನು ಒಪ್ಪುವುದಿಲ್ಲ ವಿವೇಕ್. ಮನಪೂರ್ವಕವಾಗಿ ನಾನು ನಿನ್ನೆಡೆಗೆ ಬಂದಿದ್ದೇನೆ. ನನ್ನನ್ನು ಸ್ವೀಕರಿಸುವುದು ಬಿಡುವುದು ನಿನಗೆ ಸೇರಿದ್ದು.'' ಆ ಮಾತು ಹೇಳುವಾಗ ನನ್ನ ಧ್ವನಿ ನಡುಗುತ್ತಿತ್ತು. ನನ್ನ ಮುಖ ಕೆಂಪೇರಿ ನಾನು ತಲೆ ತಗ್ಗಿಸಿಬಿಟ್ಟೆ.

ಎಷ್ಟು ಅರ್ಥಪೂರ್ಣವಾಗಿ ನಕ್ಕಿದ್ದ. ಸರಿಯಾಗಿ ಎದ್ದು ಕುಳಿತ. ಬೆಡ್ ಲ್ಯಾಂಪನ್ನು ನನ್ನೆಡೆ ತಿರುಗಿಸಿದ.

ನನ್ನ ಮುಖವೆತ್ತಿದ. ನನ್ನ ಕಣ್ಣುಗಳನ್ನು ಮುದ್ದಿಸಿದ, ಏನು ಹೇಳಿದ?

"ನಂದಿನಿ, ನಿನ್ನಲ್ಲಿ ನಡೆಯುತ್ತಿರುವ ದ್ವಂದ್ವ ನನಗೆ ಅರ್ಥವಾಗುತ್ತದೆ. ದೈಹಿಕವಾಗಿ ನಾವು ಒಂದಾಗಿ ಬಿಟ್ಟರೆ ನಮ್ಮ ಸಂಬಂಧದಲ್ಲಿ ಏನು ಅರ್ಥ ಉಳಿಯಿತು. ಪವಿತ್ರವಾದ ನಮ್ಮ ಪ್ರೇಮಕ್ಕೆ, ಸ್ನೇಹಕ್ಕೆ ಇಂಥ ಕಳಂಕ ಹಚ್ಚುವುದು ಬೇಡ ನಂದೂ. ಹೋಗು ಮಲಗಿಕೊ,

ನಿದ್ದೆಗೆಡಬೇಡ. ನಾನು ಸಂಪೂರ್ಣ ಸುಖದಿಂದಿರಲು ನಿನ್ನ ಸಾನ್ನಿಧ್ಯವೇ ಸಾಕು.''

"ಆದರೆ ನಿನ್ನದಾದ ಮಕ್ಕಳನ್ನು ನಿನಗೆ ಕೊಡಲು ಶಕ್ತಳಾಗಲಿಲ್ಲ.''

"ಏನಾದರೂ ಸಿಲ್ಲಿಯಾಗಿ ಯೋಚಿಸಬೇಡ. ನೀನು ಸೃಷ್ಟಿಸಿದ ಈ ಚಿತ್ರಗಳೆಲ್ಲವೂ ನನ್ನ ಮಕ್ಕಳೇ ನೋಡು. ಎಲ್ಲ ಸಜೀವಗೊಂಡು ನಿಂತಿವೆ, ನಿತ್ಯವೂ ನನ್ನೊಡನೆ ಮಾತನಾಡುತ್ತವೆ'' ಎನ್ನುತ್ತ ನನ್ನ ಮುಖವೆತ್ತಿ ಗೋಡೆ ಕಡೆಗೆ ತಿರುಗಿಸಿದ. ಅವನ ರೂಮಿನ ಗೋಡೆ ತುಂಬೆಲ್ಲ ನಾನು ಬರೆದ ಚಿತ್ರಗಳೇ ಅಲಂಕೃತವಾಗಿದ್ದವು.

ಅದಾದ ಮೇಲೆ ನಾನು ನಮ್ಮಿಬ್ಬರ ಸಂಬಂಧದ ಬಗ್ಗೆ ಯಾವತ್ತೂ ಮಾತನಾಡಲಿಲ್ಲ. ನನ್ನ ಮನಸ್ಸಿನ ಬೇಗುದಿ ಕಡಿಮೆಯಾಗಲೆಂದು ವಿವೇಕ ಮದ್ರಾಸ್ಸಿಗೆ ಟ್ರಾನ್ಸ್‌ಫರ್ ತೆಗೆದುಕೊಂಡ. ಹತ್ತಿರದ ಸುಂದರ ತಾಣಗಳನ್ನೆಲ್ಲ ಸುತ್ತು ಹಾಕಿಸಿದ. ಹತ್ತಿರದ ಪಾಂಡಿಚೇರಿಗೆ ಕರೆದೊಯ್ದ.

ಒಂದು ಚಿತ್ರಕಲಾಶಾಲೆಯಲ್ಲಿ ನನಗೆ ಅಧ್ಯಾಪಕಿ ಕೆಲಸ ಸಿಕ್ಕಾಗ ಕುಣಿದಾಡಿಬಿಟ್ಟಿದ್ದ. ನಾಲ್ಕಾರು ಪತ್ರಿಕೆಗಳಿಗೆ ಚಿತ್ರ ಬರೆಯಲು ಕಾಂಟ್ರಾಕ್ಟ್ ಹಿಡಿದುಕೊಟ್ಟಿದ್ದ.



"ನಾನು ಬೀಡ ತಿನ್ನುವುದನ್ನು ಬಿಟ್ಟು 6 ತಿಂಗಳಾಯಿತು.''

"ಬಹಳ ಒಳ್ಳೇದು.''

"ನಾಲ್ಕು ತಿಂಗಳಿಂದ ಸಿಗರೆಟ್ ಸೇದುವುದನ್ನು ಬಿಟ್ಟೆ. ಶರಾಬನ್ನು ಕುಡಿಯುವುದನ್ನು ಬಿಟ್ಟು 3 ತಿಂಗಳಾಯಿತು.''

"ವಾಹ್ ವಾಹ್, ವಂಡರ್‌ಫುಲ್.''

"ಆಗಾಗ ಸುಳ್ಳು ಹೇಳುವ ಅಭ್ಯಾಸ ನನಗಿದೆ. ಅದನ್ನು ಕೂಡಲೇ ಬಿಡಬೇಕೆಂದಿದ್ದೇನೆ.''

—ಬಿ. ವಾಸುದೇವ ವರ್ಮ

ಇವನ ಈ ಪ್ರೀತಿಯ ಋಣವನ್ನು ಹ್ಯಾಗೆ ತೀರಿಸಲು ಸಾಧ್ಯವಿತ್ತು. ಆದರೂ ಈ ತುಂಬಿದ ದಿನಗಳೊಳಗಿಂದ ಚೈತ್ರಳ ನೆನಪು ಯಾವಾಗಲೂ ನನ್ನ ಎದೆ ಕೊರೆಯುತ್ತಿತ್ತು. ಒಂದು ಸಂಜೆ ಆಫೀಸಿನಿಂದ ಬಂದಾಗ ಅವನು ಹೇಳಿದ್ದನಲ್ಲ

"ನಂದಿನಿ, ಸಂದೀಪ ಬೇರೆ ಮದುವೆಯಾಗಿದ್ದಾನಂತೆ. ಎರಡು ವರ್ಷಗಳೇ ಆಯಿತಂತೆ. ಎರಡು ವರ್ಷದ ಮಗುವಿದೆಯಂತೆ.''

ಹೌದು, ನಾನು ಸಂದೀಪನನ್ನು ಅಗಲಿ ಅಗಲೇ ಮೂರು ವರ್ಷಗಳೇ ಕಳೆಯಿತು. ಸಿರಿವಂತನಾದ ಅವನಿಗೆ ಹೆಣ್ಣು ಕೊಡಲು ಯಾರು ಹಿಂದೆ ಬೀಳುತ್ತಾರೆ, ಎರಡು ದಿನ ನನ್ನ ಮನಸ್ಥಿತಿಯೂ ಸರಿ ಇರಲಿಲ್ಲ.

"ಯಾಕೆ ನಂದಿನಿ, ನರ್ವಸ್ ಆಗಿದ್ದೀಯಾ'' ಎಂದಿದ್ದ ವಿವೇಕ.

"ವಿವೇಕ, ಸಂದೀಪ್ ಬೇರೆ ಮದುವೆಯಾದದ್ದು ನನಗೆ ಸಂಬಂಧಿಸಿದ ವಿಷಯವಲ್ಲ. ಅವನಿಗೀಗ ಮಗುವೂ ಆಗಿದೆ. ಆದರೆ ಅವಳ ಕೈಯಲ್ಲಿ ನನ್ನ ಚೈತ್ರ ಹೇಗಿರುತ್ತದೊ?'' ಅವನು ಆ ಗಳಿಗೆ ಮಾತನಾಡಲಿಲ್ಲ ದೀರ್ಘವಾದ ಮೌನದಲ್ಲಿ

ಏನು ಚಿಂತಿಸುತ್ತಿದ್ದ ವಿವೇಕ. ನನ್ನ ಬಾಳಿನಲ್ಲಿ ಬರೀ ಒಬ್ಬ ಗಂಡಸಾಗಿ ಬರಲಿಲ್ಲ, ಸ್ನೇಹಿತ, ಬಂಧು, ಬಳಗ ಎಲ್ಲ ಅವನೇ ಆಗಿದ್ದ.

ಒಂದಲ್ಲ, ಎರಡಲ್ಲ ವಿವೇಕನ ಮಾರ್ಗದರ್ಶನದಲ್ಲಿ ನನ್ನ ಮನಸ್ಸು ಕ್ರಿಯೆಯ ಅನುಭೂತವಾಗಿ ರೂಪಗೊಡಿತ್ತು. ಪತ್ರಿಕೆಗಳಿಗೆ ಚಿತ್ರ ಬರೆಯುವುದು, ತಿಂಗಳಿಗೊಂದು ಸಾರಿಯಾದರೂ ಪಾಂಡಿಚೇರಿ ಆಶ್ರಮಕ್ಕೆ ಹೋಗಿ ಬರುವುದು, ಪಾಶ್ಚಾತ್ಯ ಚಿತ್ರಗಾರರ ಚಿತ್ರಗಳನ್ನು ಅಭ್ಯಸಿಸಿ ಅವಲೋಕಿಸುವುದು. ವ್ಯಾನಗೋ, ಪೀಕಾಸೋ, ನಂದಲಾಲಾ, ಹೆಬ್ಬಾರ, ವೆಂಕಟಪ್ಪ, ರವಿವರ್ಮ ಅವರ ಚಿತ್ರಗಳ ಪ್ರಭಾವದಲ್ಲಿ ನನ್ನದೇ ಆದ ಅನಿಸಿಕೆಗಳ ಪ್ರಭಾವದಲ್ಲಿ ನನ್ನದೇ ಆದ ಅನಿಸಿಕೆಗಳನ್ನು ಬರೆದು ನನ್ನ ಚಿತ್ರದ ವರ್ಣಗಳ ರೇಖೆಗಳ ಜ್ಞಾನ ಹೆಚ್ಚಿಸಿಕೊಳ್ಳುವುದು, ಚಿತ್ರಕಲಾ ಶಾಲೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಹೇಳಿಕೊಡುವುದು. ಯಾವ ಚಿತ್ರಪ್ರದರ್ಶನವಿದ್ದರೂ, ನನ್ನ ಚಿತ್ರ ಇದ್ದೇ ಇರಬೇಕಿತ್ತು. ಮನೆಯ ಎಲ್ಲವನ್ನು ತಾನೇ ನೋಡಿಕೊಂಡು ವಿವೇಕ ನನಗೆ ಚಿತ್ರಗಳನ್ನು ಬರೆಯಲು ಅನುವು ಮಾಡಿಕೊಡುತ್ತಿದ್ದ. ಒಮ್ಮೊಮ್ಮೆ ಹಗಲು ರಾತ್ರಿ, ಮಧ್ಯರಾತ್ರಿಯವರೆಗೆ ಎಚ್ಚರವಿದ್ದು ಚಿತ್ರ ಬರೆಯಬೇಕಾಗುತ್ತಿತ್ತು.

'ರಾಗಸಂಗಮ'

ಲಾಟರಿ ಡ್ರಾ - ೧೧೫ರ ವಿಜೇತರು



ಪ್ರವೀಣ್ ಕುಮಾರ್

ಮಹದೇವಪುರ

ಬೆಂಗಳೂರು- 560 048.

ಇಂತಾದ್ದರಲ್ಲೂ ನನಗೆ ನನ್ನ ಕರುಳ ಕುಡಿ ಚೈತ್ರ ಬೇಕೆಂಬ ಹಂಬಲವಾದದ್ದು ನಿಜ. ಆದರೆ ಸಂದೀಪ ಬೇರೆ ಮದುವೆಯಾದ ಸುದ್ದಿ ತಿಳಿದು ಆ ಹಂಬಲ ಆತಂಕವಾಗಿ, ಚೈತ್ರ ಬೇಕೆಂಬ ಆಶೆ ಗುರಿಯಾಗಿ ಬಿಟ್ಟಿತ್ತು. ಸಂದೀಪನ ಹತ್ತಿರವಿದ್ದಾಗ ನನ್ನ ಚಿತ್ರಗಳು ಪರದೆ ಹಾಕಿ ಕತ್ತಲಲ್ಲಿ ಕೂತಂತೆ ನನ್ನ ತಾಯ್ತನದ ಹಂಬಲ ಈಗ ಗುಪ್ತವಾಗಿತ್ತು. ಆದರೀಗ ನನ್ನ ತಾಯ್ತನ ನನ್ನ ಬಣ್ಣಗಳ ಮಟ್ಟಿಗೆ ಸೀಮಿತವಾಗಬಾರದು ನನ್ನ ಚೈತ್ರಳವರೆಗೂ ಹರಡಬೇಕೆಂಬ ಮಹಾತ್ವಾಕಾಂಕ್ಷೆ ಕೂಡ ಆಗಿತ್ತು.

ನನ್ನ ಹಂಬಲ ಆತಂಕಕ್ಕೆ ಏನು ಹೇಳಿದ್ದ ವಿವೇಕ.

"ನಿನಗೆ ನಿನ್ನ ಮಗುವಿನ ಬಗ್ಗೆ ಆತಂಕ, ಹಂಬಲವಾಗುವುದು ನಿಜ ನಂದಿನಿ. ಮೊದಲು ಸಂದೀಪನಿಗೊಂದು ಕಾಗದ ಹಾಕು. ಚೈತ್ರಳನ್ನು ಕರೆತರುವ ಬಗ್ಗೆ ಅವನ ಉತ್ತರ ನೋಡಿಕೊಂಡು ಬೆಂಗಳೂರಿಗೆ ಹೋಗು'' ಎಂದಿದ್ದ. ಕೃತಜ್ಞತೆಯಿಂದ ಅವನ ಕೈ ಹಿಡಿದುಕೊಂಡಿದ್ದೆ.

ಸಂದೀಪನಿಗೆ ಕಾಗದ ಹಾಕಿ ಎಂಟು ದಿನಗಳಾಗಿದ್ದವು. ಎಷ್ಟು ಅನನ್ಯ ಭಾವದಿಂದ ವಿನಂತಿಸಿಕೊಂಡಿದ್ದೆ.

"ಸಂದೀಪ, ನಿನಗೆ ಏನೂ ಅನುಮೋದಿಸುವ ಶಕ್ತಿ ನನಗಿಲ್ಲ. ವಸಂತ, ಚೈತ್ರ ಇಲ್ಲದೆ ಬದುಕೇ ಇಲ್ಲವೆಂದುಕೊಂಡಿದ್ದೆ ಸಂದೀಪ. ನನ್ನ ಮಕ್ಕಳು ನನ್ನ ಬಣ್ಣಗಳ ಆಗರವಾಗಿದ್ದರು. ನನ್ನ ಭಾವನೆಗಳ ನನ್ನ ತೆಳು ಬಣ್ಣಗಳ ಆಕಾರವಾಗಿದ್ದ ವಸಂತ ಆಷಾಡದ ಸೋನೆಯಲ್ಲಿ ಸಿಕ್ಕು, ನರಳಿ ದೂರ ಹೋದ.

"ತಪ್ಪು ನನ್ನದಿರಲಿಲ್ಲ ಸಂದೀಪ್.

"ಆದರೂ ತಪ್ಪನ್ನು ಕ್ಷಮಿಸುವ ವೈಶಾಲ್ಯತೆ ನಿನ್ನಲ್ಲಿರಲಿಲ್ಲ.

"ಈ ತಾಯಿಯೆದೆಯ ದುಃಖ ನಿನ್ನನ್ನು ತಟ್ಟಲಿಲ್ಲ.

"ಮಕ್ಕಳು ತನ್ನಿಂದ ದೂರವಾಗಬೇಕೆಂದು ಯಾವ ತಾಯಿಯೂ ಹಂಬಲಿಸುವುದಿಲ್ಲ. ನನ್ನ ಮನಸ್ಸನ್ನು ಅರ್ಥ ಮಾಡಿಕೋ ನನಗೆ ಚೈತ್ರ ಬೇಕೇ ಬೇಕು. ನಿನಗೀಗ ನಿನ್ನದೇ ಆದ ಸಂಸಾರವಿದೆ, ಬೇರೆ ಮಗುವಿದೆ. ನಾನು ಇಂಥ ದಿನ ಬರುತ್ತೇನೆ, ಚೈತ್ರಳನ್ನು ಕಳಿಸಿಕೊಡು."

ನನ್ನ ಕಾಗದಕ್ಕೆ ಉತ್ತರ ಬರಲಿಲ್ಲ. ಯಾವುದನ್ನೇ ಆಗಲಿ ನೇರವಾಗಿ ಪ್ರತಿಕ್ರಿಯಿಸುವ ಕ್ರಿಯೆ ಅವನಲ್ಲಿರಲಿಲ್ಲ. ಇದಕ್ಕೂ ಪ್ರತಿಕ್ರಿಯಿಸುವುದಿಲ್ಲ.

ಮೂವತ್ತು ದಿನಗಳು ಕಳೆದವು.

ಎಂತಹ ನಿರೀಕ್ಷೆ ಹರಿದಿತ್ತು ನನ್ನ ಕಂಗಳಲ್ಲಿ.

ನನ್ನ ಪಾಲಿಗೆ ಆ ಮೂವತ್ತು ದಿನಗಳು ಘೋರ ತಪಸ್ಸು.

ತಳಮಳ, ಸಿಟ್ಟು ಸಂಕಟ, ನಿಸ್ಸಹಾಯಕತೆ. ವಿವೇಕ ಹೆಗಲ ಮೇಲೆ ಕೈಯಿಟ್ಟ

"ರಿಲಾಕ್ಸ್ ನಂದಿನಿ, ಈ ರೀತಿ ಸಂಕಟ ಪಡಬೇಡ ನೀನೇ ಹೋಗಿ ಬಂದು ಬಿಡು. ನಾಡಿದ್ದು ರಿಜರ್ವೇಶನ್ ಮಾಡಿಸುತ್ತೇನೆ. ಕಾಗದದ ಮೂಲಕ ಏನಾದೀತು?" ಎಂದು. ವಿವೇಕನ ಎದೆಯ ಮೇಲೆ ತಲೆಯಿಟ್ಟೆ. ಬಿಕ್ಕಿ ಬಿಕ್ಕಿ ಅಳಬೇಕೆನ್ನುವ ನಿಸ್ಸಹಾಯಕತೆಯನ್ನು ಆತನನ್ನು ಬಿಟ್ಟು ಬರುವಾಗಲೇ ತೊರೆದಿದ್ದೆ. ವಿವೇಕ ಊಟ ಮಾಡಿ ಆಫೀಸಿಗೆ ಹೋರಟುಹೋದ. ಹಲವು ಬಾರಿ ನಿರ್ಧಾರಗಳು ನಾವು ತೆಗೆದುಕೊಳ್ಳುವುದಕ್ಕಿಂತ ಮೊದಲೇ ನಮ್ಮ ಎದೆಯನ್ನು ತಟ್ಟಿ ಬಿಟ್ಟಿರುತ್ತವೆ. ನಿರ್ಧಾರದ ಅಂಚನ್ನು ಬಿಡಲೇಬಾರದೆನ್ನುವಷ್ಟು ನಿಷ್ಕ್ರಿಯತೆ. ಮಧ್ಯಾಹ್ನ ಊಟ ಮುಗಿಸಿ ಒಂದು ಗಳಿಗೆ ನಿದ್ದೆ ಮಾಡಬೇಕೆನ್ನುವಾಗ ವಿವೇಕನ ಫೋನು ಮಾಡಿದ್ದ.

"ಏನು ನಿರ್ಧರಿಸಿದ್ದೀಯಾ ನಂದೂ."

"ನಾಡದ್ದು ಟಿಕೆಟ್ ಬುಕ್ ಮಾಡಿಸು."



ವರ–ಬರ

ಗರ್ಭಿಣಿ ವೇತನ
ಪೊಂದು ಸರ್ಕಾರದ ವರ
ಇದರಿಂದ ಗರ್ಭಿಣಿ
ಯರಿಗಿಲ್ಲ ನಮ್ಮಲ್ಲಿ ಬರ.

—ಸಿ. ಕೆ. ಗಂಗೇಗೌಡ



"ಚಿತ್ರಕಲಾ ಪರಿಷತ್ತು?"

"ನಾಲ್ಕು ದಿನ ರಜ ಹಾಕುತ್ತೇನೆ."

"ಆಲ್‌ರಯ್ಟ್."

ಸಾಮಾನು ಪ್ಯಾಕ್ ಮಾಡುವುದಿರಲಿಲ್ಲ. ನಾಲ್ಕು ದಿನ ಅಷ್ಟೇ ತಾನೆ. ನಾಲ್ಕಾರು ಸೀರೆ, ರವಿಕೆಗಳನ್ನು ಒಂದು ಚಿಕ್ಕ ಕಿಟ್ ಬ್ಯಾಗ್‌ಗೆ ತುಂಬಿದೆ. ಹೋಟೆಲಿನಲ್ಲಿ ಇಳಿದರಾಯ್ತು, ಅಲ್ಲಿ ನನ್ನವರೆನ್ನುವವರು ಯಾರಿದ್ದಾರೆ.

ಸಂದೀಪನ ಮನೆ ಈಗ ನನ್ನದಲ್ಲ.

ನನ್ನ ಗಂಡನ ಮನೆ ನನ್ನದಾಗಿ ಉಳಿದಿಲ್ಲ. ತಾನು ತೊರೆದು ಬಂದ ಸಂದೀಪನ ಪ್ರತಿಷ್ಠಿತ ಮನೆಯ ಮೆಟ್ಟಿಲೇರಿ ಎಡವಿಬಿದ್ದು ಬಂದ ದಾರಿ ನನ್ನದಾಗಿ ಉಳಿದಿರಲಿಲ್ಲ. ನಾನು ಊರಿದ ಹೆಜ್ಜೆಗಳ ಗುರುತಿಲ್ಲ. ಆದರೂ ಮತ್ತೆ ಹೋಗಿ ಅವನ ಮನೆ ಬಾಗಿಲು ತಟ್ಟಬೇಕು.

ಕಳಚಿಕೊಂಡು ಬಂದ ಸಂಬಂಧ.


ಸಂದೀಪ ನನ್ನ ಬದುಕಿಗೆ ಮೋಡವಾಗಿ ಬಂದ ಎಂದು ಹೇಳಿಕೊಳ್ಳುವುದರಲ್ಲಿ ಅರ್ಥ ಗೋಚರಿಸುವುದಿಲ್ಲ. ಮೋಡವಷ್ಟೇ ಆಗಲಿಲ್ಲ ಆಷಾಡದ ಹುಚ್ಚು ಮಳೆಯಾದ ಭೋರ್ಗರೆತದ ಬಿರುಕುಗಳು ಮುಚ್ಚುವ ಬದಲು ರಾಡಿಯಾಗಿ ನಿಂತವು.

ನನ್ನ ಬದುಕಿನ ಬಣ್ಣಗಳೆಲ್ಲವೂ ಕಲಸಿ ರಾಡಿಯಾಗಿ ಭವಿಷ್ಯದ ಗೋರಿಯಲ್ಲಿ ಸೇರಿ ಹೋದವು. ಜೀವನದ ಪರೀಕ್ಷೆಯೆಲ್ಲ ವರ್ತಮಾನದ ಸುಳಿಯಲ್ಲಿ ಸುತ್ತ ಬೇಕೆಂದುಕೊಂಡಿದ್ದೆ. ಕಣ್ಣಳತೆಗೂ ಮೀರಿ ನಿಲ್ಲುವ ಆ ದಾಷ್ಟೀಕತೆ ಬೇಕಿರಲಿಲ್ಲ. ಆದರೂ ಬರುವಾಗ ಏನು ಹೇಳಿದ್ದ ವಿವೇಕ.

"ಯಾವುದಕ್ಕೂ ಎಗ್ಸೈಟ್ ಆಗ್ಬೇಡ ನಂದೂ. ಅವರ ಉತ್ತರ ಏನಿದ್ದರೂ ನೀನು ಸ್ವೀಕರಿಸಬೇಕು. ಇದು ಬರಿ ಕೊಡುಕೊಳ್ಳುವ ವ್ಯವಹಾರವಲ್ಲ. ಸಂಬಂಧವನ್ನು ಕಳಚಿ ಹಾಕಿದವರು ಅವರು."

ನಾನು ಮಾತನಾಡದೆ ಅವನ ಮುಖ ನೋಡಿದ್ದೆ.

"ಮನಸ್ಸನ್ನು ಶಾಂತವಾಗಿಟ್ಟುಕೊಂಡು



ಅನ್ಯರ ದೋಷ ಕಂಡುಹಿಡಿಯಲು ನೀವೆಷ್ಟು ವೇಳೆಯನ್ನು ಹಾಳು ಮಾಡುತ್ತೀರೋ ಅಷ್ಟನ್ನೇ ನಿಮ್ಮ ದೋಷ ಸರಿಪಡಿಸಿಕೊಳ್ಳಲು ಉಪಯೋಗಿಸಿರಿ. ನಿಮ್ಮನ್ನು ನೀವು ಸುಧಾರಿಸಿಕೊಂಡರೆ ಜಗತ್ತು ತಾನೇ ಸುಧಾರಿಸುತ್ತದೆ.

—ಸ್ವಾಮಿ ವಿವೇಕಾನಂದ

ಪಿತೃಗಳ ಕೀರ್ತಿಯನ್ನು ಬೆಳಗಿಸುವ ಚಿರಂಜೀವಿ ಮಕ್ಕಳಂತೆ ಗ್ರಂಥಕರ್ತರ ಕೀರ್ತಿಯನ್ನು ಅವರ ಗ್ರಂಥಗಳು ಆಚಂದ್ರಾರ್ಕವಾಗಿ ಬೆಳಗಿಸುತ್ತವೆ.

—ಪ್ಲೇಟೋ

ಸಂಗ್ರಹ : ಯಂಕಪ್ಪ ದೊಡ್ಡಮನಿ

ಊರಿಗೆ ಬಾ'' ಎಂದಿದ್ದ.

ಇದೇ ರೀತಿ ರೈಲಿನಲ್ಲಿ ಕುಳಿತಿದ್ದೆ. ಎಲ್ಲವನ್ನೂ ಹಿಂದೆ ಹಾಕಿ ರೈಲು ಓಡುತ್ತಿತ್ತು. ಇದೇ ಗಾಳಿ, ಇದೇ ಆಗಸ, ಇಂಥದೇ ರಾತ್ರಿ ಇದೇ ರೀತಿ ಓಡುತಿದೇ ಗುಡ್ಡ ಬೆಟ್ಟ

ಆದರೆ ಈಗಿನಂತೆ ಮನಸ್ಸು ಆಗ ಶಾಂತವಾಗಿರಲಿಲ್ಲ ನಿರ್ಲಿಪ್ತವಾಗಿರಲಿಲ್ಲ. ಅಖಂಡವಾದ ಆಶೆಯಿತ್ತು. ಚೈತ್ರಳನ್ನು ಹೊತ್ತು ತರಬೇಕೆಂಬ ಹಂಬಲ. ನನ್ನನ್ನು ಕಂಡರೆ ಸಂದೀಪ ಹೇಗೆ ಪ್ರತಿಕ್ರಿಯಿಸಬಹುದೆಂಬ ನಿರೀಕ್ಷೆ.

ನಾನು ವಿವೇಕನೊಡನೆ ಹೊರಟು ಬಂದಾಗ ಎಲ್ಲರೆದುರಿಗೆ ಡಣಾಡಂಗುರವಾಗಿ ಹೇಳಿದ್ದ ನಂತಲ್ಲ.

"ಅವಳು ಹೆಣ್ಣಲ್ಲ, ಹದ್ದು ಮೀರಿದವಳು. ಬಣ್ಣದ ಗೀಳಿಗೆ ಬಿದ್ದವಳಿಗೆ ಮನೆ, ಮಠ, ಗಂಡ, ಮಕ್ಕಳು ಯಾಕೆ.''

ಮೊದಲಿನಿಂದಲೂ ಇವರ ಸಂಬಂಧ ಹೀಗೆಯೇ ಇರಬೇಕೆಂದು ಗೊತ್ತಿತ್ತು ನನಗೆ ಅಂದಿದ್ದನಂತಲ್ಲ. ಏನಿತ್ತು ನಮ್ಮ ಸಂಬಂಧದಲ್ಲಿ. ಯಾವ ಕಲ್ಮಶ ಕಂಡ ನನ್ನ, ತನ್ನ ಗಂಡ ಹೆಂಡತಿಯ ಪವಿತ್ರ ಸಂಬಂಧವನ್ನೇ ಅರ್ಥ ಹಚ್ಚದವ ಇವ ದೈಹಿಕ ಲಾಲಸೆಯೊಂದೇ ಗಂಡ, ಹೆಂಡತಿ ಸಂಬಂಧ ಎಂದು ತಿಳಿದನೇ. ಹೆಂಡತಿಯ ಆಸೆಗಳನ್ನು ಮೆಟ್ಟಿ ತುಳಿಯುವದೊಂದೇ ಈ ಸಂಬಂಧದ ಅರ್ಥವೆಂದು ತಿಳಿದನೇ, ನಿಜವಾದ ಅರ್ಥದಲ್ಲಿ ಅವನು ನನ್ನ ಗಂಡನಾಗಿದ್ದನೆ?



ನೆನಪು

ನನ್ನ ನೆನಪಿನಾಳದಿಂದ
ನಿನ್ನ ಬೇರು ಸಹ ಕೀಳಬೇಕೆಂದೇ
ಹೊತ್ತಿಸಿದ ಸಿಗರೆಟ್‌ನ ಹೊಗೆ
ಉಂಗುರುಂಗುರಾಗಿ ನಿನ್ನ
ಮುಂಗುರುಳ ನೆನಪಿಸಿತು.

—ಬಸವರಾಜ ಬಂಗಾರಶೆಟ್ಟಿ

ಯೋಚಿಸುತ್ತಲೇ ಇದ್ದೆ.

ರೈಲು ನಿಧಾನವಾಗಿ ನಿಂತಿತು.

ನನ್ನ ಯೋಚನೆಯ ಸರಪಳಿ ಕಡಿದು ಬಿತ್ತು. ಸಂದೀಪನಿಗೆ ಕಾಗದ ಬರೆದು ಒಂದು ತಿಂಗಳಾಯ್ತು. ಅವನಿಂದ ಉತ್ತರ ಬರದಾದಾಗ "ನಾನೇ ಬರುತ್ತೇನೆ. ದಯವಿಟ್ಟು ಚೈತ್ರಳನ್ನು ಕಳಿಸುವ ವ್ಯವಸ್ಥೆ ಮಾಡಿ'' ಎಂದು ಟೆಲಿಗ್ರಾಂ ಕೊಟ್ಟಿದ್ದೆ. ನಾನಿಂದು ಬರುವುದು ಅವನಿಗೆ ಗೊತ್ತಿದೆ, ನನ್ನನ್ನು ಹೇಗೆ ಕಾಣುತ್ತಾನೋ ಅಥವಾ ನಾನವನನ್ನು ಹೇಗೆ ಎದುರಿಸುತ್ತೇನೋ ಎನಿಸಿತು. ಒಂದು ಗಳಿಗೆ ನನ್ನ ಎದೆಯ ಬಡಿತ ಜಾಸ್ತಿ ಆದಂತೆನಿಸಿತು.

"ಯಾವುದಕ್ಕೂ ಎಗ್ಸೈಟ್ ಆಗ್ಬೇಡ, ಪರಿಸ್ಥಿತಿಯನ್ನು ಶಾಂತವಾಗಿ ಎದುರಿಸು'' ಎಂದಿದ್ದ ವಿವೇಕ.

ನನ್ನ ಬ್ಯಾಗು ಹಿಡಿದು ಗಾಡಿಯಿಂದ ಕೆಳಗಿಳಿದೆ. ಸಂದೀಪನ ಮನೆ ಎನ್ನುವುದನ್ನು

ಹುಡುಕಬೇಕಿರಲಿಲ್ಲ. ಒಮ್ಮೆ ನನ್ನದೇ ಎಂದುಕೊಂಡಿದ್ದ ಮನೆ, ಆ ಮನೆಗೆ ನಾನೀಗ ಅ
ಮಾತ್ರ. ಯಾವ ಭಾವನೆಗಳ ತಾಕಲಾಟದಲ್ಲೂ ಬೀಳಬಾರದೆಂದುಕೊಂಡಿದ್ದೆ. ಆಟ
ಹತ್ತಿದಾಗ ಹೋಟೆಲಲ್ಲಿ ಇಳಿಯುವುದು ಬೇಡ. ಮನೆಗೆ ಹೋಗಬೇಕು ಎನ್ನಿಸಿ ಆಟೋದವ
ವಿಳಾಸ ಹೇಳಿದೆ. ಆಟೋ ಇಳಿದು, ನನ್ನ ಬ್ಯಾಗ್ ತೆಗೆದುಕೊಂಡು ಅವನಿಗೆ ಚಾರ್ಜ್ ಕೊ
ಕಾಂಪೌಂಡಿನ ಗೇಟು ತೆಗೆದು ಒಳ ಬಂದೆ. ಯಾವುದಕ್ಕೂ ಮನಸ್ಸನ್ನು ಸೀಮಿತದಲ್ಲಿಡಬೇ
ಪ್ರತಿಜ್ಞೆ ಮಾಡಿದ್ದೆನಲ್ಲ, ಯಾಕೆ ಈ ತಳಮಳ ಎನಿಸಿತು. ಮೆಟ್ಟಿಲೇರಿ ಬಂದು ಮನೆ
ಮುಂದಿನ ಬಾಗಿಲು ಪಕ್ಕದ್ದಲಿದ್ದ ಬೆಲ್ ಒತ್ತಿದೆ. ಬಾಗಿಲು ತೆಗೆದವಳು ಸಾಮಾನ್ಯ ರೂ
ಒಂದು ಹೆಣ್ಣು, ಐದಾರು ತಿಂಗಳು ಬಸುರಿ ಇರಬೇಕು. ಹೊಟ್ಟೆ ಕೊಂಚ ಮುಂದೆ ಬಂದ
ಕಾಣುತ್ತಿತ್ತು. ಮುಗ್ಧವಾದ ಅವಳ ಮುಖದಲ್ಲಿ ಮೂಗು ಮಾತ್ರ ಸ್ವಲ್ಪ ದೊಡ್ಡದ
ಕಾಣುತ್ತಿತ್ತು.

ಒಂದು ಗಳಿಗೆ ಒಬ್ಬರನ್ನೊಬ್ಬರು ನೋಡಿದೆವು. ಧ್ವನಿಯಲ್ಲಿ ಸ್ಥಿರತೆ ತಂದುಕೊಳ
ನಾನು ಹೇಳಿದೆ.

"ನಾನು ಮದ್ರಾಸಿನಿಂದ ಬಂದಿದ್ದೀನಿ. ನನ್ನ ಹೆಸರು ನಂದಿನಿ."

ನನ್ನ ಮಾತುಗಳನ್ನು ಕೇಳುತ್ತಲೇ ಅವಳ ಕಣ್ಣುಗಳು ಅಚ್ಚರಿಯಿಂದ ಅರಳಿದ
ಮುಖದಲ್ಲಿ ಸಹಜವಾದ ನಗು ತಂದುಕೊಂ
"ಬನ್ನಿ, ಒಳಗೆ ಬನ್ನಿ" ಎಂದು ಒಳ ನಡೆದ
ನಾನ್ಯಾರೆಂಬುದು ಅವಳಿಗೆ ಗೊತ್ತಿರಬೇ
ಆದರೂ ಅವಳ ಮುಖ ವಕ್ರವಾಗಲಿ
ಕಣ್ಣುಗಳಲ್ಲಿ ದ್ವೇಷದ, ಅಸೂಯೆಯ
ಹುಟ್ಟಲಿಲ್ಲ. ಆತ್ಮೀಯರನ್ನು ಬರಮಾಡಿಕೊ
ವಂತೆ ಎಷ್ಟು ಸಹಜವಾಗಿ 'ಬನ್ನಿ' ಎನ
ಮಂದಸ್ಮಿತವಾಗಿ ಹೆಜ್ಜೆ ಹಾಕುತ್ತ ಆದರಿ
ಳಲ್ಲ.

"ಕುಳಿತುಕೊಳ್ಳಿ" ಎಂದಳು. ಅವಳು ನಿ
ನಡೆದ, ಭಂಗಿ, ಚಲನೆ ಸಂದೀಪ ಹಾ
ಸ್ವರವಳಿಗೆ ನಿಯಂತ್ರಿತವಾದ
ಭಾಸವಾಗುತ್ತದೆಯೆ ಎನಿಸಿತು.

ಒಳಹೋಗಿ ಕುರ್ಚಿಯ ಮೇಲೆ ಕುಳಿತ
ಬಹಳ ಆಯಾಸವಾದಂತಿತ್ತು. ಯ
ಭಾವಾವೇಷವೂ ನನ್ನಲ್ಲಿ ಮೂಡಲಿಲ್ಲ ಎ
ಅಚ್ಚರಿ.

ನಾನು ಬಾಳಲು ಬಂದ ಮನೆ.

ನನ್ನದಾಗಬೇಕಿದ್ದ ಬಂಗಲೆ.



"ಯಾವುದಾದರೂ ಒಂದು ದೊಡ್ಡ ವಸ್ತುವಿನ ಹೆಸರು ಹೇಳಿ."

"ರಬ್ಬರ್ ಸಾರ್."

"ಅದು ಹೇಗೆ?"

"ಅದನ್ನು ಎಷ್ಟು ದೊಡ್ಡದಾದರೂ ಮಾಡಿಕೊಳ್ಳಬಹುದು ಸಾರ್."

–ರುದ್ರಗೌಡ ಎಸ್. ಪಾಟೀಲ

ನಾನು ಊರಿದ ಹೆಜ್ಜೆ, ಕಂಡ ಕನಸುಗಳು ನೆನಪಾಗಿ ನನಗೆ ಅಳು ಬರಬಾರದೆ?

ಸಂದೀಪನ ಈಗಿನ ಮನೆಯಲ್ಲಿ ಯಾವ ಬಣ್ಣಗಳ ಸಮ್ಮಿಲನವಿಲ್ಲ. ಬಿಳಿಗೋಡೆಗಳು ಮೌನವಾಗಿ ಬಿಕ್ಕಳಿಸುವಂತಿತ್ತು. ನನ್ನದಾದ ಯಾವ ವಸ್ತುಗಳೂ ಇಲ್ಲಿಲ. ನನ್ನ ನೆನಪಿನ ತಂತಿ ಇಲ್ಲಿ ಮೀಟುವುದಿಲ್ಲ. ನನ್ನದಾಗಿ ಉಳಿದ ಒಂದೇ ಒಂದು ಸುಪ್ತ ಬಂಧನ ಚೈತ್ರ ಒಂದೆ. ಆದನ್ನಾದರೂ ಅವನ ಪಾಲಿಗೆ ಯಾಕೆ ಬಿಡಬೇಕು. ಅವಳನ್ನು ಕರೆದುಕೊಂಡು ಹೋದರೆ ಇನ್ನು ಈ ಜನ್ಮದಲ್ಲಿ ನನಗೆ ಅವನಿಗೆ ಸಂಬಂಧದ ಯಾವ ಮುದ್ರೆಯೂ ಇಲ್ಲ.



ಮನುಷ್ಯನ ಎಲ್ಲ ಸಂಬಂಧಗಳಲ್ಲಿ ಅತ್ಯಂತ ಪವಿತ್ರವಾದದ್ದು ಪ್ರೇಮ.

—ಎಸ್. ರಾಧಾಕೃಷ್ಣನ್

ಪ್ರೇಮದಿಂದ ಶೋಕ ಹುಟ್ಟುವುದು. ಪ್ರೇಮದಿಂದ ಭಯ ಹುಟ್ಟುವುದು. ಪ್ರೇಮದಿಂದ ಬಿಡುಗಡೆಯಾದವನಿಗೆ ಶೋಕವಿಲ್ಲ, ಭಯವಿಲ್ಲ.

—ಬುದ್ಧ

ಪ್ರೇಮವೇ ದೇವರು ಎನ್ನಬಲ್ಲೆ. ಆದರೆ ಪ್ರೇಮ ಎಂಥ ದೆವ್ವ!

—ಸಾಮ್ಯುಯಲ್ ಬಟ್ಲರ್

ಸಂಗ್ರಹ : ಯು. ಕೆ. ಆರ್. ಮಂಜುನಾಥ್

"ಕೈ ಕಾಲು ಮುಖ ತೊಳೆಯುತ್ತೀರಾ, ಬನ್ನಿ ಕಾಫಿ ಕುಡಿಯುವಿರಂತೆ. ಆಮೇಲೆ ಸ್ನಾನ ಮಾಡಿ'' ಎಂದಳು ಮೃದುವಾಗಿ. ಟವೆಲು, ಸೋಪು, ಟೂಥ್ ಬ್ರಶ್ ತೆಗೆದುಕೊಂಡು ಹಲ್ಲುಜ್ಜಿ ಮುಖ ತೊಳೆದುಕೊಂಡು ಬಂದಾಗ ಎದುರು ಟೀಪಾಯ್ ಮೇಲೆ ಹೊಗೆಯಾಡುವ ಕಾಫಿಯ ಕಪ್ಪನ್ನಿಟ್ಟಿದ್ದಳು. ನಾನು ಬರುವುದನ್ನು ಸಂದೀಪ ಇವಳಿಗೆ ತಿಳಿಸಿರಲೇಬೇಕು. ಆದರೆ ಅವನೆಲ್ಲಿ?

"ಇವರು ಟೂರ್ ಮೇಲೆ ಹೋಗಿದ್ದಾರೆ. ಬರುವುದು ಇನ್ನೂ ಎಂಟು ದಿನವಾಗಬಹುದು. ನನಗೆ ಎಲ್ಲವನ್ನು ಹೇಳಿದ್ದಾರೆ.''

ಎಲ್ಲವನ್ನೂ ಅಂದರೆ ಏನು ಹೇಳಿರಬಹುದು? ಇವಳು ಇಂಥವಳು, ಇನ್ನೊಬ್ಬನೊಡನೆ ಓಡಿಹೋದಳು ಎಂದೆ? ಮೋಹಿನಿಯ ಬಗ್ಗೆ ನನಗೂ ಹಾಗೇಯೇ ಹೇಳಿರಲಿಲ್ಲವೆ? ಹಬೆಯಾಡುತ್ತಿದ್ದ ಕಾಫಿ ತುಂಬ ರುಚಿ ಎನಿಸಿತು. ಮುಖ ಮೇಲೆತ್ತಿ ಹೇಳಿದೆ.

"ಕಾಫಿ ತುಂಬ ಚೆನ್ನಾಗಿದೆ ಇವರೆ, ಅಂದ ಹಾಗೆ ನಿಮ್ಮ ಹೆಸರು?''

"ಜಲಜ.''

"ಜಲಜ ನೀವು ಬಂದ ಮೇಲೆ ಈ ಮನೆಗೆ ಕಳೆ ಬಂದಿರಬೇಕು.''

ಅವಳು ನಕ್ಕಳು. ವಿಷಾದ ತುಂಬಿದ ನಗುವೋ, ಇಲ್ಲ ಅವಳ ತುಟಿಯಂಚಿನಲ್ಲಿ ಮೂಡಿದ ವ್ಯಥೆಯೋ? ಅವಳು ಮಾತನಾಡಲಿಲ್ಲ. ಹತ್ತಿರ ನಿಂತಿದ್ದ ಎರಡು ವರ್ಷದ ಮಗುವಿನ ತಲೆಯ ಕೂದಲನ್ನು ತನ್ನ ಬೆರಳುಗಳಿಂದ ಸವರುತ್ತಿದ್ದಳು.

"ನಿನ್ನ ಹೆಸರೇನು ಪುಟ್ಟಿ?'' ಎಂದೆ. ಬ್ಯಾಗಿನಲ್ಲಿದ್ದ ಚಾಕ್ಲೆಟ್ ಪ್ಯಾಕ್‌ಗಳನ್ನು ತೆಗೆ
"ಹತ್ತಿರ ಬಾ, ತಗೊ'' ಎಂದೆ ಮಗು ಹತ್ತಿರ ಬಂದಿತು. ಥೇಟ್ ವಸಂತನಂತೆಯೇ ಇತ
"ನಿನ್ನ ಹೆಸರೇನು ಕಂದ?''

"ವಸಂತ'' ಎಂದಿತು ಮುದ್ದಾಗಿ.

ನನ್ನ ಮೈಯಲ್ಲಿಯ ರಕ್ತವೆಲ್ಲ ಎದೆಗೆ ನುಗ್ಗಿ ಬಂದಂತಾಯ
ಸ್ಥಿಮಿತದಿಂದರಬೇಕೆಂದುಕೊಂಡಿದ್ದೆ. ಆದರೆ ಅಳು ನುಗ್ಗಿ ಬಂತು. ಗಂಟಲನ್ನು ಯಾರೋ ಬ
ಹಿಡಿದಂತಾಯ್ತು.

"ಯಾಕೆ ಅಳುತ್ತೀರಿ?'' ಎಂದಳಾಕೆ.

"ಜಲಜ ನಾನು ನನ್ನ ವಸಂತನನ್ನು ಕಳೆದುಕೊಂಡಿರದಿದ್ದರೆ ಈ ಮನೆ ಜೈಲಾದರ
ಇಲ್ಲಿಯೇ ಇರುವ ಸಾಧ್ಯತೆಯಿತ್ತು. ಜೈಲಾದರೂ ನನ್ನ ಮಕ್ಕಳಿಗಾಗಿ ನಾನು ಜೀವಿಸುತ್ತಿದ್ದ
ಎಂದೆ.

"ಅಳ್ಬೇಡಿ, ನನಗೆ ಏನು ಹೇಳಬೇಕೋ ತಿಳಿಯೋಲ್ಲ. ನಾನು ನಿಮ್ಮಷ್ಟು ಓದಿಲ್ಲ. ಆದರ
ನಿಮ್ಮನ್ನು ಸಂತೈಸುವಷ್ಟು ಹೃದಯವಿದೆ. ಏಳಿ ಸ್ನಾನ ಮುಗಿಸಿ ಬನ್ನಿ, ನಾನು ಅಡು
ಮುಗಿಸುತ್ತೇನೆ. ಊಟ ಮಾಡಿ ವಿಶ್ರಾಂತಿ ತೆಗೆದುಕೊಳ್ಳಿ'' ಎಂದಳು. ಟವೆಲು, ಬಟ್ಟೆ, ಸೋ
ಹಿಡಿದು ಬಚ್ಚಲು ಮನೆಗೆ ಹೋದೆ. ಶವರ್ ಕೆಳಗೆ ತಲೆಯೊಡ್ಡಿ ನಿಂತಾಗ ಮನಸ್
ಬೇಗುದಿಯೆಲ್ಲ ಹೊರಟು ಹೊದಂತೆನಿಸಿತು. ಸ್ನಾನ ಮುಗಿಸಿ ಹೊರಬಂದೆ. ಒಳಗೆ ಪಾತ್ರೆ
ಸದ್ದು, ಮಿಕ್ಸಿಯಲ್ಲಿ ಏನೋ ಹಾಕಿರಬೇಕು. ಗರ್ ಎನ್ನುವ ಸದ್ದು. ನಡುವೆ ವಸಂತನ ಅಳು
ಸದ್ದು, ನಾನು ಒಳ ಹೋದೆ ವಸಂತ ಅವರಮ್ಮನ ಸೀರೆ ಜಗ್ಗುತ್ತ ಎತ್ತಿಕೋ ಎಂದು ಅಳುತ್ತಿತ

"ಜಲಜ ನೀವು ಮಗುವನ್ನೆತ್ತಿಕೊಳ್ಳಿ, ನಾನು ಅಡುಗೆ ಮಾಡುತ್ತೇನೆ'' ಎಂದೆ.

"ಬೇಡ, ನೀವು ದಣಿದು ಬಂದಿದ್ದೀರಾ, ಇದೇನು ಮಹಾ ದಿನಾಲೂ ಮಾಡುವುದೆ
ಎನ್ನುತ್ತ ಮಗುವನ್ನೆತ್ತಿಕೊಂಡು ಗ್ಯಾಸ್ ಹೊತ್ತಿಸಿದಳು.

"ಚೈತ್ರ ಎಲ್ಲಿ?''

"ಸ್ಕೂಲಿಗೆ ಹೋಗಿದ್ದಾಳೆ. ಮಧ್ಯಾಹ್ನ ಬಂದುಬಿಡುತ್ತಾಳೆ. ನೀವು ಕುಳಿತುಕೊ
ಇಲ್ಲಿಯೇ ಸ್ಟೂಲು ಹಾಕುತ್ತೇನೆ'' ಎಂದು ಚಿಕ್ಕ ಸ್ಟೂಲು ಹಾಕಿದಳು.

"ಕೆಲಸದವರು ಇಲ್ಲವೆ, ನಿಂಗಿ ಇದ್ದಳಲ್ಲ.'' ಹಿಂದಿನದನ್ನು ನಾನು ಕೆದಕಬಾರದೆಂದುಕೊಂಡಿ
ಆದರೆ ತಾನಾಗಿಯೇ ನನ್ನ ಬಾಯಿಂದ ಮಾತುಗಳು ಹೊರಬಿದ್ದವು. ಎಂತಾ ನಿರ್ಭಾವದಿಂ
ಹೇಳಿದ್ದಳು.

"ನಿಂಗಿಯೇ, ಅವಳು ಈಗಿಲ್ಲ. ನಾನು ಮದುವೆಯಾಗಿ ಬಂದ ಮೂರು ತಿಂಗಳ
ಅವಳನ್ನು ಬಿಡಿಸಿದರು. ನಂದಿನಿ ನಾನು ನಿಮ್ಮನ್ನು ಅಕ್ಕಾ ಎನ್ನಬಹುದೆ?'' ಎಂದಾಳಾಕೆ.

ನಾನು ವಿಷಾದದಿಂದ ನಕ್ಕಿದ್ದೆ."ವಾರಿಗೆಯಿಂದ ನಾನು ನಿಮ್ಮ ಅಕ್ಕನೇ ತಾನೆ ಜಲ
ನನ್ನನ್ನು ಸವತಿ ಎಂದು ಮಾತ್ರ ತಿಳಿಯಬೇಡ. ಯಾವಾಗ ಸಂದೀಪ ನನ್ನನ್ನು ನಿರ್ದಾಕ್ಷಿಣ್ಯವಾ
ಈ ಮನೆಯಿಂದ ಹೊರಗೆ ತಳ್ಳಿದನೋ ಅಂದೇ ನಾನವನ ಹೆಂಡತಿಯಾಗಿ ಉಳಿಯಲಿಲ
ಆದರೂ ನಾನು ನಿನ್ನ ಅಕ್ಕನೇ ಕಣಮ್ಮಾ. ಅಲ್ಲದೆ ಅರಿತೋ, ಅರಿಯದೆಯೋ ನೀನು ನ

ಮಗುವಿನ ತಾಯಿಯಾಗಿದ್ದೀಯಾ, ಆ ಖುಣ..." ನಾನು ಹೇಳುತ್ತಿದ್ದಂತೆ ನನ್ನ ಗಂಟಲಿನ ಧ್ವನಿ ಯಾಕೋ ಒಡೆಯುತ್ತಿದೆ ಅನ್ನಿಸಿತು. ಜಲಜ ಹತ್ತಿರ ಬಂದು ನನ್ನ ಕೈ ಹಿಡಿದಳು.

"ಸಮಾಧಾನವಾಗಿರಿ ಅಕ್ಕ, ನೋಡಿ ನನಗೆ ನನ್ನ ಬಂಧು ಬಳಗ ಅನ್ನುವವರು ಯಾರೂ ಇಲ್ಲ. ಇದ್ದ ಒಬ್ಬ ತಾಯಿ ಆರು ತಿಂಗಳ ಹಿಂದೆ ತೀರಿಹೋದರು. ನಾವು ತುಂಬ ಬಡವರು. ಈ ಮನೆಯ ಅಡುಗೆ ಕೆಲಸ ಮಾಡಿಕೊಂಡು ಮಗುವನ್ನು ನೋಡಿಕೊಂಡು ಹೋದರೆ ಸಾಕೆಂದು ಇವರು ನನ್ನನ್ನು ಮದುವೆಯಾದರಂತೆ. ಆಮೇಲೆ ಕೆಲವು ತಿಂಗಳು ನಿಂಗಿ ಇದ್ದಳು. ಅವಳಿಗೆ ನಿಮ್ಮನ್ನು ಕಂಡರೆ ಬಹಳ ಆಸೆಯ್ಯಂತೆ. ಒಮ್ಮೆ ನಿಮ್ಮ ಬಗ್ಗೆ ಏನೋ ಹೇಳುತ್ತ ಅಳುತ್ತಿದ್ದ ನಿಂಗಿಯ ಮಾತನ್ನು ಇವರು ಸದ್ದಿಲ್ಲದೆ ಬಂದವರು ಕೇಳಿಸಿಕೊಂಡು ಇನ್ನೊಮ್ಮೆ ಅವಳ ಸುದ್ದಿಯನ್ನು ಈ ಮನೆಯಲ್ಲಿ ಎತ್ತಬೇಡ ಎಂದು ಅವಳನ್ನು ಕೆಲಸದಿಂದಲೇ ತೆಗೆದು ಹಾಕಿದರು. ಹೊರಗೆಲಸಕ್ಕೆ ಒಬ್ಬ ಹೆಂಗಸಿದ್ದಾಳೆ. ಅವಳು ಮೂಗಿ ಆದರೆ ಒಳಗಿನ ಎಲ್ಲ ಕೆಲಸ ಮಾಡಿಕೊಂಡು ಮಕ್ಕಳನ್ನು ನೋಡಿಕೊಂಡು ಹೋಗುವುದು ನನಗೆ ಕಷ್ಟ ನಿಜ. ಈಗ ಮತ್ತೆ ಆರು ತಿಂಗಳಾಗಿದೆ. ಆದರೆ ಅದಕ್ಕಾಗಿಯೇ ನನ್ನನ್ನು ತಂದಮೇಲೆ ನಾನು ಅವರ ಅನ್ನ ತಿನ್ನುತ್ತಿರುವುದಕ್ಕೆ ನಿಯತ್ತಿನಿಂದ ದುಡಿಯಬೇಕೆಂಬುದೇ ನನಗೆ ಗೊತ್ತಕ್ಕಾ."

ಅಳುತ್ತಿದ್ದಾಳೆಯೇ ಜಲಜ ಅನ್ನಿಸಿತು. ಇಲ್ಲ ಅಳುತ್ತಿಲ್ಲ, ಯಾವ ಭಾವನೆಗಳಿಲ್ಲದ ನಿರ್ಭಾವ ದುಡಿಯುವ ಯಂತ್ರದ ಪ್ರತೀಕವಾಗಿ ಮಾತ್ರ ನಿಂತಿದ್ದಾಳೆಯೇ, ಇಷ್ಟೇನೇ ಹೆಣ್ಣಿನ ಜನ್ಮ ಅನ್ನಿಸಿತು.

"ಆದರೆ ಇದು ಸಂದೀಪನ ಪ್ರೆಸ್ಟೀಜ್ ಪ್ರಶ್ನೆಯಲ್ಲವೆ ಜಲಜ."

"ಅವರ ಗೌರವ, ಮರ್ಯಾದೇನ ಅವರು ಚೆನ್ನಾಗಿ ಕಾಪಾಡಿಕೊಂಡಿದ್ದಾರೆ ಅಕ್ಕ. ಪಾರ್ಟಿ, ಕ್ಲಬ್ಬು, ಕುಣಿತ, ಹುಡುಗಿಯರು..." ಅವಳು ವ್ಯಥೆಯಿಂದ ನಗುವಾಗ ಅವಳ ಕಣ್ಣಂಚಿನಲ್ಲಿ ನೀರಿತ್ತೆ?

ನಾನು ಮಾತನಾಡಲಿಲ್ಲ. ಅವಳ ಅಡುಗೆ ಮುಗಿದು ಇಬ್ಬರೂ ಊಟ ಮುಗಿಸಿ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ರೂಮಿಗೆ ಹೋದೆ. ಕಣ್ಣಿಗೆ ಕಣ್ಣು ಹತ್ತಲಿಲ್ಲ. ಚೈತ್ರಳನ್ನು ಕಳಿಸುವ ಬಗ್ಗೆ ಸಂದೀಪ ಜಲಜಳ ಹತ್ತಿರ ಏನು ಹೇಳಿದ್ದಾನೋ ಅಥವಾ ಬೇಕೆಂದೇ ಮುಖ ತಪ್ಪಿಸಿಕೊಂಡು ಹೋಗಿದ್ದಾನೆಯೆ?

ಹಾಗಿದ್ದರೆ ಚೈತ್ರಳನ್ನು ನಾ ಬಿಟ್ಟು ಹೇಗಿರಲಿ? ಹೊರಗೆ ಮಾತಿನ ಧ್ವನಿಯಾಯ್ತು. ಎದ್ದು ಹೊರಬಂದೆ. ರೂಮಿನ ಬಾಗಿಲಲ್ಲಿ ನಿಂತೆ. ನನ್ನೆದೆಯಲ್ಲಿ ಒತ್ತಿಬಂದ ಭಾವಗಳು.

"ಚೈತ್ರ." ನನ್ನ ತುಟಿ ಮಾತ್ರ ಅಲುಗಿದವು. ಎರಡೂ, ಮೂರು ವರ್ಷಗಳಲ್ಲಿ ಎಷ್ಟು ಎತ್ತರವಾಗಿದ್ದಾಳೆ. ಥೇಟು ಸಂದೀಪನದೆ ಪ್ರತಿರೂಪ. ಅಗಲವಾದ ಕಣ್ಣುಗಳು, ಬಿಗಿದ ತುಟಿಗಳಲ್ಲಿ ಪ್ರತಿಷ್ಠೆಯ ಸೊಗಡು, ತುಂಬಿದ ಕೆನ್ನೆಗಳು.

ಭಾವೋದ್ವೇಗದಿಂದ ಹತ್ತಿರ ಬಂದು ಅವಳ ಕೈ ಹಿಡಿದು "ಬಾಮ್ಮಾ" ಎಂದೆ. ಅವಳು ನನ್ನ ಕೈ ಬಿಡಿಸಿಕೊಂಡು ಬ್ಯಾಗ್ ಒಳಗಿಟ್ಟು, ಯೂನಿಫಾರಂ ಬಿಚ್ಚಿ ನವೀನ ರೀತಿ ಫ್ರಾಕ್ ಹಾಕಿಕೊಂಡು "ಅಮ್ಮ, ಹಸಿವಾಗಿದೆ ಊಟ ಹಾಕು" ಎಂದಳು ಜಲಜಳ ಹತ್ತಿರ ಹೋಗಿ ಅವಳ ಕೈ ಹಿಡಿದು. ಮತ್ತೆ ವಸಂತನ ಹತ್ತಿರ ಹೋಗಿ "ಪಾಪು, ನಾನೀವತ್ತು ನಿನಗೇನು

ತಂದೀದ್ದಿನಿ ಗೊತ್ತೇನೋ? ನನ್ನ ಫ್ರೆಂಡ್ ಬರ್ತಡೇ ಇತ್ತು. ಡಬ್ಬಲ್ ಚಾಕ್ಲೆಟ್ ಕೊಟ್ಟರು,ಇಕಾ ನಿನಗೊಂದು. ಬಾಯಿ ತೆಗೆ'' ಎಂದು ಅವನ ಬಾಯಿಗಿಟ್ಟಳು.

ನನ್ನ ವಸಂತನೂ ಇದ್ದಿದ್ದರೆ ಇದೇ ಚೈತ್ರಳನ್ನು ತಂಗಿ ಎಂದು ಎಷ್ಟು ಮುದ್ದು ಮಾಡುತ್ತಿದ್ದ. ಹೀಗೆಯೇ ಸ್ಕೂಲಿನಿಂದ ಬರುವಾಗ ಅಮ್ಮ ಚೈತ್ರ ಪುಟ್ಟಿಗೆ ಎಂದು ಏನಾದರೂ ಹಿಡಿದು ತರುತ್ತಿದ್ದ. ಅತ್ತರೆ ಅವಳ ಕಣ್ಣೊರಸಿ "ಅಳ್ಬೇಡ ಪುಟ್ಟಿ'' ಎನ್ನುತ್ತಿದ್ದ.

ನನ್ನ ಕಣ್ಣಲ್ಲಿ ನೀರಿಳಿದವು.

"ಯಾಕಕ್ಕಾ?'' ಅಂದಳು ಜಲಜ.

"ನನ್ನ ವಸಂತನ ನೆನಪಾಯ್ತು ಕಣಮ್ಮಾ.''

"ಅಳಬೇಡಿ ಅಕ್ಕ, ಅತ್ತರೆ ಮನಸ್ಸಿನ ದುಃಖ ಹೆಚ್ಚಾಗುತ್ತದೆ. ನಾನು ಈ ಮನೆಗೆ ಇವರ ಕೈ ಹಿಡಿದು ಬಂದ ಮೇಲೆ ಒಂದು ವೇದಾಂತಕ್ಕೆ ಕಟ್ಟು ಬಿದ್ದೀದ್ದೀನಿ. ನಾನು ಕಲ್ಲು ಬಂಡೆಯಾಗಿಬಿಡಬೇಕು. ಅಂದರೆ ಅಳು, ನಗು, ಸುಖ, ದುಃಖ ಯಾವ ಅಲೆಗಳು ಬಡಿದರೂ ಬಂಡೆಯಂತಿರಬೇಕು ಎಂದು ಅಕ್ಕ. ಇವು ನಿಮ್ಮ ಮಕ್ಕಳೇ. ಚೈತ್ರ ಇನ್ನು ನಿಮ್ಮ ಜೊತೆಯೆ ಇರುತ್ತಾಳೆ ವಸಂತ ಇಕ್ಕೊಳಿ. ಇವನು ನಿಮ್ಮ ವಸಂತನೇ ಅಂದುಕೊಂಡು ಅಂವ ನಿಮ್ಮಲ್ಲಲ್ಲ ನನ್ನಲ್ಲಿ ಬೆಳೆಯುತ್ತಿದ್ದಾನೆ ಅಷ್ಟೆ ಅಂದುಕೊಳ್ಳಿ.''

"ಜಲಜ ಎಂಥ ಹೃದಯವಮ್ಮಾ ನಿನ್ನದು'' ಎಂದೆ ಅವಳ ಕೈ ಹಿಡಿದು. ರೂಮಿಗೆ ಹೋಗಿ ನನ್ನ ಬ್ಯಾಗು ತೆಗೆದು ಮಕ್ಕಳಿಗಾಗಿ ತಂದಿದ್ದ ಆಟಿಗೆ ಸಾಮಾನುಗಳನ್ನೆಲ್ಲ ಅವರಿಬ್ಬರ ಮುಂದೆ ಹರಹಿದೆ. ಜಲಜ ಹತ್ತಿರ ಬಂದಳು ಚೈತ್ರಳನ್ನು ನನ್ನ ಹತ್ತಿರ ಕೂಡಿಸಿ "ಚೈತ್ರ ಇವರು ನಿನ್ನ ಅಮ್ಮ. ನಿನ್ನ ಪಪ್ಪ ಹೇಳಿದ್ದಾರಲ್ಲವೇ,ನೀನಿನ್ನು ಇವರ ಜೊತೆ ಇರಬೇಕು. ಇವರೊಡನೆ ಇವರ ಊರಿಗೆ ಹೋಗು. ಅಲ್ಲಿ ದೊಡ್ಡ ಸಮುದ್ರವಿದೆ. ಚಿನ್ನ ನಿನಗೆ ಏನು ಬೇಕೋ ಅದೆಲ್ಲ ತೆಕ್ಕೋಡ್ತಾರೆ.''

"ಏನೂ ಬೇಡ, ನನಗೆ ಪಪ್ಪ ಎಲ್ಲ ತಕ್ಕೊಡ್ತಾರ.''

"ಆದರೆ ಈ ಅಮ್ಮ ಕೂಡ ತುಂಬ ಒಳ್ಳೆಯವರು ಮಗೂ, ಅವರು ಅವರು ನಿನ್ನ ನಿಜವಾದ ಅಮ್ಮನೇ.''

"ಆದರೆ ನೀನು?''

"ನಾನು ನಿನ್ನ ಅಮ್ಮನೇ ಚಿನ್ನ.''

"ಬಾ ಪುಟ್ಟಿ'' ಎನ್ನುತ್ತ ಅವಳನ್ನು ಹತ್ತಿರಕ್ಕೆಳೆದುಕೊಂಡೆ. ಅವಳ ಎಳೆ ದೇಹದ ಸ್ಪರ್ಶ ಮತ್ತೆ ನನ್ನಲ್ಲಿ ಎಂತಾ ಚೈತನ್ಯ ತುಂಬಿತು. ವಸಂತನನ್ನು ಹತ್ತಿರ ಕರೆದೆ. ಎರಡು ತೋಳುಗಳಿಂದ ಇಬ್ಬರನ್ನೂ ಬಳಸಿ ಎದೆಗೊತ್ತಿಕೊಂಡಾಗ ಎಂತಾ ತಾಯ್ತನ ತುಂಬಿತ್ತು. ನಾನು ಇಷ್ಟು ದಿನ ಈ ಮಗುವನ್ನು ಬಿಟ್ಟು ಹೇಗಿದ್ದೆ ಎನಿಸಿತು.

"ಚೈತ್ರ, ನೀನು ಬರಲ್ಲ ಎಂದರೆ ನನಗೆ ಅಳು ಬರತ್ತಮ್ಮ'' ಎಂದೆ. ನನ್ನ ಕಣ್ಣಲ್ಲಿಯ ನೀರನ್ನು ಕಂಡು ಅವಳಿಗೆ ಏನನ್ನಿಸಿತೋ ಹತ್ತಿರ ಬಂತು.

ತನ್ನ ಪುಟ್ಟ ಕೈಗಳಿಂದ ನನ್ನ ಕಣ್ಣೊರಿಸಿ, "ಅಳ್ಬೇಡ ಮಮ್ಮಿ, ನಾನು ಬರ್ತೀನಿ'' ಅಂದಿತು. ಅವಳನ್ನು ಅಪ್ಪಿಕೊಂಡು ಮುದ್ದಿಟ್ಟೆ

ಸಂದೀಪ ಎಲ್ಲವನ್ನೂ ಮೊದಲೇ ಹೇಳಿಬಿಟ್ಟಿದ್ದಾನೆ. ಮೌನವಾಗಿ ಎಲ್ಲವನ್ನು ಮಾತಿಲ್ಲದೆ ನಿರ್ವಹಿಸುವುದೇ ಅವನ ಕಾರ್ಯ ವೈಖರಿ.

ಅಂದು ಮೊದಲ ಬಾರಿ ಅವನನ್ನು ಕಾಣಲು ಬಂದಾಗ ನನ್ನ ಅನುಮತಿಯಿಲ್ಲದೆ, ತನ್ನ ಒಪ್ಪಿಗೆಯಿದೆ ಎಂದು ನನ್ನ ಕೆನ್ನೆಗೆ ಮುದ್ದಿಟ್ಟು, ಅದು ತನ್ನ ಹಕ್ಕಿನದು ಎಂದು ನಡೆದುಕೊಂಡಿದ್ದ.

ಮೊದಲ ರಾತ್ರಿಯೇ ನನ್ನ ಕಲೆಯನ್ನು, ಬಣ್ಣವನ್ನು ತಿರಸ್ಕರಿಸಿ ನನ್ನ ದೇಹದ ಸ್ವಾಮಿತ್ವವನ್ನು ಮಾತ್ರ ಪ್ರತಿಷ್ಠಿಸಿದ್ದ.

ಮಾತಿಲ್ಲದೆ ನನ್ನನ್ನು ಒಂದು ಮಾತೂ ಕೇಳದೆ ನನ್ನ ಚಿತ್ರದ ಎಲ್ಲ ಪರಿಕರಗಳನ್ನು ಹಿಂದಿನ ರೂಮಿಗೆ ಹಾಕಿಸಿ ಕೈ ತೊಳೆದುಕೊಂಡಿದ್ದ.

ಅಂದು ಯಾವ ತಪ್ಪನ್ನೂ ಮಾಡದ ನನ್ನನ್ನು ಯಾವ ಮಾತೂ ಆಡದೆ ಹೊರಹಾಕಿ ತನ್ನ ಕೃತಿ ತೋರಿಸಿಬಿಟ್ಟ. ಅವನ ಪ್ರತಿಷ್ಠೆಯ ಬಿರುದು ಬಾವಲಿಗಳಲ್ಲಿ ಕೈ ಹಿಡಿದ ಹೆಣ್ಣಿನ ಮನಸ್ಸು ಅರಿವಾಗಲಿಲ್ಲ.

ಇದೀಗ,

ಚೈತ್ರಳನ್ನು ಹತ್ತಿರ ಕರೆದು ರಮಿಸಿ ನಿನ್ನ ಅಮ್ಮ ಚಿನ್ನ ನಾನು ಎಂದು ಹೇಳುವಾಗಿನ ಅಂತರ್ಯದ ತುಮುಲ, ಒಂಬತ್ತು ತಿಂಗಳು ಅವಳನ್ನು ಹೊಟ್ಟೆಯಲ್ಲಿ ಹೊತ್ತು ಉಂಡ ನೋವು ಮತ್ತೆ ಮರುಕಳಿಸಿದಂತಾಯ್ತು.

ಅವತ್ತೆ ಹೋಗಬೇಕೆಂದುಕೊಂಡೆ, ಆದರೆ ಜಲಜ ಬಿಡಲಿಲ್ಲ. "ಇದೊಂದು ರಾತ್ರಿ ಇರಿ ಅಕ್ಕ, ನನಗೆ ನನ್ನ ಮನೆಯಿಲ್ಲ. ನನ್ನವರೆನ್ನುವವರು ಯಾರೂ ಇರಲಿಲ್ಲ" ಎಂದಳು.

ಜೋಡಿಸಿದ ಮಂಚದಲ್ಲಿ ಎಲ್ಲರೂ ಮಲಗಿ ಇರುಳು ದೀಪದ ಬೆಳಕಿನಲ್ಲಿ ಎಷ್ಟೊಂದು ಮಾತುಗಳನ್ನು ಆಡಿದೆವು. ಅವಳ ಒಂದು ಮಾತು ಮಾತ್ರ ನನ್ನನ್ನು ಹಿಡಿದು ಅಲುಗಿಸಿತು.

"ಅಕ್ಕ ಹೀಗೆ ಕೇಳುತ್ತೇನೆಂದು ಏನೂ ಅಂದುಕೊಳ್ಳಬೇಡಿ. ನಿಮ್ಮ ಕಲೆಗೆ ಪ್ರೋತ್ಸಾಹ ಕೊಟ್ಟು ನಿಮಗೆ ಆಧಾರವಾಗಿ ನಿಂತವರ ಜೊತೆಯಲ್ಲೇ ನೀವು ಹೋದಿರಿ. ಆದರೆ ನಿಮಗೆ ಮತ್ತೆ ಅವರಿಂದ ಮಕ್ಕಳಾಗಲಿಲ್ಲವೆ? ಚೈತ್ರಳನ್ನು ಅವರೂ ತಮ್ಮ ಮಗುವಂತೆ..."

ನಾನು ಅವಳ ಬಾಯಿಯ ಮೇಲೆ ಕೈಯಿಟ್ಟೆ ನನ್ನ ಎದೆಯ ನಾಡಿಯನ್ನು ಹಿಡಿದು ಅಲುಗಿಸಿತ್ತು ಆ ಮಾತು.

"ಜಲಜ, ಈ ಮಾತನ್ನಾಡಿದರೆ ನಮ್ಮ ಪವಿತ್ರ ಸ್ನೇಹಕ್ಕೆ ನಮ್ಮ ಸಂಬಂಧಕ್ಕೆ ಕಲಂಕ ಹಚ್ಚಿದಂತೆ. ನಿಜ ಮೊದಲಿನಿಂದಲೇ ನಾವಿಬ್ಬರೂ ಕಾಲೇಜಿನಲ್ಲಿದ್ದಾಗಿನಿಂದಲೂ ಸ್ನೇಹಿತರು. ಅವನು ನನ್ನ ಕಲೆಯನ್ನು ಯಾವಾಗಲೂ ಮೆಚ್ಚುತ್ತಿದ್ದ. ನಾವಿಬ್ಬರೂ ಜೊತೆಯಾಗೇ ಓಡಾಡುತ್ತಿದ್ದೆವು. ಸಂದೀಪನ ಕೈ ಹಿಡಿದು ಬಂದಾಗ, ನನ್ನ ಗಂಡ ನನ್ನ ಭಾವನೆಗಳನ್ನು, ನನ್ನ ಬಣ್ಣಗಳನ್ನು ಸುಟ್ಟುಬಿಟ್ಟ ಮತ್ತೆ ಅದಕ್ಕೆ ಜೀವ ಕೊಟ್ಟಿದ್ದು ವಿವೇಕ. ಇವನು ಸಂಶಯ ಪಿಶಾಚಿ ಕಾರಣಕ್ಕಾಗಿ ಕಾಯುತ್ತಿದ್ದ. ವಸಂತ ನನ್ನ ಕಂದ ಹೋದ ನೆಪವೊಡ್ಡಿ ನನ್ನನ್ನು ಹೊರಹಾಕಿದ. ನಮ್ಮ ಸ್ನೇಹಕ್ಕೆ ಕಲಂಕ ಹಚ್ಚಿ ಮಾತನಾಡಿದ. ಹಾದರದ ಎಲ್ಲ ಬಿರುದುಗಳನ್ನೂ ನನಗೆ

ತೊಡಿಸಿದ. ಅವನು ಬೀದಿಗೆ ದಬ್ಬಿದಾಗ ಕೈ ಹಿಡಿದುಕೊಂಡು ಆಸರೆ ಕೊಟ್ಟಿದ್ದು ವಿವೇಕ ನಿಜ. ಆದರೆ ಗಂಡ ಹೆಂಡತಿ ಸಂಬಂಧವಾಗಲಿ, ಬೇರೆ ಯಾವುದೆ ಸಂಬಂಧವಾಗಲಿ ಅಷ್ಟು ಬೇಗ ಅರ್ಥ ಕಳೆದುಕೊಳ್ಳುವುದಿಲ್ಲ ಜಲಜ. ನಾವಿಬ್ಬರೂ ಸಂಬಂಧ ಬೆಳೆಸುವಂತಿದ್ದರೆ ಕಾಲೇಜಿನಲ್ಲಿದ್ದಾಗಲೇ ಅವನನ್ನು ಮದುವೆಯಾಗಬಹುದಿತ್ತು. ಗಂಡು ಹೆಣ್ಣು ಸ್ನೇಹದಿಂದ ಓಡಾಡಿದ ಮಾತ್ರಕ್ಕೆ ದೈಹಿಕ ಸಂಬಂಧ ಬೆಳೆದುಬಿಡುವುದಿಲ್ಲ ಅಥವಾ ದೈಹಿಕ ಸಂಬಂಧದಿಂದ ಮಾತ್ರ ಗಂಡ ಹೆಂಡತಿಯರಾಗಿ ಬಿಡುವುದಿಲ್ಲ ಜಲಜ. ಸಮಾಜ, ಸುತ್ತಲಿನ ಜನ ಏನಾದರೂ ತಿಳಿದುಕೊಂಡಿರಲಿ ನಾವಿಬ್ಬರೂ ಇನ್ನೂ ಶುದ್ಧವಾಗಿಯೇ ಇದ್ದೇವೆ. ಅದ್ಹೇಗೆ ಸಾಧ್ಯ ಎಂದು ನೀನು ಕೇಳಬಹುದು. ಶಾರದಾ ದೇವಿ, ರಾಮಕೃಷ್ಣರು ಇರಲಿಲ್ಲವೆ? ನಮ್ಮನ್ನು ಅವರಿಗೆ ನಾವು ಹೋಲಿಸಿಕೊಳ್ಳುತ್ತಿಲ್ಲ. ಆದರೆ ಒಂದು ಮಾತ್ರ ನಿಜ. ಮದುವೆಯಾಗಿ ಬಂದ ಮೇಲೆ ನಿನಗೆ ಅನುಭವವಾಗಿರಬೇಕು. ಜಲಜ, ಸಂದೀಪನ ದೈಹಿಕ ಆಶೆಗಳು ಹಾಸಿಗೆಯಲ್ಲಿ ಒಂದಾದ ಮಾತ್ರಕ್ಕೆ ಯಾರೂ ಗಂಡ ಹೆಂಡತಿಯರಾಗಿಬಿಡುವುದಿಲ್ಲ ಅಲ್ಲವೆ? ಮದುವೆಯಾದಾಗಿನಿಂದ ಎಷ್ಟೋ ರಾತ್ರಿಗಳನ್ನು ನಾನು ವ್ಯಭಿಚಾರಿಯಾಗಿ ಅವನೊಡನೆ ಕಳೆದುಬಿಟ್ಟಿದ್ದೇನೆ. ಮನಸ್ಸಿನಲ್ಲಿ ಅವನನ್ನು ದ್ವೇಷಿಸುತ್ತ, ಅವನ ಆಶೆಗೆ ಒಗ್ಗೊಟ್ಟು ಅವನನ್ನು ಕೂಡಿದ್ದು ವ್ಯಭಿಚಾರವಲ್ಲದೆ ಮತ್ತೇನು, ವ್ಯಭಿಚಾರದಿಂದ ನಾನು ನನ್ನ ದೇಹವನ್ನೇ ಹೇಸಿಕೊಂಡಂತೆ ಮಾಡಿದ್ದೇನೆ. ಇನ್ನು ನಾನು ವಿವೇಕ ಕೂಡುವುದು ಹೇಗೆ ಸಾಧ್ಯ? ಆದರೂ ವಿವೇಕನನ್ನು ನಾನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ, ಒಂದೊಂದು ಬಾರಿ ಅವನೇ ನನಗೆ ತಾಯಿಯಾಗುತ್ತಾನೆ, ತಂದೆಯಾಗುತ್ತಾನೆ, ಸ್ನೇಹಿತನಾಗುತ್ತನೆ. ನನ್ನ ಗಂಡನೂ ಕೂಡ ಆಗುತ್ತಾನೆ ಗೊತ್ತೇನು? ಯಾವಾಗಲೂ ನನ್ನ ಜೊತೆಗೂಡಿ ಒಂದೇ ದಾರಿಯಲ್ಲಿ ಹೆಜ್ಜೆ ಹಾಕುವುದರಿಂದ.''

ಹೇಳುತ್ತ ಹೇಳುತ್ತ ನನಗೆ ತೀರ ಆಯಾಸವಾದಂತಾಯ್ತು. ಮನೆಯ ಸುತ್ತಲೂ ಕತ್ತಲು ಕವಿದಿದ್ದರೂ ಇರುಳು ದೀಪದ ಬೆಳಕು ಮಾತ್ರ ನಮ್ಮೆಲ್ಲರ ಮೇಲೆ ಮಂಕಾಗಿ ಬಿದ್ದಿತ್ತು. ವಸಂತ, ಚೈತ್ರಳ ಮೇಲೆ ಕಾಲು ಹಾಕಿ ಮಲಗಿದ್ದ. ಚೈತ್ರ ನನ್ನನ್ನು ತಬ್ಬಿ ಹಿಡಿದು ಮಲಗಿದ್ದಳು.

ನನ್ನ ಮಾತಿಗೆ ಯಾವ ಉತ್ತರವನ್ನೂ ಅವಳು ಕೊಡಲಿಲ್ಲ. ತನ್ನ ಉಬ್ಬಿದ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡು ತಿರುಗಿ ಮಲಗಿದ್ದಳು. ಮತ್ತೆ ಗಳಿಗೆಯ ಮೇಲೆ ಈ ಕಡೆ ತಿರುಗಿ ಕಣ್ಣೊರಿಸಿಕೊಂಡು ಹೇಳಿದಳು.

"ನಿಮ್ಮನ್ನು ತಪ್ಪಾಗಿ ತಿಳಿದುಕೊಂಡಿದ್ದೆ ಕ್ಷಮಿಸಿಬಿಡಿ ಅಕ್ಕ, ಇದೊಂದು ವಿಷಯದಲ್ಲಿ ಮಾತ್ರ'' ಎಂದಳು.

ಅವತ್ತು ಕಣ್ತುಂಬ ನಿದ್ದೆ ಮಾಡಿದ್ದೆ.

ಚೈತ್ರಳನ್ನು ಮದ್ರಾಸಿಗೆ ಕರೆತಂದಿದ್ದೆ. ನಿಲ್ದಾಣಕ್ಕೆ ವಿವೇಕ ಬಂದಿದ್ದ. ಚೈತ್ರಳನ್ನು ಕಂಡವನೇ ಎತ್ತಿಕೊಂಡ. "ದೊಡ್ಡಾದಾಗಿದೆ ನಮ್ಮ ಚೈತ್ರ ಪುಟ್ಟಿ'' ಎಂದು ಮುದ್ದಿಸಿದ್ದ. ತನ್ನದಲ್ಲದ ವಸ್ತುವನ್ನು ತನ್ನದೆಂದುಕೊಂಡು ಸಡಗರ ಪಡುವುದರಲ್ಲೇ ಅವನ ಬದುಕು ಕಳೆದಿತ್ತು.

ಚೈತ್ರ ಬಂದ ಕೆಲವು ದಿನಗಳು ಕಳೆದು ಹೋಗುತ್ತಿದ್ದ ದಿನಗಳು ಮತ್ತೆ ಮತ್ತೆ ಹುಟ್ಟಬೇಕೆಂಬ ಆಶೆ.

ಬೆರಳ ಸಂದಿಯಿಂದ ಸುರಿದು ಹೋಗುವ ನೀರು ಮರಳನ್ನು ಸೋರಿ ಹೋಗದಂತೆ



ತಡೆಹಿಡಿಯುವ ಹಂಬಲ.

ಸಮುದ್ರ ದಂಡೆಗುಂಟ ಸಂಜೆಯ ಹೊತ್ತು ಅವಳ ಪುಟ್ಟ ಕೈ ಹಿಡಿದು ನಡೆಯುತ್ತಿದ್ದೆ. ಅಲೆಗಳೊಡನೆ ಆಟವಾಡುತ್ತಿದ್ದೆವು. ಸಮುದ್ರದ ಮೇಲೆ ಬೀಳುವ ಸೂರ್ಯನ ಕಿರಣಗಳು. ಕಿರಣಗಳ ಹೊಳಪಿನಿಂದ ಬಂಗಾರದ ಕಾಂತಿಯಿಂದ ಜಳಪಿಸುವ ಅಲೆಗಳನ್ನು ತೋರುತ್ತಿದ್ದೆ.

ಸಮುದ್ರ ದಂಡೆ, ಮರಳು, ಮರಳಿನ ಮನೆ. ಅಲೆಗಳು, ಸೂರ್ಯ, ನಾನು, ಚೈತ್ರ, ವಿವೇಕ. ಸಂಬಂಧಗಳ ಸರಪಳಿಯಂತೆ ಬೆಸೆದುಕೊಂಡಾಗ ಆಗುವ ಆನಂದ. ಆದೇ ಆನಂದದ ಅಲೆಗಳೇ ಮನಸ್ಸಿನ ದಡಕ್ಕೆ ಬಂದು ಬಂದು ಬಡಿಯುತ್ತಿದ್ದವು.

ಚೈತ್ರಳನ್ನು ನೋಡಿಕೊಳ್ಳಲು ಆಯಾಳನ್ನಿಟ್ಟು ಕಲಾಶಾಲೆಗೆ ಹೋಗುವುದು, ಪತ್ರಿಕೆಗಳಿಗೆ ಚಿತ್ರ ಬರೆಯುವುದು, ಒಂದೊಂದು ಸಲ ಪ್ರದರ್ಶನ ಏರ್ಪಾಡು ನನ್ನದೇ. ಮುಂಜಾನೆಯಾದರೆ ಬೇಗ ಬೇಗ ಸ್ನಾನ, ಅಡುಗೆ ಮುಗಿಸಿ ಚೈತ್ರಳನ್ನು ರೆಡಿ ಮಾಡಿ ಶಾಲೆಗೆ ಕಳಿಸಿ ವಿವೇಕ ಆಫೀಸಿಗೆ ಹೋಗುತ್ತಿದ್ದಂತೆ ನಾನು ರೆಡಿಯಾಗಿ ಕಲಾ ಶಾಲೆಗೆ ಹೋಗುತ್ತಿದ್ದೆ. ಇಲ್ಲವೇ ಪತ್ರಿಕಾ ಆಫೀಸಿಗೆ ಹೋಗುವುದು. ಚೈತ್ರ ಬಂದ ಮೇಲೆ ಅವಳಿಗೆ ಊಟ ಮಾಡಿಸಿ ಮಲಗಿಸಿ, ಅವಳೊಡನೆ ಒಂದು ಗಂಟೆ ನಾನು ಮಲಗಿ ಸಂಜೆಯಾದರೆ, ಪತ್ರಿಕೆಗಳಿಗೆ ಅರ್ಜೆಂಟಾಗಿ ಕೊಡುವ ಚಿತ್ರಗಳನ್ನು ಬರೆದು ಕೊಡುತ್ತಿದ್ದೆ. ರಾತ್ರಿ ಜಾರುತ್ತಿದ್ದರೂ ನನ್ನ ಕೆಲಸ ಮುಗಿಯದಿದ್ದಾಗ, ಚೈತ್ರ ತನ್ನ ಹೋಂ ವರ್ಕ್ ಮುಗಿಸಿ ಒಬ್ಬಳೇ ಊಟ ಮುಗಿಸಿ ನನ್ನ ದಾರಿ ಕಾಯುತ್ತ ಮಲಗಿ ಬಿಡುತ್ತಿದ್ದಳು. ವಿವೇಕನ ಕೆಲಸವಂತೂ ಒಮ್ಮೊಮ್ಮೆ ರಾತ್ರಿಯಾದರೂ ಮುಗಿಯುತ್ತಿರಲಿಲ್ಲ. ಹೀಗಾಗಿ ಎಷ್ಟೋ ಸಲ ಅವಳೊಡನೆಯೇ ಇರಬೇಕು, ಅವಳ ಮುದ್ದು ಮಾತು ಕೇಳಬೇಕು, ಅವಳ ಜೊತೆಯೇ ಇರಬೇಕೆಂಬ ಆಶೆ ಹುಟ್ಟಿ ಮತ್ತೆ ಕರಗಿ ಹೋಗುತ್ತಿತ್ತು.

ಎರಡೂ ನನ್ನ ಜೀವದ ಉಸಿರಾಗಿದ್ದವು.

ಕಲೆಯಿಲ್ಲದೆ ನಾನು ಬಾಳಲಾರೆ.

ಚೈತ್ರಳಿಲ್ಲದೆ ನಾನು ಬದುಕಲಾರೆ.

ಚೈತ್ರಳಿಗೆ ಬೇಸರವಾಗಬಾರದೆಂದು ಎರಡು ಕೈ ತುಂಬ ಹೊಸ ಹೊಸ ನಮೂನೆಯ ಆಟದ ಸಾಮಾನುಗಳನ್ನು ತಂದು ಹಾಕುತ್ತಿದ್ದೆ. ಒಂದೆರಡುದಿನ ಅಷ್ಟೆ ಅದರಲ್ಲಿ ಆಸಕ್ತಿ. ಆದರೆ ಮತ್ತದೇ ಅವಳ ಮುಖದಲ್ಲಿ ಮಂಕುತನ.

ನಾನು ಸಂಜೆ ಒಂದೊಂದು ಸಲ ಕಲಾಪರಿಷತ್ತಿಗೆ ಹೊರಟಾಗ ಚೈತ್ರ ನನ್ನ ಕೈ ಜಗ್ಗಿ, “ಮಮ್ಮಿ ಹೋಗಬೇಡ, ನಂಗೆ ಬೇಜಾರು'' ಎನ್ನುತ್ತಿತ್ತು. ನಾನಾದರೂ ಏನು ಮಾಡಲಿ? ಹೇಗೆ ಬಿಟ್ಟು ಹೋಗಲಿ ನನ್ನ ಕಂದನನ್ನು, ವಿವೇಕ ಮನೆಯಲ್ಲಿದ್ದರೆ ಆ ವೇಳೆಗೆ ಬಂದು ಅವಳನ್ನೆತ್ತಿ ಮುದ್ದಾಡಿಕೊಂಡು ಆಟವಾಡಿಸಿಕೊಂಡು ಬರುತ್ತಿದ್ದ.

ಆದರೆ ನಾನು ಬರುವ ವೇಳೆಗೆ ಮಗು ಮಲಗಿ ನಿದ್ದೆ ಹೋಗಿದ್ದರೂ, ಅದರ ಮುಖದಲ್ಲಿದ್ದ ಅಶಾಂತತೆ, ನಿರಾಸಕ್ತಿ, ಸಿಟ್ಟು ಗಮನಿಸುತ್ತ ನನ್ನೆದೆ ಹಿಂಡಿದಂತಾಗುತ್ತಿತ್ತು. ಚೈತ್ರ ಬಂದು ಎಂಟು ತಿಂಗಳಾಗಿತ್ತಷ್ಟೆ

ಅದೇ ವರ್ಷ ದಸರಾ ಪ್ರದರ್ಶನಕ್ಕೆ ಚಿತ್ರ ಬರೆದು ಕೊಡಬೇಕಿತ್ತು. ಅದು ರಾಷ್ಟ್ರೀಯ ಮಟ್ಟದ ಸ್ಪರ್ಧೆಯಾದ್ದರಿಂದ ಎಲ್ಲ ಒತ್ತಡಗಳನ್ನು ಹತ್ತಿಕ್ಕಿ ನನ್ನ ರೂಮಿನಲ್ಲಿ ಕ್ಯಾನ್‌ವಾಸ್

ಮುಂದೆ ಹಗಲು ರಾತ್ರಿ ಬಣ್ಣಗಳ ಸಾಮ್ರಾಜ್ಯದಲ್ಲಿ ಮುಳುಗಿ ಹೋದೆ. ಹದಿನೈದು ದಿನಗಳಲ್ಲಿ ಅದ್ಭುತವಾದ ಚಿತ್ರ ತಯಾರಿಸಿದ್ದೆ. ಮೋಡಗಳ ತೆಳುನೀಲಿ ವರ್ಣಗಳ ಅಂಚಿಗೆ ಸಪ್ತವರ್ಣ ಹರಡಿದ ಹೊನ್ನಿನ ಛಾಯೆ. ನನ್ನ ಬದುಕಿನ ಎಲ್ಲ ವರ್ಣಗಳನ್ನು ತನಿತುಂಬಿ ನಿಂತ ಕವಿತೆಯಂತಿತ್ತು. ಸಪ್ತವರ್ಣಗಳಿಂದ ಮಿನುಗುವ ಅದರ ಮೇಲೆ ಕುಳಿತು ಒಂದು ಅಸ್ಪಷ್ಟ ಛಾಯೆ ಕಾಣದ ಲೋಕಕ್ಕೆ ತೇಲಿ ಹೋಗುವಂತಿತ್ತು. ಅದರ ಹೆಸರು 'ಪಯಣದ ಹಾದಿ'. ಚಿತ್ರ ಬರೆದು ಮುಗಿಸಿ ಮನಸ್ಸು ನಿರಾಳವಾಗಿತ್ತು. ವಿವೇಕ ಬಂದು ನೋಡಿ ಎಲ್ಲ ಕೋನಗಳಿಂದಲೂ ನಿಂತು ದಿಟ್ಟಿಸಿದ. "ಸುಪರ್ಬ್ ಚಿತ್ರ ನಂದಿನಿ, ಹಿಂದೆ ಎಂದೂ ಇಂತಾ ಚಿತ್ರ ಬರೆದಿಲ್ಲ, ಬಹುಶಾ ಚೈತ್ರ ಬಂದ ಮೇಲೆ ನಿನ್ನ ಭಾವನೆಗಳು ವರ್ಣಗಳ ಕಲ್ಪನೆಗಳು ಎಷ್ಟು ದೃಢವಾಗಿವೆ'' ಎಂದಿದ್ದ.

ಮುಂದೆ ಎಂಟು ದಿನಗಳು ವಿವೇಕ, ನಾನು ಪ್ರದರ್ಶನದ ಸಲುವಾಗಿ ಓಡಾಡಬೇಕಿತ್ತು. ಹೀಗಾಗಿ ಚೈತ್ರಳೊಡನೆ ಇರಲು ನನಗೆ ಅವಕಾಶವೇ ಸಿಗುತ್ತಿರಲಿಲ್ಲ. ರಾತ್ರಿ ಬಿಡುವಾದಾಗ ಮಲಗಿದ್ದ ಅವಳನ್ನು ತಬ್ಬಿ ಕೆನ್ನೆ ತಟ್ಟಿ ಮುದ್ದಿಸಿ ಬರುವಾಗ ಆಯಾ ಹೇಳಿದ ಮಾತು ನೆನಪಾಗಿತ್ತು.

"ಅಮ್ಮಾ ಅವರೇ, ಮಗೂ ಎರಡು ದಿನದಿಂದಲೂ ಬೇಸರ ಮಾಡಿಕೊಂಡಿದೆ. ಊಟಾನೂ ಸರಿಯಾಗಿ ಮಾಡಿಲ್ಲ'' ಎಂದಿದ್ದಳು.

"ಯಾಕಮ್ಮಾ ಏನಾಯ್ತು?'' ಎಂದಿದ್ದೆ ಕಳವಳದಿಂದ. ಅವಳು ಏನೂ ಹೇಳಲಿಲ್ಲ.

ಒಂದು ಮಧ್ಯಾಹ್ನ ಪ್ರದರ್ಶನದ ಎಲ್ಲ ಗಡಿಬಿಡಿ ಮುಗಿಸಿ ಆಸೆಗಳನ್ನು ಹೊತ್ತು ಬಂದಾಗ ಚೈತ್ರ ಮಂಚದ ಮೇಲೆ ಅಳುತ್ತ ಕುಳಿತ್ತಿದ್ದಳು.

"ಯಾಕೆ ಚಿನ್ನ'' ಎನ್ನುತ್ತ ಧಾವಿಸಿ ಹತ್ತಿರ ಬಂದೆ. ಅವಳ ತಲೆಯನ್ನು ಎದೆಗೊತ್ತಿಕೊಂಡೆ.

"ಮಮ್ಮಾ ಇಲ್ಲಿ ನಂಗೆ ತುಂಬ ಬೇಜಾರು. ಮಮ್ಮಿ ನಾನು ಪಪ್ಪನ ಹತ್ರ ಹೋಗ್ಬೇಕು. ಆ ಮಮ್ಮಿಯೇ ಒಳ್ಳೆಯವಳು. ಅವಳು ನಮ್ಮನ್ನು ಬಿಟ್ಟು ಎಲ್ಲೂ ಹೋಗೋಲ್ಲ. ನಂಗೆ ಅಲ್ಲಿ ಆಡಲು ವಸಂತನಿದ್ದಾನೆ. ಮತ್ತೊಂದು ಪುಟ್ಟ ಪಾಪು ಬರುತ್ತೆ. ನನ್ನನ್ನು ಅಲ್ಲಿಯೇ ಕಳಿಸಿಬಿಡು ಮಮ್ಮ.''

ಚೈತ್ರಳ ಮಾತು ಕೇಳುತ್ತ ಕೇಳುತ್ತ ಸಂದೀಪನೆ ಎದುರು ಬಂದು ವಿಕಟಾಟ್ಟಹಾಸದಿಂದ ನಗುತ್ತ ಎದೆಗೆ ಗುದ್ದಿದಂತಾಯ್ತು. ಚೈತ್ರ ಇಲ್ಲಿ ಇರಲಾರಳೆಂದು ಸಂದೀಪ ಅರಿತಿದ್ದನೆ?

ಇಲ್ಲ ನನ್ನದೇ ತಪ್ಪಿತ್ತೋ?

ಯಾವುದರಲ್ಲಿ ತಪ್ಪಿದೆ? ಸಂದೀಪನನ್ನು ಓಲೈಸುವುದರಲ್ಲೇ, ವಸಂತ, ಚೈತ್ರರನ್ನು ನೋಡಿಕೊಳ್ಳುವುದರಲ್ಲೇ. ನಾನು ಒಳ್ಳೆಯ ಗೃಹಿಣಿಯಾಗಲಿಲ್ಲವೆ?

ಆದರೆ ಇದರಲ್ಲೂ ಸಂದೀಪನದೂ ಪಾಲಿರಲಿಲ್ಲವೆ?

ಹೆಂಡತಿಯ ಕಲೆಗಳನ್ನು ಪ್ರೋತ್ಸಾಹಿಸುವುದರಲ್ಲಿ ಅವನು ತಪ್ಪಿದ. ಒಬ್ಬರಿಗೊಬ್ಬರು ನಿಂತು ಮಕ್ಕಳಿಗೆ ಜೊತೆಯಾಗಿ ಪ್ರೀತಿ ನೀಡುತ್ತ ಬಂದಿದ್ದರೆ ಹೀಗಾಗುತ್ತಿರಲಿಲ್ಲ.

ನನ್ನ ಕೆನ್ನೆಯ ಮೇಲೆ ನೀರಿಳಿಯಿತು.

ನಾನು ಒಂಟಿ.

ಎಲ್ಲರಿಂದಲೂ ದೂರವಾಗಿಬಿಟ್ಟೆನೆ.

ಕೈ ಹಿಡಿದ ಗಂಡ ಆದರಿಸಲಿಲ್ಲ.

ಒಡಲಲ್ಲಿ ಹುಟ್ಟಿದ ಮಗು ಕೂಡ ನನ್ನದಾಗಲಿಲ್ಲ.

ಹಾಗಾದರೆ ಎರಡು ದಂಡೆಯ ಮೇಲೆ ಕಾಲಿಟ್ಟು ನಡೆಯಲು ನನಗೆ ಸಾಧ್ಯವಾಗಲಿಲ್ಲವೆ?

ಎರಡು ದಡಗಳ ನಡುವೆ ಹರಿಯುತ್ತ ಯಾವ ದಡವನ್ನೂ ಸೇರದೆ, ಯಾವ ರೂಪವನ್ನೂ ಪಡೆಯದೆ, ಹರಿಯುತ್ತಿರುವುದೆ ನನ್ನ ಬದುಕೆ? ನಾನು ಸೋತಿದ್ದು ಮೊದಲ ಬಾರಿಯಲ್ಲ.

ಇದು ಎಷ್ಟನೇ ಬಾರಿ.

ನನ್ನ ಬದುಕು, ಸಂದೀಪನ ಮನೆ, ಮೊದಲಬಾರಿ ಚೈತ್ರಳನ್ನು ಬಿಟ್ಟು ಬರುವಾಗ ಬಾರದ ಕಣ್ಣೀರು ಇಂದೇಕೆ?

ನಾಲ್ಕಾರು ದಿನ ನಾನು ಚೈತ್ರಳ ಹತ್ತಿರ ಕುಳಿತು ರಮಿಸಿದರೂ ಅವಳು ಹಿಡಿದ ಪಟ್ಟು ಬಿಡಲಿಲ್ಲ. “ನಾನಿನ್ನು ಎಲ್ಲಿಯೂ ಹೋಗುವುದಿಲ್ಲ ಚಿನ್ನ, ಇಲ್ಲಿಯೇ ನಿನ್ನ ಹತ್ತಿರವೆ ಇರುತ್ತೇನೆ'' ಎಂದರೂ ಕೇಳಲಿಲ್ಲ. ನನ್ನ ಕಣ್ಣೀರು, ತಳಮಳ ಈ ಮಗುವಿಗೆ ಅರ್ಥ ಆಗದ್ದಿದ್ದರೆ? ವಿವೇಕ ಹತ್ತಿರ ಬಂದ; ಮಗುವನ್ನು ಎದೆಗೊತ್ತಿಕೊಂಡ.

“ಅಳ್ಬೇಡ ಚಿನ್ನ, ಈ ಅಮ್ಮ ನಿನ್ನದು. ಇನ್ನು ಯಾವಾಗ್ಲೂ ನಿನ್ನ ಹತ್ತಿರವೇ ಇರ್‍ತಾಳೆ ಜಾಣ ಮರಿ'' ಎಂದ ವಿವೇಕ ನನ್ನ ಹತ್ತಿರವೆ ಕುಳಿತು ಸಮಾಧಾನಿಸಿದ.

“ಸಮಾಧಾನ ಮಾಡ್ಕೋ ನಂದು, ಯೋಚಿಸು, ಚೈತ್ರಳಿಗೆ ಅರಿವು ಬರುವ ಮೊದಲೇ ನಿನ್ನನ್ನು ಬಿಟ್ಟಿದ್ದಾಳೆ. ಅರಿವು ಬಂದ ಮೇಲೆ ಬೆಳೆಸಿದವರು ಅವರು. ಅವರಲ್ಲೇ ಅವಳಿಗೆ ಅಕ್ಕರೆ ಇದೆ. ನೀನು ಹೆತ್ತ ತಾಯಿ ನಿಜ. ಸಾಕಿದವರು ಅವರು. ಇಬ್ಬರ ಮಧ್ಯೆ ಈ ಮಗು ನಲುಗಬಾರದು. ಎಲ್ಲಿದ್ದರೂ ಅವಳು ಸುಖವಾಗಿರಲಿ ಎಂದು ಆಶಿಸು. ಬೆಳವಣಿಗೆಗೆ ಬಂದ ಮೇಲಾದರೂ ಅವಳು ನಿನ್ನ ಹತ್ತಿರ ಬಂದೇ ಬರುತ್ತಾಳೆ'' ಎಂದ.

ನಾನು ಮಾತನಾಡಲಿಲ್ಲ. ಎಷ್ಟೋ ಹೊತ್ತು ಹಾಗೇಯೇ ಕುಳಿತ್ತಿದ್ದೆ. ನನ್ನ ಕೈಕಾಲು, ದೇಹ, ಮನಸ್ಸು ಎಲ್ಲ ನಿರ್ಜೀವವಾಗಿದೆ, ಏನೋ ಅನ್ನಿಸುತ್ತಿತ್ತು. ಚೈತ್ರಳ ಕಣ್ಣೊರಿಸಿದೆ.

“ಅಳ್ಬೇಡ ಚಿನ್ನ, ನಿನ್ನನ್ನು ಅಲ್ಲಿಗೇ ಕಳಿಸುತ್ತೇನೆ'' ಎಂದು ಮುದ್ದಿಟ್ಟೆ ಮರುದಿನವೇ ಅವಳ ಬಟ್ಟೆ ಆಟಿಗೆ, ಸಾಮಾನು, ಶೂಗಳು ಎಲ್ಲ ಪ್ಯಾಕ್ ಮಾಡಿದೆ. ಒಂದೊಂದು ಗಳಿಗೆಯೂ ಸಂದೀಪನೇನನ್ನ ಮುಂದೆ ನಿಂತು ಗಹಗಹಿಸಿ ನಗುತ್ತಿರುವಂತೆ ಭಾಸವಾಗುತ್ತಿತ್ತು.

ಮನಸ್ಸು ಗಟ್ಟಿ ಮಾಡಿಕೊಂಡೆ. ಇನ್ನು ನನ್ನ ಜೀವನದಲ್ಲಿ ಏನೂ ಉಳಿದಿಲ್ಲ ಎನಿಸಿತ್ತು. ಎರಡು ದಿನಗಳ ಮೇಲೆ ವಿವೇಕನೇ ಹೋಗಿ ಚೈತ್ರಳನ್ನು ಬಿಟ್ಟು ಬಂದ. ಚೈತ್ರ ಹೋದ ಮೇಲೆ ಮನಸ್ಸು ಶೂನ್ಯವಾಗಿತ್ತು. ಏಕಾಂಗಿಯಾಗಿ ಕಾಲೆಳೆದುಕೊಂಡು ಸಮುದ್ರ ದಂಡೆಗೆ ಹೋಗುತ್ತಿದ್ದೆ. ಮರಳ ಕಣ ಕಣದ ಮೇಲೆ ನಮ್ಮಿಬ್ಬರ ಹೆಜ್ಜೆ ಗುರುತು ಮೂಡಿದ್ದಾವೇನೊ ಎನಿಸಿತ್ತು. ಇಲ್ಲ ರಭಸದಿಂದ ಬಂದ ಅಲೆಗಳು ಎಲ್ಲವನ್ನು ಅಳಿಸಿಹಾಕಿ ಮರಳಿ ಹೋಗುತ್ತಿದ್ದವು.

ಇದೇ ಮರಳ ದಂಡೆಯ ಮೇಲೆ ನಾನು, ಚೈತ್ರ ಗೂಡು ಕಟ್ಟಿದ್ದೆವು.

ಅದರ ಮೇಲೆ ಹೆಜ್ಜೆಯೂರಿ ಅದನ್ನು ಒಡೆದವರು ಯಾರು, ವಿಧಿಯೆ? ಇಲ್ಲ ನನ್ನ ಬಣ್ಣಗಳ ಕನಸೇ, ಯಾವುದು?

ಮುಂದೆ ಎಂಟು ದಿನಗಳು ಕಳೆದವು. ನಾನು ಬರೆದ ಚಿತ್ರ 'ಪಯಣದ ಹಾದಿ' ಮೋಡದ ಅಂಚಿಗೆ ಕಾಮನಬಿಲ್ಲು ಸಪ್ತವರ್ಣಗಳು ಕರಗಿ ನೀರಾಗಿ ಬರೀ ಮೋಡಮಾತ್ರ ಉಳಿಯಿತೆ?

ವಿವೇಕ ಚೈತ್ರಳನ್ನು ಬಿಟ್ಟು ಬಂದ ಮೇಲೆ ಏನೂ ಮಾತನಾಡಿರಲಿಲ್ಲ. ಅವನ ಮುಖದಲ್ಲಿ ಕವಿದುಕೊಂಡ ವಿಷಣ್ಣ ಕಳೆ ಅದನ್ನು ತನ್ನಲ್ಲೇ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದ. "ಅಲ್ಲಿ ಏನಾಯಿತು ವಿವೇಕ?'' ಎಂದು ಕೇಳುವ ಧೈರ್ಯ ನನ್ನಲ್ಲೂ ಇರಲಿಲ್ಲ. ನನ್ನ ಜೀವರಸ ಇಂಗಿ ಹೋಯಿತೆ ಎನಿಸಿತ್ತು. ವಸಂತನನ್ನು ಕಳೆದುಕೊಂಡಾಗ ನನಗೆ ಇಂತಾದ್ದೇ ದುಃಖವಾಗಿತ್ತು. ಮೊದಲಿನ ದಿನಚರಿಗೆ ನನ್ನ ಮನಸ್ಸು ಒಗ್ಗುತ್ತಿಲ್ಲ. ಈ ಪರಿಸರದಿಂದ, ಈ ಸಮುದ್ರದಿಂದ, ಎಲ್ಲರಿಂದಲೂ ದೂರ ಹೋಗಬೇಕು ಎನಿಸುತ್ತಿತ್ತು.

ಒಂದು ಮುಂಜಾನೆ ವಿವೇಕ ಬಂದು ಮಲಗಿದ ನನ್ನನ್ನು ಎಬ್ಬಿಸಿದ.

"ನಂದೂ ನೋಡಿಲ್ಲಿ, ರಾಷ್ಟ್ರೀಯ ಮಟ್ಟದ ಪ್ರದರ್ಶನದಲ್ಲಿ 'ಪಯಣದ ಹಾದಿ'ಗೆ ನಿನ್ನ ಚಿತ್ರಕ್ಕೆ ಎರಡನೇ ಬಹುಮಾನ ಬಂದಿದೆ.''

ನಿಧಾನವಾಗಿ ಎದ್ದು ಕುಳಿತೆ. ಅವನ ಧ್ವನಿಯಲ್ಲಿ ತುಂಬಿದ ಹುಮ್ಮಸ್ಸು, ಅವನ ಅಷ್ಟು ವರ್ಷಗಳ ತಪಸ್ಸು ಫಲ ಕೊಟ್ಟ ತೃಪ್ತಿ.

"ನಿನಗೆ ಸಂತೋಷವಿಲ್ಲವೆ?'' ಎಂದ ನನ್ನ ಮುಖವನ್ನು ನೋಡುತ್ತ. ಅವನ ಹೆಗಲ ಮೇಲೆ ತಲೆ ಇಟ್ಟೆ

"ನಾನು ಸೋತು ಹೋದೆ ವಿವೇಕ, ನನಗೆ ನನ್ನದಾಗಿ ಏನೂ ಉಳಿಯಲಿಲ್ಲ.''

"ಯಾಕೆ ಹೀಗೆ ಮಾತನಾಡುತ್ತಿ ನಂದೀ, ಈ ಕಲೆ ನಿನ್ನದಲ್ಲವೆ, ಇವತ್ತು ಎಷ್ಟು ಜನ ಕಲಾ ರಸಿಕರು ನಿನ್ನ ಚಿತ್ರವನ್ನು ಹಾಡಿ ಹೊಗಳಿದ್ದಾರೆ. ಈ ಕಾಮನಬಿಲ್ಲು ನಿನ್ನ ಬದುಕಿನ ಪ್ರತೀಕವಾಗಬೇಕು. ಸಪ್ತವರ್ಣಗಳ ಮೇಲೆ ಕುಳಿತಿರುವವವಳು ನೀನು. ಮೇಲ ಮೇಲಕ್ಕೆ ತೇಲಿ ಹೋಗುವ ನಿನಗೆ ವಾಸ್ತವದ ಅರಿವು ಬೇಡ.''

"ಆದರೆ ವಾಸ್ತವದ ಪ್ರಜ್ಞೆಯಿಲ್ಲದೆ ನಾವು ಬಾಳುವುದು ಹೇಗೆ ವಿವೇಕ. ಒಂದು ವೇಳೆ ನಾನು ಕುಳಿತ ಕಾಮನಬಿಲ್ಲು ಕರಗಿ ಸಪ್ತವರ್ಣಗಳು ಮಾಯವಾದರೆ ಅಲ್ಲಿ ಉಳಿಯುವುದು ಏನು ಗೊತ್ತ, ಬರಿ ಮೋಡ. ಚೈತ್ರ ಹೋದ ಮೇಲೆ ನಾನು ನಾನಾಗಿಲ್ಲ ವಿವೇಕ. ನಾನು ನಿನ್ನ ಮನಸ್ಸಿಗೆ ತುಂಬ ದುಃಖ ಕೊಟ್ಟಿದ್ದೇನೆ. ನಿನ್ನ ಬಾಳಬೇಕಾದ ಸುಂದರ ದಿನಗಳನ್ನು ನಾನು ಹಾಳು ಮಾಡಿಬಿಟ್ಟೆ''

"ಬೇಡ ಹಾಗೆ ಹೇಳಬೇಡ ನಂದಿನಿ'' ಎಂದು ತುಟಿಯ ಮೇಲೆ ಬೆರಳಿಟ್ಟ "ನಂದಿನಿ ನಿನಗೆ ಮಕ್ಕಳೇ ಬೇಕೆಂದಿದ್ದರೆ ಯಾವುದಾದರೂ ಮಗುವನ್ನು ತಂದು ಸಾಕೋಣ. ನಿನ್ನ ಕಲೆಯನ್ನೆಲ್ಲ ಅದಕ್ಕೆ ಧಾರೆ ಎರೆ'' ಎಂದ. ನನ್ನ ಉಸಿರಿಗೆ ಚೈತನ್ಯ ತುಂಬುವ ಮಾತನಾಡಿದ.

ಆಮೇಲೆ ಅಲ್ಲವೆ ತುಂಬಿದ ಸಭೆಯಲ್ಲಿ ಸಾವಿರಾರು ಜನರ ಎದುರು ನನ್ನ ಚಿತ್ರಕ್ಕೆ ಬಹುಮಾನ ತೆಗೆದುಕೊಳ್ಳುವಾಗ ಈ ಗಳಿಗೆ ಶಾಶ್ವತವಾಗಿರಬಾರದಿತ್ತೆ ಎನಿಸಿತ್ತು. ಎಲ್ಲರ ಕರತಾಡನ, ಪ್ರಶಂಸೆ, ಹೆಮ್ಮೆ, ಅಭಿಮಾನ, ಹೆಗ್ಗಳಿಕೆಗಳ ಮುಂದೆ ನಾನು ನನ್ನ ಬದುಕಿನ ಗತಿಯನ್ನೆ ಮರೆತುಬಿಟ್ಟಿದ್ದೆ.

ಇದೇ ವೇಳೆಯಲ್ಲಿ ನಾನು ಶಾಂತಿನಿಕೇತನಕ್ಕೆ ಹೋಗಿ ಅಲ್ಲಿಯೇ ನೆಲೆಸಬೇಕೆಂಬ ಸಂಕಲ್ಪ

ಮಾಡಿದ್ದು. ಅಲ್ಲಿಯ ಪರಿಸರ, ಜನ, ಶಾಂತಿ, ಸೌಹಾರ್ದ, ವಿಶಾಲ ಮನೋಭಾವ, ನಿಸರ್ಗ, ಕಲಾಪ್ರಪಂಚ ನನ್ನ ಬರಡು ಜೀವನಕ್ಕೆ ಸಂಜೀವಿನಿಯಾದೀತು. ನನ್ನಿಂದ ವಿವೇಕನ ಬಾಳು ಹಾಳಾಗಬಾರದು. ಅವನಾದರೂ ಮದುವೆ, ಮಕ್ಕಳು, ಸಂಸಾರ ಎಂದೆಲ್ಲ ಜೋಡಿ ರೆಕ್ಕೆ ಕಟ್ಟಿಕೊಂಡು ಬಾನ ತುಂಬೆಲ್ಲ ಹಾರಾಡಲಿ ಎನಿಸಿತು.

ನನ್ನ ನಿರ್ಧಾರ ತಿಳಿಸಿದಾಗ ತಬ್ಬಿಬ್ಬಾದ. "ಇದು ನಿಜವೆ?'' ಎಂದ. "ಯಾಕೆ ಈ ನಿರ್ಧಾರ ತೆಗೆದುಕೊಂಡೆ, ಇಲ್ಲಿಯೇ ಇರು. ನಿನ್ನ ಕಲಾಜೀವನಕ್ಕೆಂದೂ ದಕ್ಕೆ ತರೋಲ್ಲ. ಚಿತ್ರಗಳು ಮೂಡಿ ಬರಬೇಕು, ಅವಕ್ಕೆಲ್ಲ ನಾನು ನಾಂದಿ ಹಾಡುತ್ತೇನೆ'' ಎಂದಿದ್ದ.

ಯಾವುದಕ್ಕೂ ತನ್ನ ನಿರ್ಧಾರ ಬದಲಾಗಲಿಲ್ಲ. ನನ್ನನ್ನು ಬೀಳ್ಕೊಡುವಾಗ "ಎಂದೆಂದೂ ಈ ಸ್ನೇಹಿತನನ್ನು ಮರೆಯಬೇಡ'' ಎಂದ.

"ಬೇಸರವಾದರೆ ನನಗೆ ನೀನಲ್ಲದೆ ಇನ್ಯಾರೋ ದಿಕ್ಕು'' ಎಂದಿದ್ದೆ ನಗುತ್ತ. ಸಾಮಾನುಗಳನ್ನೆತ್ತಿಕೊಂಡು ನಡೆದಾಗ ಒಂದು ಗಳಿಗೆ "ನಿಲ್ಲು'' ಎಂದೆ. ನಿಂತ; ಹತ್ತಿರ ಹೋದೆ. ಎರಡೂ ಕೈಯಿಂದ ಅವನ ತಲೆ ನನ್ನೆಡೆಗೆ ಬಾಗಿಸಿಕೊಂಡು ಅವನ ಹಣೆಯನ್ನು ಮುದ್ದಿಸಿದೆ. ನನ್ನೆದೆಗೆ ದುಃಖವೆಲ್ಲ ನುಗ್ಗಿ ಬಂತು. "ಚೈತ್ರಳನ್ನು ಅಗಲಿದಷ್ಟೆ ದುಃಖ ನಿನ್ನನ್ನೀಗ ಬಿಟ್ಟುಹೋಗುವಾಗಲೂ ಆಗುತ್ತಿದೆ ವಿವೇಕ. ನನ್ನಿಂದ ನಿನ್ನ ಜೀವನ ಬರಡಾಗಬಾರದು. ನೀನು ಮದುವೆಯಾಗು. ಈ ಮನೆಗೆ ಯಜಮಾನಿ ಬರಲಿ. ನಿನ್ನ ಮನೆಯಂಗಳದಲ್ಲಿ ಸುಂದರ ಹೂಗಳು ಅರಳಲಿ.''

"ನಾನು, ಮದುವೆ!'' ನಕ್ಕ ಅವನು.

"ಮತ್ತೇನು ನನಗೆ ತಾಳಿ ಕಟ್ಟಿದ ಗಂಡನೇ ಬೇರೆ ಮದುವೆಯಾದ. ಇನ್ನು ನೀನು...''

"ನೀನೇನೂ ಮಾತನಾಡಬೇಡ. ನಡೆ ನಂದಿನಿ. ಅಲ್ಲಿಗೆ ಹೋದ ಕೂಡಲೇ ಟೆಲಿಗ್ರಾಂ ಕೊಡು. ಯಾವಾಗಲಾದರೂ ಕಾಗದ ಬರೆ.''

"ವಿವೇಕ ಇನ್ನೊಂದು ಮಾತು.''

"ಏನು?''

"ನೀನು ಯಾವತ್ತೂ ನನ್ನ ಬಗ್ಗೆ ಯೋಚಿಸಬಾರದು. ಮತ್ತೆ ಯಾವತ್ತೂ ನನ್ನನ್ನು ಭೇಟಿಯಾಗಲು, ಬಂದು ನೋಡಲು ಪ್ರಯತ್ನಿಸಬಾರದು.''

"ನನಗಿಂಥ ಶಿಕ್ಷೆ ಕೊಡಬೇಡ ನಂದಿನಿ.'' ಚಿಕ್ಕ ಮಗುವಂತೆ ವ್ಯಥೆಯಿಂದ ಹೇಳಿದನಾತ.

"ಹೌದು ವಿವೇಕ, ಇನ್ನೆಂದೂ ಇಲ್ಲಿಯ ವ್ಯಾಮೋಹ ನನ್ನನ್ನು ಸೆಳೆಯಬಾರದೆಂದೇ ನಾನು ಕಲ್ಲಾಗಿ ನಡೆದಿದ್ದೇನೆ'' ಎನ್ನುತ್ತ ಹೊರನಡೆದೆ. ರೈಲು ನಿಲ್ದಾಣಕ್ಕೆ ಬಂದು ನನ್ನ ಸಾಮಾನುಗಳನ್ನಿಟ್ಟು ರೈಲು ಹತ್ತಿಸಿ ಗಾಡಿ ಬಿಡುವ ಮೊದಲೇ ಕರ್ಚೀಫಿಗೆ ಕಣ್ಣೊತ್ತಿಕೊಂಡು ಹೊರಟುಹೋದ. ಕೊನೆಯ ಬಾರಿ ಎಂಬಂತೆ ಹೊರಹೋಗುವ ದ್ವಾರದಲ್ಲಿ ನಿಂತು ಎಂದೆಂದಿಗೂ ವಿದಾಯವೆನ್ನುವಂತ ಕೈ ಬೀಸಿದ. ಗಾಡಿ ನಿಲ್ದಾಣ ಬಿಟ್ಟಿತು. ನಿಧಾನವಾದದ್ದು ವೇಗ ಜಾಸ್ತಿ ಮಾಡಿಕೊಳ್ಳುತ್ತ ಚಲಿಸಿತು. ಜನ, ಊರು, ಕೇರಿ, ಗುಡ್ಡ, ಬೆಟ್ಟ ನೆನಪುಗಳನ್ನೆಲ್ಲ ಹಿಂದಕ್ಕೆ ಹಾಕಿ ಹೋಗುತ್ತಲೇ ಇದೆ ರೈಲು ದಡ ದಡ.

ಪಯಣ ಮುಗಿಯುತ್ತಲೇ ಇಲ್ಲ. ರೈಲು ಚಲಿಸುತ್ತಲೇ ಇದೆ.

ಮ್ಯಾಗಜಿನ್

ವಿಭಾಗ

ನೀಳ್ಗತೆ

ಪರಿಹಾರ

ಬಿ. ಎಸ್. ಪ್ರಭಾಕರ್

"ಓಹ್ಹೋ ಹ್ಹೋ ಏನಾಶ್ಚರ್ಯ, ಏನಾಶ್ಚರ್ಯ. ಕನಸಲ್ಲ ತಾನೇ. ನಂಗಂತೂ ನಂಬೋಕೇ ಆಗ್ತಾ ಇಲ್ಲ. ಗ್ಯಾರಂಟಿಯಾಗಿ ಇವತ್ತಿಂದ ಸೂರ್ಯ ಪಶ್ಚಿಮದಲ್ಲೇ ಹುಟ್ಟೋದು. ಸೆವೆನ್ ವಂಡರ್ಸ್ ಜೊತೆಗೆ ಎಯ್ಟ್ತ್ ವಂಡರ್. ಗಿನಿಸ್ ಬುಕ್‌ನಲ್ಲಿ ನಿಮ್ಮ ಹೆಸ್ರು ಬಂದೇ ಬರುತ್ತೆ. ಅಲ್ಲ, ಓಟು ಮಾಡ್ದೆ, ಹೆಂಡ್ತಿ ಅನ್ನೋ ನಿಕೃಷ್ಟ ಪ್ರಾಣಿ ಸತ್ತಿರ್ತಾಳೋ, ಬದುಕಿರ್ತಾಳೋ ಅಂತ ನೋಡೋಕೆ ಹೀಗೆ ಹೇಳ್ದೇ ಕೇಳ್ದೆ ಬಂದುಬಿಟ್ರೆ ಕೋಟಿ ಕೋಟಿ ಸುಪುತ್ರರನ್ನ ಹಡ್ದ ಭಾರತಾಂಬೆ ಏನಿಗೆ ಹೇಗೆ ಆಗ್ತಾಳೆ ಏನ್ಕಥೇ."

"ಏ ಏನ್ಸಾತು ಅಂತ ಆಡ್ತೀಯೋ ಲಾವಣ್ಯ. ನಿನ್ನ ಕಂಡ್ರೆ ನಂಗೆ ಪ್ರೀತಿ ಇಲ್ಲ ಅಂದ್ಕೊಂಡಿದ್ದೀಯಾ?"

"ಶ್ಶ್ ಸ್ವಲ್ಪ ಸುಮ್ನಿರ್ತೀರಾ, ಫಸ್ಟ್ ನಾ ಏನ್ಹೇಳ್ಬೇಕು ಅಂತ ಇದ್ದೀನಿ ಅದನ್ನ ಹೇಳ್ಬಿಡ್ತೀನಿ. ಆಮೇಲೆ ನೀವು ಮಾತಾಡಿ."

"ಹಾಗೇ ಆಗ್ಲಿ. ಹೇಳು ಅದೇನ್ಹೇಳ್ತೀಯೋ ಹೇಳು." ತನ್ನ ಸಮ್ಮತಿ ನೀಡಿದ ಶ್ರೀನಾಥ.

"ಕೇಳಿ, ನೀವು ಓಟು ಮಾಡ್ದೆ ಇದ್ರೆ ಬಡ್ತನದ ರೇಖೆ ಕೆಳ್ಗೆ ಸಾಯೋದಕ್ಕೂ ಆಗ್ದೆ, ಬದುಕಿರೋದಕ್ಕೂ ಆಗ್ದೆ ಉಸಿರಾಡ್ಕೊಂಡಿದ್ದಾರಲ್ಲ ನಮ್ಮ ಪ್ರೀತಿಯ ಬಡ ಅಕ್ತಂಗೀರು, ಅಣ್ಣ ತಮ್ಮಂದಿರು ಇವರ್ನೆಲ್ಲ ಮೇಲಕ್ಕೆ ಎತ್ತೋರು ಯಾರ್ರೀ? ನಿಮ್ಮಂತೋರೇ ಇಂತಾ ಜನ ವಿರೋಧಿ, ದೇಶವಿರೋಧಿ ಕೆಲ್ಸ ಮಾಡ್ಬಹುದೇ? ಅಥ್ವಾ ನನ್ಮೇಲೆ ನಿಮ್ಗೆ ಅನ್ಮಾನ ಬಂದು ಸಿ. ಐ. ಡಿ. ಕೆಲ್ಸ ಮಾಡೋಕೆ ಬಂದ್ರ? ಕಟ್ಕೊಂಡ ಗಂಡಂಗೇ ದ್ರೋಹ ಬಗೆಯೋ ಅಷ್ಟು ನೀಚ ಹೆಂಗ್ಸೇನ್ರೀ ನಾನು."

ಹೊಟ್ಟೆಯೊಳಗೆ ತಡೆದಿಟ್ಟುಕೊಂಡಿದ್ದ ಪ್ರಬಲವಾದ ಅಸಮಾಧಾನವನ್ನು ಪ್ರದರ್ಶಿಸಲು ಬೇರೊಂದು ಅವಕಾ ಸಿಗಲಾರದು ಎನ್ನುವಂತೆ ಆವೇಶದಿಂದ ವ್ಯಂಗ್ಯವಾಗಿ ಮೊದಲಿಸಿ ರಾಚಿದಳು ಲಾವಣ್ಯ.

"ಅನ್ನೇ, ಅಂತಾನೇ ಇರು. ನಂತಾತ್ನ ಗಂಟೇನು ಹೋಗಲ್ಲ. ನೀನಲ್ದೆ ಇನ್ಯಾರು ಇದ್ದಾರೆ ನನ್ನ ಹಂಗ್ಸೋಕೆ ನಾಲ್ಗೆ ಸೋತೋಗೋತನ್ಕ ಒದರ್ತಾನೇ ಇರು. ಆದ್ರೆ ಇಷ್ಟು ಮಾತ್ರ ಜ್ಞಾಪ್ಕ ಇಟ್ಕೋ. ತಪ್ಪು ನನ್ನದಲ್ಲವೇ ಅಲ್ಲ ಎಲ್ಲ ನೀನೇ ಮಾಡ್ಕೊಂಡಿರೋ ಸ್ವಯಂಕೃತ ಅಪರಾಧ.' ಮಾತಿನಲ್ಲಿ ನಾನೇನು ಕಡಿಮೆ ಎನ್ನುವಂತೆ ಪ್ರತ್ಯುತ್ತ ನೀಡಿದ ಶ್ರೀನಾಥ.

"ಸ್ವಯಂಕೃತ ಅಪರಾಧಾನಾ?" ಆಶ್ಚರ್ಯ ತೋರಿಸಿಕೊಂಡು ಕೇಳಿದಳು ಲಾವಣ್ಯ.

"ಅಷ್ಟಲ್ದೆ ಇನ್ನೇನು ಅಂತೀ, ನಾನು ಎಂತೋನು ಅಂತ ಒಂದಿಷ್ಟೂ ಮುಚ್ಚಿಟ್ಟುಕೊಳ್ದೆ ಮದ್ವೇಗೆ ಮುಂಚೆನೇ ಹೇಳಿದ್ನೋ ಇಲ್ವೋ? ಎದೆ ಸೀಳಿದ್ರೆ ಮೂರಕ್ಷರ ಇಲ್ಲೋನು ನಾನು. ಅ ಅಂದ್ರೆ ಕೋ ಅನ್ನೋಕೂ ಬರೊಲ್ಲ ನಂಗೆ. ನನ್ನಂಥ ಭಿಕಾರಿ ಜೊತೆ ಮದ್ವೆಗ ಕೋಟ್ಯಾಧೀಶ್ವರಾದ ನಿಂತಂದೆ ಬಿಲ್‌ಕುಲ್ ಒಪ್ಪಲ್ಲ ಅಂತ ಹೇಳಿದ್ನೋ ಇಲ್ವೋ?"

"ಹೌದ್ರೀ ಹೌದು. ತಪ್ಪು ನಂದೇ. ಸಂತೋಷಾನ?" ಮುಖವನ್ನು ಸಿಂಡರಿಸಿಕೊಂಡು ಕೂತಿದ್ದವಳು ಎದ್ದು ನಿಂತು, ತಪ್ಪು ಒಪ್ಪಿಕೊಂಡಳು ಲಾವಣ್ಯ.

"ತಪ್ಪು ಯಾಕಾಯ್ತು, ಹೇಳ್ತೀನಿ ಕೇಳು. ನಿಂಗೆ ನಿಜ ಜೀವ್ನ ಏನು ಅಂತಾನೇ ಗೊತ್ತಿರ್ಲಿಲ್ಲ. ಆದ್ರೂ ಸಿನಿಮಾ ಹೀರೋಯಿನ್ ತರಾ ಆದರ್ಶ, ತ್ಯಾಗ, ಪ್ರೀತಿ, ಪ್ರೇಮ, ಲೊಟ್ಟೇಲೊಸ್ಕ ಅಂತ ನಾಟ್ಕ ಆಡಿ ಪ್ರಸಿದ್ಧಿ ಆಗ್ಬೇಕು ಅಂತ ಪ್ರಯತ್ನ ಪಟ್ಟೆ ಅಲ್ವಾ? 'ನನ್ನ ಮದ್ವೆ ಆಗ್ದೇ ಇದ್ರೆ ಸಾಯ್ತೀನಿ' ಅಂತಾ ನನ್ನ ಹೆದರ್ಸ್ದೆ. ಇದು ಸ್ವಯಂಕೃತ ಅಪರಾಧ ಅಲ್ದೆ ಇನ್ನೇನು?"

"ಅಯ್ಯೋ ತಪ್ಪು ನಂದೇ ಅಂತ ಆಗ್ಲೇ ಹೇಳಿದ್ನಲ್ಲ. ಬಿಡಿ, ಬಿಟ್ಬಿಡಿ ಆ ವಿಷ್ಯಾನ." ಅಸಹನೆಯಿಂದ ಉತ್ತರಿಸಿದಳು ಲಾವಣ್ಯ.

"ಇನ್ನೂ ಒಂದು ಮುಖ್ಯ ವಿಷ್ಯ ಮರೀಬೇಡ. ನಾನು ರಕ್ತ ಬಸ್ದು ದಿನಾ ಓಟ ಮಾಡ್ತಾ ಇರೋದು ನಿಂಗೋಸ್ಕರನೇ ಹೊರ್ತು, ನಂಗೋಸ್ಕರ ಖಂಡಿತ ಅಲ್ಲ." ಶ್ರೀನಾಥ ಕೊಂಚ ಏರಿಸಿದ ಧ್ವನಿಯಲ್ಲಿ ಹೇಳಿದ.

"ನಿಜ ನೀವು ಹೇಳೋದು. ಆದ್ರೆ ನಾನೂ ಒಂದು ಮುಖ್ಯ ವಿಷ್ಯ ಹೇಳ್ತೀನಿ ದಯವಿಟ್ಟು ಕೇಳಿ. ನೀವು ಬೆಳಿಗ್ಗೆಯಿಂದ ರಾತ್ರಿತನ್ಕ ಕೆಲ್ಸದ ಮೇಲೆ, ಯಾವ ತಾಪತ್ರಯ್ವೂ ಇಲ್ದೆ ಹಾಯಾಗಿ ಇದ್ದು ಬಿಡ್ತೀರ. ಬೆಳಗಾದ್ರೆ ಸಾಲ್ಗಾರರ ಜೊತೆ ಏಗೋಳು ನಾನೇ ನೀವಲ್ಲರೀ. ಕಂಡ ಕಂಡೋರಿಂದ ಥ್ಥೂ, ಛೀ ಅಂತ ಕ್ಯಾಕರ್ಸಿ ಉಗುಸ್ಕೋಳ್ತಾ ಇರೋದು ನೀವಲ್ಲ. ಇಂತಾ ವಿಷ್ಯದಲ್ಲಿ ನೀವು ತುಂಬ ಸ್ಮಾರ್ಟ್. ಎಲ್ರ ಮುಂದೆ ನನ್ನ ನಿಲ್ಸಿ, ನೀವು ಮಾತ್ರ ತಲೆ ಮರ್ಸಿಕೊಂಡು ಹಾಯಾಗಿ ಇರ್ತೀರ."

"ಹುಚ್ಚೀ ತರಾ ಮಾತಾಡ್ಬೇಡ ಲಾವಣ್ಯ. ಏನಾಗಿದೆ ಅಂತ ಇಷ್ಟೊಂದು ಬೇಜಾರು ಮಾಡ್ಕೊಂಡಿದ್ದೀ? ನಂಗೇನೋ ಅರ್ಥ ಆಗ್ತಿಲ್ಲ. ಒಟ್ನಲ್ಲಿ ನಾನು ಮನೆಗೆ ಬೇಗ ಬಂದದ್ದೇ ತಪ್ಪಾಯ್ತು." ಶ್ರೀನಾಥ ಬೇಸರದಿಂದ ಕೈ ಕೊಡವಿಕೊಂಡು ಉತ್ತರಿಸಿದ.

"ಹುಚ್ಚು ಹಿಡೀದೇ ಇರೋದೂ ಆಶ್ಚರ್ಯವೇ. ಇವತ್ತು ಹಾಲಿನ ರಾಮಕ್ಕ ಬೀದೀಲಿ ನಿಂತ್ಕೊಂಡು ದೆವ್ವ ಬಂದ್ಹೋಳಾಗೆ, ನಾಲ್ಕು ಮನೆಗೆ ಕೇಳ್ಸೋ ಅಷ್ಟು ಜೋರಾಗಿ ಕೂಗಾಡಿ, ನನ್ನ ಮಾನಾನ ಮೂರ್ಕಾಸ್ಗೆ ಹರಾಜಾಕುದ್ಲು. ರಂಡೆ ಏನೇ ಬಾರೇ ಅಂತ ಕರೆದ್ಲುರೀ. ಇದಕ್ಕಿಂತ ಬೇಕಾ ಮರ್ಯಾದೆ? ಇಷ್ಟು ದಿವ್ಸ ಅವ್ಳು ಹಾಕ್ತಿದ್ದ ನಿಪ್ಪಟ್ಟೆ ನೀರ್ಹಾಲೂ ನಿಲ್ಸಿಬಿಟ್ಳು. ಇಷ್ಟಕ್ಕೇ ಮುಗಿಲಿಲ್ಲ ನಮ್ಮ ಗೋಳು. ಮನೆ ಓನರ್ ಒಂದು ವಾರ ವಾಯ್ದೆ ಕೊಟ್ಹೋದ. ಹಿಂದಿನ ನಾಲ್ಕು ತಿಂಗ್ಳ ಬಾಡ್ಗೆ ಒಂದ್ವಾರ್ದೊಳ್ಗೆ ಕೊಡ್ದೆ ಇದ್ರೆ ಮುಲಾಜಿಲ್ದೆ ಜುಟ್ಟು ಹಿಡ್ದು ಆಚೆಗೆ ಒದ್ದು ಎಳ್ದಾಕ್ತೀನಿ ಅಂತ ಹೇಳಿ ಹೋದ. ಈ ತಂಟೆ ತಕ್ರಾರೆಲ್ಲ ನೀವು ಮನೇಲಿ ಇಲ್ದೆ ಇರೋವಾಗ್ಲೇ ಆಗುತ್ತೆ ಹೀಡೆ. ನಾನು ನಂತಂದೆ ಮನೆ ಬಿಟ್ಟು ಬರೋದಿನ ಹೊಟ್ಟೆತುಂಬ ಊಟ ಮಾಡಿದ್ದು. ಅವತ್ತಿಂದ ಇವತ್ನವರ್ಗೂ ಒಂದೇ ಒಂದಿನ ಎರ್ಡೂ ಹೊತ್ತು ಹೊಟ್ಟೆ ತುಂಬ ಊಟ ಮಾಡಿದ್ದು ನಂಗೆ ನೆನಪಿಲ್ಲ. ಹೀಗೇ ಇದ್ರೆ ಒಂದಿನ ವಿಷ ಕುಡ್ದು ಸಾಯ್ತೀನಿ. ಆಮೇಲೆ ಅದೆಷ್ಟು ಓಟ ಮಾಡ್ತೀರೋ ಮಾಡ್ಕೊಳ್ಳಿ." ಬಿಕ್ಕಿ ಬಿಕ್ಕಿ ಅಳುತ್ತ ತನಗೊದಗಿದ ದುರ್ಗತಿಯನ್ನು ತೋಡಿಕೊಂಡಳು ಲಾವಣ್ಯ.

"ಲಾವಣ್ಯಾ, ಲಾವಣ್ಯಾ ಹೀಗೆ ಮಕ್ಳು ಅಳೋಹಾಗೆ ಅತ್ರೆ ನಾನೇನೇ ಮಾಡ್ಲಿ, ಅಳೇ ಅಳು. ಅದೆಷ್ಟು ಅಳ್ತಿಯೋ ಅಳು. ವಿಷ ಕುಡ್ದು ಸಾಯೋದೇ ನಿನ್ನ ಹಣೇಲಿ ಬರೆದಿದ್ರೆ, ಅದ್ನ ತಪ್ಸೋಕೆ ಬ್ರಹ್ಮನಿಂದ್ಲೂ ಆಗಲ್ಲ. ಲಗಾಯ್ಸು. ಪ್ರಾಣ ಬಿಡುವಾಗ ಅಯ್ಯೋ ಅಮ್ಮಾ, ಅಪ್ಪಾ ಅಂತ ಮಾತ್ರ ಕಿರ್ಚ್ಕೋಬೇಡ. ದೇವ್ರೇ, ಏಳೇಳು ಜನ್ಮಕ್ಕೂ ಇಂಥ ದರಿದ್ರ ಗಂಡನ್ನ ಕೊಡ್ಬೇಡ ದೇವ್ರೇ ಅಂತ ಪ್ರಾರ್ಥನೆ ಮಾಡ್ತಾ ಮಾಡ್ತಾ ಪ್ರಾಣ ಬಿಡು. ನಿನ್ನ ದಾರಿಗೆ ನಮ್ಮಪ್ಪ್ನಾಣೆ ಅಡ್ಡ ಬರೋಲ್ಲ. ಇವತ್ತೂ ನಾನು ಬೇಗ ಬರ್ತಿರ್ಲಿಲ್ಲ. ಮೈಸೂರಿಂದ ನಿನ್ನ ಭಾವ ಫೋನ್ ಮಾಡಿದ್ರು. ಆದಕ್ಕೇ ಅರ್ಧ ದಿವ್ಸದ

ಅವರಿಬ್ಬರೂ ತೀರಾ ಬಡವರು. ನಿಷ್ಕಲ್ಮಶ ಹೃದಯದ ದಂಪತಿಗಳು. ಅನುರಾಗವೇ ಅವರ ಜೀವನದ ಜೀವಾಳ. ಕಷ್ಟಗಳ ಸರಮಾಲೆಗಳೊಂದಿಗೆ ಜೀವನ ತಳ್ಳುವಾಗ ಸುಖದ ದಿನಗಳ ಆಸೆ ಕಾಣುತ್ತದೆ.

ಸಂಬ್ಳ ಕಳ್ಕೊಂಡು ಬಂದೆ. ಈಗ್ಲೂ ಹೋಗು ಅಂತ ಹೇಳು ಸಂತೋಷ್ವಾಗಿ ಕೆಲ್ಸಕ್ಕೆ ಹೊರಟ್ಬಿಡ್ತೀನಿ.''

"ಹ್ಞಾ ಏನಂದ್ರೀ, ಭಾವ ಫೋನ್ ಮಾಡಿದ್ರ? ಯಾಕಂತ್ರೀ ಫೋನ್ ಮಾಡಿದ್ದು? ಅಕ್ಕ ಹುಷಾರಾಗಿದ್ದಾಳಂತಾರೀ?'' ಮಿಂಚು ಸೋಕಿದವಳಂತೆ ಬೆಚ್ಚಿ ಪ್ರಶ್ನಿಸಿದಳು ಲಾವಣ್ಯ.

"ನಿಂಭಾವ ಎಸ್. ಎಸ್. ಎಲ್. ಸಿ. ಪೇಪರ್ ಕರೆಕ್ಷನ್ ಮಾಡೋಕೆ ಬರ್ತಾರಂತೆ. ನಿನ್ನ ಅಕ್ಕಾನೂ ಅವ್ರ ಜೊತೆ ಬರ್ತಾರೆ. ಎಲ್ಲ ಒಂದೆಂಟು ದಿವ್ಸ ಜಂಡಾ ಹಾಕ್ತಾರೆ. ಈ ಶುಭ ಸಮಾಚಾರ ಹೇಳೋಣ ಅಂತ ಬಂದೆ ಅಷ್ಟೇ. ಆದ್ರೇ ನೀನು ಸಿ. ಐ. ಡಿ. ಕೆಲ್ಸ ಮಾಡೋಕೆ ಬಂದ್ರಾ ಅಂತ ರೋಪ್ ಹಾಕ್ತಿಯಲ್ಲಾ ಸರೀನಾ?''

"ಅಯ್ಯೋಯ್ಯೋ ದೇವ್ರೇ ಇನ್ನೇನ್ಗತೀರಿ, ಮನೇಲಿ ಒಂದ್ಕಾಳೂ ಅಕ್ಕಿ ಇಲ್ಲ. ಅಕ್ಕಂಗೆ ಹ್ಯಾಗ್ರೀ ಮುಖ ತೋರ್ಸೋದು? ನಮ್ಮ ಸ್ಥಿತಿ ನೋಡಿ ಅಕ್ಕ ಎಷ್ಟು ನಗ್ತಾಳೋ ಏನೋ, ಏನ್ರೀ ಮಾಡೋದು?'' ಹೊಲಸು ಮೈ ಮೇಲೆ ಬಿದ್ದಂತೆ ಬೆಚ್ಚಿ, ಒಂದು ಸಲ ಹಣೆಯನ್ನು ಲಘುವಾಗಿ ಚಚ್ಚಿಕೊಂಡು, ಕುಸಿದು ಕುಕ್ಕರಿಸಿ, ಕೂಗಾಡಿದಳು ಲಾವಣ್ಯ.

"ಗಾಬ್ರಿ ಆಗ್ಬೇಡ ಲಾವಣ್ಯ. ನಿನ್ನ ಅಕ್ಕ ಭಾವಂಗೆ ನಮ್ಮನೆ ಸ್ಥಿತಿ ಗೊತ್ತಾಗ್ದೇ ಇರೋ ಹಾಗೆ ಸಕತ್ತಾಗಿ ಡ್ರಾಮ ಆಡೋಣ. ಅವ್ರ ಜೊತೆ ನಾವು ಹೊಟ್ಟೆ ಬಿರಿಯೋಷ್ಟು ತಿಂದು ತೇಗೋಣ. ಅವ್ರಿಗೆ ನಿತ್ಯ ಔತ್ಣ ಮಾಡು. ಹಿಟ್ಲೇ ಅವ್ರೇಕಾಳ್ ಅಂತ ಮಜ ಉಡಾಯ್ಸಿ ಬಿಡೋಣ.'' ಕಣ್ಣು ಕೊಂಕಿಸಿ ಚೇಷ್ಟೆ ಮಾಡಿದ.

"ಛೀ ನಾಚ್ಗೇ ಆಗಲ್ವ, ಸಾಕ್ಮಾಡ್ರಿ. ನಂತಲೆ ಚಿಟ್ಟ್ ಹಿಡ್ಕೋಳ್ತಾ ಇದೆ. ಬರೀ ಬೊಗ್ಳೇ ಮಾಸ್ಟರ್ ನೀವು. ಅಲ್ಲ ಕೈಲಿ ಒಂದು ಪೈಸೇನೂ ಇಲ್ದೆ ಡ್ರಾಮ ಆಡ್ತೀರ ಡ್ರಾಮ, ನಮ್ಮ ಭಾವ ನಿಮ್ಮಂತ ಕುರಿಗ್ಳನ್ನ ಎಷ್ಟು ಮೇಸಿದ್ದಾರ ಗೊತ್ತಾ. ಅವ್ರ ಹತ್ರ ನಿಮ್ಮ ಹಿಟ್ಲೇ ಅವ್ರೇಕಾಳು ಬೇಯಲ್ಲಾರೀ. ಹೋಗ್ಲಿ, ನಾವು ಮನೇಲಿ ಇರಲ್ಲ ಅಂತ ಸುಳ್ಳಾದ್ರೂ ಹೇಳ್ಬಾರ್ದಾಗಿತ್ತಾರಿ?''

"ಸುಳ್ಳು ಹೇಳೋದು ಮಹಾ ಪಾಪ. ಅಷ್ಟೇ ಅಲ್ಲ ಈಗ ಸುಳ್ಳು ಹೇಳ್ಬೇಕಾಗೇ ಇಲ್ಲ. ನಿ
ಭಾವನವ್ರ ಅಣಕ್ಕಾಗಿ ಒಂದು ಸಾವ್ರ ಸಾಲ ತಂದಿದ್ದೀ
ನೋಡು. ಯಾವುದ್ರಲ್ಲೂ ಕಡ್ಮೆ ಮಾಡೋದು ಬೆ
ಆದ್ರೇ ಒಂದು ಕಂಡೀಶನ್ನು. ನಮ್ಮ ಡ್ರಾಮ ಇ
ದುಡ್ನಲ್ಲಿ ಮುಗೀಬೇಕು. ನಿನ್ನ ಅಕ್ಕ ಭಾವ ಮೈಸು
ಹಿಂತಿರ್ಗಿ ಹೋದ ದಿನ್ವೇ ನಾವಿಬ್ರೂ ಒಟ್ಗೇ
ತೂಗೊಂಡು, ಒಟ್ಗೇ ಸಗ್ತು ಬೀಳೋಣ. ಆಗ್ ಬ
ತಾನೆ?''

"ಅಲ್ರೀ, ಮೈಯೆಲ್ಲ ಸಾಲ ಮಾಡ್ಕೊಂ
ಯಾವ ಜನ್ಮಕ್ಕೆ ಸಾಲ ತೀರ್ಸೋದು? ಸಾಲ ಮಾಡೋ
ಅಂದ್ರ ಒಂದಿಷ್ಟೂ ಸಂಕೋಚಾನೇ ಇಲ್ಲ ನಿಮ್ಗೆ.''
ತೂಗೊಂಡು ಸಾಯೋ ವಿಷಯದ ಬಗ್ಗೆ ನಿಗಾ ಕೊ
ಟೇಡಿಸಿದಳು ಲಾವಣ್ಯ.

"ಏ ನೀನೊಂದು ಶುದ್ಧ ಗೂಶ್ಲು ಕಣೆ ಲಾವ
ಕಲಿಯುಗ್ದಲ್ಲಿ ಸಾಲ ತೀರಿಸ್ಲೇಬೇಕು ಅಂತೇನು ರೂ
ಇಲ್ಲ. ಅಷ್ಟಕ್ಕೂ ಡ್ರಾಮ ಮುಗ್ದಮೇಲ ಸಗ್ತು ಬೀಳ್ತೀವ
ಸಾಲ ಕೊಟ್ಟೋನು ನಾಮ ಹಾಕ್ಕೊಂಡು ಮುಂಡ್ಕೋಬೊ
ನಮ್ಗೇನಂತೆ. ಯಾವ್ದೆಲ್ಲಾದ್ರೂ ಹೋಗ್ಲಿ, ನೀನಿ
ಅವ್ತಣಕ್ಕೆ ಏನೇನು, ಎಷ್ಟೆಷ್ಟು ಸಾಮಾನು ಬೇಕಾಗ್ಬಹು
ಅಂತ ಅಂದಾಜ್ಮೇಲೆ ಲಿಸ್ಟ್ ಮಾಡು. ಇಬ್ರೂ ಹೋ
ಎಲ್ಲ ಹೊತ್ಕೊಂಡು ಬರೋಣ. ನೀನು
ಮಾಡೋಷ್ಟಲ್ಲಿ, ಕೈಕಾಲು ಮುಖ ತೊಳ್ಕೊಂ
ರೆಡಿಯಾಗ್ತೀನಿ'' ಎಂದು ಹೇಳಿ ಶ್ರೀನಾಥ ಬಚ್ಚ
ಮನೆಗೆ ಧಾವಿಸಿದ.

ಅಡುಗೆ ವಿಷಯದಲ್ಲಿ ಒಂದಿಷ್ಟೂ ಅನುಭವವಿಲ್ಲ
ಲಾವಣ್ಯಳಿಗೆ ಲಿಸ್ಟ್ ತಯಾರಿಸುವುದಕ್ಕೆ ಸಾಧ್ಯವಾಗಲಿ
ಆದರೆ ಹಾಗಂತ ಕೈ ಕಟ್ಟಿಕೊಂಡು ಕೂತುಕೊಳ್ಳ
ಇಲ್ಲ. ತಾನು ಕಂಡು ಕೇಳಿದ್ದ ವಸ್ತುಗಳ ಹೆಸರುಗಳ
ಮಾತ್ರ ಬರೆದು ತೆಪ್ಪಗೆ ಕೂತುಕೊಂಡು ಬಿಟ್ಟಳು.

ಸ್ವಲ್ಪ ಹೊತ್ತಾದ ಮೇಲೆ ಶ್ರೀನಾಥ ಬಚ್ಚ
ಮನೆಯಿಂದ ಹೊರಬಂದು ಲಾವಣ್ಯಳನ್ನು ಕೇ
"ರೆಡೀ, ಅಂಗ್ಡಿಗೆ ಹೋಗೋಣ?''

ಲಾವಣ್ಯ ಪ್ರತಿಭಟಿಸುವ ರೀತಿಯಲ್ಲಿ, ಕೃ
ಮುನಿಸು ತೋರಿಸಿಕೊಳ್ಳುತ್ತ ಕೇಳಿದಳು "ರೀ ನಾ
ಎಂದೂ ದೊಡ್ಡ ದೊಡ್ಡ ಅಡುಗೆ ಮಾಡ್ದೋಳೇ ಅ

ಏನೇನು ಎಷ್ಟೆಷ್ಟು ಬೇಕಾಗುತ್ತೆ ಅಂತ ನಂಗೆ ಹ್ಯಾಗ್ರೀ ಗೊತ್ತಾಗುತ್ತೆ, ನೀವೇ ಹೇಳಿ ಬರೀತಿನಿ.''

"ನಂಗ್ತಾನೆ ಏನು ಗೊತ್ತಿರೋದು? ಅಂದಾಜ್ನೇಲೆ ಹೇಳ್ತೀನಿ ಬರ್ಕೊ. ಆದ್ರೆ ಒಂದು ಪ್ರಶ್ನೆ ಏನು ಗೊತ್ತಿಲ್ದೋಳು ನೀನು ನಿನ್ನ ಅಕ್ಕ ಭಾವಂಗೆ ಜಿತ್ತ ಹ್ಯಾಗ್ಮಾಡ್ತೀಯ ನಿಂತಲೆ. ಹೋಗಿ ಹೋಗಿ ನಿನ್ಕೈಲಿ ಜಿತ್ತ ಮಾಡಿಸ್ಕೋಬೇಕಲ್ಲ ನಿನ್ನ ಪ್ರೀತಿಯ ಅಕ್ಕ ಭಾವ, ಅವರೆಷ್ಟು ಪುಣ್ಯ ಮಾಡಿರ್ಬೇಕು ಅಲ್ವಾ?''

"ರೀ ತಪ್ಪು ನಂದಲ್ಲ. ನನ್ನ ಮುದ್ದಿಂದ ಸಾಕಿದ್ರಲ್ಲ ನನ್ನ ಅಪ್ಪ ಅಮ್ಮ ಅವ್ರುದ್ದು ತಪ್ಪು. ಬೇಕಾದ್ರೆ ಅವ್ರನ್ನೇ ಕೇಳೋಗಿ.''

"ಹೋಗ್ಲಿ ಬಿಡು. ಕೆಲ್ಸಕ್ಕೆ ಬಾರ್ದ ಮಾತು ಈಗ್ಯಾಕೆ. ಅದೇನು ಬರ್ದಿದ್ದೀ ಓದು, ಏನೇನು ಎಷ್ಟೆಷ್ಟು ಬೇಕಾಗ್ಬಹುದು ಅಂತ ನಾನೇ ಅಂದಾಜ್ನೇಲೆ ಹೇಳ್ತಾ ಹೋಗ್ತೀನಿ. ನೀನು ಬರ್ಕೊಳ್ತಾ ಹೋಗು'' ಎಂದು ಲಾವಣ್ಯಳಿಗೆ ಹೇಳಿ, ಅವಳ ಮುಂದೆ ಕೂತುಕೊಂಡ.

ಲಾವಣ್ಯ ತಾನು ಬರೆದದ್ದನ್ನು ಒಂದೊಂದಾಗಿ ಓದತೊಡಗಿದಳು. ಶ್ರೀನಾಥ ತನಗೆ ತೋಚಿದ ಹಾಗೆ ಅಂಜಿ ಲೆಕ್ಕದಲ್ಲಿ ಹೇಳುತ್ತ ಹೋದ. ಹಾಗೂ ಹೀಗೂ ಅಡುಗೆ ಸಾಮಾನುಗಳ ಲಿಸ್ಟ್ ಸಿದ್ಧವಾಗುವ ಹೊತ್ತಿಗೆ ಸಂಜೆಯಾಯಿತು.

ಲಿಸ್ಟ್ ಸಿದ್ಧವಾಗುತ್ತಲೇ ಶ್ರೀನಾಥ ಬೀಗವನ್ನು ಕೈಲಿ ಹಿಡಿದು ಲಾವಣ್ಯಳಿಗೆ ಹೇಳಿದ "ನೀನು ಚೀಲ, ಡಬ್ಬ ಹಿಡ್ಕೊಂಡು ಹೋಗ್ತಾ ಇರು. ಮನೆಗೆ ಬೀಗ ಹಾಕ್ಕೊಂಡು ಬರ್ತೀನಿ.''

ಮನೆ ಬಾಗಿಲು ತೀರಾ ಶಿಥಿಲವಾಗಿದ್ದು, ಅದನ್ನು ಮುಚ್ಚಿ ಚಿಲಕ ಸೇರಿಸಿ, ಬೀಗ ಹಾಕ ಬೇಕಿದ್ದರೆ ಹೆಚ್ಚಿನ ಬಲ ಮತ್ತು ಚಾತುರ್ಯ ಬೇಕಿತ್ತು. ಈ ವಿಷಯ ಲಾವಣ್ಯಳಿಗೂ ತಿಳಿದಿತ್ತು. ಆದರೂ ಅವಳು ನಿಂತ ಜಾಗದಿಂದ ಕದಲದೆ, ತಲೆ ತಗ್ಗಿಸಿಕೊಂಡು ಸಂಕೋಚದಿಂದ ಹೇಳಿದಳು "ರೀ ನನ್ನ ಅವಾಂತ್ರ ನೋಡಿ, ಥೇಟ್ ಕವ್ವಾ ತಾಯಿ ತರಾ ಇದ್ದೀನಿ ಅಲ್ವಾ ಕರುಕ್ಲು ಪುರುಕ್ಲು ಸೀರೆ, ತೇಪೆ ಹಾಕ್ದ ರವ್ಕೆ, ಚಪ್ಲಿ ಕೂಡ ಇಲ್ಲ ಕಾಲ್ಗೆ. ಆಚೆಗೆ ಬರೋದಕ್ಕೆ ಒಂತರಾ ಆಗುತ್ತೆರಿ. ನೀವೇ ಹೋಗ್ಬನ್ನಿ. ನಾ ಬರೊಲ್ಲ ನಿಂಜೊತೆ.''

"ಲಾವಣ್ಯ, ಪೂರ್ತಿ ಮುಳ್ಗಿದ್ಮೇಲೆ ಚಳಿ ಏನು, ಗಾಳಿ ಏನು, ನನ್ನ ಅವ್ತಾರ ನೋಡು. ನಾನೂ ಕವ್ವಾತಾಯಿ ತರಾ ಇಲ್ವ. ನಾನೊಬ್ನೆ ಎಲ್ಲ ಸಾಮಾನು ಹ್ಯಾಗೆ ತನ್ಲಿ ಹೇಳು ನೀನೇ. ನಡಿ ನಡಿ ಹೊತ್ತಾಗುತ್ತೆ'' ಎಂದು ಆತುರ ಪಡಿಸಿದ ಶ್ರೀನಾಥ.

ಲಾವಣ್ಯ ಅರ್ಧ ಮನಸ್ಸಿನಿಂದ, ಚೀಲಗಳು ಮತ್ತು ಎಣ್ಣೆ ಡಬ್ಬ ಹಿಡಿದು ಮನೆಯಿಂದ ಆಚೆಗೆ ಬಂದು ನಿಂತುಕೊಂಡಳು.

ಶ್ರೀನಾಥ ಬಹು ಪ್ರಯಾಸದಿಂದ ಬಾಗಿಲನ್ನು ಮುಚ್ಚಿ, ಬೀಗ ಹಾಕಿ, ಲಾವಣ್ಯಳ ಜೊತೆ ನಡೆಯತೊಡಗಿದ.

ಕೊಂಚ ದೂರದವರೆಗೆ ಇಬ್ಬರೂ ಮೌನವಾಗಿ ನಡೆಯುತ್ತಿದ್ದರು.

ಲಾವಣ್ಯಳೇ ಮೌನವನ್ನು ಮುರಿದು "ರೀ ನಾನೊಂದ್ಮಾತು ಕೇಳ್ತೀನಿ, ಬೇಜಾರ್ಪಟ್ಕೋಬಾರ್ದು'' ಎಂದು ಮನಮೋಹಕವಾಗಿ ಬಳುಕುತ್ತ ಶ್ರೀನಾಥನನ್ನು ಪ್ರಶ್ನಿಸಿದಳು.

"ಒಂದ್ಮಾತೇನು ಹತ್ಮಾತು ಕೇಳು. ನಂಗೇನು ಬೇಜಾರಿಲ್ಲ.'' ಮುಗುಳುನಗೆ ಬೀರಿ ಒಪ್ಪಿಗೆ ನೀಡಿದ ಶ್ರೀನಾಥ.

"ರೀ ಅಕ್ಕಾ ಭಾವ ಊರ್ಗೆ ಹೊರ್ಟ್ಹೋದ್ಮೇಲೆ, ಹೇಗಾದ್ರೂ ಮಾಡಿ ನಂಗೊಂದು ಕೆಲ್ಸ ಕೊಡ್ಸಿ. ಸಾಲ ತೀರೋವರ್ಗು, ನಾನೂ ಕೆಲ್ಸಕ್ಕೆ ಹೋಗ್ತಾ ಇರ್ತೀನಿ. ನಿಮ್ಗೆ ಯಾವಾಗ ನನ್ನ ಸಂಪಾದ್ನೆ ಸಾಕು ಅನ್ಸುತ್ತೆ ಮುಲಾಜಿಲ್ದೆ ಹೇಳ್ಬಿಡಿ, ಅದೇ ದಿನ ಕೆಲ್ಸ ಬಿಟ್ಬಿಡ್ತೀನಿ. ಅಲ್ಲೀತನ್ಕ ನಂಸಂಬ್ಳ ಬರೀ ಸಾಲಕ್ಕೆ ತುಂಬ್ಸೋಣ. ಏನಂತೀರ?''

"ನೀ ಹೇಳೋದೂ ಸರೀನೇ. ಹೇಡಿ ತರಾ ಸಾಯೋದಕ್ಕೆ ನಂಗೂ ಇಷ್ಟ ಇಲ್ಲ. ನೀನು ಹೇಗೂ ಬಿ. ಎ. ಓದಿದ್ದೀ. ಎಲ್ಲಾದ್ರೂ ಕೆಲ್ಸ ಸಿಕ್ಕೇ ಸಿಕ್ಕುತ್ತೆ. ನಾವು ಒಂದು ಸ್ಥಿತಿಗೆ ಬರೋತನ್ಕ ಮಕ್ಳು ಬೇಡ, ಮರೀನೂ ಬೇಡ. ಅಲ್ವಾ ಲಾವಣ್ಯ?'' ಕೊನೆ ಮಾತುಗಳನ್ನು ಆಡುವಾಗ ಓರೆಗಣ್ಣಿನಿಂದ ಲಾವಣ್ಯಳ ಕಡೆಗೆ ಕಣ್ಣು ಕೊಂಕಿಸಿ ಕುಚೇಷ್ಟೆ ಮಾಡಿದ.

"ನಾನು ಎಂತಾ ಕೆಲ್ಸಕ್ಕೆ ಸೇರ್ಕೊಂಡ್ರೆ ಒಳ್ಳೇದ್ರಿ?'' ಶ್ರೀನಾಥನ ಮುಖವನ್ನು ಅಕ್ಕರೆ ತುಂಬಿದ ನೋಟದಿಂದ

ನೋಡುತ್ತ ಪ್ರಶ್ನಿಸಿದಳು.

"ಯಾವ್ದಾದ್ರೂ ಪರ್ವಾಗಿಲ್ಲ..ಆದ್ರೇ ನಂಗಿಂತ ಕಡಿಮೆ ಸಂಬ್ಳದ ಕೆಲ್ಸಕ್ಕೆ ಮಾತ್ರ ಸೇರ್ಕೋಬೇಡ."

"ಆದ್ಯಾಕ್ರೀ?" ಅರ್ಥವಾದ ಕೇಳಿದಳು ಲಾವಣ್ಯ.

"ಯಾಕಂತ್ಲೋ ನೀನು ಬಿ. ಎ. ಪಾಸ್ ಮಾಡಿದ್ದಿ. ಆದ್ರೇ ನಾನು ಬರೀ ಹೆಚ್. ಒ. ಜಿ. ಅಷ್ಟೇ."

"ಹೆಚ್. ಒ. ಜಿ, ಹಾಂಗಂದ್ರ ಏನ್ರೀ?"

"ಹೆಚ್. ಒ. ಜಿ. ಅಂದ್ರ ಗೊತ್ತಿಲ್ವಾ, ಹಬ್ಬೆಟ್ ಒತ್ತೋ ಗ್ರಾಜುಯೇಟ್ ಅಂತ."

ಲಾವಣ್ಯ ಶ್ರೀನಾಥನ ಜೋಕ್‌ನಿಂದ ಸಂದರ್ಭಕ್ಕೆ ಜಾಸ್ತಿ ಎನ್ನುವಷ್ಟು ನಕ್ಕು, ಆಮೇಲೆ ತಪ್ಪಿತಸ್ಥಳಂತೆ ತಲೆ ತಗ್ಗಿಸಿಕೊಂಡು, ಭಾರವಾದ ದನಿಯಲ್ಲಿ ಪ್ರಶ್ನಿಸಿದಳು "ರೀ ನಂಗೆ ಇವತ್ತು ಮನಸ್ಗೆ ತುಂಬಾ ಬೇಜಾರಾಗಿತ್ತು. ನಿಮ್ಮನ್ನ ಏನೇನೋ ಅಂದ್ಬಿಟ್ಟೆ ಕೋಪಾನ ರೀ ನನ್ಮೇಲೆ?"

"ಖಂಡಿತ ಇಲ್ಲ ಲಾವಣ್ಯ.. ಅಷ್ಟೈಶ್ವರ್ಯವನ್ನೆಲ್ಲ ಬಿಟ್ಟು ನನ್ನನ್ನೇ ನಂಬಿ ಬಂದಿದ್ದೀ. ನಿನ್ಮೇ ನಾನು ಕೋಪ ಮಾಡ್ಕೊಂಡ್ರೆ ದೇವ್ರು ಖಂಡಿತ ಮೆಚ್ಚಲ್ಲ. ನೀನು ನನ್ನ ಪ್ರಾಣ ಲಾವಣ್ಯ. ಪ್ರೀತಿ ಒಂದನ್ನು ಬಿಟ್ಟು ನಿಂಗೆ ಬೇರೇನೂ ಹೆಚ್ಗೆ ಕೊಡ್ಲಾರೆ ನನ್ನ ಚಿನ್ನ." ಉದ್ವೇಗದಿಂದ ಲಾವಣ್ಯಳ ಸುಕೋಮಲ ಹಸ್ತವನ್ನು ಹಿತವಾಗಿ ಹಿಡಿದೆತ್ತಿ, ಕಣ್ಣಿಗೆ ಒತ್ತಿಕೊಂಡು ಎರಡು ಮೂರು ಬಾರಿ ಚುಂಬಿಸಿದ ಶ್ರೀನಾಥ.

" ಥೂ ಬಿಡ್ರೀ ಕೈ. ಪಬ್ಲಿಕ್ ರೋಡ್‌ನಲ್ಲೇನು ನಿಮ್ಮ ಚೇಷ್ಟೆ. ನಿಮ್ಮ ಬೆಡ್‌ರೂಮಲ್ಲ ಇದು" ಎಂದು ಕೈ ಕೊಸರಿಕೊಂಡು, ಶ್ರೀನಾಥನಿಂದ ಕೊಂಚ ಸರಿದು "ರೀ ಇದ್ಯಾಕ್ರಿ ಈ ಕಡೆ ಬಂದ್ವೀ, ಶೆಟ್ರಂಗ್ಡಿ ಇರೋದು ಆ ಕಡೆ ಅಲ್ವಾ, ದಾರಿ ಗೀರಿ ತಪ್ಪಿಸಿಕೊಂಡ್ವಾ ಏನ್ಕತೆ?" ಎಂದು ಕೇಳಿದಳು.

"ದಾರಿ ಏನೂ ತಪ್ಪಿಸಿಕೊಂಡಿಲ್ಲ. ಬೇಕಂತ್ಲೇ ಈ ಕಡೆ ಬಂದೆ ಲಾವಣ್ಯ. ಇರೋ ಗುಟ್ಟು ಇಷ್ಟೇ, ಶೆಟ್ರಂಗ್ಡೀಲಿ ವಿಪ್ರೀತ ಸಾಲ ಮಾಡ್ಬಿಟ್ಟಿದ್ದೀನಿ. ನನ್ನ ನೋಡಿದ್ರೆ ಎಗರಾಡ್ತಾನ. ಇರೋ ದುಡ್ಡೆಲ್ಲ ಅವ್ನ ಬಾಯ್ಗೆ ಸುಕ್ಕಿದ್ರ ಬೇರೆ ಖರ್ಚ್ಗೆ ಏನ್ಮಾಡೋದು ಅಲ್ವಾ. ಈ ಬೀದಿ ಕೊನೇಲಿ ಹೊಸ್ದಾಗಿ ಜನತಾ ಬಜಾರ್

ಓಪನ್ ಆಗಿದೆ. ಬೇರೆ ಕಡೆಗಿಂತ ಇಲ್ಲಿ ಕ
ಚೀಪಂತೆ. ಒಂದೆರ್ಡು ರೂಪಾಯಿ ಮಿಕ್ರೆ ಯಾತಕ್ಕಾ
ಆಗುತ್ತ ಅಲ್ವಾ ಲಾವಣ್ಯ."

"ಆದಕ್ಕೇ ರೀ ನಾ ಹೇಳೋದು, ನಾನು ಕ
ಸೇರ್ಕೋತೀನಿ ಅಂತ. ಆಮೇಲೆ ಇರೋ ಸಾಲಾ
ಬೇಗ್ಬೇಗ ತೀರ್ಸಿ ಬಿಡ್ಬಹುದು. ಸಾಲ ತೀರೋದ
ನಾವಿಬ್ರೂ ರಾಜ ರಾಣಿ ತರಾ ಹಾಯಾಗಿ ಇರ್ಬಹ
ಅಲ್ವಾರೀ?"

"ಮೊದ್ಲು ಕೆಲ್ಸ ಸಿಕ್ಲಿ ಲಾವಣ್ಯ. ಆಮೇಲೆ
ರಾಣಿ ಆಟ ಆಡೋಣ. ಅಲ್ಲೀತನ್ಕ ಬರೀ ಕನ್ಸು ಕ
ಇರು. ಈಗ ಕೆಲ್ಸ ಸಿಕ್ಕೋದು ವಿಪ್ರೀತ ಕಷ್ಟ. ಗ
ಮರಿ. ಲಂಚ ಕೊಟ್ರೇನೋ ಬೇಗ ಸಿಕ್ಕುತ್ತೆ. ಆದ್ರೆ
ಕೊಡೋಕೆ ಕಾಂಚಾಣ ಬೇಕಲ್ಲ, ಅದಕ
ಮಾಡೋದು?"

ಇಷ್ಟು ಹೊತ್ತಿಗೆ ಮೇಯಿನ್ ರೋಡನ್ನು ಪ್ರವೆ
ಪ್ರತಿಷ್ಠಿತ ಪಂಚತಾರ ಹೋಟೆಲನ್ನು ದಾಟಿ, ಹೋಗಬೆ
ಜನತಾ ಬಜಾರ್ ಅನ್ನು ತಲುಪಿದ್ದರು.

ಜನತಾ ಬಜಾರ್‌ನಲ್ಲಿ ಹೆಚ್ಚಿನ ಗ್ರಾ
ರಿದ್ದುದರಿಂದ ಮತ್ತು ಕೊಳ್ಳಬೇಕಿದ್ದ ಸಾಮಾನು
ಪಟ್ಟಿ ವಿಪರೀತ ಉದ್ದವಾಗಿದ್ದುದರಿಂದ ಎಲ್ಲ ಸಾಮ
ಗಳನ್ನು ಪ್ಯಾಕ್ ಮಾಡಿಸಿ, ದುಡ್ಡು ಕೊಟ್ಟು ಅಂಗಡಿಯಿ
ಹೊರಬರುವುದಕ್ಕೆ ರಾತ್ರಿ ಎಂಟು ಗಂಟೆ ಹೊಡೆದಿ

ಹೆಚ್ಚಿನ ಭಾರ ಹೊತ್ತಿದ್ದ ಶ್ರೀನಾಥ ಅಂಗಡಿಯ
ಬಿಟ್ಟ ಕ್ಷಣದಿಂದಲೇ ವೇಗವಾಗಿ ಹೆಜ್ಜೆ ಹಾಕತೊಡ
ವೇಗವಾಗಿ ನಡೆಯುವ ಅಭ್ಯಾಸವಿಲ್ಲದ ಲಾ
ಶ್ರೀನಾಥನ ಸಮಕ್ಕೆ ನಡೆದು ಬರಲು ಪ್ರಯ
ಸೋತು ದಣಿದಳು. ತನ್ನಿಂದ ದೂರವಾಗು
ಶ್ರೀನಾಥನನ್ನು ಕೂಗಿ ನಿಲ್ಲಿಸಿ, ಜೊತೆ ಜೊತೆಯ
ಮನೆಗೆ ಹಿಂತಿರುಗಬೇಕು ಎನ್ನುವ ಆಲೋ
ಲಾವಣ್ಯಳಿಗೆ ಬಾರದೇ ಇರಲಿಲ್ಲ. ಆದರೆ ಬೀದಿಯ
ಅವನನ್ನು ಕೂಗಿ, ಎಲ್ಲರ ಗಮನವನ್ನು ತನ್ನ
ಸೆಳೆದುಕೊಳ್ಳಲು ಅವಳಿಗೆ ಸಂಕೋಚ ಅಡ್ಡ ಬಂದ
ಸಹಜವಾಗಿಯೇ ಇತ್ತು.

ಆದರೆ ಇಷ್ಟರಲ್ಲಿ ಪಂಚತಾರ ಹೋಟ
ಮುಂಭಾಗವನ್ನು ತಲುಪಿದ್ದ ಶ್ರೀನಾಥನೇ ಲಾ



ತನ್ನಿಂದ ಎಷ್ಟು ಹಿಂದೆ ಬರುತ್ತಿದ್ದಾಳೆ ಎಂದು ತಿಳಿದುಕೊಳ್ಳುವ ಕುತೂಹಲದಿಂದ ಹಿಂತಿರುಗಿ ನೋಡಿ [illegible]ಗಾಗಿ ಕಾದು ನಿಂತ. ಅವನ ದೇಹವೆಲ್ಲ ಬೆವರಿಂದ ತೊಯ್ದು ಹೋಗಿತ್ತು. ಕೊಂಚ ಹೊತ್ತಿನ ಮೇಲೆ ತನ್ನ ಬಳಿಗೆ ಏದುತ್ತ ಬಂದ ಲಾವಣ್ಯಳನ್ನು "ಬೇಗ ಬೇಗ ಬರಬಾರ್ದ ಲಾವಣ್ಯ?" ಎಂದು ಗದರಿಸುವ ದಾಟಿಯಲ್ಲಿ ಪ್ರಶ್ನಿಸಿದ.

ಲಾವಣ್ಯ ಮೇಲುಸಿರನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತ "ರೀ ಪ್ಲೀಸ್ ರಿಕ್ಷಾ ಮಾಡ್ರೀ ಒಂದ್ಹೆಜ್ಜೆ ಮುಂದಿಡೋಕೋ ಆಗಲ್ಲ ನಂಗೆ ರೀ" ಎಂದು ಗೋಗರೆದಳು. ತವರಿನಲ್ಲಿ ಒಂದಿಷ್ಟೂ ಕಷ್ಟ ಪಡದೆ, ಸುಖವಾಗಿ ಬೆಳೆದಿದ್ದ ಲಾವಣ್ಯಳಿಗೆ ಈಗ ನಿಜಕ್ಕೂ ಸುಸ್ತಾಗಿತ್ತು.

"ಥತ್ತೇರಿಕೆ; ನಾಲ್ಕ್ಹೆಜ್ಜೆ ನಡೆದ್ರೆ ಮನೆ ಸಿಕ್ಕುತ್ತೆ. ಈಗ ರಿಕ್ಷಾ ಮಾಡೋದು. ಒಂದ್ಕೆಲ್ಸ ಮಾಡು, ನೀನು ಇಲ್ಲೇ ನಿಂತಿರು. ನಾನು ಇದೆಲ್ಲ ಮನೇಲಿ ಬಿಟ್ಟು ಬರ್ತೀನಿ. ಆಮೇಲೆ ನಾನೇ ನಿನ್ನ ಹತ್ರ ಇರೋ ಸಾಮಾನೆಲ್ಲ ಹೊತ್ಕೊಂಡು ಬರ್ತೀನಿ" ಎಂದು ಹೇಳಿ ಮುಖವನ್ನು ಸಿಂಡರಿಸಿಕೊಂಡು, ಮುಂದಕ್ಕೆ ಹೆಜ್ಜೆ ಇಡುವುದರಲ್ಲಿ ಇದ್ದ. ಆದರೆ ಅಷ್ಟರಲ್ಲಿ ಲಾವಣ್ಯ ಹಸುಗೂಸಿನ ತರಾ ಸಮಸ್ಯೆ ಒಡ್ಡಿ, ಕ್ಷಣ ಕಾಲ ಶ್ರೀನಾಥ ನಿಲ್ಲುವಂತೆ ಮಾಡಿ ಹೇಳಿದಳು. "ರೀ ನಾನೊಬ್ಳೇ ಈ ಹೊತ್ನಲ್ಲಿ, ಅದೂ ಈ ಜಾಗ್ದಲ್ಲಿ ನಿಂತ್ಕೊಂಡಿರೋದಕ್ಕೆ ಭಯ ಆಗುತ್ತೇರಿ. ರಿಕ್ಷಾ ಮಾಡ್ರಿ ದಯವಿಟ್ಟು ಎಷ್ಟು ಖರ್ಚಾಗುತ್ತೆ ಮಹಾ?"

"ಏನ್ಲಾವಣ್ಯ, ಇಷ್ಟೊಂದು ಜನ ಓಡಾಡ್ತಾ ಇದಾರೆ ಭಯ ಅಂತ್ಯಲ್ಲ, ಇಷ್ಟೊಂದು ಪುಕ್ಲಾದ್ರೆ ಈಗಿನ ಕಾಲ್ದಲ್ಲಿ ಜೀವನ ನಡ್ಸೋದೇ ಕಷ್ಟ ಆಗುತ್ತೆ, ಧೈರ್ಯವಾಗಿರು ನಿಂಗೇನೂ ಆಗಲ್ಲ. ನಾನು ಬೇಗ ಬರ್ತೀನಿ" ಎಂದು ಹೇಳಿ, ಲಾವಣ್ಯಳ ಮರುಮಾತಿಗೆ ಕಾಯದೆ ಮುಂದೆ ನಡೆದ.

"ಬೇಗ ಬನ್ನಿ, ನಂಗೆ ಭಯ ಆಗುತ್ತೆ ರೀ" ಎಂದು ಕೂಗಿ ಹೇಳಿ ಎಷ್ಟೆ ಇದ್ದ ಬ್ಯಾಗು ಅದರ ಜೊತೆಯಲ್ಲಿ ನಾಲ್ಕೈದು ಚೀಲಗಳನ್ನು ಫುಟ್‌ಪಾತ್ ಮೇಲೆ ಇಟ್ಟು ಕ್ಷಣಗಳನ್ನು ಎಣಿಸತೊಡಗಿದಳು.

ಶ್ರೀನಾಥ್ "ಬೇಗ ಬರ್ತೀನಿ" ಎಂದು ಹೇಳುತ್ತ ಲಾವಣ್ಯಳಿಂದ ಒಂದಷ್ಟು ದೂರ ನಡೆದಿದ್ದ.

ಅಷ್ಟರಲ್ಲೇ,

ಎದುರುಗಡೆಯಿಂದ ವೇಗವಾಗಿ ಬಂದ ಕೆಂಪು ಬಣ್ಣದ ಬೆನ್ಜ್ ಕಾರೊಂದು, ರಸ್ತೆಯ ಹೊರ ಮೈಯನ್ನು ಸುಲಿದು ಹಾಕುವಂತೆ "ಕಿರ್" ಎಂದು ಪ್ರಚಂಡ ಶಬ್ದದೊಂದಿಗೆ ಲಾವಣ್ಯಳ ಹತ್ತಿರ ಬಂದು ನಿಂತಿತು.

ಲಾವಣ್ಯಳಿಗೆ ಕ್ಷಣ ಕಾಲ ಜಂಘಾಬಲ ಉಡುಗಿ ಹೋಯಿತು. ಅವಳು ಭಯದಿಂದ ನೋಡುತ್ತಿದ್ದಂತೆ ಕಾರಿಂದ ನಾಲ್ಕು ದಾಂಡಿಗರು ಅತ್ಯಂತ ಆತುರದಿಂದ ಇಳಿದು ಪಂಚತಾರ ಹೋಟೆಲ್ ಕಡೆಗೆ ಧಾವಿಸಿದರು. ಹಾಗೆ ಹೋಗುತ್ತ, ಸೋಡಿಯಂ ವೇಪರ್ ಲ್ಯಾಂಪ್ಸ್‌ಗಳ ಉಜ್ವಲ ತಿಳಿ ಕಿತ್ತಳೆ ವರ್ಣದ ಬೆಳಕಿನಲ್ಲಿ ಸೌದಾಮಿನಿಯಂತೆ ಹೊಳೆಯುತ್ತಿದ್ದ ಲಾವಣ್ಯಳ ಕಡೆಗೆ ವಕ್ರ ದೃಷ್ಟಿ ಬೀರಿ "ಎಹ್ಹೆಯ್ಯ್" ಎಂದು ಕಿರುಕಲು ರಾಗದಲ್ಲಿ ಕಿರುಚುತ್ತ ಲಾವಣ್ಯಳಿಗೆ ಮತ್ತಷ್ಟು ಹೆದರಿಕೆ ಆಗುವಂತೆ ಮಾಡಿದರು.

ಅದೇ ಕ್ಷಣದಲ್ಲಿ ಎದುರಿಗಿದ್ದ ಕಾರ್ ಪಾರ್ಕಿನ ಹಿಂಬದಿಯ ಕತ್ತಲು ಜಾಗದಲ್ಲಿ ಅಡಗಿ ಕೂತಿದ್ದ ದುಷ್ಕರ್ಮಿಗಳು ಹೋಟೆಲ್ ಕಡೆಗೆ ಹೋಗುತ್ತಿದ್ದ ನಾಲ್ಕು ಯುವಕರ ಮೇಲೆ ಮಿಂಚಿನ ವೇಗದಲ್ಲಿ ಗುಂಡಿನ ಮಳೆ ಸುರಿಸಿ, ಅಷ್ಟೇ ವೇಗದಲ್ಲಿ ಕತ್ತಲಲ್ಲಿ ಕರಗಿ ಹೋದರು.

ಕಣ್ಣಿನ ರೆಪ್ಪೆ ಮುಚ್ಚಿ ತೆಗೆಯುವುದರೊಳಗಾಗಿ ನಾಲ್ಕು ದಾಂಡಿಗರೂ ಒಂದೊಂದು ಭಂಗಿಯಲ್ಲಿ ಕೈಕಾಲುಗಳನ್ನು ಚಾಚಿಕೊಂಡು ರಕ್ತವನ್ನು ಬಸಿಯುತ್ತ ಬಿದ್ದು ಅಸು ನೀಗಿದರು.

ಗುಂಡಿನ ಶಬ್ದದ ಪ್ರತಿಧ್ವನಿ ಅಡಗಿ ಹೋಗುವ ಮುನ್ನವೇ "ಅಯ್ಯೋ ಸತ್ತೆ ಅಮ್ಮಾ" ಎನ್ನುವ ಹೃದಯ ವಿದ್ರಾವಕ ಆರ್ತನಾದ ಲಾವಣ್ಯಳ ಗಂಟಲಿನಿಂದ ಹೊರಬಿದ್ದು ದಶದಿಕ್ಕುಗಳಲ್ಲಿ ಮಾರ್ದನಿಸಿತು.

ಲಾವಣ್ಯಳ ಚೀತ್ಕಾರ, ಒಂದಿಷ್ಟು ದೂರ ನಡೆದಿದ್ದ ಶ್ರೀನಾಥ್‌ನ ಚುರುಕು ಕಿವಿಗಳ ಮೇಲೂ ಬಿದ್ದು, ಅವನಿಗೆ ಸಿಡಿಲು ಬಡಿದಂತಾಗಿ, ಅವನ ಹೃತ್ಕ್ರಿಯೆ ಸ್ತಂಭಿಸಿ, ದೇಹದ ಚಲನಾಶಕ್ತಿ ನಿಷ್ಪ್ರಯೋಜನವಾಯಿತು.

ಮರುಕ್ಷಣವೇ ಅವನ ದೇಹದಾದ್ಯಂತ ಪೈಶಾಚಿಕ ಶಕ್ತಿ ಆವರಿಸಿತು. ಕ್ಷಣಾರ್ಧದಲ್ಲಿ 'ಲಾವಣ್ಯಾ' ಎಂದು ಚೀರಿ, ಅವನ ದಾರಿಗೆ ಅಡ್ಡಲಾಗಿ ಬಿದ್ದಿದ್ದ ನಾಲ್ಕು ಅಪರಿಚಿತ ಹೆಣಗಳನ್ನು ಮೆಟ್ಟಿಕೊಂಡು ಲಾವಣ್ಯಳ ಬಳಿಗೆ ಓಡಿ ಬಂದ.

ಲಾವಣ್ಯ ರಕ್ತದ ಮಡುವಿನಲ್ಲಿ, ದೇಹದಿಂದ ಬೇರ್ಪಡಿಸಿದ ಹಲ್ಲಿಯ ಬಾಲದಂತೆ ಒದ್ದಾಡುತ್ತಿದ್ದಾಳೆ.

ಶ್ರೀನಾಥ್ ತನ್ನ ನೆತ್ತಿ ಮತ್ತು ಭುಜಗಳ ಮೇಲೆ ಹೊತ್ತಿದ್ದ ಅಕ್ಕಿ, ಬೇಳೆ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಬಿಸಾಡಿ 'ಲಾವಣ್ಯ' ಎಂದು, ತನ್ನ ಕಂಠ ಶಕ್ತಿಯಿಂದಲೇ ಮೃತ್ಯು ದೇವತೆಯನ್ನು ಮೆಚ್ಚಿಸಿ, ಲಾವಣ್ಯಳನ್ನು ಮರಳಿ ಪಡೆಯುತ್ತೇನೆ ಎನ್ನುವಂತೆ ಅರಚಿದ. ಅವಳನ್ನು ಅಪ್ಪಿ ಹಿಡಿದು, ತೊಡೆಯ ಮೇಲೆ ಮಲಗಿಸಿಕೊಂಡು 'ಲಾವಣ್ಯ ಲಾವಣ್ಯ ಏನಾಯ್ತು ನನ್ನ ಚಿನ್ನ, ಮಾತಾಡು ಬಂಗಾರ' ಎಂದು ರೋದಿಸತೊಡಗಿದ.

ಲಾವಣ್ಯ ಶ್ರೀನಾಥ್‌ನ ಕೈಯನ್ನು ಹಿಡಿದು, ಅತ್ಯಂತ ಕಷ್ಟದಿಂದ ಸಣ್ಣ ಕಿರುನಗೆಯೊಂದನ್ನು ಒಣಗುತ್ತಿದ್ದ ತುಟಿಗಳ ಮೇಲೆ ಮಿಂಚಿಸಿ 'ರೀ ನಂಗೇ ಸಾಯೋಕೆ ಭ.... ಭಯಾರೀ'' ಎಂದು ಪಿಸುಗುಟ್ಟಿದಳು. ಇಷ್ಟು ಹೇಳುವುದರಲ್ಲಿ ಅವಳ ಸುಂದರವಾದ ಕಣ್ಣುಗಳು ನಿಧಾನವಾಗಿ ಮುಚ್ಚಿಕೊಂಡವು. ಅನಂತರ ಅವಳ ಐಶ್ವರ್ಯ ದೇವತೆಯಾಗಿದ್ದಂತ ಕೈಗಳು ಕಳಚಿ ಬಿದ್ದು ಹೋದವು. ಆದರೊಂದಿಗೆ ಅವಳ ಕತ್ತೂ ಪಕ್ಕಕ್ಕೆ ಜೋತು ಬಿದ್ದು ಜಡ ವಸ್ತುವಾಯಿತು.

ಶ್ರೀನಾಥ್ ತನ್ನ ತುಟಿಗಳು ಬಿರಿದು, ರಕ್ತ ಹೊರ ಹೊಮ್ಮಲಿ, ಅದರಿಂದಲೇ ಲಾವಣ್ಯಳಿಗೆ ಪ್ರೇತಬಲಿ ಕೊಡುವೆ ಎನ್ನುವಂತೆ, ಅವಳ ದೇಹವನ್ನು ಬಲವಾಗಿ ಅಪ್ಪಿ ತೃಪ್ತಿ ಆಗುವತನಕ ಚುಂಬಿಸಿದ. ಅನಂತರ ಹುಚ್ಚು ಹಿಡಿದವನಂತೆ ಬಾಯಿ ಬಾಯಿ ಬಡಿದುಕೊಂಡು ವಿಕಾರವಾಗಿ ಅಳತೊಡಗಿದ. ಅವನ ಕಿರುಚಾಟ ಅರಣ್ಯರೋದನವಾಯಿತೇ ವಿನಾ ಅವನ ಸಹಾಯಕ್ಕೆ ಯಾರೂ ಬರಲಿಲ್ಲ.

ಕಾರಣ,

ವಿನಾಶಕಾರಿ ಬಂದೂಕಿನ ಶಬ್ದ ಕೇಳಿಸಿದ ಕ್ಷಣದಲ್ಲಿ ಸುತ್ತ ಮುತ್ತ ಇದ್ದ ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿಗಳ ರೋಲಿಂಗ್ ಶಟ್ಟರ್ಸ್‌ಗಳನ್ನು ಕೆಳಗೆಳೆದುಕೊಂಡು ಒಳಗಡೆ ನಡುಗುತ್ತ ಕೂತುಬಿಟ್ಟರು. ಬೀದಿಯಲ್ಲಿ ಓಡಾಡುತ್ತಿದ್ದ ಸಾರ್ವಜನಿಕರು ಪ್ರಾಣಭೀತಿಯಿಂದ ಎಲ್ಲೆಲ್ಲಿ ಅವಿತುಕೊಳ್ಳಲು ಸಾಧ್ಯವೋ ಅಲ್ಲಲ್ಲಿ ತಲೆಮರೆಸಿಕೊಂಡು ಕೂತರು. ಚಲಿಸುತ್ತಿದ್ದ ವಾಹನಗಳು ದೂರಕ್ಕೆ ಹೋಗಿ ಮಾಯವಾದುವು. ಹೀಗಾಗಿ ಕೆಲವೇ ಕ್ಷಣಗಳಲ್ಲಿ ರಸ್ತೆ ನಿರ್ಜನವಾಯಿತು.

ಮರಗಳ ಮೇಲೆ ಹಾಯಾಗಿ ನಿದ್ರಿಸುತ್ತಿದ್ದ ಸಾವಿರಾರು ಪಕ್ಷಿಗಳು ಗುಂಡಿನ ಶಬ್ದಕ್ಕೆ ಹೆದರಿ ಒಮ್ಮೆಲೇ ಎಚ್ಚೆತ್ತು ಚೆಲ್ಲಾಪಿಲ್ಲಿಯಾಗಿ ಹಾರಾಡುತ್ತ ಶಬ್ದ ಮಾಡತೊಡಗಿದವು.

ಇಷ್ಟರಲ್ಲಿ ಪಂಚತಾರ ಹೋಟೆಲ್‌ನವರು ಕೊಟ್ಟ ಸುದ್ದಿಯಿಂದ ಕೆಲವೇ ನಿಮಿಷಗಳಲ್ಲಿ ಸಶಸ್ತ್ರ ಪೋಲೀಸ್ ಪಡೆ ಧಾವಿಸಿ ಬಂದು, ದುರಂತ ಜರುಗಿದ ಸ್ಥಳವನ್ನು ಸುತ್ತುಗಟ್ಟಿ ಬಂದೂಕುಗಳನ್ನು ಹಿಡಿದು ಸಜ್ಜಾಗಿ ನಿಂತರು. ಅವರ ಜೊತೆಯಲ್ಲಿ ಕರೆತಂದಿದ್ದ ಪೋಲೀಸ್ ನಾಯಿಗಳಿಗೆ ಹಂತಕರ ಜಾಡನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಆದರೆ ಕಾರಿನ ಡಿಕ್ಕಿಯಲ್ಲಿ ಗೋಪ್ಯವಾಗಿ ಇಟ್ಟಿದ್ದ ಕಳ್ಳಸಾಗಣೆಕೆಯ ಮಾದಕ ವಸ್ತುಗಳನ್ನು ಪತ್ತೆ ಹಚ್ಚಲು ಪೋಲೀಸರಿಗೆ ಆ ನಾಯಿಗಳು ಸಹಾಯ ಮಾಡಿದವು.

ಪೋಲೀಸರ ಆಗಮನದಿಂದ ಧೈರ್ಯಗೊಂಡ ಸಾರ್ವಜನಿಕರು ಅವಿತು ಕೂತಿದ್ದ ಜಾಗಗಳಿಂದ ಹೊರ ಬಂದು ಹತ್ಯಾಕಾಂಡವನ್ನು ಅತ್ಯಂತ ಕುತೂಹಲದಿಂದ ನೋಡತೊಡಗಿದರು. ಕೆಲವರು ಲಾವಣ್ಯಳೂ ಕಳ್ಳ ಸಾಗಾಣಿಕೆಯವರ ಗುಂಪಿನವಳೇ ಇರಬಹುದು ಎಂದು ಶಂಕಿಸಿದರೆ, ಇನ್ನೂ ಕೆಲವರು ಅವಳ ಚಾರಿತ್ರ್ಯದ ಬಗ್ಗೆ ಲಘುವ್ವಾಗಿ ಮಾತಾಡಿದರು.

ಪೋಲೀಸರಿಗೆ ಮಾತ್ರ ಲಾವಣ್ಯ ಮತ್ತು ಶ್ರೀನಾಥ್‌ರ ಬಗ್ಗೆ ಒಂದಿಷ್ಟೂ ಸಂಶಯ ಬರಲಿಲ್ಲ. ಲಾವಣ್ಯಳ ಸುತ್ತ ರಕ್ತದೊಂದಿಗೆ ಬೆರೆತು, ಹರಡಿ ಬಿದ್ದಿದ್ದ ಆಹಾರ ಸಾಮಾಗ್ರಿಗಳೇ ಇವಳು ನಿರ್ದೋಷಿ ಎಂದು ಸಾರಿ ಹೇಳುತ್ತಿತ್ತು.

ಮುಂದಿನ ಅರ್ಧ ಗಂಟೆಯಲ್ಲಿ ಪೋಲೀಸ್ ತಪಾಸಣೆ ಮುಗಿದು, ಐದು ಶವಗಳನ್ನು ಶವಪರೀಕ್ಷೆ ಗೋಸ್ಕರ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಯಿತು.

ಪೋಲೀಸರ ಜೊತೆಯಲ್ಲಿ ಶ್ರೀನಾಥನೂ ಆಸ್ಪತ್ರೆಗೆ ವ್ಯಾನಿನಲ್ಲಿ ಹೋದ.

ಮಾರನೆಯ ದಿನ ಬೆಳಗಿನ ಎಲ್ಲ ಸ್ಥಳೀಯ ಪತ್ರಿಕೆಗಳಲ್ಲಿ, ಚಿತ್ರಗಳನ್ನೊಳಗೊಂಡ ಸುದ್ದಿಯನ್ನು ವಿವರವಾಗಿ ಮುದ್ರಿಸಲಾಗಿತ್ತು. ಹಂತಕರ ಸ್ಪಷ್ಟಗುರುತುಗಳು ಪೋಲೀಸರಿಗೆ ಸಿಕ್ಕಿದೆ ಎಂದೂ, ಅವರನ್ನು ಅತಿ ಶೀಘ್ರದಲ್ಲಿ ಬಂಧಿಸಲಾಗುವುದು ಎಂದು ಅಧಿಕೃತ ಮೂಲಗಳಿಂದ ತಿಳಿದು ಬಂದಿದೆ ಎಂದೂ ಮುದ್ರಿಸಲಾಯಿತು.

ಶವಪರೀಕ್ಷೆ ಮುಗಿಸಿ, ಒಂಬತ್ತರ ಸುಮಾರಿಗೆ ಲಾವಣ್ಯಳ ಶವವನ್ನು ಶ್ರೀನಾಥ್‌ನಿಗೆ ಒಪ್ಪಿಸಲಾಯಿತು.

ಅದೇ ವೇಳೆಗೆ ಶ್ರೀನಾಥ್‌ನ ಮನೆಯ ಮಾಲೀಕ, ಅಕ್ಕಪಕ್ಕದ ಮನೆಯವರು, ಸಹೋದ್ಯೋಗಿಗಳು ತಂಡ ತಂಡವಾಗಿ ಆಸ್ಪತ್ರೆಗೆ ಬಂದು ದುರ್ವಿಧಿಗೆ ತುತ್ತಾದ ಲಾವಣ್ಯಳನ್ನು ಕಂಡು ಶೋಕ ವ್ಯಕ್ತಪಡಿಸಿ ಹೋದರು. ಆದರೆ ಏಕೋ ಏನೋ ಯಾರೊಬ್ಬರೂ ಶ್ರೀನಾಥ್‌ನೊಂದಿಗೆ ನಿಂತು ಮುಂದಿನ ಸೂತಕದ ಕಾರ್ಯಕ್ಕೆ ನೆರವಾಗಲಿಲ್ಲ. ಹಾಗೇ ಶ್ರೀನಾಥ್‌ನೂ ಯಾರನ್ನೂ ಸಹಾಯ ಮಾಡಿ ಎಂದು ಬೇಡಿಕೊಳ್ಳಲೂ ಇಲ್ಲ. ಹಿಂದಿನ ರಾತ್ರಿ ಸಾಮಾನುಗಳನ್ನು ಕೊಂಡ ಬಳಿಕ ಉಳಿದಿದ್ದ ಕೊಂಚ ಹಣವನ್ನು ಶ್ರೀನಾಥ್ ಲಾವಣ್ಯಳ ಬಳಿ ಇದ್ದ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡಿರುವಂತೆ ಹೇಳಿ ಅವಳಿಗೆ ಕೊಟ್ಟಿದ್ದ. ಈಗ ಅದರ ನೆನಪು ಕೂಡ ಶ್ರೀನಾಥ್‌ನಿಗೆ ಬೇಕಿರಲಿಲ್ಲ.

ಮುಂದೇನು ಮಾಡಬೇಕೆಂದು ತಿಳಿಯದೆ ಗರಬಡಿದವರನಂತೆ ಲಾವಣ್ಯಳ ಪಾರ್ಥಿವ ಶರೀರದ ಮುಂದೆ ಕಣ್ಣೀರು ಹಾಕುತ್ತ ಕೂತು ಬಿಟ್ಟಿದ್ದ.

ಸೂರ್ಯ ನಡು ನೆತ್ತಿಯ ಮೇಲಕ್ಕೆ ಬಂದ ಸಮಯಕ್ಕೆ ಮೈಸೂರಿನಿಂದ ಬಂದ ಲಾವಣ್ಯಳ ಅಕ್ಕ, ಭಾವ ಮನೆ ಮಾಲೀಕನಿಂದ ಲಾವಣ್ಯಳಿಗೆ ಒದಗಿದ ಸಾವಿನ ಬಗ್ಗೆ ವಿಷಯ ತಿಳಿದು ಆಸ್ಪತ್ರೆಗೆ ಧಾವಿಸಿದರು. ಅವರನ್ನು ಕಂಡ ಕ್ಷಣದಲ್ಲಿ ಶ್ರೀನಾಥ ತಾಯಿಯನ್ನು ಕಳೆದುಕೊಂಡ ಹಸುಗೂಸಿನಂತೆ ದುಃಖಪಟ್ಟ. ಗುಂಡಿನೇಟು ತಗುಲಿ ಸಾಯುವುದಕ್ಕೆ ಕ್ಷಣಗಳ ಹಿಂದ ಲಾವಣ್ಯ ಅಪಾರ ಯಾತನೆಯಿಂದ ಪಿಸುಗುಟ್ಟಿದ 'ನಂಗೆ ಸಾಯೋಕೆ ಭಯ ರೀ' ಎನ್ನುವ ಮಾತುಗಳನ್ನು ಅವರ ಮುಂದೆ ಹತ್ತಾರು ಬಾರಿ ಹೇಳಿ ಗೋಳಾಡಿದ. 'ನಾ ಬರೋಲ್ಲ, ನೀವೇ ಹೋಗಿ ಅಂತ ಅಂದ್ಲು ಪಾಪ. ನಾನು ಅವಳ ಮಾತು ಕೇಳಿದ್ರೆ ಹೀಗಾಗ್ತಿರ್ಲಿಲ್ಲ. ಮನೇಲಿ ಇದ್ದೋಳ್ನ ಆಚೆಗೆ ಕರ್‍ಕೊಂಡು ಬಂದು ಬೀದೀಲಿ ಬಿದ್ದು ಸಾಯೋ ಹಾಗೆ ಮಾಡ್ದೆ ಪಾಪ. ಒಬ್ಬಳ್ನೇ ನಿಂತ್ಕೊ ಅಂತ ಹೇಳ್ಬಾರ್ದಾಗಿತ್ತು. ಅವಳೊಂದ್ಗೆ ನಾನೂ ಇದ್ದಿದ್ರೆ ಇಬ್ರೂ ಒಟ್ಗೆ ಸತ್ತೋಗ್ಬಹುದಿತ್ತು. ಪಾಪ ಸುಖದ ಸುಪ್ಪತ್ಗೆ ಮೇಲೆ ಇರ್ಬೇಕಾದೋಳ್ಗೆ ಎಂತಾ ಸಾವು ಕೊಟ್ಟ ದೇವ್ರು. ನನ್ನ ಕಟ್ಕೊಂಡು ಪಡಬಾರ್ದ ಕಷ್ಟಪಟ್ಳು ಮಹಾತಾಯಿ' ಎಂದೆಲ್ಲ ಹೇಳಿಕೊಂಡು ತನ್ನನ್ನು ತಾನೇ ತುಚ್ಛೀಕರಿಸಿಕೊಂಡ.

ಶ್ರೀನಾಥ್‌ನನ್ನು ಸಮಾಧಾನಪಡಿಸಿ, ಲಾವಣ್ಯಳ ದೇಹವನ್ನು ಕಾರ್ಪೋರೇಶನ್ ವ್ಯಾನಿನಲ್ಲಿ ರುದ್ರಭೂಮಿಗೆ ಸಾಗಿಸುವಷ್ಟರಲ್ಲಿ ಲಾವಣ್ಯಳ ಭಾವನವರಿಗೆ ಸಾಕು ಸಾಕಾಯಿತು.

ಎರಡು ಗಂಟೆಯ ಹೊತ್ತಿಗೆ ಲಾವಣ್ಯಳನ್ನು ಗರ್ಭೀಕರಿಸಿಕೊಂಡ ಚಿತೆ ಆಳೆತ್ತರಕ್ಕೆ ಹತ್ತಿ ಉರಿಯ ತೊಡಗಿತು.

ಅದೇ ವೇಳೆಗೆ ರುದ್ರ ಭೂಮಿಯ ಪ್ರವೇಶ ದ್ವಾರದ ಬಳಿ ಕಾರೊಂದು ವೇಗವಾಗಿ ಬಂದು ನಿಂತಿತು. ಬ್ರಿಫ್‌ಕೇಸನ್ನು ಹಿಡಿದಿದ್ದ ನಡುವಯಸ್ಸಿನ ಅಪರಿಚಿತನೊಬ್ಬ ಕಾರಿನಿಂದ ಇಳಿದು ನಿಂತ. ಕಾರಿನ ಹಿಂದಿನ ಸೀಟಿನಲ್ಲಿ ಕೂತಿದ್ದ ಶ್ರೀಮಂತನಂತೆ ಕಾಣುತ್ತಿದ್ದ, ನಡು ವಯಸ್ಸನ್ನು ದಾಟಿದ್ದ ಮನುಷ್ಯ, ಯುವಕನಿಗೆ ಚಿತೆಯ ಕಡೆಗೆ ಬೆರಳು ತೋರಿಸಿ ಏನೇನೋ ಹೇಳಿದ. ಅನಂತರ ಕಾರು ವೇಗವಾಗಿ ಹೊರಟು ಹೋಯಿತು.

ಕಾರಿಂದ ಇಳಿದ ಅಪರಿಚಿತ ಶ್ರೀನಾಥ್‌ನ ಬಳಿಗೆ ಬಂದು "ಮಿಸ್ಟರ್, ಶ್ರೀನಾಥ್ ಅನ್ನೋರು ನೀವೇನಾ?" ಎಂದು ಪ್ರಶ್ನಿಸಿದ.

ಶ್ರೀನಾಥ್ 'ಹೌದು ನಾನೇ' ಎಂದು ಯಾಂತ್ರಿಕವಾಗಿ ಉತ್ತರಿಸಿದ. ಚಿತೆಯ ಮೇಲೆ ನಾಟಿದ್ದ ಅಶ್ರುತುಂಬಿದ ಕಣ್ಣುಗಳನ್ನು ಬದಲಿಸಿದ.

ಅಪರಿಚಿತ ಶ್ರೀನಾಥ್‌ನಿಗೆ ಸೂಚಿಸಿದ "ಸ್ವಲ್ಪ

ಬರ್ತೀರ. ನಿಮ್ಮ ಹತ್ರ ಮಾತಾಡ್ಬೇಕು.''

ಶ್ರೀನಾಥ್ ಅಪರಿಚಿತನನ್ನು ಬೇಸರದಿಂದ ನೋಡಿ ಕೇಳಿದ "ಯಾರು ನೀವು?''

"ಹೇಳ್ತೀನಿ ಬನ್ನಿ ಸ್ವಲ್ಪ.'' ಅಪರಿಚಿತ ಶ್ರೀನಾಥ್‌ನ ಹಸ್ತವನ್ನು ಹಿಡಿದು ಲಘುವಾಗಿ ಎಳೆದ.

ಲಾವಣ್ಯಳ ಭಾವ ಶ್ರೀನಾಥ್‌ನಿಗೆ ಹೇಳಿದರು "ಹೋಗಪ್ಪಾ, ಹೋಗಿ ಮಾತಾಡ್ಕೊಂಡು ಬಾ.'' ಅಪರಿಚಿತ ಶ್ರೀನಾಥ್‌ನಿಗೆ ಏನೋ ಸಹಾಯ ಮಾಡಲು ಬಂದಿರಬಹುದು ಎಂದು ಊಹಿಸಿ,

ಶ್ರೀನಾಥ್ ಕ್ಷಣಕಾಲ ಅನುಮಾನಿಸಿ ಅನಂತರ ತನ್ನ ಕೈಯನ್ನು ಅಪರಿಚಿತನಿಂದ ಬಿಡಿಸಿಕೊಂಡು ಅವನೊಂದಿಗೆ ರುದ್ರಭೂಮಿಯ ಮೂಲೆಯೊಂದರ ಬಳಿಗೆ ನಡೆದ.

ಮೂಲೆಯ ಬಳಿಗೆ ಬಂದ ಅನಂತರ ಅಪರಿಚಿತ ಒಂದು ಸಾರಿ ಸುತ್ತಲೂ ಕಣ್ಣು ಹಾಯಿಸಿ, ಯಾರೂ ತಮ್ಮ ಬಳಿ ಇಲ್ಲ ಎನ್ನುವುದನ್ನು ಖಚಿತ ಪಡಿಸಿಕೊಂಡು, ಆಮೇಲೆ "ನಮ್ಮ ಬಾಸ್ ನಿಮ್ಗೆ ಇದನ್ನು ಕೊಡು ಅಂತ ಆರ್ಡರ್ ಮಾಡಿದ್ದಾರೆ, ದಯವಿಟ್ಟು ತಗೊಳ್ಳಿ'' ಎಂದು ಬ್ರೀಫ್‌ಕೇಸನ್ನು ಶ್ರೀನಾಥ್‌ನ ಮುಂದೆ ನೀಡಿ ಪ್ರಾರ್ಥಿಸಿದ. ಶ್ರೀನಾಥ್‌ನಿಗೆ ಗಲಿಬಿಲಿಯಾಯಿತು.

"ಏನಿದೆ ಇದ್ರಲ್ಲಿ'' ಎಂದು ಪ್ರಶ್ನಿಸಿದ ಕೈಗಳನ್ನು ಎತ್ತದೆ.

"ತೆಗ್ದು ನೋಡಿ ನಿಮ್ಗೇ ತಿಳಿಯುತ್ತೆ.'' ಬ್ರೀಫ್‌ಕೇಸಿನ ಪುಟ್ಟದಾದ ಬೀಗದ ಕೈಗಳನ್ನು ಇನ್ನೊಂದು ಕೈಯಿಂದ ಶ್ರೀನಾಥ್‌ನ ಮುಖದ ಹತ್ತಿರ ತೂಗಿಸುತ್ತ, ಕಿರುನಗೆ ಬೀರಿದ ಅಪರಿಚಿತ.

"ನೀವ್ಯಾರು ಅಂತಾನೇ ನಂಗೆ ಗೊತ್ತಿಲ್ಲ. ಅದ್ಕೂ ಮುಂಚೆ ಬ್ರೀಫ್‌ಕೇಸ್‌ನಲ್ಲಿ ಏನಿದೆ ಅಂತ ಹೇಳಿ.''

"ನೀವೇ ತೆಗ್ದು ನೋಡಿ, ಗೊತ್ತಾಗುತ್ತೆ.''

"ಊಹ್ಞು, ನಂಗೆ ಇದ್ರಲ್ಲಿ ಏನಿದೆ ಅಂತ ಹೇಳೋ ತನ್ಕ ನಾನು ಮುಟ್ಟಲ್ಲ ಇದನ್ನು.''

"ಯಾರ್ಗೂ ಹೇಳ್ಬೇಡಿ, ಇದ್ರಲ್ಲಿ ಐದ್ಲಕ್ಷ ಇದೆ.'' ಅತಿ ತಗ್ಗು ಸ್ವರದಲ್ಲಿ ಹೇಳಿದ ಅಪರಿಚಿತ ಯಾರಿಗೂ ಕೇಳದಿರಲಿ ಎನ್ನುವಂತೆ.

ಶ್ರೀನಾಥ್ ವಿದ್ಯುತ್ ಸ್ಪರ್ಶವಾದಂತೆ ಬೆಚ್ಚಿ, ಹಿಂದಕ್ಕೆ ಸರಿದು, ದುಃಖ ಮತ್ತು ಕೋಪ ಬೆರೆತ ದಾಟಿಯಲ್ಲಿ ಹೇಳಿದ "ರೀ ಮಿಸ್ಟರ್, ನನ್ನ ಮಿಸ್ಟೇಕ್ ಮಾಡ್ಕೊಂಡು ಬಂದಿದ್ದೀರಿ, ಯಾರ್ಗೋ ಕೊಡ್ಬೇಕಾಗಿರೋ ಹಣಾನ ನನ್ನ ಹತ್ರ ತಂದಿದ್ದೀರಿ ಅಂತ ಕಾಣುತ್ತೆ. ನಾನು ಬಿಕಾರಿ, ನೋಡಿ ಅಲ್ಲಿ ಉರ್ದು ಬೂದಿ ಆಗ್ತಾ ಇರೋ ಹೆಣ ನನ್ನ ಹೆಂಡ್ತಿ. ನನ್ನ ಸಂಕ್ಟ ನಂಗೆ. ಈ ಟೈಮ್‌ನಲ್ಲಿ ನನ್ನ ಬೇಜಾರ್ಪಡಿಸ್ಬೇಡಿ ದಯವಿಟ್ಟು ಹೋಗಿ. ಸರ್ಯಾಗಿ ವಿಚಾರ್ಸ್ಕೊಂಡು ಹಣ ಯಾವ ಪುಣ್ಯಾತ್ಮನಿಗೆ ಸೇರ್ಬೇಕೋ ಅವ್ರಿಗೆ ಕೊಡ್ಹೋಗಿ.''

"ಸಾರಿ ಪ್ಲೀಸ್ ನಿಮ್ಮನ್ನ ಮಿಸ್ಟೇಕ್ ಮಾಡ್ಕೊಳ್ಳೋಕೆ ಕಾರ್ಣಾನೇ ಇಲ್ಲ. ನಮ್ಮ ಬಾಸ್ ಖುದ್ದಾಗಿ ಇಲ್ಲಿತನ್ಕ ಬಂದು ನಿಮ್ಮನ್ನ ತೋರ್ಸಿ ಹೋದ್ರು, ಧೈರ್ಯವಾಗಿ ತೊಗೊಳ್ಳಿ. ನಿಮ್ಗೇನು ತೊಂದ್ರೆ ಆಗಲ್ಲ.''

"ಛತ್ರರಿಕೆ, ನೀವ್ಯಾರು ಅಂತಾನೇ ನಂಗೊತ್ತಿಲ್ಲ. ಐದ್ಲಕ್ಷ ಕೊಡೋ ಅಂತ ದಾದ ಯಾರೂ ನಂಗಿಲ್ಲ. ಅಥ್ವಾ ಐದ್ಲಕ್ಷ ನಂಕೈಲಿ ಕೊಟ್ಟು ಏನೋ ಮಾಡ್ಬಾರ್ದ ಕೆಲ್ಸ ಮಾಡ್ಸೋ ಬೇಕೆಂದಿದ್ದೀರ ಅಂತ ತೋರುತ್ತೆ ಅಲ್ವಾ?'' ಅಪರಿಚಿತನನ್ನು ತೀಕ್ಷ್ಣವಾಗಿ ನೋಡುತ್ತ ಪ್ರಶ್ನೆ ಕೇಳಿದ ಶ್ರೀನಾಥ್.

"ಅರರೆ ಕೇಳಿ ಇಲ್ಲಿ, ಐದ್ಲಕ್ಷ ನಂಬಾಸ್ಗೆ ಐದು ಹುಣ್ಸೇ ಬೀಜಕ್ಕೆ ಸಮ ಅಲ್ಲ. ಚಿಟ್ಕೆ ಹಾಕೋಷ್ಟ್ರಲ್ಲಿ ನೂರಾರು ಕೋಟಿ ಸಂಪಾದ್ನೆ ಮಾಡ್ತಾರೆ. ನಿಮ್ಕಿಂದ ನಂಬಾಸ್ಗೆ ಆಗ್ಬೇಕಾಗಿರೋದು ಏನೂ ಇಲ್ಲ. ನಿಮ್ಮ ಮಿಸೆಸ್ ಬುಲೆಟ್ ತಗ್ಲಿ ಸತ್ತೋದ್ರು ಅನ್ನೋ ವಿಷ್ಯ ಗೊತ್ತಾದ್ಮೇಲೆ ಅವ್ರೇ ಈ ದುರಂತದ ಹೊಣೆ ಹೊತ್ಕೊಂಡ್ರು. ಯಾಕೋ ಏನೋ ವಿಷ್ಯ ತಿಳಿದ್ಮೇಲೆ ತುಂಬ ನೊಂದ್ಕೊಂಡ್ರು. ಇಂತಾ ಸಣ್ಣ ವಿಷ್ಯಕ್ಕೆ ಅಷ್ಟೊಂದು ಫೀಲ್ ಮಾಡ್ಕೊಂಡಿದ್ದನ್ನು ಇವತ್ತಿನವರ್ಗೂ ನಾವ್ಯಾರೂ ಕಂಡಿಲ್ಲ. ನಾನು ಅವ್ರ ಅತ್ಯಂತ ಆಪ್ತ ಸೇವಕ. ಅವರ ಗುಣ ನಂಗೆ ಚೆನ್ನಾಗಿ ಗೊತ್ತು. ಅವ್ರು ಖುದ್ದಾಗಿ ನಿಂತು ವಹಿಸಿದ ಕೆಲ್ಸಾನ ಪೂರ್ಣವಾಗಿ ಮಾಡ್ದೇ ಹಿಂತಿರ್ಗುವವರನ್ನು ತುಂಡು ತುಂಡು ಮಾಡಿ ಬಿಸಾಡ್ತಾರೆ. ಪ್ಲೀಸ್ ಈ ಹಣಾನ ತಗೊಂಡು ನನ್ನ ಪ್ರಾಣ ಉಳಿಸಿ.'' ಯಾಚಿಸಿದ ಅಪರಿಚಿತ.

"ನಿಂ ಪ್ರಾಣ ಉಳ್ಸೋಣ ಅಂತಾನೇ ನಾನು ಕೇಳ್ತಾ ಇರೋದು. ನಿಮ್ಮ ಬಾಸ್ ಯಾರು ಅಂತ."

"ನಮ್ಮ ಬಾಸ್ ವಿಷ್ಯ ತಿಳ್ಕೊಂಡು ನೀಮ್ಗೇನಾಗ ಬೇಕು ಹೇಳಿ. ನಿಮ್ಗೊಗಿರೋ ನಷ್ಟಕ್ಕೆ ಅವ್ರೇ ಹೊಣೆ ಹೊತ್ಕೊಂಡು ಐದ್ಲಕ್ಷ ಪರಿಹಾರಾನೂ ಕೊಟ್ಟಿದ್ದಾರಲ್ಲ. ಸಾಲ್ದ ಪರಿಹಾರ, ಇನ್ನೂ ಬೇಕಾ? ಹಾಗಿದ್ರೆ ಹೆಚ್ಗೆ ಎಷ್ಟು ಬೇಕು ಕೇಳ್ಬಿಡಿ."

"ನಿಂಬಾಸ್ ಯಾರು ಅಂತ ಹೇಳ್ದೇ ಇದ್ರೆ ನಂಗ ಈ ಹಣ ಬೇಡ್ವೇ ಬೇಡ. ನಡೀರಿ ಇಲ್ಲಿಂದ." ಅಪರಿಚಿತನ ರಟ್ಟೆ ಹಿಡಿದು ಲಘುವಾಗಿ ತಳ್ಳಿದ ಶ್ರೀನಾಥ್.

"ಆಶ್ಚರ್ಯ ಆಗುತ್ತೆ ನಂಗ, ಅಲ್ಲ ಐದು ಪೈಸೆಗ ಕೊಲೆ ಮಾಡೋಕೂ ಹೇಸದ ಜನ ಇರೋ ಆ ಕಾಲ್ದಲ್ಲಿ ಐದು ಲಕ್ಷ ಸಿಕ್ಕಿದ್ರೆ ಒದ್ಕೊಂಡು ಹೋಗ್ತೀರಲ್ರಿ. ನಿಮ್ಗೆ ಬುದ್ಧಿಗಿದ್ದಿ ಇದ್ಯಾ?" ಮೂದಲಿಸಿದ ಅಪರಿಚಿತ.

"ರೀ ಮಿಸ್ಟರ್, ಸುಮ್ನೆ ಮುಚ್ಕೊಂಡು ಇಲ್ಲಿಂದ ಹೋಗ್ತೀರೋ ಅಥ್ವಾ ಕತ್ತು ಹಿಡ್ದು ಆಚ್ಗೆ ದಬ್ಲೋ?"

"ಎಂತಾ ಹಟಮಾರಿ ನೀವು. ಹೋಗ್ಲೀ ನಂಬಾಸ್ ಯಾರು ಅಂತ ಹೇಳೇ ಬಿಡ್ತೀನಿ. ಆದ್ರೆ ಈ ವಿಷ್ಯಾನ ಯಾರ್ಗೂ ಹೇಳ್ಬಾರ್ದು. ಒಂದ್ವೇಳೆ ನೀವೇನಾದ್ರು ಟಾಂ ಟಾಂ ಹೊಡುದ್ರೋ, ಬೀದಿ ನಾಯಿಗಳಿಗೆ ಆಹಾರ ಆಗ್ತೀರ. ಇದು ಖಂಡಿತ ಮರೀಬೇಡಿ." ಎಚ್ಚರಿಕೆ ಕೊಟ್ಟ ಅಪರಿಚಿತ.

"ಊರ್ಗೆಲ್ಲಾ ಟಾಂ ಟಾಂ ಹೊಡಿಯೋಕೆ ನಂಗೇನು ಹುಚ್ಚು, ಬೇರ ಕೆಲ್ಸ ಇಲ್ವ ನಂಗೆ?"

"ನೋಡಿ ಮಿಸ್ಟರ್ ಶ್ರೀನಾಥ್, ನಿಷ್ಠೇ ಅನ್ನೋದು ನಮ್ಮ ಅತ್ಯಂತ ಮುಖ್ಯವಾದ ಸಂಪ್ರದಾಯ. ಯಾರೇ ಆಗ್ಲಿ ನಿಷ್ಠೇನ ಮುರಿತಾರೋ ಅವ್ರು ತಲೆ ದಂಡ ಕೊಡ್ಲೇ ಬೇಕಾಗುತ್ತೆ. ನಮ್ಮ ವ್ಯಾಪಾರ ವ್ಯವಹಾರಗಳು ಯಾವ ಕಾರಣಕ್ಕೂ ಹೊರಗಿನ ಪ್ರಪಂಚಕ್ಕ ತಿಳೀ ಬಾರ್ದು. ನಮ್ಮ ಕಸ್ಬಿಗೆ ಇದು ಅನಿವಾರ್ಯ. ದಯವಿಟ್ಟು ನಾ ಹೇಳೋದನ್ನ ಯಾರ್ಗೂ ತಿಳಿಸ್ಬೇಡಿ."

"ನಮ್ಗೂ ನಿಷ್ಠೆ ಅನ್ನೋದು ಇದೆ. ಪರವಾಗಿಲ್ಲ ಹೇಳಿ." ಹಿಡಿದ ಪಟ್ಟನ್ನು ಸಡಿಲಿಸದೆ ಕೇಳಿದ ಶ್ರೀನಾಥ್.

"ನಾವು ಅಂತರ್ರಾಷ್ಟ್ರೀಯ ನೆಟ್ ವರ್ಕ್‌ಗೆ ಸೇರಿದ ಸ್ಮಗ್ಲರ್ಸ್. ನಿನ್ನೆ ಪಂಚತಾರ ಹೋಟೆಲ್ ಮುಂದೆ ಸತ್ರಲ್ಲ ನಾಲ್ಕು ದಾಂಡಿಗರು. ಅವ್ರೆಲ್ಲ ನಮ್ಮೋರೆ. ನಂಬಾಸ್ನ ಎಂಜ್ಲು ತಿಂದು ಮುಂದೆ ಬಂದೋರು. ನಂಬಾಸ್ನೇ ವ್ಯಾಪಾರ ಕೆಡ್ಸೋಕೆ ಟ್ರೈ ಮಾಡಿದ್ರು. ತಲೆ ದಂಡ ಕೊಟ್ರು. ಆದ್ರೆ ಆ ಬೇವರ್ಸಿಗಳ ಮೇಲೆ ಫೈರ್ ಮಾಡುವಾಗ ಕೆಲ್ವು ಗುಂಡುಗಳು ಗುರಿತಪ್ಪಿ ನಿಮ್ಮಾ ಕೆಗೂ ತಗ್ಲಿ ಅಚಾತುರ್ಯನಡ್ಹೋಯ್ತು. ನಾವು ಎಂದ್ಗೂ ಮುಗ್ಧ ಜನರಿಗೆ ತೊಂದ್ರೆ ಕೊಡಲ್ಲ." ಸ್ಪಷ್ಟೀಕರಿಸಿದ ಅಪರಿಚಿತ.

"ಆಯ್ತು, ಆಮೇಲೆ, ಹೇಳಿ ನಿಂಬಾಸ್ ಹೆಸ್ರು?"

"ನಂಬಾಸ್‌ನ ಕ್ಟೋಡ್ ನೇಮ್ ಗೋಲ್ಡನ್ ಡೀರ್." ರಾಮಾಯಣದ 'ಬಂಗಾರದ ಜಿಂಕೆ' ತರಾ ಯಾರಾದ್ರು ಅದನ್ನ ಹಿಡಿಯೋಕೆ ಹೋದ್ರೋ ಅವ್ರ ಕತೆ ಮುಗೀತು ಅಂತಾನೇ ಇಟ್ಕೊಳ್ಳಿ. ನಂಬಾಸ್‌ನ ನಿಜ್ವಾದ ಹೆಸ್ರು 'ಮುರಾರಿ' ಅಂತ. ಅವ್ರು ಯಾವಾಗ ಎಲ್ಲಿರ್ತಾರೆ ಅಂತ ಯಾರ್ಗೂ ಗೊತ್ತಾಗಲ್ಲ. ಇವತ್ತು ಇಲ್ಲಿ, ನಾಳೆ ಟೋಕಿಯೋ, ನಾಡಿದ್ದು ನ್ಯೂಯಾರ್ಕ್."

ಅಪರಿಚಿತ ತನ್ನ ಬಾಸ್ ಬಗ್ಗೆ ಇನ್ನೂ ಏನೇನೋ ಹೇಳಬೇಕೆಂದಿದ್ದ. ಆದರೆ ಅಷ್ಟರಲ್ಲೇ ಶ್ರೀನಾಥ್ ಅಪರಿಚಿತನ ಕೈಯಿಂದ ಬ್ರಿಫ್‌ಕೇಸನ್ನ ಗಬಕ್ಕನೆ ಕಿತ್ತುಕೊಂಡು, ದಗದಗಿಸಿ ಉರಿಯುತ್ತಿದ್ದ ಚಿತೆಯ ಬಳಿಗೆ ಓಡಿ ಬಂದು "ಲಾವಣ್ಯ ನೀನು ಸತ್ತಿದ್ದಕ್ಕೆ, ನಿಂತ ತಂದೆ ತುಂಬ ಫೀಲ್ ಆಗಿ, ನೊಂದ್ಕೊಂಡ್ರಂತೆ. ಅದಕ್ಕೆ ಐದ್ಲಕ್ಷ ಪರಿಹಾರಾನ ನಂಗೆ ಕಳ್ಸಿದ್ದಾರೆ. ಈ ಹಣ ನಿಂಗೇ ಸೇರ್ಬೇಕು. ತೂಗೋ ಸ್ವರ್ಗದಲ್ಲೇ ಮಜ ಮಾಡು" ಎಂದು ಹೇಳಿ ಬ್ರಿಫ್‌ಕೇಸ್‌ನ್ನು ಬಲವಾಗಿ ಬೀಸಿ ಚಿತೆಯ ಮೇಲೆ ಎಸೆದ. ಅವನು ಬೀಸಿದ ರಭಸಕ್ಕೆ ಬ್ರಿಫ್‌ಕೇಸ್ ಚಿತೆಯ ಮಧ್ಯದಲ್ಲಿ ಬಿದ್ದು ಕೆಂಡದಲ್ಲಿ ಮುಚ್ಚಿಹೋಯಿತು.

ಲಾವಣ್ಯಳ ಅಕ್ಕ, ಭಾವ ಮತ್ತು ಶ್ರೀನಾಥ್‌ನನ್ನು ಹಿಂಬಾಲಿಸಿ ಬಂದ ಅಪರಿಚಿತ ಮೂವರೂ ನಿಬ್ಬೆರಗಾಗಿ ನೋಡುತ್ತಲೇ ಇದ್ದರು ಏನೂ ಅರ್ಥವಾಗದೆ.

ಆದರೆ ಶ್ರೀನಾಥ್‌ನ ಮುಖದ ಮೇಲೆ ಅಪೂರ್ವ ಪ್ರೇತ ತೃಪ್ತಿ ತಾಂಡವವಾಡುತ್ತಿತ್ತು.

ಸಣ್ಣ ಕಥೆ

ಬಹುರೂಪ

ನಳಿನಾ ಶ್ರೀರಾಘವನ್

ಶಿವಶಂಕರ್ ಆಟೋದಿಂದ ಇಳಿದು ಬರುವುದನ್ನೇ ನಿರೀಕ್ಷಿಸುತ್ತಿದ್ದರು ಅವರ ಹೆಂಡತಿ ಲೀಲಮ್ಮ. ಅವರು ಬಾಗಿಲ ಒಳಗೆ ಬರುವ ಮುನ್ನ ಅಡ್ಡಹಾಕಿ,

"ಏನಂದರು ಶಾಸ್ತ್ರಿಗಳು, ಹೊಂದುತ್ತಾ?" ಎಂದು ಕೇಳಿದರು.

"ದಾರಿ ಬಿಡು ಮಹರಾಯ್ತಿ ಒಳಗೆ ಬಂದು ಹೇಳ್ತೀನಿ. ನಮ್ಮ ಮದುವೇಲಿ ನಿನಗೆ ಅಡ್ಡಹಾಕಿ ನನ್ನ ಹೆಸರು ಹೇಳಿಸಿದರು. ಈಗ ನೀನೇ ನನಗೆ ಅಡ್ಡಹಾಕ್ತೀಯಲ್ಲ, ನಿನ್ನ ಹೆಸರು ಹೇಳಬೇಕೆಂದೇ?" ಹಾಸ್ಯವಾಗಿ ಛೇಡಿಸಿದರು ಶಿವಶಂಕರ್.

"ಥೂ, ನಿಮಗೆ ಯಾವಾಗಲೂ ಹಾಸ್ಯವೇ" ಎಂದು ಪಕ್ಕಕ್ಕೆ ಸರಿದು "ಈಗ ಹೇಳಿ" ಎಂದರು.

"ಮೂರು ಜಾತಕಾನೂ ಬಹಳ ಚೆನ್ನಾಗಿ ಕೂಡುತ್ತೆ. ನಾಡಿದ್ದು ಭಾನುವಾರ ಮೂರು ಹೆಣ್ಣುಗಳನ್ನು ನೋಡಿ ಬರಬಹುದು. ಲತಾ, ಸುಜೀಗೂ ಹೇಳಿ ಕಳುಹಿಸು. ಗೋಪಾಲ್‌ಗೂ ಫೋನ್ ಮಾಡಿಸು" ಎಂದರು.

ಲತಾ, ಸುಜಿ ಅವರ ಹೆಣ್ಣು ಮಕ್ಕಳು. ಅದೇ ಊರಿನಲ್ಲಿ ಗಂಡನ ಮನೆಯಲ್ಲಿದ್ದರು. ಗೋಪಾಲ ಅವರ ಎರಡನೆಯ ಮಗ ಲವ್ ಮ್ಯಾರೇಜ್ ಮಾಡಿಕೊಂಡು ಕಂಪೆನಿ ಕ್ವಾರ್ಟರ್ಸ್‌ನಲ್ಲಿ ಬೇರೆಯಾಗಿದ್ದ.

ರೂಮಿನಲ್ಲಿ ಕುಳಿತು ಪುಸ್ತಕ ಓದುತ್ತಲೇ ಈ ಮಾತನ್ನೆಲ್ಲ ಕೇಳಿಸಿಕೊಂಡ ಅಶೋಕ್ ಹೊರಗೆ ಬಂದ.

"ಅಮ್ಮಾ ಗ್ಯಾಂಗ್ ಗ್ಯಾಂಗೇ ಹೋಗಿ ಹುಡುಗೀನ ನೋಡಬೇಕೆನ್ನುವಂತಿದ್ದರೆ ನನಗೆ ಮದುವೇನೇ ಬೇಡ" ಎಂದ ಕಂಡಿತವಾಗಿ.

"ಗ್ಯಾಂಗ್ ಏನೋ ಬಂತು, ಎಲ್ಲ ಮನೆಯವರೇ ತಾನೇ. ಅವರು ಹೆಣ್ಣು ನೋಡದಿದ್ದರೆ ಹೇಗೆ" ಎಂದರು ಲೀಲಮ್ಮ.

"ಮನೆಯವರು ಅಂದರೆ ನೀನು, ಅಪ್ಪ, ಅಜ್ಜಿ, ಅಕ್ಕಂದಿರು, ಗೋಪಾಲ್, ಅವನ ಹೆಂಡತಿ..."

"ನಾನು, ನನ್ನ ಮರೀಬೇಡ" ಎಂದ ಅವನ ತಮ್ಮ ವಿಜಯ್, ಇಂಜಿನಿಯರಿಂಗ್ ವಿದ್ಯಾರ್ಥಿ.

"ಹೂಂ ಎಲ್ಲರೂ ಸೇರಿ ಎಂಟು ಮಂದಿ."

"ಏಯ್ ನಿನ್ನನ್ನೇ ಮರೆತ್ಯಲ್ಲೋ, ನೀನೂ ಸೇರಿ ಒಂಬತ್ತು. ಬೆಸ ಕೂಡದು, ಆದ್ದರಿಂದ ಇನ್ನೊಬ್ಬರು ಅಷ್ಟೇ."

"ನೋಡಮ್ಮ ಹತ್ತು ಜನ ಗ್ಯಾಂಗ್ ಅಲ್ಲದೆ ಮತ್ತೇನು, ಅಕ್ಕಂದಿರನ್ನು ನೋಡಲು ಪ್ರತಿಸಾರಿ ಹೀಗೆ ಎಂಟು, ಹತ್ತು ಮಂದಿ ಬರುತ್ತಿದ್ದರು. ಎಲ್ಲರೂ ನಾವು ಮಾಡಿದ ಸಜ್ಜಿಗೆ, ಬೋಂಡಾನ ಗಡದ್ದಾಗಿ ತಿಂದು, ಹೋಗಿ ತಿಳಿಸುತ್ತೇವೆ ಎಂದು ಅನಂತರ ಹೆಣ್ಣು ಒಪ್ಪಿಗೆಯಾಗಲಿಲ್ಲ ಎಂದದ್ದು ನೋಡಿ ನನಗೆ ರೋಸಿ ಹೋಗಿದೆ."

"ಈಗ ಅವರಿಗೇನು ಕಡಿಮೆಯಾಗಿದೆ? ಇಬ್ಬರೂ ರಾಣಿಯರ ಹಾಗಿದ್ದಾರೆ." ಲೀಲಮ್ಮ

ಭಾವೀ ಅತ್ತಿಗೆಯನ್ನು ನೋಡಲು ಕಾತರಿಸಿ ಬಸ್ಸಿಗೆ ಹತ್ತಿದ ಅಶೋ. ಅತ್ತಿಗೆ ತುಂಬಾ ಸುಂದರಳಾಗಿದ್ದಳು. ಆದರೆ ಕಪಾಳಕ್ಕೊಂದು ಏಟೂ ಕೊಟ್ಟಳು! ಮನೆಯವರೆಲ್ಲ ಗಲಿಬಿಲಿಗೊಂಡರು.

ಸಮಾಧಾನ ಮಾಡಿದರು.

"ಹೌದಪ್ಪಾದು. ಆದರೆ ಅದಕ್ಕೆ ಮೊದಲು ಅವರು ವಧು ಪರೀಕ್ಷೆ ನಾಟಕಕ್ಕೆ ಒಳಗಾಗಲಿಲ್ಲ. ನನಹಿಡು ಜೊತೇಲಿ ಕೆಲಸ ಮಾಡುತ್ತಿದ್ದ ಭಾವಂದಿರು ಅವರ ರೂಪ, ಗುಣ, ನಡತೆ ಮತ್ತು ಬುದ್ಧಿಶಕ್ತಿಯನ್ನು ಮೆಚ್ಚಿ ತಾವಾಗಿಯೇ ನಿಮಗೆ ಹೇಳಿ ವರದಕ್ಷಿಣೆ ಇಲ್ಲದೆ ಮಾಡಿಕೊಂಡ ಮದುವೆ ಎಂಬುದನ್ನು ಮರೀಬೇಡ."

"ಆದರೂ..."

ಇಷ್ಟು ಹೊತ್ತು ಅಮ್ಮ ಮಗನ ವಾಗ್ವಾದವನ್ನು ಮೌನವಾಗಿ ಕೇಳುತ್ತಿದ್ದ ಶಿವಶಂಕರ್ "ಅವನಿಷ್ಟಕ್ಕೆ ಬಿಡು ಲೀಲ, ಮದುವೇನೇ ಬೇಡ ಎನ್ನುತ್ತಿದ್ದ. ಈಗ ಹೆಣ್ಣು ನೋಡುವ ಘಟ್ಟಕ್ಕೆ ಬಂದಿರುವಾಗ ಅವನ ಮನಸ್ಸು ಕೆಡೋದು ಬೇಡ. ಅವನಿಷ್ಟದಂತಾಗಲಿ" ಎಂದರು.

ಮಗನನ್ನು ಕುರಿತು "ಏನಪ್ಪಾ ಯಾವಾಗ ಯಾರ ಮನೆಗೆ ಹೋಗ್ತಿ?"

"ಅಪ್ಪ ಸ್ವಲ್ಪ ಆ ಫೋಟೋಸ್ ಕೊಡಿ" ಎಂದು ಅಶೋಕ್ ಕೈ ಚಾಚಿದ.

ಮೂರು ಹುಡುಗಿಯರು ಒಂದೊಂದು ವಿಧದಲ್ಲಿ ಚೆನ್ನಾಗಿಯೇ ಇದ್ದರು. ಅಶೋಕ್ ಒಂದು ಫೋಟೋ ತೋರಿಸಿ "ಇದ್ಯಾರು?" ಎಂದ.

ಅವನ ತಂದೆ ಆ ಭಾವಚಿತ್ರದ ಜೊತೆಗೆ ಕಳಿಸಿದ್ದ ಕಾಗದವನ್ನು ನೋಡಿದರು. "ಈ ಹುಡುಗಿ ಹೆಸರು ರೂಪಾ. ದೊಡ್ಡಮನೆ ಪಶುಪತಿ ಅವರ ಮಗ ಆರ್ಕಿಟೆಕ್ಟ್ ಸ್ವಾಮಿ ಅವರ ಮಗಳು. ಎಂ. ಎಸ್ಸಿ. ಓದಿ ಕೆಲಸದಲ್ಲಿದ್ದಾಳಂತೆ. ಸಂಗೀತ, ಭರತನಾಟ್ಯ ಸಹ ಬರುತ್ತದೆಯಂತೆ. ನಮ್ಮ ಶಾಸ್ತ್ರಿಗಳ ಸೊಸೆಗೆ ದೂರದ ಸಂಬಂಧವಂತೆ."

"ನೋಡಪ್ಪಾ ನನಗೆ ಹತ್ತಾರು ಹುಡುಗಿಯರನ್ನು ನೋಡಿ ಬೇಡ ಅನ್ನೋಕ್ಕೆ ಇಷ್ಟವಿಲ್ಲ. ನನಗೆ ಈ ಹುಡುಗಿ ಒಪ್ಪಿಗೆ. ಅವಳು, ಅವಳ ಮನೆಯವರು ನನ್ನ ಒಪ್ಪಬೇಕಲ್ಲ, ಅದಕ್ಕಾಗಿ ಅವರ ಮನೆಗೆ ಹೋಗಿಬರುತ್ತೀನಿ."

"ನೋಡೋಕೆ ಲಕ್ಷಣವಾಗಿದ್ದಿ, ಚೆನ್ನಾಗಿ ಓದಿದ್ದು ಒಳ್ಳೇ ಕೆಲಸದಲ್ಲಿದ್ದಿ, ನಿನ್ನ ಒಪ್ಪದೆ ಇರುವವರಿಗೆ ಕಣ್ಣು ಕುರುಡು ಅಷ್ಟೆ" ಎಂದರು ಲೀಲಮ್ಮ ಖಾರವಾಗಿ.

"ಹೆತ್ತವರಿಗೆ ಹೆಗ್ಗಣ ಮುದ್ದು ಅಲ್ವೇನಮ್ಮ." ಅಶೋಕ್ ನಕ್ಕ.

"ಯಾರ ಜೊತೆ ಹೋಗ್ತೀ, ಒಬ್ಬನೇ ಹೋಗಬಾರದು. ವಿಜಯ್."

"ಮೂವತ್ತೆರಡು ವರ್ಷದ ನನಗೆ ಜೊತೆ ಯಾಕಪ್ಪ, ಒಂಟಿಯಾಗಿ ಹೋಗಬಾರದು ಅನ್ನೋದರಿಂದ ಮಾಧೂನ ಕರೆದುಕೊಂಡು ಹೋಗ್ತೀನಿ."

ಮಾಧು ಮದುವೆಯಾಗಿ ಎರಡು ಮಕ್ಕಳ ತಂದೆ. ಆಗಲಿ ಎಂದರು ಹಿರಿಯರು. ವಿಜಯ್ ಹುಡುಗಿಯ ಫೋಟೋವನ್ನು ಎಗರಿಸಿದ.

ಅಶೋಕ್, ಮಾಧು ಹೋಗಿ ಹೆಣ್ಣು ನೋಡಿ ಬಂದರು. ಮಾತುಕತೆಯಾಡಲು ಅಶೋಕ್‌ನ ತಂದೆ ತಾಯಿಯರು ಮಾತ್ರ ಹೋಗಿದ್ದರು. ಆಗ ಅಶೋಕ್ ಈಗ ತನ್ನ ಮನೆಯವರು ಮದುವೆಗೆ ಮುನ್ನ ಪರೀಕ್ಷೆ ಮಾಡುವಂತೆ ಬರದಿರಲು ಇರುವ ಹಿನ್ನೆಲೆ ವಿವರಿಸಿದ ಮೇಲೆ ರೂಪಾಳ ತಂದೆ ತಾಯಿಯರಿಗೆ ಮನಸ್ಸು ಸಮಾಧಾನವಾಯಿತು. ಅವನಲ್ಲಿದ್ದ ಗೌರವ ಇಮ್ಮಡಿಯಾಯಿತು. ಮೂರು ತಿಂಗಳಿಗೆ ಮುಹೂರ್ತವನ್ನಿಟ್ಟರು.

ವಿಷಯ ತಿಳಿದು ಮನೆಗೆ ಬಂದ ಲತಾ, ಸುಜಿ ತಾಯಿಯೊಡನೆ ವಾದ ಮಾಡಿದರು. ಇದಕ್ಕೆ ಹಿಮ್ಮೇಳ ವಿಜಯ್ ಮತ್ತು ಅಜ್ಜಿ.

"ನಾನೇನು ಮಾಡಲಿ ಹೇಳಿ, ನಿಮಗೆ ವಧು ಪರೀಕ್ಷೆ ನಡೆದದ್ದು ನೋಡಿ ಅವನ ಮನಸ್ಸು ರೋಸಿ ಹೋಗಿದೆ. ಮದುವೆಗೆ ಮುನ್ನ ನಾವ್ಯಾರೂ ಅವರ ಮನೆಗೆ ಹೋಗಬಾರದಂತೆ. ಅವನೂ ಹೋಗುತ್ತಿಲ್ಲ. ಮದುವೇಲಿ ನೋಡಿ" ಎಂದರು ಲೀಲಮ್ಮ.

"ಅತ್ತಿಗೆ ಆಗೋ ಹುಡುಗೀನ ಮೂರು ತಿಂಗಳು ನೋಡದೆ ಹೇಗಿರೋದಮ್ಮ, ಚೆನ್ನಾಗಿದೆ ನೀನು ಹೇಳೋದು. ಹುಡುಗಿ ಹೇಗಿದ್ದಾಳೆ ಅಂತ ಯಾರಾದರೂ ಕೇಳಿದರೆ ಗೊತ್ತಿಲ್ಲ ಅನ್ನೋದಕ್ಕಾಗುತ್ತ?" ಲತಾ ಪಟ್ಟು ಬಿಡಲಿಲ್ಲ.

"ನೀವು ಬೇಕಾದರೆ ಒಂದು ಕೆಲಸ ಮಾಡಿ. ಇದು ಅವಳ ಫೋಟೋ. ಆ ಹುಡುಗಿ ಪ್ರತಿದಿನ



ಹಾಸ್ಪಿಟಲ್ ಟರ್ಮಿನಸ್ಸಿನಿಂದ 9–15ರ ಬಸ್ಸಿಗೆ ಹೋಗಿ 5–15ರ ನಾನ್ ಸ್ಟಾಪಿನಲ್ಲಿ ಆ ಕಡೆಯಿಂದ ಬರುತ್ತಾಳಂತೆ. ಸುಮ್ಮನೆ ಮಾತನಾಡಿಸಲು ಕೇಳಿದಾಗ ಹೇಳಿದಳು. ನಿಮಗೆ ಬೇಕಾದರೆ ಆ ಬಸ್ಸಿನಲ್ಲಿ ಹೋಗಿ ಸುಮ್ಮನೆ ಅವಳನ್ನು ನೋಡಿ, ಮಾತಾಡಿಸುವುದು ಬೇಡ. ನೀವು ಯಾವಾಗಾದ್ರೂ ಆ ಬಸ್ಸಿನಲ್ಲಿ ಹೋಗಿ ಬರ್ತೀರಿ ಅಲ್ಲವೆ'' ಎಂದರು ಲೀಲಮ್ಮ.

ಮಾರನೆಯ ದಿನ ಬೆಳಗ್ಗೆ ಎಂಟೂವರೆಗೆಲ್ಲ ರೆಡಿಯಾದ ವಿಜಯ್.

"ಇದೇನೋ ಇದು, ಇಷ್ಟು ಬೇಗ ಹೊರಟಿದ್ದಿ, ತಿಂಡಿ ರೆಡಿಯಾಗಿಲ್ಲವಲ್ಲ?''

''ಇವತ್ತು ಮ್ಯಾಚ್ ಇದೆ ಕಣಮ್ಮ.''

"ಎಲ್ಲಿ ಹೋಗ್ಬೇಕೋ ವಿಜಯ್. ನೀನು ತಿಂಡಿ ತಿನ್ನು. ನಾನು ಬೈಕಿನಲ್ಲಿ ಬಿಡುತ್ತೀನಿ'' ಎಂದ ಅಶೋಕ್.

"ಬೇಡಪ್ಪ ಥ್ಯಾಂಕ್ಸ್. ನಾನು ನನ್ನ ಫ್ರೆಂಡ್ಸ್ ಜೊತೆ ಹೋಗ್ತೀನಿ'', ಎಂದ ವಿಜಯ್ ಬಸ್ ಸ್ಟ್ಯಾಂಡಿನಲ್ಲಿ ಅರ್ಧಗಂಟೆ ಕಾದಿದ್ದು ರೂಪಾ ಕ್ಯೂನಲ್ಲಿ ಬಂದು ನಿಂತಾಗ ಅವಳ ಪಕ್ಕದಲ್ಲಿ ಹೋಗಿ ನಿಂತ. ಅವನು ಅವಳನ್ನೇ ನೋಡುತ್ತಿದ್ದುದನ್ನು ಗಮನಿಸಿದ ರೂಪಾ ಇದ್ಯಾವುದೋ ಒಂದು ಕಾಲೇಜು ಕಪಿ ಎಂದುಕೊಂಡು ಸ್ವಲ್ಪ ಪಕ್ಕಕ್ಕೆ ಸರಿದಳು. ಅವನೂ ಸರಿದ. ಬಸ್ ಬಂದಿತು. ಅವಳಿಗೆ ಲೇಡೀಸ್ ಸೀಟಿನಲ್ಲಿ ಜಾಗ ಸಿಗಲಿಲ್ಲ. ಅವಳ ಪಕ್ಕದಲ್ಲೇ ವಿಜಯ್ ಕುಳಿತ. ಎಷ್ಟು ಚೆನ್ನಾಗಿದ್ದಾಳೆ ತನ್ನ ಅತ್ತಿಗೆ ಆಗುವವಳು ಎಂದು ಹಿಗ್ಗುತ್ತಿದ್ದ. ಮದುವೆಯ ಅನಂತರ ಅವಳನ್ನು ತಮಾಷೆಗೆ ಹೇಗೆ ಗೋಳುಹುಯ್ದುಕೊಳ್ಳಬೇಕು ಎಂದು ಕನಸು ಕಾಣುತ್ತಿದ್ದ ಅವನು ಬಸ್ ವಾಲಿದಾಗ ಅಕಸ್ಮಾತ್ತಾಗಿ ರೂಪಾಳ ಮೇಲೆ ಬಿದ್ದ. ಅವಳು ಕೆರಳಿದ ಸಿಂಹಿಣಿಯಂತೆ ಅವನ ಕೆನ್ನೆಗೆ ಒಂದು ಬಿಗಿದು "ಮ್ಯಾನರ್‌ಲೆಸ್ ಬ್ರೂಟ್'' ಎಂದು ಬೈದಳು. ಅವಳ ಏಟು ಅವನನ್ನು ಇಹಸ್ಥಿತಿಗೆ ಕರೆದು ತಂದಿತು. ಅವಮಾನದಿಂದ ಮುಖ ಕೆಂಪಾಗಿ "ಸಾರಿ, ಬೇಕಂತ ಬೀಳಲಿಲ್ಲ'' ಎಂದು ಹೇಳಿ ಮುಂದಿನ ಸ್ಟಾಪಿನಲ್ಲಿ ಇಳಿದುಬಿಟ್ಟ.

ದೊಡ್ಡ ಅಕ್ಕ ಲತಾ ಅಶೋಕ್‌ನ ಮೇ
ಅಸಮಾಧಾನದಿಂದ ಸುಮ್ಮನಿದ್ದಳು. ಆದರೆ ಚಿ
ಅಕ್ಕ ಸುಜೆಗೆ ರೂಪಾಳನ್ನು ನೋಡುವ ತವ
ಅವಳು ಒಂದು ಸಂಜೆ ಬಸ್ ನಿಲ್ದಾಣದಲ್ಲಿ ಕಾದ
ರೂಪಾ ಬಂದಾಗ ಅವಳನ್ನು ರೂಟ್ ಬ
ವಿಚಾರಿಸಿ ಅವಳ ಪಕ್ಕದಲ್ಲೇ ಕುಳಿತಳು. ಸುಮ್
ಅದೂ ಇದೂ ಮಾತಾಡಿ ರೂಪಾ ಬಗ್ಗೆ ವಿಚಾರಿಸಲ
ಅವಳು ಬಿ. ಎಸ್ಸಿ. ಓದುತ್ತಿರುವುದಾಗಿಯೂ
ರಿಪೀಟರ್ ಎಂದೂ ಹೇಳಿದಳು. 'ಎಂ. ಎಸ್ಸಿ. ಓದಿ
ಲೆಕ್ಚರರ್ ಅಂದರಲ್ಲಾ, ಇವಳು ನೋಡಿದರೆ ಬೇ
ಹೇಳುತ್ತಾಳೆ, ಅಶೋಕ್ ಇಲ್ಲದಿದ್ದಾಗ ಅಮ್ಮನಿ
ಹೇಳಬೇಕು' ಎಂದುಕೊಂಡಳು.

ಅವಳ ಗಂಡ ಊರಿನಲ್ಲಿಲ್ಲದಿದ್ದಾಗ
ಸಾಧಾರಣವಾಗಿ ಸಂಜೆ ತವರುಮನೆಗೆ ಹೋಗಿ
ಬೆಳಿಗ್ಗೆ ಊಟದ ಅನಂತರ ಅಥವಾ ಮಧ್ಯಾಹ್
ಹಿಂತಿರುಗುವಳು. ಈಗೆಲ್ಲ ಅಶೋಕ್ ಮನೆ
ಬಂದು ಹೋಗುತ್ತಿದ್ದು ಸುಜೆಗೆ ಅವಳ ತಾಯಿ
ಇದು ಹೇಳಲು ಆಗಲೇ ಇಲ್ಲ.

ಅಶೋಕ್‌ನ ಅಜ್ಜಿಗೆ ವಯಸ್ಸಾಗಿದ್ದರೂ
ಬಸ್ಸಿನಲ್ಲಿ ಒಂಟಿಯಾಗಿ ಅಲ್ಲಿ ಇಲ್ಲಿ ಹೋಗಿ
ಬರುತ್ತಿದ್ದರು. ಒಂದು ದಿನ ಯಾರಿಗೂ ಹೇಳದ
9–15ರ ಬಸ್ ಹತ್ತಿದರು. ನಿಲ್ಲಬೇಕಾಯಿತು
ಮೆಲ್ಲಗೆ ರೂಪಾಳ ಪಕ್ಕ ಜರುಗಿದರು. ಸ್ವಲ್ಪ
ಹೊತ್ತಿನ ಅನಂತರ ಅವಳ ಪಕ್ಕದ ಸೀಟು ಖಾಲಿಯಾಗಿ
ಕುಳಿತರು. ರೂಪಾ ಮುಂದೆ ನಿಂತಿದ್ದ ತನ್ನ
ಸ್ನೇಹಿತೆಯ ಮಗುವನ್ನು ಮಡಿಲಲ್ಲಿ ಇಟ್ಟುಕೊಂಡಿ
ದ್ದಳು. ಆ ಮಗುವಿಗೆ ಬರುತ್ತಿದ್ದ ಒಂದೇ ಮಾತು
'ಮಮ್ಮಿ'. ತಾಯಿ ಬೇಕೆಂದು ಆ ಮಗು 'ಮಮ್ಮಿ,
ಮಮ್ಮಿ' ಎಂದು ಹಟ ಹಿಡಿಯುತ್ತಿತ್ತು. ಅಜ್ಜಿ
ಅದು ರೂಪಾಳನ್ನ ಹಾಗೆ ಕರೆಯುತ್ತಿದೆ ಎಂದು
ಕೊಂಡರು. ಮಗು ಅವಳ ಹಣೆಯ ಸ್ಟಿಕರ್ ಕಿತ್ತು
ಹಾಕಿತ್ತು. ಇದನ್ನು ಅಜ್ಜಿ ತಪ್ಪು ತಿಳಿದುಕೊಂಡರು

ಮನೆಗೆ ಹೋಗಿ ಲೀಲಮ್ಮನಿಗೆ ಹೇಳಿಯೂ
ಹೇಳಿದರು. "ನೀವು ಬೇರೆ ಯಾರನ್ನೋ
ನೋಡಿರಬೇಕು ಅತ್ತೆ'' ಎಂದುಬಿಟ್ಟರು ಲೀಲಮ್ಮ

ಇತ್ತ ರೂಪಾಳ ಆಪ್ತ ಗೆಳತಿಯರು ಅಶೋಕ್‌ನ

ಫೋಟೋ ಬೇಕೆಂದು ಪೀಡಿಸತೊಡಗಿದರು. ಅವಳ ತಂದೆ ಅಶೋಕ್‌ಗೆ ಹೇಳಿ ಅವನು ತನ್ನದು ಬೇರೆ ಸದ್ಯಕ್ಕೆ ಇಲ್ಲವೆಂದು ಸುಜಿ ಮದುವೆಯಲ್ಲಿ ತೆಗೆದಿದ್ದ ಫ್ಯಾಮಿಲಿ ಗ್ರೂಪ್ ಫೋಟೋ ಒಂದನ್ನು ಕಳುಹಿಸಿದ. ಅದನ್ನು ನೋಡಿದಾಗ ರೂಪಾಗೆ ತಲೆ ಸುತ್ತಿದಂತಾಯಿತು.

"ಅಮ್ಮ ಈ ಮೂವರೂ ನನ್ನ ಬಸ್‌ನಲ್ಲಿ ಬಂದಿದ್ದರು.''

"ಏನಾದರೂ ಯದ್ವಾತದ್ವಾ ಉತ್ತರ ಕೊಟ್ಟೆಯಾ?'' ಬಸ್ಸಿನಲ್ಲಿ ಯಾರಾದರೂ ಬೇಡದ ಪ್ರಶ್ನೆ ಕೇಳಿದಾಗ ರೂಪಾ ನೀಡಿದ ಉತ್ತರ ಕೇಳಿ ಮನೆಯವರೆಲ್ಲ ಹಲವು ಬಾರಿ ನಕ್ಕಿದ್ದುಂಟು.

"ಆ ಹುಡುಗೀಗೆ ಬಿ. ಎಸ್ಸಿ. ರಿಪೀಟರ್ ಎಂದೆ. ಅಜ್ಜಿ ಬಂದಾಗ ಶೈಲಾ ಮಗು ದೇವೂನ ಎತ್ತಿಕೊಂಡಿದ್ದೆ. ಅದು ಮಮ್ಮಿ, ಮಮ್ಮಿ ಎಂದು ಗಲಾಟೆ ಮಾಡುತ್ತಿತ್ತು. ಅದಾದರೂ ಪರವಾಗಿಲ್ಲ...''

"ಇನ್ನೇನು ಮಾಡಿದೆ?''

"ಆ ಹುಡುಗನಿಗೆ ಕೆನ್ನೆಗೆ ಬಾರಿಸಿ ಬೈದುಬಿಟ್ಟೆ.'' ರೂಪಾ ಅಳುತ್ತ ಕುಳಿತಳು. ಅವಳ ತಾಯಿ ಗಂಡನಿಗೆ ನಡೆದುದೆಲ್ಲವನ್ನೂ ಹೇಳಿದರು.

"ಮದುವೆಗೆ ಇರುವ ಹೆಣ್ಣನ್ನು ಎಗ್ಸಿಬಿಷನ್‌ನಲ್ಲಿನ ವಸ್ತುವಂತೆ ಒಬ್ಬೊಬ್ಬರು ಬಂದು ನೋಡುವುದು ಸರಿಯಲ್ಲ ಎಂದರೂ ತಮ್ಮ ಮನೆಗೆ ಸೇರುವ ಹುಡುಗಿ ಹೇಗಿರುತ್ತಾಳೋ ಎಂಬ ಕುತೂಹಲ ಅಶೋಕ್‌ನ ಮನೆಯವರಿರುವುದು ಸಹಜವೇ. ಸರಿ ರೂಪಾಳನ್ನೇ ಅವರ ಮನೆಗೆ ಕರೆದುಕೊಂಡು ಹೋಗೋಣ.'' ಅಂತೆಯೇ ಭಾನುವಾರ ರೂಪಾ, ಅವಳ ತಂದೆ, ತಾಯಿ, ಅಣ್ಣ ಅಲ್ಲಿ ಬಂದಾಗ ಅಶೋಕ್‌ನ ಮನೆಯವರಿಗೆಲ್ಲ ಆಶ್ಚರ್ಯ. ಲಗುಬಗನೆ ಮೈಸೂರು ಪಾಕ್, ಉಪ್ಪಿಟ್ಟು ಕಾಫಿ ತಯಾರಾಯಿತು. ಅಡುಗೆ ಮನೆಯಲ್ಲಿ ರೂಪಾಳ ತಾಯಿ ಗುಟ್ಟಿನಲ್ಲಿ ಲೀಲಮ್ಮನಿಗೆ ನಡೆದುದು ಹೇಳಿದರು. "ಬಸ್ಸಿನಲ್ಲಿ ಸುಮ್ಮನೆ ಏನೇನೋ ಪ್ರಶ್ನೆ ಕೇಳ್ತಾರಂತ ಸಂಬಂಧಪಡದವರಿಗೆ ಇರುವ ವಿಷಯ ಏಕೆ ಎಂದು ರೂಪಾ ಏನೇನೋ ಉತ್ತರ ಕೊಡ್ತಾಳೆ. ಅದಕ್ಕಾಗಿ ನಾವು ಹೇಳಿರುವ ವಿಷಯ ಸುಳ್ಳು ಎಂದು ಈ ಮದುವೆ ನಿಲ್ಲುವುದು ಬೇಡ'' ಎಂದರು ಅವಳ ತಾಯಿ.

"ಇದೆಲ್ಲ ಚಿಕ್ಕ ವಿಷಯ, ನೀವ್ಯಾಕೆ ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳುತ್ತೀರಿ. ಮುಖ್ಯವಾಗಿ ನಮ್ಮ ಅಶೋಕ್‌ನದೇ ತಪ್ಪು. ಅವನೊಂದು ಎಣಿಸಿದರೆ ಬೇರೊಂದು ನಡೆಯಿತು. ಪರವಾಗಿಲ್ಲ ಬಿಡಿ'' ಎಂದರು ಲೀಲಮ್ಮ ನಕ್ಕು.

ವಿಜಯ್, ಸುಜಿ ತಮಗಾದ ಅನುಭವವನ್ನು ಹಂಚಿಕೊಂಡಿದ್ದರು. ಅವನು ಅಜ್ಜಿ ಅಮ್ಮನಿಗೆ ಹೇಳಿದುದನ್ನು ಕೇಳಿಸಿಕೊಂಡಿದ್ದ. ಚಳ್ಳೇಕಾಯಿ ಸುಮ್ಮನಿರಬೇಕಲ್ಲ!

ಎಲ್ಲರೂ ತಿಂಡಿ ತಿನ್ನುತ್ತಿರುವಾಗ ಅವನು,

"ಅಣ್ಣ, ಅತ್ತಿಗೆ ಬರೀ ರೂಪಾ ಅಲ್ಲಾ, ಅವರು ಬಹುರೂಪಾದೇವಿ'' ಅಂದ.

ರೂಪಾಳ ಮುಖದಲ್ಲಿ ಭಯವನ್ನು ಕಂಡ ಲೀಲಮ್ಮ "ಅದೇನೋ ಅದು ಬಹುರೂಪಾದೇವಿ!'' ಲೀಲಮ್ಮ ಕಣ್ಣಿನಲ್ಲಿ ಗದರಿದರು. ಹೆದರಿದ ರೂಪಾಳನ್ನು ಕಂಡು ವಿಜಯ್ ಮಾತು ಬದಲಿಸಿದ.

"ಅದೇಮ್ಮ, ಬಹು ಅಂದರೆ ಸೊಸೆ, ರೂಪಾ ಅವರ ಹೆಸರು, ದೇವಿ ಮರ್ಯಾದೆಗೆ.''

"ಸಾಕು ಮಾಡೋ ನಿನ್ನ ವ್ಯಾಖ್ಯಾನ. ಶುದ್ಧ ತಲೆಹರಟೆ.'' ಮುದ್ದಿನಿಂದ ಲೀಲಮ್ಮ ಬೈದರು.


ಅವನು ಬಿಟ್ಟರೆ ತಾನೇ "ಅತ್ತಿಗೆ ನನಗೊಬ್ಬನಿಗೇ ಸ್ಪೆಶಲ್ ಟ್ರೀಟ್ ಅಂದರೆ ಸ್ವೀಟ್, ಕಾರ, ಸಿನಿಮಾ ಪಾರ್ಟಿ ಇಲ್ಲದಿದ್ದರೆ...''

ರೂಪಾ ಮತ್ತೆ ಬೆಚ್ಚಿದಳು.

"ಇಲ್ಲದಿದ್ದರೆ ಈ ಅಣ್ಣ ಅರ್ಧಾಂಗನಾದಾಗ ನಿಮ್ಮನ್ನ ನನ್ನ ಜೊತೆ ಇರೋಕೆ ಬಿಡೋದೆ ಇಲ್ಲ. ಅದಕ್ಕೆ ಮೊದಲೇ ಡಿಮ್ಯಾಂಡ್ ಮಾಡ್ತಿರೋದು. ಪ್ರಾಮಿಸ್!'' ಎಂದು ಕೈ ಚಾಚಿದ.

ನೆಮ್ಮದಿಯ ಉಸಿರುಬಿಟ್ಟು ರೂಪಾ "ಪ್ರಾಮಿಸ್'' ಎಂದಳು. ಅದು ಅವರೆಲ್ಲರಲ್ಲಿ ಅವಳು ಒಂದಾಗಿ ಇರಬೇಕೆಂಬ ಆಶಯದ ಆಶ್ವಾಸನೆಯೂ ಆಗಿತ್ತು. ●

ಚಿನ್ನದ ಪುತ್ಥಳಿ



ಧಾರಾವಾಹಿ-೬

ಎಚ್. ಕೆ. ಅನಸೂಯ ಸಂಪತ್

"ಅದಕ್ಕೆ ಹಾಗಾಡುತ್ತಾನೆ. ಜೊತೆಗೆ ಐ. ಎ. ಎಸ್. ಬೇರೆ, ಅಧಿಕಾರ ಚಲಾಯಿಸಿ ರೂಢಿ. ಅದಕ್ಕೆ ಹಾಗಾಡುತ್ತಾನೆ."

"ಇನ್ನು ಮೇಲೆ ನಾನು ಅವನಿಗೆ ಬಡಿಸುವುದಿಲ್ಲಪ್ಪ."

ಅವಳ ಮಾತಿಗೆ ಪ್ರಸಾದ್ ನಕ್ಕು ಬಿಟ್ಟ "ನೀನು ಈಗ ಹಾಗನ್ನುತ್ತೀಯಾ. ಆಮೇಲೆ ನೀವಿಬ್ಬರೂ ಎಷ್ಟು ಹೊಂದಿಕೊಳ್ಳುತ್ತೀರಿ, ನಾನೇ ನೋಡುತ್ತೀನಲ್ಲ" ಎಂದ.

ಪರಿಮಳಾ ನಿಟ್ಟುಸಿರುಬಿಟ್ಟಳು. ಅಷ್ಟೇ ಅಲ್ಲ, ಅತ್ತೆಯ ಬಳಿ ಹೇಳಿಯೂ ಬಿಟ್ಟಿದ್ದಳು.

"ಅಮ್ಮಾ ನಾನು ಇನ್ನು ಮೇಲೆ ವರುಣ್‌ಗೆ ಬಡಿಸುವುದಿಲ್ಲ. ನೀವೇ ಬಡಿಸಿ."

"ಏಕೆ?"

"ಅವರ ಅಭಿರುಚಿ ಹೇಗೆ ಅಂತ ನನಗೆ ಗೊತ್ತಿಲ್ಲ. ಅದಕ್ಕೆ ನಾನೇನೋ ಮಾಡೋದು, ಅವರು ರೇಗುವುದು ಏಕೆ?"

"ಓಹೋ ನಿನ್ನ ಮೇಲೂ ರೇಗಿದನಾ." ಸಾವಿತ್ರಮ್ಮ ಕೇಳಿದರು.

"ಹಾಗಲ್ಲ ಅಮ್ಮಾ ನಿಮಗಾದರೆ ಮಗ, ನಾನು ಮಾಡುವುದು ಅವರಿಗೆ ಸರಿ ಹೋಗುವುದಿಲ್ಲ."

"ಅಯ್ಯೋ ಅವನು ನನ್ನ ಮೇಲ ರೇಗುತ್ತಾನೆ. ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳಬೇ ಚೆನ್ನಾಗಿ ದಬಾಯಿಸು ಸುಮ್ಮನಾಗುತ್ತಾನೆ."

"ಹೇಗೆ?"

"ನಾನು ಮಾಡುವುದೇ ಹೀಗೆ, ಬೇಕಾದ ನಿನ್ನ ಹೆಂಡತಿ ಬಂದ ಮೇಲೆ ಹೇಗೆ ಬೇಕಾದರ ಮಾಡಿಸಿಕೋ ಅನ್ನು."

ಅತ್ತೆಯ ಮಾತಿನಿಂದ ಅವಳಿಗೆ ನ ಬಂದಿತು. ಅನಂತರದ ದಿನಗಳಲ್ಲಿ ಅವನು ರೇಗಿದಾ ಅತ್ತೆ ಹೇಳಿಕೊಟ್ಟಿದ್ದಂತೆ ಹೇಳಿದ್ದಳು.

"ಓಹೋ ನಿಮಗೂ ಅಮ್ಮನ ಗಾ ಬೀಸಿತಾ?" ಎಂದ.

ಅವಳು ನಕ್ಕು ಸುಮ್ಮನಾಗಿಬಿಟ್ಟದ್ದಳ ಅನಂತರದ ದಿನಗಳಲ್ಲಿ ಅವನ ಸ್ವಭಾ ಹೊಂದಾಣಿಕೆಯಾಗಿ ಆತ್ಮೀಯತೆ ಬೆಳೆಯಿತ ಏಕವಚನದಲ್ಲಿ ಕರೆದು ಬುದ್ಧಿ ಹೇಳುವಷ್ಟು ಸದ ಬೆಳೆಯಿತು. ಈಗ ಅವನಿಗೆ ಬಾಬಿಯೇ ಎಲ್ಲರಿಗಿಂ ಆತ್ಮೀಯ ವ್ಯಕ್ತಿ. ಅದನ್ನು ಕಂಡು ಪ್ರಸಾದ "ನಾನು ಹೇಳಿರಲಿಲ್ಲವಾ ಪರಿ, ನೀನೂ ವರುಣ ಈಗ ಎಷ್ಟು ಆತ್ಮೀಯರು ನೋಡು" ಎಂದಿದ್ದ

ಪರಿಮಳಾಳಿಗೆ ಹಿಂದಿನದೆಲ್ಲ ನೆನದು ನಗ ಬಂದಿತು. ಇಂದು ನಾರಾಯಣನ ಮಾತಿನಿಂ ಅವಳಿಗೆ ವರುಣ್‌ನ ಸ್ವಭಾವ ನೆನೆಸಿಕೊಳ ವಂತಾಗಿತ್ತು. ವರುಣ್ ಈ ರೀತಿ ಸಿಡು ಸ್ವಭಾವದವನಾದರೂ ಬಹಳ ಬುದ್ಧಿವಂತ. ವಯಸ್ಸಿಗೇ ಐ. ಎ. ಎಸ್. ಪರೀಕ್ಷೆ ಪಾಸು ಮಾ ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದ.

ತಂದೆ, ಅಣ್ಣ ಫ್ಯಾಕ್ಟರಿ ನೋಡಿಕೊಳ್ಳುತ್ತಿದ್ದರ ಬೇಕಾದಷ್ಟು ಆದಾಯವಿತ್ತು. ನೀನೂ ಸಹ ಫ್ಯಾಕ್ ನೋಡಿಕೋ ಎಂದು ಎಷ್ಟು ಹೇಳಿದರೂ ಕೇಳ ಸರ್ಕಾರದ ಉನ್ನತ ಹುದ್ದೆಗಾಗಿ ಆಸೆಪಟ್ಟ ಕೊನೆಗೆ ಸಾವಿತ್ರಮ್ಮನೇ ಗಂಡನಿಗೆ ತಿಳಿಸಿ ಹೇಳಿದ್ದರ ಹಟವಾದಿಯಾದ ವರುಣ್ ತನ್ನ ಹಟ ಸಾಧಿಸಿಯ ತೋರಿಸಿದ್ದ. ಸದಾಶಿವನ್‌ರವರಿಗೆ ಚಿಕ್ಕ ಮಗ

ಮೇಲೆ ಕೋಪವಿದ್ದರೂ ಅನಂತರದ ದಿನಗಳಲ್ಲಿ ಕಡಿಮೆಯಾಗಿತ್ತು.

ಹಾಗೆಂದು ಫ್ಯಾಕ್ಟರಿಯನ್ನು ಉದಾಸೀನ ಮಾಡಿದ್ದನೆಂದಲ್ಲ. ಆಗಾಗ್ಗೆ ಸಂಜೆಯ ವೇಳೆ ಫ್ಯಾಕ್ಟರಿಗೆ ಭೇಟಿ ಕೊಡುತ್ತಿದ್ದ. ಅಲ್ಲಿನ ಆಗುಹೋಗುಗಳ ಅರಿವು ಅವನಿಗೂ ಇತ್ತು.

ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಸಾವಿತ್ರಮ್ಮ ಬಂದರು.

"ಅಮ್ಮಾ ಹೇಗಿತ್ತು ಪ್ರಯಾಣ?"

"ಅಯ್ಯೋ ತುಂಬ ಸುಸ್ತಾಯಿತಮ್ಮ. ಹಾಳು ರೈಲು ಪ್ರಯಾಣ. ಕಾರಿನಲ್ಲಿ ಬಂದಿದ್ದರೆ ಇಷ್ಟು ಆಯಾಸವಾಗುತ್ತಿರಲಿಲ್ಲ."

"ಏಳಿ ಕೈ ಕಾಲು ತೊಳೆದುಕೊಳ್ಳಿ. ಊಟ ಮಾಡುವಿರಂತೆ."

"ಎಲ್ಲರದೂ ಆಯಿತಾ?"

"ಹ್ಞೂಂ. ಮಾವ, ಇವರೂ ಬಂದು ಊಟ ಮಾಡಿಕೊಂಡು ಹೋದರು."

"ವರುಣ್?"

"ಅವನು ಬರುವುದಿಲ್ಲವಂತೆ."

"ಅವನದೊಂದು ಇದ್ದದ್ದೇ, ತಿಂಗಳಿನಲ್ಲಿ ಇಪ್ಪತ್ತು ದಿನ ಹೊರಗೇ ತಿನ್ನುತ್ತಾನೆ."

"ನೀವು ಬಂದ ಕೂಡಲೇ ಫೋನ್ ಮಾಡುವುದಕ್ಕೆ ಹೇಳಿದ್ದಾನೆ."

"ಹುಂ" ಎಂದು ಹೊರಟರವರು.

"ಮಗು ಸ್ಕೂಲಿಗೆ ಹೋಗಿದೆಯಾ" ಎಂದರು.

"ಹ್ಞೂಂ."

"ಅದನ್ನು ನೋಡದೆ ಬೇಜಾರಾಗಿತ್ತು ಕಣೇ."

"ಸಾಯಂಕಾಲ ಬರುತ್ತಲ್ಲ" ಎಂದಳು.

ಕೈ ಕಾಲು ತೊಳೆದು ಊಟ ಮಾಡಿದರು. ಅನಂತರ ಆಕೆ ಹಾಗೆಯೇ ಹಾಸಿಗೆಯಲ್ಲಿ ಉರುಳಿಕೊಂಡಾಗ ಪರಿಮಳಾ ಅಲ್ಲಿಯೇ ಬಂದು ಕುಳಿತಳು.

"ಪ್ರಭಾ ಹೇಗಿದ್ದಾರೆ ಅಮ್ಮಾ?"

"ಚೆನ್ನಾಗಿದ್ದಾಳೆ. ಅವಳೂ ಬರಬೇಕು ಅಂತಿದ್ದಳು, ಆದರೆ ಮಗಳಿಗೆ ಸ್ಕೂಲು ತಪ್ಪುತ್ತೆ ಅಂತ ಬರಲಿಲ್ಲ."

"ವರುಣ್‌ಗೆ ಯಾವುದಾದರೂ ಹೆಣ್ಣು ನೋಡಿದ್ದಾರಂತೇನು?"

"ಇವನು ಒಪ್ಪುವ ಹೆಣ್ಣು ಸಿಗಬೇಕಲ್ಲ. ಇವನು ಬಯಸುವ ರತಿಯನ್ನು ಯಾರು ಹುಡುಕಲು ಸಾಧ್ಯ?"

"ಯಾಕಮ್ಮ ಹಾಗಂತೀರಿ?"

"ಮತ್ತೀನ್ನೇನು, ಯಾವ ಹೆಣ್ಣು ತೋರಿಸಿದರೂ ಏನಾದರೊಂದು ಕಾರಣ ಹುಡುಕುತ್ತಾನೆ. ಒಟ್ಟಿನಲ್ಲಿ ಅವನ ಕಣ್ಣಿಗೆ ಯಾವ ಹೆಣ್ಣೂ ಸುಂದರವಲ್ಲ."

"ಅವನ ಹಣೆಯಲ್ಲಿ ಯಾವುದು ಬರೆದಿದೆಯೋ ಆ ಹುಡುಗಿ ಅವನಿಗೆ ಸೌಂದರ್ಯವತಿಯಾಗಿ ಕಾಣುತ್ತಾಳೆ, ಆಗ ಒಪ್ಪುತ್ತಾನೆ. ಎಲ್ಲದಕ್ಕೂ ಕಾಲ ಕೂಡಿ ಬರಬೇಕು ಅಷ್ಟೇ."

"ಯಾವತ್ತು ಆ ಕಾಲ ಬರುತ್ತೋ" ಎಂದು ನಿಟ್ಟುಸಿರುಗರೆದರು.

"ಅಮ್ಮಾ ವರುಣ್‌ಗೆ ಫೋನ್ ಮಾಡುತ್ತೀನಿ" ಎಂದು ಫೋನ್ ರಿಂಗ್ ಮಾಡಿದಳು.

ಆದರೆ ವರುಣ್ ಯಾವುದೋ ಮೀಟಿಂಗ್‌ನಲ್ಲಿದ್ದ. ಏನಾದರೂ ತುರ್ತು ವಿಷಯವಿದ್ದರೆ

ಇಲ್ಲಿಯವರೆಗೆ...

ವರ್ಷ ಸುಂದರ ತರುಣಿ. ಬಡತನದ ಬೇಗೆಯಲ್ಲಿ ಬೇಯುತ್ತಿದ್ದರೂ ಕಾಲೇಜಿಗೆ ಹೋಗಿ ವಿದ್ಯೆ ಕಲಿಯುತ್ತಾಳೆ. ಗೆಳತಿಯ ಎದುರಿನಲ್ಲಿ ಸ್ವಾಭಿಮಾನಿಯಾಗಿ ಉಳಿಯುತ್ತಾಳೆ. ಮನೆಯಲ್ಲಿ ಮದುವೆಯ ಮಾತು ಬಂದಾಗ ನಿರಾಕರಿಸುತ್ತಾಳೆ.

.....ಮುಂದೆ ಓದಿ

ಕರೆಯುವುದಾಗಿ ತಿಳಿಸಿದರು. ಅಂತಹ ವಿಷಯವೇನೂ ಇಲ್ಲದಿದ್ದುದರಿಂದ ಬೇಡವೆಂದಳು.

"ಸಿಕ್ಕಿದ್ದನೇನೇ?'' ಸಾವಿತ್ರಮ್ಮ ಕೇಳಿದರು.

"ಇಲ್ಲಮ್ಮ ಯಾವುದೋ ಮೀಟಿಂಗ್ ಇದೆಯಂತೆ.''

"ಸರಿ ಬಿಡು ಅವನು ಆಫೀಸಿಗೆ ಹೋದ ಮೇಲೆ ಯಾವಾಗಲೂ ಬಿಜೀನೇ'' ಎಂದರು.

ಸಂಜೆ ಆಫೀಸಿನಿಂದ ಬಂದ ಚಿದಂಬರ ರಾಯರಿಗೆ ಮಗಳು ಪರಿಮಳಾಳ ಮಗನಿಗೆ ಪಾಠ ಹೇಳಿಕೊಡಲು ಕೆಲಸಕ್ಕೆ ಸೇರಿದುದನ್ನು ತಿಳಿಸಿದರು ಕುಮುದಮ್ಮ.

"ಅಲ್ಲ ಕಣೇ ಕುಮುದಾ, ಮದುವೆಯಾಗುವ ಹುಡುಗಿ. ಕಂಡವರ ಮನೆ ಬಾಗಿಲಿಗೆ ಹೋಗಿ ಏಕೆ ದುಡಿಯಬೇಕು, ನಾಳೆ ಜನ ಏನಾದರೂ ಕೆಟ್ಟ ಹೆಸರು ಇಟ್ಟರೆ ಕಷ್ಟ''

"ನೋಡೋಣ. ನಾಲ್ಕು ದಿನ ಹೋಗಲಿ. ಸರಿ ಹೋಗದಿದ್ದರೆ ಬಿಟ್ಟರಾಯಿತು. ನಾನೂ ಅವರ ಮನೆಗೆ ಹೋಗಿದ್ದೆ. ಜನ ಒಳ್ಳೆಯವರಾಗಿ ಕಾಣುತ್ತಾರೆ.''

"ಆದರೂ...''

"ಅವಳು ಹೋಗಲಿ ನಾಲ್ಕುದಿನ. ನಾಳೆ ಹೇಗಿದ್ದರೂ ರಮಾ ಮನೆಗೆ ಹೋಗುತ್ತೇವಲ್ಲ ಆದೆಷ್ಟು ಬೇಗ ಲಗ್ನ ಇಟ್ಟು ಬಿಡೋಣ.''

"ನಮಗೆ ಅವಳನ್ನು ವಂಸತ್‌ನಿಗೆ ಕೊಡುವ ಆಸೆ. ಆದರೆ ಅವಳಿಗೆ ಇಷ್ಟವಿಲ್ಲ.''

"ಏಕೆ?''

"ಅದೇ ಅವತ್ತೇ ಹೇಳಿದಳಲ್ಲ. ಅವನನ್ನು ಮದುವೆಯಾದರೆ ನಾನು ಸುಖವಾಗಿರುವುದಿಲ್ಲ ಅಂತ''

"ಅವಳೇನೋ ಹಾಗನ್ನುತ್ತಾಳೆ. ಆದರೆ ನಮ್ಮ ಪರಿಸ್ಥಿತಿಯಲ್ಲಿ ನಾವು ಬೇರೆ ಯಾವ ಹುಡುಗನನ್ನು ಹುಡುಕಲು ಸಾಧ್ಯ?''

"ಹೌದು, ಯಾರನ್ನು ಹುಡುಕುವುದು?''

"ಈಗಿನ ಕಾಲದಲ್ಲಿ ವರದಕ್ಷಿಣೆ ಹೆಚ್ಚು ಕೇಳುತ್ತಾರೆ. ಅಷ್ಟೆಲ್ಲ ಹಣ ಕೊಡಲು ಸಾಧ್ಯವೇ? ಇವಳು ಬಯಸುವ ಶ್ರೀಮಂತ ಎಲ್ಲಿ ಸಿಗುತ್ತಾನೆ?''

"ಅವಳಿಗೆ ಎಷ್ಟು ಹೇಳಿದರೂ ಕೇಳುವುದಿಲ್ಲ. ಇಷ್ಟವಿಲ್ಲದ ಮದುವೆ ಮಾಡಿದರೆ ಅವಳು ಸುಖವಾಗಿರುತ್ತಳೇನು?''

"ತಾಳು ಅವಳನ್ನೇ ಕರೆದು ಕೇಳೋಣ'' ಎಂದು ಮಗಳನ್ನು ಕರೆದರು.

"ಏನಮ್ಮಾ ವರ್ಷ, ಇದುವರೆಗೂ ಓದು ಮುಗಿಯಲಿ ಅಂತ ಹೇಳುತ್ತಿದ್ದೆ, ಆದರೆ ಈಗ ವಸಂತ್‌ನನ್ನು ಬೇಡ ಅನ್ನುತ್ತಿದ್ದಿಯಂತೆ.''

"ಹೌದಪ್ಪ, ನನಗೆ ಈ ಮದುವೆ ಇಷ್ಟವಿಲ್ಲ.''

"ನೋಡಮ್ಮ ನಮ್ಮ ಮನೆಯ ಪರಿಸ್ಥಿತಿ ನಿನಗೆ ತಿಳಿದದ್ದೇ. ಈ ಹುಡುಗನನ್ನು ಬಿಟ್ಟರೆ ನಿನಗೆ ಮದುವೆಯಾಗುವುದು ಕಷ್ಟವಾಗುತ್ತದೆ.''

"ಹಾಗಂತ ಮದುವೆಯಾಗಿ ಅವನೊಂದಿಗೆ ಬಾಳಲಾರೆ.''

"ನೋಡಮ್ಮ, ನೀನಿನ್ನೂ ಚಿಕ್ಕವಳು, ನಿನಗೆ ತಿಳುವಳಿಕೆ ಸಾಲದು. ಹಣವೇ ಪ್ರಾಧಾನ್ಯವಲ್ಲ. ನಿನ್ನನ್ನು ಪ್ರೀತಿಸುವ ವಸಂತ್‌ನನ್ನು ನೀನು ಮದುವೆಯಾದರೆ ಸುಖವಾಗಿರುತ್ತೀಯಾ.''

"ಪ್ರೀತಿಯಿಂದ ಜೀವನ ಸಾಗುವುದಿಲ್ಲ ಅಪ್ಪಾ.''


"ನಿನ್ನನ್ನು ಸಾಕುವಷ್ಟು ಗಳಿಕೆ ಅವನಿಗಿದೆ. ಸರ್ಕಾರಿ ಉದ್ಯೋಗವಿದೆ. ಕೈ ತುಂಬ ಸಂಬಳ ಬರುತ್ತೆ. ''

"ಅಷ್ಟು ಸಾಕೆ, ಅದರಿಂದ ಸುಗಮ ಜೀವನ ಸಾಧ್ಯವೇ?''

"ಹಾಗಾದರೆ ಶ್ರೀಮಂತನನ್ನು ಎಲ್ಲಿ ಹುಡುಕುವುದು?''

" ಅಪ್ಪಾ ನನಗೆ ಮದುವೆಯೇ ಬೇಡ. ಉತ್ತಮ ಸ್ಥಿತಿಯಲ್ಲಿರುವ ಹುಡುಗ ಸಿಕ್ಕದರೆ ಮದುವೆಯಾಗುತ್ತೇನೆ ಇಲ್ಲದಿದ್ದರೆ ಇಲ್ಲ. ''

"ಏನಮ್ಮ ಈ ತರಹ ಹಟ ಮಾಡು



ತ್ರೀಯಾ?''

"ನನಗೆ ಈ ಬಡತನದ ಬೇಗೆ ಸಹಿಸಿ ಅವಮಾನದಿಂದ ಕುಗ್ಗಿ ಸಾಕಾಗಿ ಹೋಗಿದೆ. ಜೀವನದಲ್ಲಿ ಮುಂದೆಯಾದರೂ ಉತ್ತಮ ಬಾಳ್ವೆ ನಡೆಸುವ ಆಸೆಯಿಂದ ಈ ಮದುವೆ ಬೇಡವೆನ್ನುತ್ತಿದ್ದೇನೆ.''

"ಇದೇನಾಮ್ಮ ನಿನ್ನ ಕಡೆಯ ನಿರ್ಧಾರ.''

"ಹೌದಪ್ಪ, ನನಗಂತೂ ಅವನನ್ನು ಮದುವೆಯಾಗುವುದು ಇಷ್ಟವಿಲ್ಲ. ಇದರ ಮೇಲೆ ನಿಮ್ಮಿಷ್ಟ ನನ್ನ ಇಷ್ಟಕ್ಕೆ ವಿರುದ್ಧ ನೀವು ಮದುವೆ ಮಾಡಿದರೆ ಆಗುವ ಪರಿಣಾಮ ನನಗೇ ಗೊತ್ತಿಲ್ಲ.''

"ಇಲ್ಲಮ್ಮ ನಿನ್ನ ಇಷ್ಟಕ್ಕೆ ವಿರುದ್ಧ ಮಾಡುವುದಿಲ್ಲ.''

"ತುಂಬ ಥ್ಯಾಂಕ್ಸ್ ಅಪ್ಪಾ, ನೀವೇನು ಯೋಚನೆ ಮಾಡಬೇಡಿ. ನಾನು ದುಡಿದು ಸಂಪಾದಿಸಿ ನಿಮ್ಮನ್ನು ನೋಡಿಕೊಳ್ಳುತ್ತೇನೆ.''

"ಏನು ದುಡಿಯುತ್ತಿಯೋ ಏನೋ, ನಮಗೆ ನಿನ್ನ ದುಡಿಮೆಗಿಂತ ಮದುವೆ ಅಗತ್ಯವಾಗಿದೆ. ಆದರೆ ನಿನಗೆ ಅದು ಅರ್ಥವಾಗುವುದಿಲ್ಲ.''

"ನಾನೇನು ಮದುವೆಯೇ ಬೇಡ ಅನ್ನುತ್ತಿಲ್ಲವಲ್ಲಪ್ಪ. ವಸಂತ್‌ನನ್ನು ಮದುವೆಯಾಗುವುದಿಲ್ಲ ಅಂದೆ ಅಷ್ಟೆ.''

"ಅದು ಸರಿ, ಈಗ ನೀನೇನೋ ಸುಲಭವಾಗಿ ಬೇಡ ಅಂದುಬಿಟ್ಟೆ. ರಮಾಳ ಮನೆಗೆ ಬರುತ್ತೇನೆ ಅಂತ ಹೇಳಿಬಿಟ್ಟಿದ್ದೇನಲ್ಲ.''

"ಅದೇನು ಮಹಾ ದೊಡ್ಡ ವಿಚಾರವೇ ಅಪ್ಪಾ, ಹೋಗದಿದ್ದರೆ ಆಯಿತು. ಏಕೋ ಬರಲಿಲ್ಲ ಅಂದುಕೊಳ್ಳುತ್ತಾರೆ.''

"ಸ್ವಲ್ಪ ದಿನ ಹಾಗೆ ಅಂದುಕೊಳ್ಳಬಹುದು. ಆಮೇಲೆ ಒಂದು ದಿನ ನಮ್ಮ ಮನೆಗೆ ಬಂದೇ ಬರುತ್ತಾಳೆ.''

"ಬಂದರೆ ಬರಲಿ ಬಿಡಿ.''

"ಆಗ ಅವಳು ಮದುವೆಯ ವಿಚಾರ ಮಾತನಾಡುತ್ತಾಳೆ, ನಾವೇನು ಹೇಳುವುದು?''

"ಸದ್ಯದ ಪರಿಸ್ಥಿತಿಯಲ್ಲಿ ನಾವು ವರ್ಷಳಿಗೆ ಮದುವೆ ಮಾಡುವ ಸ್ಥಿತಿಯಲ್ಲಿಲ್ಲ. ನಾಲ್ಕು ವರ್ಷ ಅವಳು ದುಡಿದು ಸಂಪಾದಿಸಲಿ. ಆಮೇಲೆ ಮಾಡುತ್ತೇವೆ ಅಂತ ಹೇಳಿ. ಅಲ್ಲಿಯವರೆಗೂ ಅವರು ಕಾಯುವುದಿಲ್ಲ. ವಸಂತ್‌ನಿಗೆ ಬೇರೆ ಹೆಣ್ಣು ನೋಡಿ ಮದುವೆ ಮಾಡುತ್ತಾರೆ.''

"ಏನೋಮ್ಮ. ನೀನು ತೆಗೆದುಕೊಳ್ಳುತ್ತಿರುವ ನಿರ್ಧಾರ ಎಷ್ಟರ ಮಟ್ಟಿಗೆ ಸರಿಯೋ ನನಗಂತೂ ಗೊತ್ತಿಲ್ಲ.''

"ಅಪ್ಪಾ. ಎಲ್ಲ ಸರಿಯಾಗಿದೆ ನೀವು ಸುಮ್ಮನಿರಿ'' ಎಂದು ಅವರ ಬಾಯಿ ಮುಚ್ಚಿಸಿದಳು.

ಚಿದಂಬರರಾಯರು ಸುಮ್ಮನಾಗಬೇಕಾಯಿತು. ಕುಮುದಮ್ಮನಿಗೆ ಮಗಳ ನಿರ್ಧಾರ ಸರಿಯೆನಿಸದಿದ್ದರೂ ನಿರ್ವಾಹವಿರಲಿಲ್ಲ. ಅವಳಿಗೆ ಇಷ್ಟವಿಲ್ಲದ ಮದುವೆ ಮಾಡಿದರೆ ಮುಂದೆ ಹೇಗೋ ಏನೋ ಎಂಬ ಅಳುಕು. ಅವಳನ್ನು ಕಾಲೇಜಿಗೆ ಕಳುಹಿಸಿ ಓದಿಸಿದ್ದೇ ತಪ್ಪಾಯಿತೇನೋ ಎಂದು ಚಿಂತಿಸಿದರು. ತಮ್ಮ ಆರ್ಥಿಕ ಸ್ಥಿತಿಯಲ್ಲಿ ಅವಳು ಬಯಸುವ ಉತ್ತಮ ವರನನ್ನು ಹುಡುಕಿ ಮದುವೆ ಮಾಡಲು ಸಾಧ್ಯವೇ? ತಾವಿಬ್ಬರೂ ಅವಳ ಮದುವೆ ಮಾಡದೆಯೇ ಕಣ್ಣು ಮುಚ್ಚಿದರೆ ಅವಳ ಗತಿಯೇನು? ಓಹ್ ದೇವರೇ ನನಗೇಕೆ ಹೆಣ್ಣು ಮಗು ಕೊಟ್ಟೆ ಎಂದು ಹಲುಬಿದರು.

ಆದರೆ ವರ್ಷಳಿಗೆ ಮಾತ್ರ ಯಾವ ಬಗೆಯ ಚಿಂತೆಯೂ ಇರಲಿಲ್ಲ. ತಾನು ತೆಗೆದುಕೊಂಡ ನಿರ್ಧಾರದ ಬಗ್ಗೆ ಪಶ್ಚಾತ್ತಾಪವೂ ಇರಲಿಲ್ಲ. ಬೇಡದ ಬದುಕಿಗಿಂತ ಹೀಗಿರುವುದೇ ಒಳ್ಳೆಯದು ಎಂದು ಅವಳ ಭಾವನೆ. ಚೆನ್ನಾಗಿ ದುಡಿದು ಹಣ ಸಂಪಾದಿಸಿದರೆ ಯಾರಾದರೂ ಮದುವೆಯಾಗುತ್ತಾರೆ. ತಂದೆ ತಾಯಿ ತಿಳಿದಿರುವಂತೆ ಮದುವೆಯೇ ಆಗದೆ ಇರುವುದಿಲ್ಲ ಎಂದೆಲ್ಲ ಯೋಚಿಸಿದಳು.

ಮರುದಿನ ಬೆಳಿಗ್ಗೆ ಅವಳು ಎಂದಿನಂತೆ ಪರಿಮಳಾಳ ಮನೆಗೆ ಬಂದಾಗ ಶರತ್ ಸಿದ್ಧವಾಗಿದ್ದ.

(ಸಶೇಷ)





ಜಿ. ಜಿ. ಕುರಾರೆ
ಬಾಗಲಕೋಟೆ

ಪ್ರತಿಯೊಂದೂ ಹತ್ತು ರೂಪಾಯಿ ಬಹುಮಾನ ಪಡೆದಿದೆ

ರಂಗೋಲಿ


ಸೂಚನೆ

ರಂಗೋಲಿ ಚಿತ್ರಗಳನ್ನು ಕರಿಯ ಶಾಯಿ ಅಥವಾ ಪೆನ್ಸಿಲ್‌ಗಳಲ್ಲಿ ಮಾತ್ರ ಬರೆಯಿರಿ. ನೀಲಿ ಶಾಯಿಯಲ್ಲಿ ಬರೆಯಬೇಡಿ.

ರಂಗೋಲಿ ಚಿತ್ರಗಳೊಂದಿಗೆ ನಿಮ್ಮ ಪಾಸ್‌ಪೋರ್ಟ್ ಸೈಜಿನ ಕಪ್ಪು ಬಿಳುಪು ಛಾಯಾಚಿತ್ರವನ್ನು ಕಳುಹಿಸಲು ಮರೆಯದಿರಿ.



ಎಸ್. ಎನ್. ಮಂಜುಳ
ಬೆಂಗಳೂರು



ಸ್ವಚ್ಛಂದ ಸ್ವಪ್ನಗಳು

ಧಾರಾವಾಹಿ-೧೩

ತಮಿಳು ಮೂಲ :
ಪಿ. ಕೆ. ಪ್ರಭಾಕರ್

ಕನ್ನಡಕ್ಕೆ :
ಕಲ್ಯಾಣಿ ಮೂರ್ತಿ ರಾಮನಾಥಪುರ

"ಸರಿ ನಾನು ಅವನಿಗೆ ಹೇಳ್ತೇನಿ, ನಾಳೆ ಆತ ಬರ್ತಾನೆ. ಒಂದು ವಿಷಯ, ನಮ್ಮ ಮದುವೆಯಲ್ಲಿ ಇವನಿಗೇನು ಇಷ್ಟು ಇಂಟರೆಸ್ಟು ಎಂದುಕೊಳ್ಳಬೇಡಿ. ನನ್ನ ಫ್ರೆಂಡ್‌ಗೆ ತಕ್ಕ ಪತ್ನಿ ಬರಬೇಕೆಂಬ ಆಸೆ. ನಾಳೆ ನೀವು ಆತನನ್ನು ಭೇಟಿಯಾದನಂತರ ಅವನ ಬಗ್ಗೆ ಇನ್ನೂ ಹೇಳ್ತೇನೆ. ಅವನಂತೆ ನೀವೂ ಒಂದು ಕಳವು ಮಾಡ್ತಾ ಇದ್ದೀರಾ."

"ಏನದು?"

"ನಾನೂ ಅವನೂ ಒಟ್ಟಿಗೇ ಸೇರಿಸಿ ತೆಗೆಸಿಕೊಂಡಿರುವ ಒಂಧು ಫೋಟೋ ಇದೆ. ನೀವು ಇಷ್ಟಪಟ್ಟರೆ ತೋರಿಸುತ್ತೇನೆ."

"ಪರವಾಗಿಲ್ಲ ನಾಳೆ ನೇರವಾಗಿ ನೋಡುತ್ತೇನಲ್ಲ" ಎಂದು ಹೇಳಿ ಮನೆಗೆ ಬಂದು ಮಂಚದ ಮೇಲೆ ಮಲಗಿದಾಗ,

ಆ ಫೋಟೋವನ್ನು ನೋಡಿದ್ದರೆ ಚೆನ್ನಾಗಿತ್ತೋ ಏನೋ ಎನ್ನಿಸಿತು. ಅವಳಿಗೂ ಅರಿಯದೆ ಮನಸ್ಸಿನಲ್ಲಿ ನಗು, ಹುರುಪು. ಏನಿದು? ನಾಚಿಕೆಯೇ ನನಗೆ!

ರೂಮಿನಲ್ಲಿ ಬ್ಲೂ ನೈಟ್‌ಲ್ಯಾಂಪ್ ಉರಿಯುತ್ತಿತ್ತು. ಮಂಚದ ಮೇಲೆ ಮಲಗಿದ್ದ ಪದ್ಮಿನಿ ನಿದ್ರಿಸಲು ಬಹಳವೇ ಪ್ರಯತ್ನಿಸುತ್ತಿದ್ದಳ

ರೂಮಿನ ಕಿಟಕಿಯಿಂದ ಚಂದ್ರ ಕತ್ತಲೆಯನ್ನು ಮರೆಮಾಚಿದ್ದ. ದೂರದಲ್ಲಿ ತೆಂಗಿನ ಮರದ ಗರಿಗಳ ಅಲುಗಾಡುವಿ ರೂಮಿನಲ್ಲಿ ಚಂದ್ರನ ನಲಿದಾಡುವಿಕೆಯನ ತೋರಿಸುತ್ತಿತ್ತು.

ಪದ್ಮಿನಿ ಇಂದಿನವರೆಗೆ ಮದುವೆಯನ ಒಂದು ರಿಸ್ಕಾದ ವಿಷಯವಾಗಿ, ಜೂಜಾಟದಂ ಎಂದುಕೊಂಡಿದ್ದವಳು. ಅದರ ಬಗ್ಗೆ ಸ್ವ ಸಡಿಲಗೊಂಡಂತಾದಳು.

ಏತಕ್ಕೆ ಹೀಗೆ ಎಂದು ತನ್ನ ಒಳ ಮನಸ್ಸನ ಪ್ರಶ್ನಿಸಿಕೊಂಡಳು.

ಇಳಂಗೋ ಹೇಳಿದ ವಿಷಯಗಳ ಇಳಂಗೋ ಹೇಳಿದಾಗಿನಿಂದ ವಿಜಯಕುಮಾ ಎಂಬ ಚಿತ್ರವನ್ನು ಮುಖ ಮಾತ್ರ ಬಾಕಿ ಇ ರೇಖಾ ಚಿತ್ರ ಬರೆದು ನೋಡುವಂತಿದೆ.

ಆಫೀಸಿಗೆ ಬಂದು ಸಂಧಿಸೋಣವೆಂ ಮೊದಲು ವಿಜಯಕುಮಾರ್ ಹೇಳಿದ್ದಾ ಇಳಂಗೋನೇ ಪ್ಲಾನ್ ಬದಲಾಯಿಸಿದ್ದಾ ಸಂಪ್ರದಾಯದಂತೆ ಹೆಣ್ಣನ್ನು ಕರೆತಂದು ಕುಳ್ಳಿರಿ ಹಾಡು ಹೇಳಿಸಿ ನೋಡುವುದು ನನಗೆ ಇಷ್ಟವಿ ಎಂದು ಮಧ್ಯಸ್ಥರ ಮೂಲಕ ತಿಳಿದೊಡನೆ ಸಾಧಾರ

ಮನುಷ್ಯ ಏನೆಂದುಕೊಂಡಾನು?

'ಸರಿಯಾದ ಹಟಮಾರಿ ಹುಡುಗಿಯಲ್ಲಪ್ಪ, ನಾಳೆ ಇವಳ ಸ್ಪರ್ಶ ಮಾಡಬೇಕಾದರೂ ಕೂಡ ಅಪ್ಲಿಕೇಶನ್ ಹಾಕಿ ಕಾಯಬೇಕೋ ಏನೋ. ಸಂಸಾರದಲ್ಲಿ ತಗ್ಗಿ ಬಗ್ಗಿ ಇರಲಾರಳು. ಈ ಸಂಬಂಧ ಬೇಡ' ಹೀಗೆ ಅಲ್ಲವೆ ಅನ್ನಿಸುವುದು.

'ಹೆಣ್ಣು ಒಬ್ಬಳು ಮನುಷ್ಯೆ. ಅವಳಿಗೂ ಮನಸ್ಸು ಎಂಬುದಿದೆ. ಅದರಲ್ಲಿ ಸ್ವಯಂ ಚಿಂತನೆ, ಅನಿಸಿಕೆ, ಅಭಿಪ್ರಾಯ ಇರುವುದರಲ್ಲಿ ಏನು ತಪ್ಪು' ಎಂದು ವಿಶಾಲವಾಗಿ ಯೋಚಿಸುವವರೆಷ್ಟು ಮಂದಿ.

ವಿಜಯಕುಮಾರ್ ಮಧ್ಯಸ್ಥರು ನನ್ನ ಅಭಿಪ್ರಾಯ ಹೇಳಿದೊಡನೆ ಸಿಡಿಯಲಿಲ್ಲ. ತನ್ನ ಗೆಳೆಯನೊಂದಿಗೆ ನಿಧಾನವಾಗಿ ವಿಚಾರಿಸಿದ್ದಾನಲ್ಲ.

ಎರಡು ಮನೆಯವರೂ ಒಂದೆಡೆ ಭೇಟಿಯಾಗಿ ವಿಚಾರ ವಿನಿಮಯ ಮಾಡೋಣವೆಂಬ ಅಭಿಪ್ರಾಯವನ್ನು ದಾಟಿ ಒಂದು ಹೆಜ್ಜೆ ಮುಂದಿನ ಯೋಚನೆಯಾಗಿದೆಯಲ್ಲ. ಈ ಹುಡುಗಿಯನ್ನು ಆಕೆಗೆ ತಿಳಿಯದಂತೆಯೇ ನೋಡಿಬಿಟ್ಟರೆ, ಮುಂದಿನ ಭೇಟಿ ಹೌದೋ, ಇಲ್ಲವೋ ಎಂದು ನಿರ್ಧರಿಸ ಬಹುದಲ್ಲ ಎಂದು ಯೋಚಿಸಿದ್ದೂ ಮಾಡ್ರನ್ನೇ.

ಈ ಯೋಚನೆ ಬರಬೇಕೆಂದರೆ ಮನಸ್ಸಿನಲ್ಲಿ ಹಿರಿಮೆ, ಪಕ್ವತೆ, ಮನಸ್ಸನ್ನು ಅರಿಯುವ ಗುಣ ಇವೆಲ್ಲ ಅವಶ್ಯಕ. ಅನಂತರ ನನ್ನನ್ನು ಕಂಡೊಡನೆ ಹೇಳಿದ ಮಾತುಗಳು.

'ಜಂಬವಿಲ್ಲದ, ಸಿಂಪಲ್ಲಾಗಿ, ಗಂಭೀರವಾಗಿ, ಅದೇ ರೀತಿ ನಡಿಗೆ, ದೃಷ್ಟಿಯಲ್ಲೂ ಒಂದು ಸತ್ಯತೆ ಕಂಡು ಬರುತ್ತಿದೆ ಕಣೋ.'

ಎಂತಹ ಖಚಿತವಾದ ಮಾತು. ದೂರದಲ್ಲಿ ನಿಂತೇ ಇಷ್ಟು ತುಲನೆ ಮಾಡಿ ಹೇಳಿರುವಾಗ ಇದು ಹೇಗೆ ಸಾಧ್ಯವಾಯಿತು?

ಸಡನ್ ಆಗಿ ಪದ್ಮಿನಿಗೆ ಆ ವಿಜಯಕುಮಾರ್ ಎನ್ನುವ ಚಿತ್ರಕ್ಕೆ ಮುಖ ಸೃಷ್ಟಿಸಿ ನೋಡಬೇಕೆಂಬ ಕುತೂಹಲ ಪ್ರಧಾನಪೊಂದಿತು.

ಹೇಗಿರಬಹುದು, ಚಿಕ್ಕದಾದ ಮೀಸೆ, ಒರಟಾದ ಮೀಸೆ. ಅಥವಾ ಮೀಸೆಯೇ ಇಲ್ಲವೆ? ಎಂತಾಹ ಕಣ್ಣುಗಳೋ, ತುಟಿಗಳು ಅದುರುವಂತಾದ್ದೆ, ದಪ್ಪನೆಯದೆ,ಮೃದುವಾದದೆ, ತೆಳುವಾದದ್ದೆ? ಹೇರ್ ಸ್ಟೈಲ್ ಹೇಗೋ? ದಟ್ಟವಾದ ಕ್ರಾಪ್, ಗುಂಗುರು ಕೂದಲೇ, ಪಕ್ಕಕ್ಕೆ ಕೂಂಬ್ ಮಾಡಿರುವನೆ ಅಥವಾ ಮೇಲಕ್ಕೆ ಕೂಂಬ್ ಮಾಡಿರುವನೆ? ಹಲ್ಲುಗಳ ಸಾಲು ಅಂಕು ಡೊಂಕೆ? ಧ್ವನಿ ಇಂಪಾದುದೇ, ಗಡುಸಾದುದೆ? ಆ ವಿಜಯಕುಮಾರ್ ಹೇಗಿರಬಲ್ಲ?

ನಾನೇಕೆ ಅವನು ಇವನು ಎಂದು ಯೋಚಿಸುತ್ತೇನೆ? ಏಕೆ ಹೇಳಬಾರದೆ? ಈಗ ಅವನು ಯಾರೋ ಸರಿ. ಆದರೂ ವಯಸ್ಸಿಗೆ ಮರ್ಯಾದೆ ಕೊಟ್ಟು ಅವರು ಎಂದೇ ಹೇಳೋಣ.

ಪದ್ಮಿನಿಯ ಮನಸ್ಸಿನಲ್ಲಿ ಏನೇನೋ ಅನಿಸಿಕೆಗಳು, ಸುಮ್ಮನೆ ಹೊರಳಾಡಿದಳು.

ಸ್ವಲ್ಪ ಎದುರು ನೋಡುವಿಕೆ, ಸ್ವಲ್ಪ ಕುತೂಹಲ ಇವೆರಡರಲ್ಲಿ ಮನಸ್ಸು ಸ್ವಲ್ಪ ಸಿಹಿ ಉಂಡಿದ್ದನ್ನು ಕಂಡಳು. ಅಲಾರಂ ಟೈಂಪೀಸ್ 2–30 ತೋರಿಸುತ್ತಿತ್ತು. ಇವಳು ಈಚೆಗೆ ಇಷ್ಟು ಹೊತ್ತು ಎಚ್ಚರವಾಗಿದ್ದವಳೇ ಅಲ್ಲ.

ಬೆಳಗ್ಗೆ ಎದ್ದು ಸ್ನಾನ ಮಾಡಿ ಡ್ರೆಸ್ ಮಾಡಿಕೊಳ್ಳಲು ಬಂದಾಗ ಸ್ವಲ್ಪ ನಿಧಾನಿಸಿ,

ಇಲ್ಲಿಯವರೆಗೆ...

ವೈದೀಶ್ವರರವರದು ಸುಂದರ ಸಂಸಾರ. ಹಿರಿಯ ಮಗಳು ಪದ್ಮಿನಿ ಕೆಲಸಕ್ಕೆ ಹೋಗುತ್ತಾಳೆ. ಉಳಿದಿಬ್ಬರು ಮಕ್ಕಳು ಬುದ್ಧಿವಂತ ವಿದ್ಯಾರ್ಥಿಗಳು. ಪದ್ಮಿನಿಗೆ ಪುರುಷ ಪ್ರಧಾನ ಸಮಾಜದ ಬಗ್ಗೆ ತಿರಸ್ಕಾರ.

...ಮುಂದೆ ಓದಿ

ಯೋಚಿಸಿಯೇ ಸೀರೆಯನ್ನು ಸೆಲೆಕ್ಟ್ ಮಾಡಿದಳು. 'ಈ ಸ್ನಫ್ ಕಲರ್ ಬೇಡ ಇದು ನಿನಗೆ ಸೂಟ್ ಆಗುವುದಿಲ್ಲ ಎಂದು ಒಮ್ಮೆ ಅಪ್ಪಾ ಹೇಳಿದ್ದರು. ಈ ಹಳದಿ ಏಕೋ ಮುಖಕ್ಕೆ ಹೊಡೆದಂತೆ ಇದೆ' ಎಂದಿದ್ದಳು ಜಯಂತಿ. ಈ ವೈಲೆಟ್ ಕಲರ್ ಹೋಗಿ ಬೂದಾದಂತೆ ಇದೆ ಎಂದಿದ್ದ ಚಂದ್ರು. ಈ ಬ್ರೌನ್ ಕಾಟನ್ ಸೀರೆಯಲ್ಲಿ ನಿನ್ನನ್ನು ನನಗೇ ಮುದ್ದಾಡಿ ತಿಂದು ಬಿಡೋಣ ಅನ್ನಿಸುತ್ತಿದೆ ಎಂದಿದ್ದಳು ಭವಾನಿ.

ಅದೇ ಸೀರೆಯನ್ನು ಉಟ್ಟಳು.

ಡ್ರೆಸ್ಸಿಂಗ್ ಟೇಬಲ್ ಮೇಲೆ ಕುಳಿತು ಎಂದಿನಂತೆ ತುರುಬು ಹಾಕಿದಾಗ ಈ ತುರುಬೇಕೆ, ಕೈಯಲ್ಲಿ ಕೋಲೊಂದು ಕೊಟ್ಟುಬಿಟ್ಟರೆ ಸ್ಕೂಲ್ ಟೀಚರ್ ಎಂದೊಮ್ಮೆ ಭವಾನಿ ಚುಡಾಯಿಸಿದ್ದರ ನೆನಪಾಯ್ತು.

'ಓಹೋ ಚುಡಾಯಿಸುತ್ತೀಯಾ, ಆಫೀಸ್ ಅಸಿಸ್ಟೆಂಟ್ ಮ್ಯಾನೇಜರಾಗಿ ಕೆಲಸ ಮಾಡುವ ನನಗೆ ಆಟ್ರ್ಯಾಕ್ಷನ್ ಮುಖ್ಯವಲ್ಲ. ನೀಟಾಗಿ ಡೀಸೆಂಟಾಗಿರುವುದೇ ಮುಖ್ಯ. ನಾನು ದಿನಕ್ಕೊಂದು ಹೇರ್ ಸ್ಟೈಲ್ ಮಾಡುತ್ತಾ ಹೋದರೆ ನನ್ನಲ್ಲಿಟ್ಟಿರುವ ಮರ್ಯಾದೆ, ಭಯ, ಖಂಡಿತವಾಗ್ಲೂ ಸಡಿಲವಾಗುವುದು. ನನ್ನನ್ನು ಭೇಟಿ ಆಗಲು ಬರುವ ಕಸ್ಟಮರ್ಸ್ ಗಮನ ಚದುರಬಹುದು. ಅದಕ್ಕೆಂದೇ ಈ ತುರುಬು' ಎಂದು ನಾನು ಉತ್ತರಿಸಿದ್ದು ನೆನಪಿಗೆ ಬಂತು.

"ಭವಾನಿ."

"ಇಗೋ ಬಂದೆ ಅಕ್ಕಾ" ಎಂದು ಕೈಯಲ್ಲಿ ಸ್ಕಿಪ್ಪಿಂಗ್ ಹಗ್ಗ ಹಿಡಿದು ಏದುಸಿರುಬಿಡುತ್ತ ಬಂದಳು ಭವಾನಿ.

"ಹೋದ ವಾರ ನಾವು ಮೂವಿಗೆ ಹೋಗಿದ್ದಾಗ ನೀನು ಹೊಸದಾದ ಹೇರ್‌ಸ್ಟೈಲ್ ಮಾಡಿಕೊಂಡಿದ್ದೆಯಲ್ಲ. ನಾನೂ ಚೆನ್ನಾಗಿದೆ ಎಂದಿದ್ದೆನಲ್ಲ."

"ಹೌದು."

"ಅದೇ ರೀತಿ ಸ್ಟೈಲ್ ನನಗೆ ಇವತ್ತು ಮಾಡುತ್ತೀಯ?"

"ಓಹೋ, ಇವತ್ತು ಆಫೀಸ್‌ಗೆ ಹೋಗುವುದಿಲ್ಲವೆ?"

"ಹೋಗ್ತೇನೆ, ಏಕೆ ಆಫೀಸಿಗೆ ಆ ಹೇರ್‌ಸ್ಟೈಲಲ್ಲಿ ಹೋಗಬಾರದೇನು?"

"ಹೋದರೇನಂತೆ, ನೀನು ಹೋಗುವುದಿಲ್ಲವಲ್ಲ ಎಂದು ಕೇಳಿದೆ."

"ನಿನಗೆ ಉತ್ತರಿಸಲು ಟೈಂ ಇಲ್ಲ. ಸ್ಟೈಲ್ ಮಾಡೋದಾದ್ರೆ ಮಾಡು ಇಲ್ಲಾಂದ್ರೆ ಅಮ್ಮಾ ಹತ್ತಿರವೇ ಹಾಕಿಸಿಕೊಳ್ಳುತ್ತೇನೆ."

"ನಾನೇನು ಈಗ ಆ ರೀತಿ ಸ್ಟೈಲ್ ಮಾಡುವುದಿಲ್ಲ ಎಂದೆನೇ? ಕುಳಿತುಕೋ."

ಹತ್ತೇ ನಿಮಿಷದಲ್ಲಿ ಭವಾನಿ ಆ ಕೇಶ ಸೌಂದರ್ಯ ಮಾಡಲು ಕನ್ನಡಿಯನ್ನು ನೋಡಿಕೊಂಡ ಪದ್ಮಿನಿ ತನ್ನನ್ನು ಬಹಳ ಚಿಕ್ಕ ಹುಡುಗಿಯೋ ಏನೋ ಅಂದುಕೊಂಡಳು. ಬಹಳ ಆಕರ್ಷಕವಾಗಿಯೂ ಇದ್ದಳು.

ಸಡನ್ ಆಗಿ ಮನದ ಅಂತರಾಳದಲ್ಲಿ ಪ್ರಶ್ನೆಗಳೆದ್ದವು. ನನಗೇನಾಯ್ತು? ನಾನೇಕೆ ನನ್ನ ಎಂದಿನ ಸ್ಥಿತಿಯನ್ನು ಬದಲಾಗಿದ್ದೇನೆ? ತುರುಬಲ್ಲೂ ಬದಲಾವಣೆ. ಬರಲಿರುವ ವಿಜಯಕುಮಾರ್‌ನನ್ನು ಆಕರ್ಷಿಸಲೆಂದೇ? ಯಾರವನು, ಯಾರೋ? ಅವನೇ ನನ್ನ ಬಾಳಿನ ಸಂಗಾತಿ ಎಂಧು ತೀರ್ಮಾನವಾಯಿತೇನು? ಹಿಂದುಮುಂದು ಅರ್ಥವಾಗದ ರೋಮಾಂಚನವಾಗದ ರೋಮಾಂಚನಾ? ಇದು ಹಾರ್‌ಮೋನುಗಳು ನಡೆಸುತ್ತಿರುವ ಲೀಲೆ. ಬುದ್ಧಿವಂತಿಕೆಯನ್ನು ಮುಳುಗಿಸಲು ನಡೆಸುತ್ತಿರುವ ಮೋಹ. ಹೀಗೆ ಆರಂಭಿಸಿಯೇ ಅನಂತರದಲ್ಲಿ ಎಲ್ಲ ಹೆಣ್ಣು ಮಕ್ಕಳೂ ಹಳ್ಳಕ್ಕೆ ಬೀಳುತ್ತಾರೆ.

ಯಾವನೋ ನನ್ನನ್ನು ಭೇಟಿಯಾಗಲು ಬರುತ್ತಾನಂತೆ. ಅದಕೋಸ್ಕರ ನನ್ನ ಅಭ್ಯಾಸಕ್ಕೆ ಬದಲಾಗಿ ಹೀಗೆ ಪೆದ್ದುಪೆದ್ದಾಗಿ ಒಂದು



ದುರಾಸೆಯನ್ನು ಕಲ್ಪಿಸಿಕೊಳ್ಳಬೇಕೆ?

ತಕ್ಷಣ ಆ ಹೇರ್ ಸ್ಟೈಲನ್ನು ಕಳಚಿದಳು.

"ಏನಕ್ಕಾ ಚೆನ್ನಾಗಿಯೇ ಇತ್ತಲ್ಲ."

"ಬೇಡ ನನಗೆ, ಎಂದಿನ ತುರುಬೇ ಸರಿ."

"ನನ್ನ ಕೆಲಸವನ್ನು ಕೆಡಿಸಿ..." ಎಂದು ಗೊಣಗುತ್ತಲೇ ಭವಾನಿ ಹೋಗಲು ಪದ್ಮಿನಿ ತುರುಬು ಕಟ್ಟಿ ಆಫೀಸಿಗೆ ಹೊರಟಳು.

ಆಫೀಸಿನಲ್ಲಿ ತನ್ನ ಕೆಲಸ ಕಾರ್ಯಗಳಿಗೆ ತೊಡಗಬೇಕಾದರೆ ಸ್ವಲ್ಪ ಶ್ರಮವೇ ಆಯ್ತು. ಆದರೂ ಆಗಾಗ್ಗೆ ಮಧ್ಯೆ ಮಧ್ಯೆ ತನ್ನನ್ನು ಸಂಧಿಸಲು ಬರಲಿರುವ ವಿಜಯಕುಮಾರನ ನೆನಪು ಧಾವಿಸಿ ಬರುತ್ತಲೇ ಇತ್ತು.

ಗಂಟೆ ಹನ್ನರಡನ್ನು ಸಮೀಪಿಸಿದಾಗ ಬಾಗಿಲ ಶಬ್ದವಾದಾಗಲೆಲ್ಲ ವಿಜಯಕುಮಾರನ ನಿರೀಕ್ಷಣೆಯೇ. ಇಂಟರ್‌ಕಾಮ್ ಧ್ವನಿಸಿದಾಗಲೆಲ್ಲ ವಿಜಯಕುಮಾರ್ ಬಂದಿರುವುದಾಗಿ ಹೇಳುವರೋ ಏನೋ ಎಂದು ರಿಸಪ್‌ಶನಿಸ್ಟನ ಧ್ವನಿಯ ನಿರೀಕ್ಷಣೆ.

ತನ್ನ ಮನಸ್ಸಿನ ಆರ್ಭಟ ಆವಳಿಗೇ ವಿಚಿತ್ರವಾಗಿತ್ತು. ಇವನೇ ಎಂದು ನಿಶ್ಚಯ ಮಾಡಿಯಾಯ್ತೇ. ಕೆಂಪಗಿದ್ದಾನೋ, ಕಪ್ಪಗಿದ್ದಾನೋ ಎಂದೂ ತಿಳಿದಿಲ್ಲವಲ್ಲ. ಈ ಒದ್ದಾಟವೇಕೆ, ನನ್ನನ್ನೂ ಮೀರಿ ಬಹಳ ಆಶ್ಚರ್ಯ. ನನ್ನೊಳಗೇ ಇಬ್ಬರಾ? ಒಬ್ಬಾಕೆ ನಾಚುತ್ತಾಳೆ, ಮತ್ತೊಬ್ಬಳು ಸೆಟೆದು ನಿಲ್ಲುತ್ತಾಳೆ. ಒಬ್ಬಳ ಬಳಿ ಪೊಳ್ಳು ಪೊಳ್ಳು ಭಾವನೆ, ಮತ್ತೊಬ್ಬಳು ಗಂಭೀರೆ. ಒಬ್ಬಳು ಸರಾಸರಿ ಮನುಷ್ಯೆ, ಇನ್ನೊಬ್ಬಳು ವ್ಯತ್ಯಾಸವಾದವಳು. ಇವರಿಬ್ಬರಲ್ಲಿ ನಿಜವಾದ ನಾನು ಯಾರು? ಎರಡೂ. ಬೇರೆ. ಪೊಳ್ಳುತನವನ್ನು ಗಂಭೀರ ಜಯಿಸುವಾಗ ನಾನು ಸಾಧಾರಣಳಲ್ಲ. ಗಂಭೀರ ಸೋಲನ್ನಪ್ಪಿದಾಗ ನಾನು ಸಾಧಾರಣಳೇ. ನಿನ್ನೆ ಇಳಂಗೋವನ್ನು ಸಂಧಿಸಿ ಮಾತನಾಡಿದ್ದಾಗಲಿಂದ ನಾನೂ ಸಾಧಾರಣ ಹೆಣ್ಣಿನಂತೆ ನಡೆದು ಬರುತ್ತಿದ್ದೇನೆ ನನ್ನನ್ನು ಮೀರಿ.

ಈ ಡೋಲಾಯಮಾನವೇ ಬುದ್ಧಿಯನ್ನು ಸ್ವಲ್ಪ ಸ್ವಲ್ಪವಾಗಿ ನುಂಗಲೂ ಸಾಧ್ಯ. ನನ್ನ ತಾಯಿಯನ್ನು ನುಂಗಿದಂತೆ, ಜಯಂತಿಯಂ[...] ಇದನ್ನು ಅನುಮತಿಸಬಾರದು; ಇದನ್ನು ಸಹಿಸ[...] ಸಾಧ್ಯವಿಲ್ಲ. ಇದನ್ನು ನಾನು ಗೆಲ್ಲಲೇಬೇ[...] ಮತ್ತೆ ನನ್ನ ಸ್ವಸ್ಥಿತಿಗೆ ತಿರುಗಬೇಕು.

ಹೀಗೆ ತನ್ನೊಳಗೇ ಹೋರಾಡುತ್ತಿರುವಾ[...] ಇಂಟರ್‌ಕಾಮ್ ಧ್ವನಿಸಿತು.

"ಹಲೋ ಮೇಡಂ. ನಿಮ್ಮನ್ನು ಕಾಣಲೆಂದ[...] ವಿಜಯಕುಮಾರ್ ಎಂಬಾತ ಬಂದಿದ್ದಾರೆ."

"ನನ್ನ ರೂಮಿಗೆ ಬರುವಂತೆ ಹೇಳಿ."

ರಿಸೀವರ್ ಕೆಳಗಿಟ್ಟು ಮೇಜಿನ ಮೇಲಿ[...] ಕಾಗದ ಪತ್ರಗಳು, ಫೈಲ್‌ಗಳನ್ನು ಜೋಡಿಸಿಟ್ಟಳು[...] ಹ್ಯಾಂಕೀ ತೆಗೆದು ಮುಖವನ್ನೊಮ್ಮೆ ಒರೆಸಿದಳು[...] ಮೇಜಿನ ಮೇಲಿದ್ದ ಗ್ಲಾಸಿನಲ್ಲಿದ್ದ ನೀರನ್[...] ಕುಡಿದಿಟ್ಟಳು.

ರೂಮಿನ ಬಾಗಿಲ ಬಳಿ ಮೆದುವಾಗಿ[...] ತಟ್ಟಿದ ಶಬ್ದ. ಅನುಸರಿಸಿ, 'ಎಕ್ಸ್‌ಕ್ಯೂಸ್ ಮಿ[...] ಎಂಬ ಗಂಡಸಿನ ಧ್ವನಿ.

"ಎಸ್, ಕಮ್ ಇನ್ ಪ್ಲೀಸ್."

ಅವನು ಒಳಗೆ ಬಂದ. ತನ್ನ ಕುರ್ಚಿಯಿಂದ[...] ಎದ್ದು ನಿಂತು 'ಬನ್ನಿ' ಎಂದಳು.

ಅವನು ಕೈ ಜೋಡಿಸಿ "ನಮಸ್ತೆ, ನಾನು[...] ವಿಜಯಕುಮಾರ್" ಎಂದು ಹೇಳಿ ಮೇಜಿನ[...] ಪಕ್ಕದಲ್ಲಿದ್ದ ಚೇರ್‌ನಲ್ಲಿ ಕುಳಿತ. ಕೈಗಳೆರಡನ್ನೂ[...] ಕಟ್ಟಿದ್ದ.

"ನಮಸ್ತೆ" ಎಂದ ಪದ್ಮಿನಿ ಗೌರವಕ್ಕಾಗಿ[...] "ಐಯಾಮ್ ಪದ್ಮಿನಿ" ಎಂದು ಹೇಳಿ ತನ್ನ[...] ಸ್ಥಳದಲ್ಲಿ ಕುಳಿತಳು. ಆತನನ್ನೇ ದಿಟ್ಟಿಸಿದಳು.

ಕಾಂತಿಯುತನಾಗಿದ್ದ. ಸ್ವಲ್ಪ ಜಿಂಕೆಯ[...] ಬಣ್ಣ. ಕ್ರೀಮ್ ಕಲರ್ ಫುಲ್ ಆರಮ್ ಶರ್ಟ್[...] ಒಳಗೆ ಧರಿಸಿದ್ದ ಸ್ಲೀವ್‌ಲೆಸ್ ಬನಿಯನ್[...] ಕಾಣಿಸುತ್ತಿತ್ತು. ಮೀಸೆ ಚಿಕ್ಕದೇ. ತಲೆಗೂದಲನ್ನು[...] ಕ್ಲೋಸ್ ಕಟ್ ಮಾಡಿಸಿದ್ದ. ಇನ್‌ಶರ್ಟ್ ಮಾಡಿದ್ದ[...] ಮುಖದಲ್ಲಿ ಅದೆಂತಾ ಉತ್ಸಾಹ, ಹುರುಪು.

ಇಬ್ಬರೂ ಸ್ವಲ್ಪ ಹೊತ್ತು ಮೌನ.

(ಸಶೇ[...]

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.
* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.
* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.
* 'ಪದರಂಗ' 'ಚಾನ್ಸ್ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.
* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.
* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.
* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸೂಚ್ಯ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.
* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 17-5-92.
* ನಿಮ್ಮ 'ಲಾಟರಿ ಟಿಕೇಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 24-4-92 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೩೩

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.

ಒಂದು ಪುಟದ ಮಿನಿ ಕಥೆ

ಸ್ಥಿತಿ

ಎಸ್. ಮಂಜುನಾಥ ಬೂಕಿನಕೆರೆ

ರಾಮಜ್ಜ ಮಿಠಾಯಿ ಚೂರುಗಳನ್ನು ಒಂದೊಂದಾಗಿ ಎಣಿಸತೊಡಗಿದ. 'ಇನ್ನೂ ನಾಲ್ಕು ರೂಪಾಯಿಯ ಮಿಠಾಯಿ ಇದೆ. ಇಷ್ಟನ್ನು ಬೇಗ ಮಾರಿ, ಮನೆ ಸೇರಿಬಿಡಬೇಕು' ಎಂದು ಎಣಿಸಿದ ಅನಂತರ ತನ್ನೊಳಗೇ ಅಂದುಕೊಂಡು, ತಾನು ನಿಂತಿದ್ದ ಪಾರ್ಕಿನ ಒಂದು ಕಲ್ಲು ಬೆಂಚಿನ ಮೇಲೆ ಕುಳಿತುಕೊಂಡ. ಮಿಠಾಯಿಯ ತಟ್ಟೆಯನ್ನು ಬದಿಗಿರಿಸಿ, ಕನ್ನಡಕವನ್ನು ಕೈಗೆ ತೆಗೆದುಕೊಂಡು ಅದರ ದಪ್ಪನಾದ ಗಾಜುಗಳನ್ನು ತೊಟ್ಟಿದ್ದ ಅರಿವೆಯ ಒಂದು ತುದಿಯಿಂದ ಚೆನ್ನಾಗಿ ತಿಕ್ಕಿ, ಮತ್ತೆ ಧರಿಸುವಷ್ಟರಲ್ಲಿ ಐದು ನಿಮಿಷಗಳೇ ಹಿಡಿದವು. 'ಕನ್ನಡಕದ ಫ್ರೇಮು ಒಡೆದು ಹೋಗಿದೆ. ಬೇರೆಯದು ಹಾಕಿಸಿಕೊಳ್ಳಬೇಕು. ಗಾಜುಗಳನ್ನು ಕೂಡ ಬದಲಾಯಿಸಬೇಕು' ಎಂದು ಮತ್ತೆ ಗೊಣಗಿಕೊಂಡು, ಮಿಠಾಯಿಯ ತಟ್ಟೆಯನ್ನು ತೊಡೆಯ ಮೇಲಿಟ್ಟುಕೊಂಡು, ಸುತ್ತಲೂ ದೃಷ್ಟಿ ಹಾಯಿಸತೊಡಗಿದ.

ರಾಮಜ್ಜ ಬೆಂಗಳೂರಿನವನೇ. ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಇದ್ದಾರೆ. ಆದರೆ ಮಕ್ಕಳು ತಂತಮ್ಮ ಸಂಸಾರದ ಹೊಣೆ ಹೊತ್ತು ಬೇರೆ ಬೇರೆ ಸಂಸಾರ ಹೂಡಿಬಿಟ್ಟಿದ್ದರಿಂದ, ಜೀವನಕ್ಕೆ ಯಾವುದೇ ಆಸರೆಯಿಲ್ಲದೆ ರಾಮಜ್ಜ ಪಾರ್ಕುಗಳಲ್ಲಿ ಮಿಠಾಯಿ ಮಾರಿಕೊಂಡು ಹೆಂಡತಿಯೊಂದಿಗೆ ಒಪ್ಪೊತ್ತಿನ ಗಂಜಿ ಕುಡಿದುಕೊಂಡು ದಿನಗಳನ್ನು ಎಣಿಸುತ್ತಿದ್ದ.

ರಾಮಜ್ಜ ಹೀಗೆ ಮಿಠಾಯಿ ಮಾರುವಾಗ, ಅವನಿಗೆ ಪರಿಚಯದ ಅನೇಕರು ಮಕ್ಕಳ ಬಗ್ಗೆ ಮಾತಾಡಿದಾಗ, ರಾಮಜ್ಜ ಆ ಬಗ್ಗೆ ಹೆಚ್ಚು ಮಾತು ಬೆಳೆಸಲಿಚ್ಛಿಸದೆ 'ಏನು ಮಾಡೋದು' ಎಲ್ಲ ನಾವು ಪಡೆದುಕೊಂಡು ಬಂದದ್ದು. ನಮ್ಮ ಹಣೆಯಲ್ಲಿ ಬರೆದಿರುವುದನ್ನು ತಪ್ಪಿಸಲಾಗುವುದಿಲ್ಲ' ಎಂದಷ್ಟೇ ವಿಷಾದದಿಂದ ನುಡಿದು ಮುಂದೆ ಸಾಗಿಬಿಡುತ್ತಿದ್ದ.

ರಾಮಜ್ಜ ಕನ್ನಡಕ ಧರಿಸಿದ್ದರೂ, ಸಂಜೆಯಾಗುತ್ತಿರುವಂತೆ ಏನೂ ಕಾಣಿಸುತ್ತಿರಲಿಲ್ಲ. ಅದ್ದರಿಂ ಆತ ಪ್ರತಿದಿನ ಆದಷ್ಟು ಬೇಗ ಮನೆ ಸೇರಲು ತವ ಪಡುತ್ತಿದ್ದ. ಆದರಿಂದು ಇನ್ನೂ ನಾಲ್ಕು ರೂಪಾಯಿಗ ಮಿಠಾಯಿ ಚೂರುಗಳು ಮಿಕ್ಕಿದ್ದರಿಂದ ಆದಷ್ಟು ಬೇ ಅವು ಖರ್ಚಾದರೆ ಸಾಕು ಎಂದು ಮನದೊಳಗ ದೇವರನ್ನು ಪ್ರಾರ್ಥಿಸುತ್ತ ಕುಳಿತಲ್ಲಿಂದ ಮೇಲೆದ್ ಮೆಲ್ಲನೆ ಹೆಜ್ಜೆಯಿಡತೊಡಗುತ್ತಾನೆ. ಪಾರ್ಕಿನೊಳ ಒಂದು ಸುತ್ತು ಹಾಕಿದರೆ ತನ್ನ ಮಿಠಾಯಿ ಖರ್ಚಾಗುವುದೆಂಬ ಲೆಕ್ಕಾಚಾರ ಆತನದು.

ಹತ್ತಿರದಲ್ಲೇ ಹುಡುಗರ ಗುಂಪಿನ ಗದ್ದ ಕಿವಿಗೆ ಬಿದ್ದಾಗ ರಾಮಜ್ಜನ ಕಿವಿಗಳು ನೆಟ್ಟಗಾದವು ಮುಖ ಒಮ್ಮೆಲೇ ಸಂಭ್ರಮದಿಂದ ಅರಳಿತು. ಹುಡುಗ ಗುಂಪು ಎತ್ತ ಕಡೆ ಇರುವುದೆಂದು ಊಹಿಸಿ, ಪಟಪಟ ಅತ್ತ ಹೆಜ್ಜೆ ತಿರುಗಿಸಿದ. ತನ್ನ ಬಳಿಯಿರುವ ಮಿಠಾಯಿ ಎರಡೇ ನಿಮಿಷಗಳಲ್ಲಿ ಖಾಲಿಯಾಗಿ ಬಿಡುತ್ತದೆ ಎಂದ ಅಂದುಕೊಳ್ಳುತ್ತಿರುವಂತೆ ಆತ ಹುಡುಗರ ಗುಂಪಿನ ಸನಿಹ ಬಂದಿದ್ದ

ಆ ಗುಂಪು ರಾಮಜ್ಜನಿಗೆ ಅಪರಿಚಿತವಾದರೂ ವ್ಯಾಪಾರ, ವ್ಯವಹಾರಕ್ಕೆ ಅದು ಅಡ್ಡಿ ಬಾರದು. ರಾಮಜ್ ಎಣಿಸಿದಂತೆ ಆ ಹುಡುಗರು ಕಣ್ಮುಚ್ಚಿ ಬಿಡುವಷ್ಟರಲ್ ಮಿಠಾಯಿ ಚೂರುಗಳನ್ನು ಹಾರಿಸಿಕೊಂಡು ಬಿಟ್ಟರು ಮಿಠಾಯಿಯೆಲ್ಲ ಖಾಲಿಯಾದ ಅನಂತರ ರಾಮಜ್ ಹಣಕ್ಕಾಗಿ ಕೈ ಚಾಚಿದಾಗ 'ಯಾವ ಹಣ ಬೇಕ ಅಜ್ಜಾ?' ಎಂದು ಒಂದು ಹುಡುಗ ಪ್ರಶ್ನಿಸಿದರೆ 'ಇದು ನಮ್ಮದೇ ಪಾರ್ಕು, ನಮ್ಮ ಪಾರ್ಕಿಗೆ ಬಂದು ನಮ್ಮ ಬಳಿಯೇ ಹಣ ಕೇಳುವುದಾ?' ಎಂದು ಮತ್ತೊಬ್ ಪ್ರಶ್ನಿಸಿದ.

ಹೀಗೆ ಮೇಲಿಂದ ಮೇಲೆ ಪ್ರಶ್ನೆಗಳು, ವ್ಯಂಗ್ ಬೆರೆತ ಮಾತುಗಳು ಮುಖಕ್ಕೆ ರಾಚತೊಡಗಿದಾಗ ಇದೊಂದು ಪುಂಡರ ಗುಂಪು ಎಂದು ರಾಮಜ್ ಅಂದುಕೊಳ್ಳುತ್ತಿರುವಷ್ಟರಲ್ಲಿ ಒಂದು ಹುಡುಗ ರಾಮಜ್ಜನ ಕನ್ನಡಕವನ್ನೇ ಕಿತ್ತುಕೊಂಡು ಬಿಟ್ಟ. ಮತ್ತೊಬ್ಬ ತಟ್ಟೆಯನ್ ಕಿತ್ತುಕೊಂಡ. ತಟ್ಟೆಯೊಳಗಿದ್ದ ಚಿಲ್ಲರೆ ಕಾಸುಗಳ 'ಜಣ ಜಣ' ಎಂದು ಕೆಳಗೆ ಚೆಲ್ಲಾಡಿ ಹೋದವು.

ರಾಮಜ್ಜನಿಗೆ ಈಗ ತಟ್ಟೆ ಬೇಕಿರಲಿಲ್ಲ, ಚಿಲ್ಲರ ಹಣವೂ ಬೇಕಿರಲಿಲ್ಲ. 'ಹುಡುಗರಾ ನೀವು ನನ ಮಿಠಾಯಿ ಹಣ ಕೊಡುವುದು ಬೇಡ, ಆದರೆ ದಯಮಾಡಿ ನನ್ನ ಕನ್ನಡಕ ಕೊಟ್ಟು ಬಿಡಿ. ನಾನು ಬೇಗ ಮನೆ ಸೇ ಬೇಕು' ಎಂದು ಒಂದೇ ಸಮನೆ ಬೇಡುತ್ತಿದ್ದ. ಅದ ಅವನ ಕೂಗು ಯಾರ ಕಿವಿಗೂ ಬೀಳಲಿಲ್ಲ.

ಗಾಯಕಿಗೆ



ಕೌಡುತಿರುವೆ ಯಾಕೆ. ಹುಡುಗಿ
ಮನಸಿನೊಳಗೇ ಕುಳಿತು
ಹಾಡುತಿರುವೆ ಹೊಸತು ರಾಗ
ಮಧುರ ಭಾವಕೆ ಮಿಳಿತು

ಎಂಥ ಚೆಲುವೆ ಎದುರು ನಿಲ್ಲಲಿ
ನುಡಿಯದಂತಾ ಚೇತನ
ಅಂಥ ಹೃದಯವ ಮತ್ತೆ ಮಣಿಸಿ
ಅರಳಿಸಿದೆಯಾ ಮಾತನು

ಭಾವ ತುಂಬಿ ಹಾಡುವಂತಹ
ಮಧುರ ಗಾಯನ ನಿನ್ನದು
ಕೇಳಿ ತಣಿದು, ಮಣಿದು ಹಾಡುವ
ರಸಿಕ ಮನಸು ನನ್ನದು

ನಿತ್ಯ ಜೀವನ ಗೊಡವೆ, ಗೋಜಲು
ಬದುಕು ಒಂದು ಯಾಂತ್ರಿಕ
ನಿಲಲು ಬಾರದು ಕರೆಯುತ್ತಿರಲು
ಕಲೆಯ ಗುಡಿಯ ಮಾಂತ್ರಿಕ

ಘಟ್ಟ ಸೀಮೆಯ ದಿಟ್ಟ ಹುಡುಗಿ
ಬಟ್ಟ ಕಂಗಳ ಅರಳಿಸಿ
ಬಿಟ್ಟು ಬಾರೆ. ಬಿಂಕ, ಬಿಗುವ
ತೆರೆಯುವಾ ಹೊಸ ಅಂಕವ

ನಿನ್ನ ಕೊರಳುಲಿಗೊಲಿದು ತೆರೆದಿದೆ
ಗಾನ ಲೋಕದ ಬಾಗಿಲು
ದನಿಗೆ ಮಾರ್ದನಿ ಬೆರಸಿ ಹಾಡುವ
ಬೇಗ ಬಾರೇ ಕೋಗಿಲೆ.

ಸ. ಜಗನ್ನಾಥ

ಧಾರಾವಾಹಿ — ೨೫

ಪ್ರೇಮ ಪರ್ವತ

ಬೇಲೂರು ರಾಮಮೂರ್ತಿ

"ನೀನು ಇನ್ನೊಬ್ಬರ ಹೆಂಡತಿಯಾದ ಮೇಲೂ ನಿನ್ನನ್ನ ನೆನಪಿಸಿಕೊಳ್ಳೋದು ಅಪರಾಧ ಅಲ್ವೆ, ನೀನಾದ್ರೂ ಮಾಡ್ತಿರೋದು ಸರಿಯೇ."

"ಅಂದ್ರೆ ಕಡ್ಡಿ ತುಂಡು ಮಾಡಿದ ಹಾಗೆ ಎಲ್ಲಾನೂ ಮರೀಬೇಕಿತ್ತೆ."

"ಜ್ಞಾಪಕ ಇಟ್ಕೊಂಡು ಏನು ಸುಖ ಪಟ್ಟಿದ್ದೀಯ ಹೇಳು. ನಿನ್ನ ಇರುವಿಕೆ ನೋಡಿದ್ರೆ ನೀನು ಕನ್ನಡಿ ನೋಡ್ಕೊಳ್ಳೋದು ಬಿಟ್ಟಿದ್ದೀಯಾಂತ ಕಾಣುತ್ತೆ."

"ಹೌದು, ನಾನು ಕನ್ನಡಿ ನೋಡ್ಕೊಂಡಾಗೆಲ್ಲ ನನ್ನ ಹೃದಯದಲ್ಲಿರೋ ನಿಮ್ಮ ಮುಖವೇ ಕಾಣ್ತಿತ್ತು ಅದಕ್ಕೆ."

"ಜೀವನದಲ್ಲಿ ಕೆಲವು ಸಾರಿ ಅನಿವಾರ್ಯವಾದದ್ದನ್ನ ಒಪ್ಕೋಬೇಕಾಗುತ್ತೆ ರಮ್ಯ. ಇದೊಂದು ಅಂತಾ ಸ್ಥಿತಿ."

ವಂದನ ಕಾಫಿ ತಂದುಕೊಟ್ಟರು.

ಕಾಫಿ ಕುಡಿದ ರಮ್ಯ "ನಾ ಬರ್ತೀನಿ" ಅಂದು ಹೊರಟಳು.

ಸುಕನ್ಯ ತಟ್ಟೇಲಿ ಸೀರೆ, ರವಿಕೆ, ತೆಂಗಿನ ಕಾಯಿ, ಅರಿಶಿನ ಕುಂಕುಮ ಇಟ್ಕೊಂಡು ತಂದು ಕೊಟ್ಟಳು.

"ಮೊದಲನೇ ಸಾರಿ ನಮ್ಮನೆಗೆ ಬರ್ತಿದ್ದೀರ ತಗೊಳ್ಳಿ" ಅಂದಳು.

"ಇದೆಲ್ಲ ಬೇಡ, ಇಷ್ಟು ಸಾಕು" ಅಂದು ಕುಂಕುಮ ಹಚ್ಕೊಂಡು ಹೊರಟಳು.

"ಊರಲ್ಲಿರೋ ತನಕ ಆಗಾಗ ಬರ್ತಾ ಇರು ರಮ್ಯ" ಅಂದ ಮನೋಹರ್.

ಪೆಚ್ಚಾಗಿ ನಕ್ಕು ಹೊರಟಳು ರಮ್ಯ.

ಸುಕನ್ಯ "ಯಾಕ್ರೀ ಪಾಪ ಹಾಗಾಗ್ಬಿಟ್ಟಿದ್ದಾರೆ?" ಅಂದಳು.

ದೀರ್ಘವಾಗಿ ನಿಟ್ಟುಸಿರುಬಿಟ್ಟ ಮನೋಹರ್.

ಸುಕನ್ಯಳನ್ನು ಪರೀಕ್ಷಿಸಿದ್ದ ಡಾಕ್ಟರು ಕೊಟ್ಟ ದಿನಾಂಕಕ್ಕೆ ಸರಿಯಾಗಿ ಸುಕನ್ಯ ಮುದ್ದಾದ ಗಂಡು ಮಗುವಿಗೆ ಜನ್ಮವಿತ್ತಳು.

ಮನೋಹರನ್‌ನಿಗೆ ಬಲು ಆನಂದವಾಯ್ತು. ಪ್ರಭು ಎರಡು ದಿನ ಮುಂಚೆ ಬಂದು ಮೊಮ್ಮಗನನ್ನು ನೋಡಿಕೊಂಡೇ ಹೋದರು.

ನಾಮಕರಣದ ದಿನ ರಮ್ಯಳ ಮನೇನೂ ಕರೆದಿದ್ದರು. ಸಾವಿತ್ರಮ್ಮನವರ ಜೊತೆ ರಮ್ಯನೂ ಬಂದಿದ್ದಳು.

ಮುದ್ದಾದ ಮಗೂನ ಮೃದುವಾಗಿ ಎತ್ತಿಕೊಂಡು ಮುದ್ದಿಸಿದಳು ರಮ್ಯ.

ಶ್ರೀಕಾಂತ್ ಅಂತ ಹೆಸರಿಟ್ಟರು. ತೊಟ್ಟಿಲಿಡುವ ಶಾಸ್ತ್ರಕ್ಕೆ ರಮ್ಯ ಸುಂದರವಾದ ಹಾಡು ಹೇಳಿದಳು. ಹಾಡು ಹೇಳುತ್ತ ತನ್ನದೇ ಬದುಕಿನ ದಿನಗಳು ನೆನಪಾಗಿ ಅತ್ತುಬಿಟ್ಟಳು.

ಮನೆಗೆ ಬಂದಾಗ "ಅಮ್ಮ ಮನೋಹರನ ಮಗು ಎಷ್ಟು ಮುದ್ದಾಗಿದೆ ಅಲ್ವ" ಅಂತ ಕೇಳಿದಳು.

"ಹೌದಮ್ಮ ಚೆನ್ನಾಗಿದೆ, ನಮ್ಮನೆಗೆ ಯಾವಾಗ ಆ ಭಾಗ್ಯ ಬರುತ್ತೋ?"

"ಯಾವತ್ತೋ ಬರ್ತಿತ್ತು, ನೀನು ಸಾಯ್ತೀನಿ ಅಂತ ಹೆದರಿಸಿ ನನ್ನನ್ನ ಶಿವೂಗೆ ಗಂಟು ಹಾಕ್ದಿದ್ರೆ."

"ರಮ್ಯ." ಕಿರುಚಿದರು ಸಾವಿತ್ರಮ್ಮ.

"ಯಾಕೆ, ನಿಜ ಕಿವಿ ಕಚ್ಚುತ್ತಾ" ಅಂದು ತಾಯೀನ ಕೆಕ್ಕರಿಸಿ ನೋಡಿ ಹೋದಳು.

ಇದ್ದಕ್ಕಿದ್ದ ಹಾಗೆ "ಮಗೂನ ನೋಡಬೇಕು ಅನಿಸ್ತು ಬಂದೆ" ಅಂದು ಮನೋಹರ್‌ನ ಮನೆಗೆ ಹೋಗಿ ಮಗೂನ ಆಡಿಸಿ ಬರುತ್ತಿದ್ದಳು. ಒಂದು ದಿನ ಹಾಗೆ ಮಗೂನ ಆಡಿಸುತ್ತಿದ್ದಾಗ, ಮಗೂಗೆ ನೀರು ಹಾಕೋಕೆ ಬಂದಿದ್ದ ಅಜ್ಜಿ 'ರಮ್ಯ ಬಂಜೆ, ಅವಳ ಕೈಗೆ ಮಗೂನ ಕೊಡಬೇಡಿ' ಅಂದದ್ದು ರಮ್ಯಳಿಗೂ ಕೇಳಿಸಿ ಕಣ್ಣಲ್ಲಿ ನೀರು ಹಾಕಿಕೊಂಡು ಮನೆಗೆ ಬಂದಳು.

ಅಂದಿನಿಂದ ಮನೋಹರನ ಮನೆಗೆ ಹೋಗೋದನ್ನು ಕಡಿಮೆ ಮಾಡಿದ್ದಳು.

ಮಗೂಗೆ ಮೂರು ತಿಂಗಳಾದ ಮೇಲೆ ಸುಕನ್ಯಳೇ ಮಗೂನ ಕರ್‍ಕೊಂಡು ರಮ್ಯಳ ಮನೆಗೆ ಬಂದಿದ್ದಳು. "ಅಜ್ಜಿಯರಿಗೆ. ಇನ್ನೇನು ಕೆಲಸ ಹೇಳಿ, ನೀವ್ಯಾಕೆ ಬೇಜಾರು ಮಾಡ್ಕೊಂಡ್ರಿ. ನಿಮ್ಮ ಪಾಡಿಗೆ ನೀವು ಬರ್ತಿರಿ" ಅಂದಳು.

ಶ್ರೀಕಾಂತ ತುಂಬಾ ಮುದ್ದಾಗಿ ಬೆಳೀತಿದ್ದ. ರಮ್ಯಳ ಬಳಿ ಬಂದಾಗ ಅಳುತ್ತಲೂ ಇರಲಿಲ್ಲ.

ರಾತ್ರಿ ಊಟಕ್ಕೆ ಕೂತ್ಕೊಳೋ ಮುಂಚೆ ನರಸಿಂಹಯ್ಯ ಹೆಂಡ್ತೀನ ಕೇಳಿದರು.

"ರಮ್ಯ ಊರಿಗೆ ಹೋಗೋ ವಿಚಾರ ಏನಾದ್ರೂ ಹೇಳಿದ್ಲೇನು. ಅವಳು ಬಂದು ಮೂರ್‍ನಾಲ್ಕು ತಿಂಗಳೇ ಆಯ್ತಲ್ಲ."

"ಇಲ್ಲ, ನಾನಾದ್ರೂ ಹೇಗೆ ಕೇಳ್ಲಿ, ಹೋಗು ಅಂತ ಹೇಗೆ ಹೇಳ್ಲಿ."

"ಅದ್ಸರಿ ಸಾವಿತ್ರಿ, ನೋಡಿದೋರಾದ್ರೂ ಏನಂತಾರೆ. ನಾವೇ ಅವಳಿಗೆ ಇರೋದಕ್ಕೆ ಉತ್ತೇಜನ ಕೊಟ್ಟು ಮನ್ಲಿಟ್ಕೊಂಡಿದ್ದೀವಿ ಅನ್ಕೊಳ್ಳೋಲ್ವೆ."

"ಏನು ಮಾಡೋದು ಹೇಳಿ?"

"ಅವಳಿಗೆ ತಿಳುವಳಿಕೆ ಹೇಳಿ ಗಂಡನ ಮನೆಗೆ ಹೋಗೋ ಹಾಗೆ ಮಾಡು" ಅಂದರು.

ರಾತ್ರಿ ಊಟಕ್ಕೆ ಕೂತಾಗ ನರಸಿಂಹಯ್ಯ, "ಅಮ್ಮಾ ರಮ್ಯ" ಅನ್ನುತ್ತಿದ್ದಂತೆ,

"ನಾನು ಗಂಡನ ಮನೆಗೆ ಹೋಗಬೇಕು ಅಷ್ಟೇ ತಾನೇ, ಹೋಗ್ತೀನಿ. ಅದಕ್ಕೆ ಪೀಠಿಕೇನೂ ಬೇಡ, ಮಾತೂ ಬೇಡ" ಅಂದು ನಾಲ್ಕೇ ತುತ್ತು ಊಟ ಮಾಡಿ ಎದ್ದಳು.

ಸಾವಿತ್ರಮ್ಮ ಬೇಜಾರು ಮಾಡಿಕೊಂಡರು.

ರಾತ್ರಿಯೆಲ್ಲ ಅವಳಿಗೆ ನಿದ್ದೆ ಬರಲಿಲ್ಲ, ಊರಿಗೆ ಹೊರಟು ಹೋಗೋಣ ಅಂದುಕೊಂಡರೂ ಮನಸ್ಸು ಇನ್ನೂ ಸ್ಥಿರವಾಗಿರಲಿಲ್ಲ.

ಮನೋಹರ್ ಜಮೀನಿನ ಕೆಲಸ ಮುಗಿಸಿಕೊಂಡು ಮನೆ ಕಡೆ ಬರ್‍ತಿದ್ದಾಗ ರಮ್ಯ ಕೆರೆ ಹಿಂದಿನ ಕಟ್ಟೆ ಮೇಲೆ ಕೂತಿದ್ದು ಕಂಡಿತು.

"ಏನು ರಮ್ಯ, ಒಂಟಿಯಾಗಿ ಇಲ್ಲಿದ್ದೀಯ?"

"ನಾನು ಎಲ್ಲಿದ್ರೂ ಒಂಟೀನೇ. ಎಲ್ಲಿದ್ರೇನು?"

"ಇನ್ನೂ ಮೂವತ್ತಾಗಿಲ್ಲ, ಅರವತ್ತರೋಳ ಹಾಗೆ ಮಾತಾಡ್ತಿದ್ದೀಯ. ಸುಕನ್ಯ ಕೇಳಿದಳು ರಮ್ಯ ಬಾಣಂತನಕ್ಕೆ ಬಂದಿದ್ದಾರಂತ."

"ನಂಗೆ ಆ ಭಾಗ್ಯ ಇಲ್ಲ ಮನೋಹರ್."

"ಯಾಕೆ, ಯಾರು ಹಾಗಂದೋರು, ಶಿವೂ ನಿನ್ನನ್ನ ಎಷ್ಟು ಪ್ರೀತಿಸ್ತಾರೆ, ಏನು ಕಥೆ."

ರಮ್ಯ ನಿರಾಸೆಯ ಉಸಿರುಬಿಟ್ಟಳು.

"ರಮ್ಯ ಒಂದ್ ಮಾತು ಹೇಳ್ತೀನಿ, ನಿನ್ನನ್ನು ಬಹಳ ದಿವಸಗಳಿಂದ ಬಲ್ಲವನಾಗಿದ್ರಿಂದ

ಇಲ್ಲಿಯವರೆಗ...

ರಮ್ಯ ಮತ್ತು ಮನೋಹರ್ ಬಾಲ್ಯ ಸ್ನೇಹಿತರಾಗಿ ಬೆಳೆದ ಪ್ರೇಮಿಗಳು. ರಮ್ಯ ಬಲವಂತದಿಂದ ಶಿವೂನ ಮದುವೆಯಾಗ ಬೇಕಾಯ್ತು. ಭಗ್ನ ಪ್ರೀತಿಯನ್ನು ಆಕೆಯಿಂದ ಮರೆಯಲಾಗಲಿಲ್ಲ. ಮನೋಹರ್ ಬೇರೆ ಮದುವೆ ಆದದ್ದು ಆಕೆಯ ಮೇಲೆ ಪರಿಣಾಮ ಬೀರಿತು. ....ಮುಂದೆ ಓದಿ

ಹೇಳ್ತೀದ್ದೀನಿ, ನಿನ್ನ ಬದುಕನ್ನ ನೀನೇ ಹಾಳು ಮಾಡ್ಕೋತಿದ್ದೀಯ. ಅವತ್ತು ಜಾತ್ರೇಲಿ ಶಿವೂ ಸಿಕ್ಕಿ ನಿನ್ನ ವಿಚಾರಾನೆಲ್ಲ ತಿಳಿಸಿದ. ನಂಗಂತೂ ತುಂಬ ಬೇಜಾರಾಯ್ತು. ನಿನ್ನ ಮದುವೆಯಾದ ಮೇಲೆ ನಾನೂ ಬೇಜಾರಾಗಿದ್ದೆ. ಪ್ರಾಣ ಕಳ್ಕೊಳ್ಳೋಕೂ ಹೋಗಿದ್ದೆ. ಆದರೆ ನನ್ನ ಸ್ನೇಹಿತರು, ಚಿಕ್ಕಪ್ಪ, ಜೋಯಿಸರು ಎಲ್ಲ ನನ್ನ ಕಣ್ಣು ತೆರೆಸಿದರು. ಜೀವನದಲ್ಲಿ ಕೆಲವೊಂದು ಕಟುವಾದ ಸತ್ಯವನ್ನು ಒಪ್ಪಿಕೊಳ್ಳಲೇಬೇಕಾಗುತ್ತೆ. ನಿನ್ನ ಈ ಸ್ಥಿತಿಯಿಂದಾಗಿ ಏನೂ ಸಾಧನೆ ಮಾಡಿದ ಹಾಗಾಗೋಲ್ಲ. ಬದಲಿಗೆ ನಿನ್ನ ತಂದೆ, ತಾಯಿ ಅತ್ತೆ, ಮಾವ, ಜೊತೆಗೆ ಶಿವೂ ಎಲ್ಲರಿಗೂ ಬೇಜಾರು. ಹೆಣ್ಣು ಮನೆ ಬೆಳಗುವ ದೀಪವಾಗಬೇಕೇ ಹೊರತು ಹೊಗೆ ಮೂಡಿಸುವ ಹಸಿ ಸೌದೆಯಾಗಬಾರದು.''

ರಮ್ಯ ಮೌನವಾಗಿ ನಡೀತಿದ್ದಳು.

"ಚೆನ್ನಾಗಿ ಯೋಚನೆ ಮಾಡು ರಮ್ಯ. ನಿನ್ನ ಬದುಕಲ್ಲಿ ನೀನೇ ಸಂತಸ ತಂದ್ಕೋಬಹುದು. ಬೇರೆಯವರಿಗೂ ಸಂತಸ ಹಂಚಬಹುದು. ಪಾಪ ಶಿವೂಗೆ ಮೊದಲಿಂದ್ಲೂ ನಿನ್ನನ್ನ ಕಂಡರೆ ಎಷ್ಟು ಅಕ್ಕರೆ. ಅವರಿಗೆ ಹೀಗಾಗಬಾರದಿತ್ತು. ಶಿವೂ ಹೃದಯದಲ್ಲಿ ಅಪ್ಪಟ, ಮಾತು ಒರಟಿರಬಹುದು, ತಾಳ್ಮೆ ಕೂಡ ಇದೆ. ಶಿವೂ ಸ್ಥಿತೀಲಿ ಬೇರೆ ಯಾರದ್ರೂ ಇದ್ದಿದ್ರೆ ನಿನ್ ಪಾಡಿಗೆ ನೀನಿರು ಅಂದು ಬೇರೆ ಮದ್ವೆ ಮಾಡ್ಕೋತಿದ್ರು. ಆದರೆ ಶಿವೂ ಅಂತೋರಲ್ಲ, ಬಹಳ ನೊಂದಿರಬೇಕು. ನೋಡು ರಮ್ಯ ನಿನ್ನ ಈ ಸ್ಥಿತಿಯಿಂದ ನಿನಗಾಗಲೀ, ಬೇರೆಯವರಿಗಾಗಲೀ ಸುಖವಿಲ್ಲ ಅಂತ ಗೊತ್ತಾದ ಮೇಲೆ ಬದಲಾವಣೆ ಹೊಂದೋದು ಅನಿವಾರ್ಯವಲ್ವೆ. ಸುಕನ್ಯಳಿಂದಾಗಿ ನನ್ನ ಬದುಕು ಎಷ್ಟು ಹಸನಾಯ್ತೂಂತೀಯ. ಶಿವೂ ಜೊತೆ ನೀನು ಆನಂದವಾಗಿದ್ರೆ ಅದಕ್ಕಿಂತ ಬೇರೆ ಸುಖ ಇಲ್ಲ.''

ಮನೋಹರ್‌ನ ಮಾತು ಕೇಳುತ್ತ ಕಣ್ಣೀರು ಹರಿಸಿದಳು ರಮ್ಯ.

"ಅಳ್ಬೇಡ ರಮ್ಯ, ಇವತ್ತಿಗೆ ನಿನ್ನ ಕಣ್ಣೀ
ಖಾಲಿಯಾಗಲಿ. ಮೊದಲಿನ ಹಾಗೆ ನೀನು ನಗ
ನಗ್ತಾ ಇರಬೇಕು. ನಿನ್ನ ಕರುಳಿಂದಲೂ ಒಂ
ಕುಡಿ ಅರಳಲಿ ರಮ್ಯ. ಅದನ್ನ ನೋಡೋ ಆ
ನಂಗಿದೆ. ಖಂಡಿತ ನಿನ್ನ ಬದುಕು ಸುಂದರವಾಗು
ಅನ್ನೋ ನಂಬಿಕೆ ನನಗಿದೆ'' ಅಂದ ಮನೋಹ

ಕಣ್ಣೀರು ಒರೆಸಿಕೊಂಡು,

"ನಾ ಬರ್ತೀನಿ'' ಅಂದು ಹೊರಟಳು.

"ಇಷ್ಟು ದೂರ ಬಂದಿದ್ದೀಯ
ಶ್ರೀಕಾಂತ್‌ನನ್ನು ಮಾತಾಡಿಸ್ಕೊಂಡು ಹೋಗು
ಅಂದ ಮನೋಹರ್.

ಸುಕನ್ಯ ಶ್ರೀಕಾಂತನ್ನ ಎತ್ಕೊಂಡು ಬಾಗಿಲ
ನಿಂತಿದ್ದಳು.

ಶ್ರೀಕಾಂತ್ ರಮ್ಯಳನ್ನು ನೋಡಿದ ತಕ್ಷ
ಗುರುತಿಸಿ ಮುಗುಳ್ನಕ್ಕು ಕೈ ಬೀಸಿದ.

"ಎಲೆ ತುಂಟ, ಅಂಟೀನ ಚೆನ್ನಾಗಿ ಗುರು
ಇಟ್ಕೊಂಡಿದ್ದೀಯ'' ಅಂದ ಮನೋಹರ್.

ಶ್ರೀಕಾಂತ್‌ನನ್ನು ಎತ್ಕೊಂಡು ಮುದ್ದಿಸಿದ
ರಮ್ಯ. ಶ್ರೀಕಾಂತ್ ಅವಳ ಕೆನ್ನೆ ಮೂಗು, ಬಾಂ
ಇಲ್ಲೆಲ್ಲ ಕೈ ಇಟ್ಟು ತಟ್ಟಿ ಕೇಕೆ ಹಾಕಿದ.

"ಇವಾಗಿವಾಗಂತೂ ಇವನ ತುಂಟತ
ತುಂಬ ಜಾಸ್ತಿ. ಹಿಡಿಯೋದೆ ಕಷ್ಟ'' ಅಂ
ಶ್ರೀಕಾಂತನ ತುಂಟತನದ ಪರಿಚಯ ಮಾಡಿಸಿ
ಸುಕನ್ಯ, ರಮ್ಯಳಿಗೆ ಕಾಫಿ ತಂದ್ಕೊಟ್ಟು "ಬಾ ಅಂ
ಕಾಫಿ ಕುಡೀಲಿ'' ಅಂತ ಶ್ರೀಕಾಂತನ್ನ ಎತ್ಕೊಂಡ

ಸ್ವಲ್ಪ ಹೊತ್ತು ಅಲ್ಲಿದ್ದ ರಮ್ಯ ಹೊರಟಳ

ಏನೋ ಕಳೆದುಕೊಳ್ಳುತ್ತಿರುವ ಅನುಭ
ಗಳಿಸಿಕೊಳ್ಳುತ್ತಿರುವ ಅನುಭವ. ದಾರಿಯುದ್ದಕ
ಮನೋಹರ್ ಹೇಳಿದ ಮಾತುಗಳದ್ದ
ಪುನರಾವರ್ತನೆ. ತಾನು ತಪ್ಪು ಮಾಡಿದೆನ
ಎಡವಿದೇನೇ. ಮನೋಹರ್ ಬುದ್ಧಿವಂತನಾ
ಬದುಕಲ್ಲಿ ಸಂತಸ ತಂದುಕೊಂಡ. ಆದರೆ ತಾನು

ಮದುವೆಯಾದಂದಿನಿಂದ ಈಚಿನವರೆ
ಬದುಕಿನ ದಿನಗಳು ಸರಸರ ಮುಖದ ಮುಂ



ಹರಿದು ಹೆಚ್ಚಿನ ಆವೇಗ ಉಂಟಾಯ್ತು. ಶಿವೂ ಬಗೆಗೆ ತನ್ನಲ್ಲಿರುವ ಭಾವನೆ, ತಾನು ಅವನಲ್ಲಿಟ್ಟಿರೋ ಭಾವನೆ, ತಾನು ಅವನನ್ನು ಬಿಟ್ಟು ಬಂದು ಎಷ್ಟು ತಿಂಗಳುಗಳಾಗಿವೆ. ಯೋಚಿಸುತ್ತ ಕಣ್ಣಲ್ಲಿ ನೀರು ಬಂತು. ಎಷ್ಟು ಸಂಯಮ ತಂದುಕೊಂಡರೂ ಕಣ್ಣೀರು ನಿಲ್ಲಲಿಲ್ಲ.

ಓಡೋಡುತ್ತ ಮನೆಗೆ ಬಂದಳು. ಬಾಗಿಲಲ್ಲೇ ಇದ್ದ ಸಾವಿತ್ರಮ್ಮ ಗಾಬರಿಯಿಂದ,

"ಇದ್ಯಾಕೆ ರಮ್ಯ, ಹೀಗೆ ಅಳ್ತಾ ಬರ್‍ತಿದ್ದೀಯ. ಏನಾಯ್ತು, ಯಾರಾದ್ರೂ ಏನಾದ್ರೂ ಅಂದ್ರೇನೇ?'' ಅಂತ ವಿಚಾರಿಸಿದರು.

ಏನೂ ಮಾತಾಡದೆ ಒಳಗೆ ಹೋಗಿ ಕೋಣೆ ಸೇರಿ ಎಳೆ ಮಗುವಿನಂತೆ ಅತ್ತಳು.

ಸೊಸೆಯಾಗಿ ತಾನು ಆ ಮನೇಲಿ ನಡೆದುಕೊಂಡ ರೀತಿ, ಅತ್ತೆ, ಮಾವ, ತೋರಿಸಿದ ಸಂಯಮ. ಶಿವೂ ನಡೆದುಕೊಂಡ ರೀತಿ ಒಂದು ದಿನ ಕೂಡ ದಬ್ಬಾಳಿಕೆ ತೋರದ ಮಿದುತನ, ತನ್ನೊಬ್ಬಳಿಂದಾಗಿ ಆ ಮನೇಲಿ ಎಲ್ಲರೂ ದುಃಖ ತಂದುಕೊಂಡರಲ್ಲ. ತನ್ನ ಬದುಕು ಸರಿ ಹೋಗಲಿ ಎಂದು ಅವರೆಲ್ಲ ಅಕ್ಕರೆಯಿಂದ ಹಿತವಚನ ಹೇಳಿದ್ದು ಎಲ್ಲ ನೆನಪಾಯ್ತು.

"ಅಲ್ಲ ಕಣೆ, ಹೀಗೆ ಎಳೆ ಮಗು ತರಹ ಅತ್ರೆ ನಂಗೆ ಹೇಗೆ ಗೊತ್ತಾಗ್ಬೇಕು, ಏನಾಯ್ತು ಹೇಳು. ಯಾರಾದ್ರೂ ಏನಾದ್ರೂ ಅಂದ್ರೇನು'' ಅಂತ ಸಮಾಧಾನ ಮಾಡಿದರು.

ತಾಯಿಯ ಮುಖ ನೋಡಿ ಅವರನ್ನು ತಬ್ಬಿ ಅತ್ತಳು.

"ಅಮ್ಮಾ ನಾನು ಅತ್ತೆ ಮನೆಗೆ ಹೋಗ್ತೀನಿ.''

"ಹೋಗುವಂತೆ, ಸಂಜೆಯಾಯ್ತಲ್ಲ, ಇವತ್ತು ಶುಕ್ರವಾರ ಬೇರೆ, ಬೆಳಿಗ್ಗೆ ಹೋಗುವಿಯಂತೆ ಅದೇನು ಅಷ್ಟೊಂದು ಅವಸರ.''

"ಇಲ್ಲಮ್ಮ ನಾನು ಹೋಗಬೇಕು, ಇಲ್ಲಿದ್ದದ್ದು ಸಾಕು'' ಎಂದು ಅತ್ತಳು.

(ಮುಂದಿನ ಸಂಚಿಕೆಯಲ್ಲಿ ಮುಗಿಯುತ್ತದೆ)

10–5–92ರ ಸಂಚಿಕೆಯಿಂದ

ಹೊಸ ಧಾರಾವಾಹಿ ಆರಂಭ

ಯು. ವಿ. ತಾರಿಣಿ ರಾವ್ ಅವರ

ಚೈತ್ರ ಚಂದನ

'ರಾಗಸಂಗಮ' ಲಾಟರಿ ಡ್ರಾ-೧೧೯

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1319 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಪಿ. ಸತೀಶ್ ಕುಮಾರ**, C/o. ಪತ್ತಿ ಕೃಷ್ಣಮೂರ್ತಿ, ಕಿರಾಣ ಮರ್ಚೆಂಟ್, ಮುಖ್ಯರಸ್ತೆ, **ಸೈದಾಪೂರ – 585 221**, ಯಾದಗಿರಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ.
2. **ಎಸ್. ಎನ್. ಗಿರಿಧರ**, ಶ್ರೀ ಮಲ್ಲಿಕಾರ್ಜುನ ಚಿತ್ರ ಮಂದಿರ, ದುರ್ಗಿ ಗುಡಿ, **ಶಿವಮೊಗ್ಗ – 577 201.**
3. **ಭಾಗ್ಯಲಕ್ಷ್ಮಿ ವಿರೂಪಾಕ್ಷಪ್ಪ**, ನಾಟಕ ಕಲಾವಿದರು, **ಮಂಗಳೂರ – 583 277**, ಯಲಬುರ್ಗಾ ತಾಲ್ಲೂಕು, ರಾಯಚೂರು ಜಿಲ್ಲೆ.
4. **ಸುರೇಶ್ ವಿ. ಶೆಟ್ಟಿ**, ಎಸ್. ಪಿ. ಆನಂದ್ ಭವನ್, 26, ಮಿಂಟ್ ರೋಡ್, **ಮುಂಬಯಿ – 400 001.**

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಪ್ರಶ್ನೋತ್ತರ

'ಕೆಎಸ್ನಾರ್'

* ಕೆ. ಎನ್. ಎನ್. ರೆಡ್ಡಿ, ಮುತ್ತಾನಲ್ಲೂರು

ನಿರುದ್ಯೋಗ ಸಮಸ್ಯೆ ಒಂದು ಕಡೆ ತಾಂಡವವಾಡುತ್ತಿರುವಾಗ, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ವೇತನಕ್ಕಾಗಿ ಬೊಬ್ಬೆ ಹೊಡೆಯುವುದು ಸರಿಯೇ?

– ದಿನನಿತ್ಯ ಏರುತ್ತಿರುವ ಬೆಲೆಗಳೇ ಅವರ ಬೊಬ್ಬೆಗೆ ಕಾರಣ.

* ಅನಂತ ಗ. ಶಾನಭಾಗ,
ಧಾರವಾಡ

ಹಳಿತು ಉಂಡರೆ ಕುಡಿಕೆ ಹೊನ್ನು ಸಾಲದು. ಅದೇ ಕುಡಿದು ಉಂಡರೆ?

–ಪ್ರಪಂಚವೇ ಸಾಲದು.

* ಹ. ಗೋ. ಶಿ,
ಕುಮಟಾ

ನಿಮ್ಮನ್ನು ಕಾಣಲು ಹೂವಿನ ಹಾರ ತರಲೋ, ಹಣದ ಹಾರ ತರಲೋ?

– ನಗುಮುಖ ತನ್ನಿ.

* ಕಣತೂರು ಕೆಂಪರಾಜ್,
ಚಿಕ್ಕಬಳ್ಳಾಪುರ

ಕಳ್ಳರನ್ನು ನಂಬಿದರೂ, ಕುಳ್ಳರನ್ನು ನಂಬಬಾರದು ಅನ್ನುತ್ತಾರೇಕೆ?

– ಕುಳ್ಳರ ಬುದ್ಧಿ ಚುರುಕು, ಹೇಗೂ ಹಾಯಬಹುದು.

* ವಿ. ರಾಜಶೇಕರ ಮೂರ್ತಿ,
ಬೆಳಕವಾಡಿ

ಅಂಕಲ್, ಜೀವನವನ್ನು ಗಂಭೀರವಾಗಿ ತಗೋಬೇಕೋ ಹಗುರವಾಗಿ ತಗೋಬೇಕೋ?

– ಗಂಭೀರತೆ ಎಲ್ಲದರಲ್ಲೂ ಉತ್ತಮ.

* ಸುಶೀಲಮ್ಮ,
ಬೆಂಗಳೂರು

ಯಾವಾಗ್ಲೂ ಸಂತೋಷದಿಂದ ಇರಬೇಕಾದ್ರೆ ಹೇಗಿರಬೇಕು? ಮನಸ್ಸಿಗೆ ಕಡಿವಾಣ ಹಾಕೋದು ಹೇಗೆ ತಿಳಿಸ್ತೀರಾ?

– ಬೆಟ್ಟಕ್ಕೆ ಆಸೆ ಪಡದೆ ಅಟ್ಟಕ್ಕೆ ಆಸೆಪಟ್ಟರೆ ಎರಡೂ ಆಗುತ್ತದೆ.

* ಎಸ್. ದೇವರಾಜು,
ಬೆಂಗಳೂರು

ಬಂಗಾರಪ್ಪನವರ 1991ರ ಗ್ರಾಸ್ ಪ್ರಾಫಿಟ್ ಎಷ್ಟಿರಬಹುದು?

– ಇಂತಾದುವುಗಳಲ್ಲಿ ಅಂದಾಜಾಗಿ ಹೇಳಬಾರದು.

* ಎಸ್. ಹರ್ತಿವೀರನಾಯಕ, ಅಂಬಲಗೆರೆ

ಕೆಎಸ್ನಾರ್ ಅವರೇ 1) ನೋಂದಣಿ ವಿವಾಹ 2) ಸರಳ ವಿವಾಹ 3) ಅಂತರ್‌ಜಾತಿಯ ವಿವಾಹ 4) ಶಾಸ್ತ್ರಬದ್ಧ ವಿವಾಹ 5) ಪ್ರೇಮ ವಿವಾಹ ಪದ್ಧತಿಗಳಲ್ಲಿ ಅತ್ಯುತ್ತಮವಾದುದಾವುದು ಮತ್ತು ಹೇಗೆ?

– ನೋಂದಣಿ ವಿವಾಹ, ಸರಳ ವಿವಾಹ, ಅಂತರ್ಜಾತಿ ವಿವಾಹ, ಶಾಸ್ತ್ರಬದ್ಧ ವಿವಾಹ, ಪ್ರೇಮ ವಿವಾಹ. ಎಲ್ಲದಕ್ಕಿಂತ ಮುಖ್ಯ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಸೌಜನ್ಯತೆ ಅತ್ಯಗತ್ಯ.

* ಬಾಲಕೃಷ್ಣ, ಕಲ್ಲಡ್ಕ

ಕೆಎಸ್ಸಾರ್‌ರವರೇ, ನಿಮಗೂ ಸಂಪಾದಕಿ ಕಮಲಾ ಸುಂದರ್ ರಾಜನ್‌ರವರಿಗೂ ಇರುವ ಸಂಬಂಧವೇನೆಂದು ತಿಳಿಸುವಿರಾ?

— ಸಂಪಾದಕಿ — ಅಂಕಣಕಾರ.

* ಜಗದೀಶ್ ವಿ;
ಬೆಂಗಳೂರು

ದ. ಆಫ್ರಿಕಾದಲ್ಲಿ ನೀವು ಕಪ್ಪು ಜನರಾಗಿ ಹುಟ್ಟಿದ್ದರೆ ಏನು ಮಾಡುತ್ತಿದ್ದಿರಿ?

— ನೆಲ್ಸನ್ ಮಂಡೇಲಾರಂತಾಗಲು ಯತ್ನಿಸುತ್ತಿದ್ದೆ.

* ಮಂಗಳ, ಮೈಸೂರು

ಯಾರನ್ನು ಮರೆಯಲು ಪ್ರಯತ್ನಿಸ್ತೀವೋ ಆಗ ಅವರ ನೆನಪೇ ಹೆಚ್ಚು ಕಾಡುತ್ತದಲ್ಲ ಯಾಕೆ ಸಾರ್?

— ನೆನಪು ಬರುವುದರಿಂದಲೇ ಮರೆಯಲು ಯತ್ನಿಸುತ್ತೇವೆ.

* ಡಬ್ಲ್ಯು. ಕೆ. ವೆಂಕಟೇಶ ಮೂರ್ತಿ,
ಬೆಂಗಳೂರು

ಮರಣೋತ್ತರ ಭಾರತ ರತ್ನ ಪ್ರಶಸ್ತಿ ಪಡೆದ ಸ್ವಾತಂತ್ರ್ಯ ಯೋಧರ ಸಾಲಿಗೆ ಮಹಾತ್ಮಾ ಗಾಂಧಿ ಸರ್ಕಾರದ ಕಣ್ಣಿಗೆ ಇನ್ನೂ ಬಿದ್ದಿಲ್ಲವೇಕೆ?



— ಸ್ವಲ್ಪ ಮಟ್ಟಿಗೆ ಅವರ ಗೌರವವನ್ನು ಉಳಿಸುವ ಆಸಕ್ತಿ.

* ಮಾಲತಿ ರಾಜು,
ಬೆಂಗಳೂರು

ಕ್ರಿಕೆಟ್‌ನಲ್ಲೂ ಭಾರತೀಯರು ಇಷ್ಟೊಂದು ನೀರಸವಾಗಿ ಆಡಬೇಕಿತ್ತೇ?



— ಎಲ್ಲದರಂತೆ ಇದರಲ್ಲೂ ರಾಜಕೀಯ ತಲೆದೋರಿರುವುದರಿಂದ ಈ ಸ್ಥಿತಿ.

* ಅಶೋಕ್ ನಾಯ್ಕ,
ಹೊನ್ನಾವರ

ನೀವು ಭಾರತದ ಅರ್ಥ ಸಚಿವರಾದರೆ ಏನು ಮಾಡುತ್ತೀರಿ?

— ಈಗಿನ ಅರ್ಥ ಸಚಿವರೇ ಉತ್ತಮ ಆಸೆ ಆಕಾಂಕ್ಷೆಗಳೊಂದಿಗೆ ಮುನ್ನಡೆಯುತ್ತಿದ್ದಾರೆ.

* ಪೈ ಯಸ್. ರೂಪಾರಾವ್,
ಎಮ್ಮಾಳ್‌ತಂಕ

ಪ್ರಶ್ನೋತ್ತರ ವಿಭಾಗಕ್ಕೂ ಮೀಸಲಾತಿಯ ಗಾಳಿ ಸೋಂಕುತ್ತಿದೆ ಎಂದು ಕಾಣುತ್ತದೆಯಲ್ಲ?

— ಈಗ ಹೀಗೆ ಹೇಳಲಾರಿರೆಂದು ಭಾವಿಸಿದ್ದೇನೆ. ಆದರೂ ಕಾರಣ ಉತ್ತಮ ಮಟ್ಟದ ಪ್ರಶ್ನೆಗಳು.

* ಮಕ್ಕಳ ಕಥೆ *

ಬೆಳ್ಳಿ ಕನ್ಯೆ

ಎಂ. ಶಿವಾಜಿರಾವ್

ಪ್ರಾಚೀನ ಕಾಲದಲ್ಲಿ ಒಂದು ಗ್ರಾಮದಲ್ಲಿ ಮಂಗಳಾ ಎಂಬ ಕನ್ಯೆ ಇದ್ದಳು. ಬಹಳ ಸುಂದರಳಾಗಿದ್ದ ಅವಳನ್ನು ವಿವಾಹವಾಗಲು ಅನೇಕ ಯುವಕರು ಮುಂದಾದರೂ ಅವಳದು ಒಂದು ಶರತ್ತು, ಓಟದಲ್ಲಿ ತನ್ನನ್ನು ಮೀರಿಸಿದವರನ್ನು ವಿವಾಹವಾಗುತ್ತೇನೆ ಎಂದು ಮಂಗಳಾ ಪಣ ತೊಟ್ಟಿದ್ದಳು.

ಮಂಗಳಾಳನ್ನು ಓಟದಲ್ಲಿ ಮೀರಿಸಲು ಸಾಧ್ಯವೇ ಇರಲಿಲ್ಲ. ಅವಳು ಜಿಂಕೆಯಂತೆ ಓಡುತ್ತಿದ್ದಳು. ಕಾಡು ಮೇಡು, ಮರಳಿನಲ್ಲಿಯೂ ಬಹು ವೇಗವಾಗಿ ಓಡುತ್ತಿದ್ದಳು. ಆದ್ದರಿಂದ ಅವಳನ್ನು ವಿವಾಹವಾಗಲು ಬಂದ ಯುವಕರಿಗೆ ನಿರಾಶೆ ಆಗಿತ್ತು.

ಪಕ್ಕದ ಊರಿನಲ್ಲಿ ಚಿರಂಜೀವಿ ಎಂಬ ಯುವಕನಿದ್ದನು. ಅವನು ಸಹ ಒಳ್ಳೆಯ ಓಟಗಾರನೆಂದು ಹೆಸರು ಪಡೆದಿದ್ದನು. ಅವನನ್ನೂ ಸಹ ಓಟದಲ್ಲಿ ಸೋಲಿಸಿದವರು ಯಾರೂ ಇರಲಿಲ್ಲ.

ಚಿರಂಜೀವಿ ಮಂಗಳಾಳನ್ನು ಸೋಲಿಸಿ ವಿವಾಹವಾಗಲು ಅವಳಿದ್ದ ಗ್ರಾಮಕ್ಕೆ ಬಂದನು. ಮನೆಗೆ ಬಂದವನೇ "ಮಂಗಳಾ, ಮಂಗಳಾ" ಎಂದು ಕರೆದನು.

"ಏನು?" ಎಂದು ಮಂಗಳಾ ಬಾಗಿಲು ತೆರೆದಳು.

"ನಾನು ನಿನ್ನನ್ನು ವಿವಾಹವಾಗಲ ಬಂದಿದ್ದೇನೆ." ಚಿರಂಜೀವಿ ಹೇಳಿದನು.

"ಹಾಗೇನು?" ಎಂದು ಕೇಳಿದವಳ ಮಂಗಳಾ ಕಾಡಿನತ್ತ ಓಡಲಾರಂಭಿಸಿದಳ "ನನ್ನನ್ನು ಸೋಲಿಸು" ಎಂದು ಕೂಗುತ್ತಲ ಅವಳು ಓಡತೊಡಗಿದಳು. ಚಿರಂಜೀವಿಯು ಅವಳು ನೋಡಲೇ ಇಲ್ಲ.

"ಬಂದೆ" ಎಂದು ಹೇಳುತ್ತ ಚಿರಂಜೀ ಅವಳನ್ನು ಹಿಂಬಾಲಿಸಿದನು.

ಮಂಗಳಾ ಕಾಡನ್ನು ಪ್ರವೇಶಿಸಿ ವೇಗವಾ ಓಡಲಾರಂಭಿಸಿದಳು. ಅವಳ ಕಾಲುಗಳ ಜಿಂಕೆಯ ಕಾಲುಗಳಂತೆ ಓಡುತ್ತಿದ್ದವು ಚಿರಂಜೀವಿ ಅದೇ ವೇಗದಲ್ಲಿ ಓಡಿದರು ಅವಳನ್ನು ಹಿಡಿಯಲಾಗಲಿಲ್ಲ.

ಮಂಗಳಾ ಕಾಡನ್ನು ಎರಡು ಸುತ್ತ ಹಾಕಿದಳು. ಗಿಡಗಂಟಿಗಳನ್ನೂ, ಮುಳ ಬೇಲಿಗಳನ್ನೂ ತುಳಿಯುತ್ತ ಮುಂದೆ ಸಾಗಿದ್ದಳ ಚಿರಂಜೀವಿ ತಾನು ಸೋತೆ ಎನಿಸಿತು. ಆದ ಅವನು ನಿರಾಶನಾಗಲಿಲ್ಲ.

ಎರಡು ಸುತ್ತುಗಳು ಮುಗಿದು ಮೂರನ ಸುತ್ತು ಪ್ರಾರಂಭವಾಯಿತು. ಮಂಗಳಾ ಈ ಸಣ್ಣ ಗುಡ್ಡ, ಬಂಡೆಗಳನ್ನು ದಾಟ ಹೋಗಲಾರಂಭಿಸಿದಳು. ಕಡಿದಾದ ಕಲ್ಲುಗಳ ಮುಳ್ಳುಗಳು ಇವುಗಳನ್ನು ಅವಳು ಲೆಕ್ಕಿಸಲ ಇಲ್ಲ. ಎಷ್ಟು ಹೊತ್ತಾದರೂ ಅವಳ ಓ ಮುಗಿಯಲೇ ಇಲ್ಲ. ಚಿರಂಜೀವಿಗೆ ಬೇಸರವಾ ತೊಡಗಿತು. ಮಂಗಳಾಳನ್ನು ಹೇಗೆ ಗೆಲ್ಲುವುದ ಎಂದು ಯೋಚಿಸಲಾರಂಭಿಸಿದ.

ಈಗ ಮಂಗಳಾ ನೇರವಾದ ಹಾ ಬಿಟ್ಟು ಬೆಟ್ಟವನ್ನು ಹತ್ತಲಾರಂಭಿಸಿದಳ ಬೆಟ್ಟವನ್ನು ಹತ್ತುವಾಗ ಹಾದಿಯಲ್ಲಿ ಗಿ ಗಂಟಿಗಳು, ನೂರಾರು ಕಲ್ಲುಗಳು, ಮುಳ್ಳುಗ ಹೇರಳವಾಗಿದ್ದವು. ಮಂಗಳಾ ಇದ್ಯಾವುದನು

ಲೆಕ್ಕಿಸದೆ ಓಡುತ್ತಲೇ ಇದ್ದಳು.

ಚಿರಂಜೀವಿ ಏನಾದರೂ ಮಾಡಿ ಅವಳನ್ನು ಹಿಡಿಯಬೇಕು ಎಂದು ಛಲದಿಂದ ಮಂಗಳಾಳನ್ನು ಹಿಂಬಾಲಿಸಿದನು.

ಬೆಟ್ಟದ ಶಿಖರವು ಸಿಕ್ಕಿತು. ಮಂಗಳಾ ಒಂದು ಪಕ್ಕಕ್ಕೆ ತಿರುಗಿ ಓಡತೊಡಗಿದಳು. ಚಿರಂಜೀವಿ ಇದನ್ನು ಗಮನಿಸಲಿಲ್ಲ. ಅದೇ ದಿಕ್ಕಿನಲ್ಲಿ ಓಡಲು ಪ್ರಾರಂಭಿಸಿದಾಗ ಬೆಟ್ಟದಿಂದ ಕೆಳಗೆ ಉರುಳಿದನು.

ಚಿರಂಜೀವಿ ಕೆಳಗೆ ಬಿದ್ದುದನ್ನು ಮಂಗಳಾ ನೋಡಿದಳು. ಕೂಡಲೇ ಅವಳಿಗೆ ಅವನ ಬಗ್ಗೆ ಪ್ರೀತಿಯುಂಟಾಯಿತು. ಕೂಡಲೇ ಬೆಟ್ಟದಿಂದ ಕೆಳಗೆ ಓಡಿ ಅವನ ಬಳಿಗೆ ಬಂದಳು.

"ನಿಲ್ಲು ನಿಲ್ಲು'' ಎಂದು ಚಿರಂಜೀವಿ ಆಯಾಸದಿಂದ ಹೇಳುತ್ತಿದ್ದನು. ಮಂಗಳಾ ಸುತ್ತಲೂ ನೋಡಿದಳು. ಬೆಟ್ಟದಿಂದ ಕೆಳಗೆ ನೀರಿನ ಝರಿಯೊಂದು ಹರಿಯುತ್ತಿತ್ತು. ನೀರನ್ನು ತರುವುದು ಹೇಗೆ ಎಂದು ಯೋಚಿಸಿದಾಗ ಅಲ್ಲಿ ಆಲದ ಮರವೊಂದು ಕಾಣಿಸಿತು. ಓಡಿ ಹೋಗಿ ದೊಡ್ಡ ಎಲೆಯೊಂದನ್ನು ಆರಿಸಿ ಅದನ್ನು ದೊನ್ನೆಯಾಗಿ ಮಾಡಿಕೊಂಡು ಅದರಲ್ಲಿ ನೀರನ್ನು ತುಂಬಿಕೊಂಡು ತಂದಳು. ಆ ನೀರನ್ನು ಕುಡಿಸತೊಡಗಿದಳು.

ಆದರೆ ಬೀಸುತ್ತಿದ್ದ ಗಾಳಿಗೆ ನೀರು ಹಾರಿ ಹೋಯಿತು. ಪುನಃ ಹೋಗಿ ನೀರನ್ನು ತಂದಳು. ಈ ಬಾರಿ ಗಾಳಿಗೆ ಚಿಮ್ಮಿದ ನೀರು ಅವಳನ್ನು ತೋಯಿಸಿತು. ಆ ನೀರು ತನ್ನ ಮೈಗೆ ಸೋಕಿದ ಕೂಡಲೇ ಮಂಗಳಾ ಬೆಳ್ಳಿ ಮೂರ್ತಿಯಾದಳು.



ಕೆಳಗೆ ಬಿದ್ದಿದ್ದ ಚಿರಂಜೀವಿ ಇದನ್ನೆಲ್ಲ ನೋಡುತ್ತಿದ್ದನು. ಸ್ವಲ್ಪ ಹೊತ್ತಾದ ಅನಂತರ ಅವನು ಚೇತರಿಸಿಕೊಂಡು ಮೇಲಕ್ಕೆದ್ದನು. ಮಂಗಳಾ 'ಬೆಳ್ಳಿಕನ್ಯೆ'ಯಾಗಿ ನಿಂತಿದ್ದಳು. ಆ ಮೂರ್ತಿಯನ್ನು ಅಲ್ಲಿಂದ ಕದಲಿಸಲು ಸಾಧ್ಯವಾಗಲಿಲ್ಲ.

ಚಿರಂಜೀವಿ ಭಾರವಾದ ಹೃದಯದಿಂದ ತನ್ನ ಗ್ರಾಮಕ್ಕೆ ಹಿಂದಿರುಗಿದನು.

'ರಾಗಸಂಗಮ' ಚಿತ್ರ ವಿಮರ್ಶೆ

ರಾಜಾಧಿರಾಜ

ಪ್ಲಸ್ ಅಂಶಗಳು :

1) ವಿಜಯಾನಂದ್ ಸಂಗೀತ ಹಾಗೂ ಹಾಡನ್ನು ಚಿತ್ರಿಸಿರುವ ರೀತಿ.

2) ಕ್ಷಿಪ್ರ ಗತಿಯ ನಿರೂಪಣೆಯ ದ್ವಿತೀಯಾರ್ಧ.

3) ವಿಷ್ಣುವಿನ ಸಾಹಸ ದೃಶ್ಯಗಳು.

ಮೈನಸ್ ಅಂಶಗಳು :

1) ಈಗಾಗಲೇ ಬಂದು ಹೋಗಿರುವ ಚಿತ್ರಗಳ ದೃಶ್ಯಗಳ ಕಲಸು ಮೇಲೋಗರ.

2) ಪ್ರಥಮಾರ್ಧದಲ್ಲಿ ಚಿತ್ರ 'ಬಿಗು' ಕಳೆದುಕೊಂಡಿರುವುದು.

ವಿಮರ್ಶೆ :

ಭಾರ್ಗವ ನಿರ್ದೇಶನದ **'ರಾಜಾಧಿರಾಜ'** ವಿಷ್ಣುವರ್ಧನ್ ಅಭಿಮಾನಿಗಳ ಅಪೇಕ್ಷೆಯನ್ನು ಗಮನದಲ್ಲಿಟ್ಟುಕೊಂಡೇ ತಯಾರಾದ ಚಿತ್ರ. ಚಿತ್ರದ ಮುಖ್ಯ ಆಕರ್ಷಣೆ ಎಂದರೆ ಇಂಪಾದ ಹಾಡುಗಳು ಹಾಗೂ ಹಾಡುಗಳನ್ನು ಚಿತ್ರಿಸಿರುವ ರೀತಿ. ಸಾಕಷ್ಟು ಶ್ರೀಮಂತವಾಗಿಯೇ ಹಾಡುಗಳನ್ನು ಚಿತ್ರಿಸಲಾಗಿದೆ. ಚಿತ್ರದ ದ್ವಿತೀಯಾರ್ಧದ ವೇಗದ ಗತಿ ಶೀಘ್ರವಾಗಿರುವುದರಿಂದ ಚಿತ್ರ ಬೋರು ಹೊಡೆಸದೆ ಮುಂದೆ ಸಾಗುತ್ತದೆ. ಈ ಚಿತ್ರದ ಸಾಹಸ

ಲಾಂಛನ–ನಿರ್ಮಾಣ :
ಶ್ರೀ ವೈಷ್ಣವಿ ಇಂಟರ್‌ನ್ಯಾಶನಲ್
ಚಿತ್ರಕಥೆ–ನಿರ್ದೇಶನ : ಭಾರ್ಗವ
ಕಥೆ : ಎನ್. ಟಿ. ಜಯರಾಮರೆಡ್ಡಿ
ಛಾಯಾಗ್ರಹಣ : ಡಿ. ವಿ. ರಾಜಾರಾಂ
ಸಂಗೀತ : ವಿಜಯಾನಂದ್
ತಾರಾಗಣ : ವಿಷ್ಣುವರ್ಧನ್, ರೂಪಿಣಿ, ವಜ್ರಮುನಿ, ಸುಧೀರ್, ಮುಖ್ಯಮಂತ್ರಿ ಚಂದ್ರು, ಭವ್ಯಶ್ರೀ ರೈ, ಇಂದೂಧರ್, ಕೆ. ಎಸ್. ಅಶ್ವತ್ ಹಾಗೂ ಪಂಡರಿಬಾಯಿ.

ದೃಶ್ಯಗಳೂ ಉತ್ತಮ ಮಟ್ಟದಲ್ಲಿದೆ. ಆದರೆ ಭಾರ್ಗವ ಚಿತ್ರಕಥೆಯ ರಚನೆಯಲ್ಲಿ ಇನ್ನೊಂದಿಷ್ಟು ಕಷ್ಟಪಟ್ಟಿದ್ದರೆ ಹಾಗೂ ಹೊಸ ವಿಷಯಗಳನ್ನು ಹೇಳಿದ್ದರೆ ಚಿತ್ರ ಇನ್ನೂ ಆಕರ್ಷಕವಾಗಿರಬಹುದಾಗಿತ್ತು. ಉದಾಹರಣೆಗೆ ಉದ್ಯಮಿಗಳಲ್ಲಿ ವ್ಯವಹಾರಸ್ಥರಲ್ಲಿ ಕೇವಲ 'ಟೆಂಡರ್'ಗಾಗಿಯೇ ವೈರತ್ವ ಬೆಳೆಯುತ್ತದೆ ಎನ್ನುವ ಕಥೆಯ ಅಂಶವನ್ನೇ ತೆಗೆದುಕೊಳ್ಳಬಹುದು. ಈಗ ದೊಡ್ಡ ದೊಡ್ಡ ಕಂಪೆನಿ ವ್ಯವಹಾರಗಳಲ್ಲಿ ಅಹಿತಕರ ಪೈಪೋಟಿ, ವೈರತ್ವ ಹೇಗೆ ಬೆಳೆಯುತ್ತಿದೆ ಎನ್ನುವುದಕ್ಕೆ ನಮ್ಮ ಕಣ್ಣ ಮುಂದೆ ನಡೆದ ಘಟನೆಗಳನ್ನೇ ಆಧಾರವಾಗಿ ಇಟ್ಟುಕೊಳ್ಳಬಹುದು (ರಿಲೆಯೆನ್ಸ್ ಕಂಪೆನಿಯ ಅಂಬಾನಿ ಹಾಗೂ ಬಾಂಬೆ ಡೈಯಿಂಗ್‌ನ ನುಸ್ಲಿ ವಾಡಿಯಾ ಅವರ ನಡುವಿನ ಪೈಪೋಟಿ, ವೈರತ್ವ ಯಾರಿಗೆ ತಾನೇ ಗೊತ್ತಿಲ್ಲ!). ಆದರೆ ಇದಕ್ಕೂ ಅಡುಗೂಲಜ್ಜಿ ಕಾಲದ ಟೆಂಡರ್ ವ್ಯವಹಾರವನ್ನೇ ನಿರ್ದೇಶಕರು ಆರಿಸಿಕೊಂಡಿದ್ದಾರೆ. ಚಿತ್ರದ ಪ್ರಥಮಾರ್ಧದಲ್ಲಿ ಕಥೆ

ನಿರೂಪಿಸುವಾಗಲೂ ಭಾರ್ಗವ ಸೂತ್ರ ಬದ್ಧ ರೀತಿಯಲ್ಲಿ ಈ ಹಿಂದೆ ಬಂದು ಹೋದ ಅನೇಕ ಚಿತ್ರಗಳ ದೃಶ್ಯಗಳ ನಿರೂಪಣೆಯನ್ನೇ ಪುನರಾವರ್ತಿಸಿದ್ದಾರೆ.

ಈ ಎಲ್ಲ ದೋಷಗಳ ನಡುವೆ 'ರಾಜಾಧಿರಾಜ' ಎದ್ದು ನಿಲ್ಲುವುದು ಹಾಡುಗಳ ಚಿತ್ರೀಕರಣಕ್ಕಾಗಿ. ಜೊತೆಗೆ ದ್ವಿತೀಯಾರ್ಧದಲ್ಲಿ ಬರುವ 'ಸೆಂಟಿಮೆಂಟ್' ದೃಶ್ಯಗಳಿಗಾಗಿ (ವಿಷ್ಣುವನ್ನು ಕಾಣಲು ಅಶ್ವತ್ ಹಾಗೂ ಪಂಡರಿಬಾಯಿ ಬರುವ ದೃಶ್ಯ ಚೆನ್ನಾಗಿದೆ). ವಿಷ್ಣುವಿನ ಸಾಹಸಗಳು ಅಭಿಮಾನಿಗಳನ್ನು ಮೆಚ್ಚಿಸುತ್ತದೆ. ವಿಷ್ಣು ಲೀಲಾಜಾಲವಾಗಿ ಅಭಿನಯಿಸಿದ್ದಾರೆ. ಪರಾಕಾಷ್ಠೆಯ ದೃಶ್ಯಗಳಲ್ಲಿ ಅವರ ಅಭಿನಯ ಉತ್ತಮ. ರೂಪಿಣಿ ಲವಲವಿಕೆಯಿಂದ ಅಭಿನಯಿಸಿದ್ದಾರೆ. ಅಶ್ವತ್, ಪಂಡರಿಬಾಯಿ ಸಮರ್ಪಕ ಅಭಿನಯ ನೀಡಿದ್ದಾರೆ.



ಒಟ್ಟಿನಲ್ಲಿ 'ರಾಜಾಧಿರಾಜ' ನಿರಾಸೆ ತರುವುದಿಲ್ಲ.

○ಆರ್. ಜಿ. ವಿಜಯಸಾರಥಿ

41/100


ಅತಿ ಸಾಧಾರಣ: 40ರ ಕೆಳಗೆ ಸಾಧಾರಣ: 41–50
ಉತ್ತಮ : 51–60 ಅತ್ಯುತ್ತಮ : 61ರ ಮೇಲೆ

ಸಿನಿ ಬಿಟ್ಸ್

ಮಾಲಾಶ್ರೀ ನಿರ್ಮಾಣದ ಚಿತ್ರ ಮುಂದೂಡಲ್ಪಟ್ಟದ್ದು ಏಕೆ?

1992ರಲ್ಲಿ ಯಾಕೋ ಮಾಲಾಶ್ರೀಗೆ ಹಿಂದಿನ ವರ್ಷದ ಅದೃಷ್ಟ ಮುಂದುವರಿಯುತ್ತಿಲ್ಲವೇನೋ ಎನಿಸುವಂತೆ ಆಕೆಯ ಅಭಿನಯದಲ್ಲಿ ಬಿಡುಗಡೆಯಾದ ಚಿತ್ರಗಳೆಲ್ಲ ನೆಲ ಕಚ್ಚುತ್ತಿವೆ. ಈ ವರ್ಷದ ಆರಂಭದ ಚಿತ್ರವಾದ 'ಬೆಳ್ಳಿ ಕಾಲುಂಗರ'ವನ್ನು ಬಿಟ್ಟರೆ ಉಳಿದ ಯಾವುದೇ ಚಿತ್ರ ಒಳ್ಳೆಯ ಆರಂಭವನ್ನೂ ಪಡೆದುಕೊಳ್ಳಲಾಗಲಿಲ್ಲ. ಈಗ ಇಂತಹ ಚಿತ್ರಗಳ ಪಟ್ಟಿಗೆ 'ವಜ್ರಾಯುಧ' ಚಿತ್ರವನ್ನು ಸೇರಿಸಿ ಕೊಳ್ಳಬೇಕಾಗಿದೆ. ಕಳೆದ ವಾರವಷ್ಟೇ ಬಿಡುಗಡೆಯಾದ 'ವಜ್ರಾಯುಧ' ಚಿತ್ರಕ್ಕೆ ಆರಂಭದ ದಿನವೇ ರಾಜ್ಯದ ಎಲ್ಲೆಡೆ ಅತ್ಯಂತ ನೀರಸ ಪ್ರತಿಕ್ರಿಯೆ ಸಿಕ್ಕಿದೆ. 1991ರಲ್ಲಿ ಸೂಪರ್ ಸ್ಟಾರಿಣಿಯ ಪಟ್ಟ ಪಡೆದಿದ್ದ ನಟಿಗೆ ಈಗ ಸತತ ಸೋಲುಗಳು ಆತಂಕವನ್ನು ಸೃಷ್ಟಿಸಿರಬಹುದು. ಆದಕ್ಕಾಗಿಯೇ ಆಕೆ ತನಗೆ ಒಪ್ಪುವಂತಹ ಪಾತ್ರಗಳಿರುವ ಚಿತ್ರವನ್ನು ನಿರ್ಮಿಸಬೇಕೆಂದು ಉದ್ದೇಶಿಸಿ ಒಂದು ಚಿತ್ರದ ನಿರ್ಮಾಣ ಯೋಜನೆಗೂ ಕೈ ಹಾಕಿದರಂತೆ. ಆಕೆಯ ಚಿಕ್ಕಮ್ಮ ಹಾಗೂ ನಿರ್ಮಾಪಕ ತ್ಯಾಗು ('ಪ್ರೇಮ ಸಂಗಮ' ಚಿತ್ರದ ನಿರ್ಮಾಣ ಪಾಲುದಾರರು.) ಅವರು ಮಲೆಯಾಳ ಭಾಷೆಯಲ್ಲಿ ಯಶಸ್ಸಾದ 'ಕಿಲುಕ್ಕಮ್' ಚಿತ್ರವನ್ನು ಕನ್ನಡದಲ್ಲಿ ರೀಮೇಕ್ ಮಾಡಲು ನಿರ್ಧರಿಸಿದರು. ಈ ಚಿತ್ರದ ರೀಮೇಕ್ ಹಕ್ಕುಗಳನ್ನು ಪಡೆದುಕೊಂಡ ಅನಂತರ ಕೆಲವು ಫೈನಾನ್ಸಿಯ[ರ್]ಗಳನ್ನು ಸಾಲಕ್ಕಾಗಿ ಕೇಳಿದಾಗ 'ಚಿತ್ರವ[ನ್ನು] ಮೊದಲು ಸಂಪೂರ್ಣವಾಗಿ ನಿರ್ಮಿಸಿ. ಆಮೇ[ಲೆ] ಹಣ ಸಹಾಯದ ಬಗ್ಗೆ ಯೋಚನೆ ಮಾಡೋ[ಣ]' ಎಂದರಂತೆ. ಇದೇ ಕಾರಣಕ್ಕಾಗಿಯೇ ಈ 'ಕಿಲುಕ್ಕಮ್' ಚಿತ್ರದ ಕನ್ನಡ ಅವತರಣಿಕೆ[ಯ] ನಿರ್ಮಾಣವನ್ನು ಮುಂದೂಡಲಾಗಿದೆಯಂತೆ.

○ ಸ್ವ...



ಕ್ರೀಡಾಂಗಣ

ಬೇಕಾಗಿದ್ದಾರೆ : ಸಮರ್ಥ ನಾಯಕ

ಭಾರತೀಯ ಕ್ರಿಕೆಟ್ ತಂಡ ವಿಶ್ವಕಪ್ ಕ್ರಿಕೆಟ್ ಸ್ಪರ್ಧೆಯಲ್ಲಿ ನೀಡಿದ ಶೋಚನೀಯ ಪ್ರದರ್ಶನದ ತರುವಾಯ ಈಗಾಗಲೇ ಒಂದೊಂದೇ ವಿವಾದಗಳು ತಲೆ ಎತ್ತುತ್ತಿವೆ. ವೇಗದ ಬೌಲರ್ ಮನೋಜ್ ಪ್ರಭಾಕರ್ ಅವರು 'ಭಾರತ ತಂಡಕ್ಕೆ ಅತ್ಯಂತ ಬಿಗುವಾದ ನಾಯಕ ಬೇಕಾಗಿದ್ದಾರೆ. ಅಜರ್ ಅವರಂತಹ ಮಿದು ನಾಯಕ ಅಲ್ಲ' ಎಂದು ವೀಡಿಯೋ ಸಂದರ್ಶನದಲ್ಲಿ ಹೇಳಿರುವುದು ಈಗಾಗಲೇ ವಿವಾದ ಸೃಷ್ಟಿಸಿದೆ. ಈಗಾಗಲೇ ಅಬ್ಬಾಸ್ ಅಲಿ ಬೇಗ್ (ಭಾರತೀಯ ತಂಡದ ಮ್ಯಾನೇಜರ್) ಹಾಗೂ ತಂಡದ ನಾಯಕ ಅಜರುದ್ದೀನ್ ಅವರು ಈ ಬಗ್ಗೆ ಹೇಳಿಕೆ ಕೊಟ್ಟಿದ್ದಾಗಿದೆ.

ಮನೋಜ್ ಪ್ರಭಾಕರ್ ಅವರು ನಾಯಕತ್ವದ ಬಗ್ಗೆ ಏನು ಹೇಳಿದ್ದಾರೆ ಎನ್ನುವುದಕ್ಕಿಂತ ಮುಖ್ಯವಾದದ್ದು ಭಾರತದ ನಾಯಕ ಹೇಗಿರಬೇಕು ಎನ್ನುವುದು. ಪಾಕಿಸ್ತಾನದ ಈಗಿನ ತಂಡಕ್ಕಿಂತ ಭಾರತ ಹೆಚ್ಚು ಪ್ರತಿಭಾವಂತರನ್ನು ಒಳಗೊಂಡಿದ್ದರೂ ಸರಿಯಾದ ಸಮಯದಲ್ಲಿ ಭಾರತೀಯ ತಂಡಕ್ಕೆ ಪ್ರತಿಭೆಯ ಬಳಕೆ ಆಗಲಿಲ್ಲ. ಆದರೆ ಪಾಕಿಸ್ತಾನ ತಂಡಕ್ಕೆ ಇಮ್ರಾನ್ ಖಾನ್ ನೀಡಿದಂತಹ ಸ್ಫೂರ್ತಿದಾಯಕ ನಾಯಕತ್ವದಿಂದಾಗಿ ತಂಡದ ಎಲ್ಲರೂ ತಮ್ಮ ಅತ್ಯುತ್ತಮ ಮಟ್ಟವನ್ನು ವಿಶ್ವಕಪ್ ಸ್ಪರ್ಧೆಯಲ್ಲಿ ತೋರಿಸುವಂತಾಯಿತು. ಆದರೆ ಭಾರತೀಯ ತಂಡದಲ್ಲಿ ಈ 'ಪವಾಡ' ಸಾಧ್ಯವಾಗಲಿಲ್ಲ.



ಇನ್ನು ಮುಂದಿನ ಕ್ರಿಕೆಟ್ ಸರಣಿಗಳಿಗಾಗಿ ನಾಯಕನನ್ನು ಆರಿಸುವಾಗ ಆಯ್ಕೆದಾರರು ಬಿಗುವಾದ, ಸಮರ್ಥ ನಾಯಕನನ್ನು ಆರಿಸುವುದು ಒಳ್ಳೆಯದು. ಆಗಲೇ ಆತ ತಂಡದ ಎಲ್ಲರನ್ನೂ ಅತ್ಯುತ್ತಮ ಪ್ರದರ್ಶನ ನೀಡುವಂತೆ ಹುಮ್ಮಸ್ಸಿನಲ್ಲಿ ತೊಡಗಿಸುವುದು ಸಾಧ್ಯವಿದೆ.

○ ಕ್ರೀಡಾಪ್ರಿಯ

ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 19–4–92ರಿಂದ
ಶನಿವಾರ 25–4–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಖ, ಝ, ಥ, ದೆ, ದೊ, ಚ, ಚಿ

ಮೇಷ

ವ್ಯಾಪಾರೋದ್ಯಮ ರಂಗದಲ್ಲಿ ಒಳ್ಳೆ ಫಲಗಳೇ ಕಾಣಲಿವೆ. ಮಾತಿಗೆ ಗವುರವ ಸಿಗಲಿದೆ. ಕಾರ್ಯ ಸಾಧನೆಯಲ್ಲಿ ನೀವು ಎಲ್ಲರನ್ನೂ ಮಿಂಚುವಿರಿ. ಸ್ನೇಹಿತರಿಂದಾಗಿ ಅಲೆದಾಟಕ್ಕೆ ಬೀಳುವಿರಿ. ಹಣ ಕಾಸಿನ ಸ್ಥಿತಿ ಗಟ್ಟಿಗೊಳ್ಳುತ್ತದೆ. ಉದ್ಯೋಗದಲ್ಲಿರುವವರು ಕಠಿಣ ಪರಿಸ್ಥಿತಿಯಲ್ಲಿ ದುಡಿಯಬೇಕಾಗುತ್ತದೆ. ಸಂಸಾರದ ಕೆಲ ವಿಷಯ ಶೋಚನೀಯವೆನಿಸಿದರೂ ಆ ಬಗ್ಗೆ ಚಿಂತಿಸದಿರುವುದೇ ಒಳಿತು.

ವೃಷಭ

ವ್ಯಾಪಾರೋದ್ಯಮ ರಂಗದಲ್ಲಿ ಅಲೆದಾಟ ಸ್ಥಳ ಬದಲಾವಣೆಯ ಶ್ರಮಗಳಿದ್ದರೂ ಅಂತಿಮ ಜಯ ನಿಮ್ಮದೇ. ಹಣಕಾಸಿನ ಪರಿಸ್ಥಿತಿ ಒಂದು ಕ್ರಮಬದ್ಧತೆಗೆ ಬರುತ್ತದೆ. ಆಸ್ತಿ ಬಲ ಹೆಚ್ಚುತ್ತದೆ ಈ ನಿಟ್ಟಿನಲ್ಲಿ ಪ್ರಯತ್ನ ಫಲಕಾರಿ. ಕುಟುಂಬದಲ್ಲಿ ಸಾಮಾನ್ಯ ಅಭಿವೃದ್ಧಿ ಇದೆ. ಉದ್ಯೋಗದಲ್ಲಿ ಮುಖ್ಯ ಅಂಶಗಳಿಗೆ ಸಂಬಂಧಿಸಿದಂತೆ ನೆಮ್ಮದಿ ಕಂಡುಬಂದರೂ ಯೋಜನೆಗಳಲ್ಲಿ ತ್ರಾಣ ಇರುವುದಿಲ್ಲ.

ಮಿಥುನ

ಉದ್ಯಮದಲ್ಲಿ ಸಕಲ ವಿಧಗಳಲ್ಲೂ ಒಳ್ಳೆಯದಾಗಲಿದೆ. ವೃತ್ತಿಯಲ್ಲಿ ಹೊಗಳಿಕೆ, ಹಣ ಎರಡೂ ಸಿಗುತ್ತದೆ. ಬಾಕಿ ಬರಬೇಕಾದ ಹಣ ಸಕಾಲದಲ್ಲಿ ಕಯ್ಸೇರದೆ ಹಣಕಾಸಿನ ಕೋಟೆ ಬಿರುಕು ಬಿಡಲಿದೆ. ಹಾಗಾಗಿ ಸಾಲ ಮಾಡಬೇಕಾಗಿ ಬರುತ್ತದೆ. ಕುಟುಂಬದಲ್ಲಿ ನಿಮ್ಮ ಮಾತಿಗೆ ಮರ್ಯಾದೆ ಸಿಗುತ್ತದೆ. ದಾಂಪತ್ಯ ಜೀವನ ಸುಖಕರ. ಹೊರ ವ್ಯವಹಾರದಲ್ಲಿ ಮಂದ ನೆಲೆ.

ಕಟಕ

ಉದ್ಯಮ ರಂಗದಲ್ಲಿ ತೊಂದರೆಗಳು ಮತ್ತು ಶ್ರಮ ಹೆಚ್ಚುತ್ತದೆ. ಅಧಿಕಾರಿಗಳ ಮರ್ಜಿ ಹಿಡಿದು ತುಂಬ ನಿಧಾನವಾಗಿ ಯೋಚಿಸಿ ಹೆಜ್ಜೆ ಇಡ ಬೇಕಾಗುತ್ತದೆ. ಆಯ ವ್ಯಯ ಸರಿಸಮನಾಗಿರುತ್ತದೆ. ಹೊಸ ಪ್ರಯತ್ನಗಳಲ್ಲಿ ಸ್ವಲ್ಪ ಮಟ್ಟಿನ ಯಶಸ್ಸು ಸಿಗುತ್ತದೆ. ಹೊರ ವ್ಯವಹಾರದಲ್ಲಿನ ತೊಂದರೆಗಳನ್ನು ಸ್ನೇಹಿತರ ಸಹಕಾರದಿಂದ ನಿಭಾಯಿಸಲು ಶಕ್ತರಾಗುತ್ತೀರಿ. ಕುಟುಂಬದಲ್ಲಿ ಕಿರಿಕಿರಿ.

ಸಿಂಹ

ಉದ್ಯಮದಲ್ಲಿ ಮುನ್ನಡೆಯನ್ನೇ ಕಾಣುವಿರಿ ಕಾರ್ಮಿಕರ ಸಹಕಾರ, ಸಹಕಾರ ತತ್ವದ ನೆಲೆಯಲ್ಲಿ ಒಳ್ಳೆ ಲಾಭ ಕಾಣುವಿರಿ. ಹಣಕಾಸಿನ ಪರಿಸ್ಥಿತಿ ಏನೋ ತಾನೋ ಎಂದಿರುತ್ತದೆ. ಉಳಿತಾಯ

ಮಾಡಿದ ಹಣ ಕರಗತೊಡಗುತ್ತದೆ. ಕುಟುಂಬದಲ್ಲಿ ಬಂಧುಗಳ ನಡುವೆ ಒಗ್ಗಟ್ಟು ಮೂಡಿಸುವುದು ಕಷ್ಟ. ಕುಟುಂಬದಲ್ಲಿ ಚಂಚಲತೆಗವಕಾಶವಾಗದಂತೆ, ಹಿರಿಯರೊಡನೆ ಅನುಸರಿಸಿಕೊಂಡು ಹೋಗುವುದೊಳಿತು.

ಕನ್ಯಾ

ಉದ್ಯಮ ರಂಗದಲ್ಲಿ ಹಣ ಲಾಭ, ಮುನ್ನಡೆ ನಿಮ್ಮದಾಗಲಿದೆ. ವಿರೋಧಗಳಿದ್ದರೂ ಎಲ್ಲವನ್ನೂ ನಿಭಾಯಿಸಿ ಮುನ್ನಡೆಯಲು ನಿಮ್ಮನ್ನು ಬಿಟ್ಟಿರಿಲ್ಲ. ಕೆಲವು ಹೊಸ ಖರ್ಚುಗಳಿಂದಾಗಿ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಅಲುಗಾಡುತ್ತದೆ. ಅವನ್ನು ತಪ್ಪಿಸಲು ಪ್ರಯತ್ನಿಸಿದರೂ ಸಾಧ್ಯವಾಗದು. ಕುಟುಂಬ ಜೀವನದಲ್ಲಿ ತಕರಾರು ಮತ್ತು ಮನಸ್ತಾಪಗಳನ್ನು ತಪ್ಪಿಸಲಾಗುವುದಿಲ್ಲ. ಉದ್ಯೋಗದಲ್ಲಿ ಅಡೆತಡೆ ಹೆಚ್ಚು.

ತುಲಾ

ವ್ಯಾಪಾರೋದ್ಯಮದಲ್ಲಿ ಸ್ವಲ್ಪ ಶ್ರಮ, ಅಲೆದಾಟ ಸೇರಿಕೊಂಡರೂ ಕಠಿಣ ದುಡಿಮೆಯಿಂದ ನೀವದನ್ನು ಸರಿಗಟ್ಟುವಿರಿ. ಹಲವು ಗಹನವಾದ ಕಾರ್ಯಗಳನ್ನು ನೆರವೇರಿಸಬೇಕಾದ ಇಕ್ಕಟ್ಟಿನಲ್ಲಿ ಬೀಳುತ್ತೀರಿ. ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ. ದಾಂಪತ್ಯ ಜೀವನದಲ್ಲಿ ಸುಖವಿದೆ. ಮನೆಯಲ್ಲಿ ಮದುವೆಯಂತಾ ಶುಭ ಕಾರ್ಯವೊಂದು ನಡೆಯಲು ಅಕಾಶವುಂಟು. ಉದ್ಯೋಗದಲ್ಲಿ ಮಾಮೂಲು.

ವೃಶ್ಚಿಕ

ಉದ್ಯಮದಲ್ಲಿ ಭಾರೀ ಮುನ್ನಡೆಯಿದೆ. ವೃತ್ತಿಯಲ್ಲಿ ಹೆಸರು, ಹೊಗಳಿಕೆ, ಒಳಿತು ನಿಮ್ಮದಾಗಲಿದೆ. ಹಣಕಾಸಿನ ಪರಿಸ್ಥಿತಿ ನಿರೀಕ್ಷಿಸಿದಷ್ಟು ಜೋರಾಗಿರಲಾರದು. ಸುತ್ತಮುತ್ತಣ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಗಳುಂಟಾಗುವುದರಿಂದ ಕೆಲವು ಒಪ್ಪಂದಗಳಲ್ಲಿ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ಕೊಡುಕೊಳ್ಳುವ ವ್ಯವಹಾರ ಸುಗಮವಾದರೂ ಸಾಲ ಹೆಚ್ಚಬಹುದು.

ಧನುಸ್ಸು

ವ್ಯಾಪಾರೋದ್ಯಮ ರಂಗದಲ್ಲಿ ತೃಪ್ತಿಕರ ಸ್ಥಿತಿಯೇ ಇದೆ. ಕೆಲವು ಮಾಲುಗಳು ಉಳಿದು ಕಯ್ಯ ಕಟ್ಟಿದಂತಾಗಬಹುದು. ವಾಗ್ವಾದ, ಕಲಹಗಳಿಂದ ಆದಷ್ಟು ದೂರ ಉಳಿಯುವುದು ಒಳಿತು. ಹಣಕಾಸಿನ ಪರಿಸ್ಥಿತಿ ಅನುಕೂಲಕರವಾಗಿದೆ. ಹಳೆಯ ಬಾಕಿಗಳು ಸಮಯದಲ್ಲಿ ಸಿಗುತ್ತವೆ; ಸಾಲವೂ ದಕ್ಕುತ್ತದೆ. ಸಂಸಾರದಲ್ಲಿ ಸಣ್ಣ ವಿಷಯಗಳನ್ನೆಲ್ಲ ದೊಡ್ಡದು ಮಾಡುವ ಬದಲು ಕಿವುಡಾಗುವುದೊಳಿತು.

ಮಕರ

ವ್ಯಾಪಾರೋದ್ಯಮ ರಂಗದಲ್ಲಿ ಕೆಲವು ಹೊಸ ಪ್ರಯತ್ನಗಳಿಗೆ ಕೆಲವು ತಡೆಗಳು ತಾಕುತ್ತವೆ. ವ್ಯವಹಾರ ವಿಸ್ತರಣೆಗೆ ಇದು ಸಕಾಲ. ಖರೀದಿಯನ್ನು ಮುಂದೂಡುವುದು ಒಳಿತು. ಆರ್ಥಿಕ ಸ್ಥಿತಿ ತುಂಬಿ ಬರುತ್ತದೆ. ಕುಟುಂಬದಲ್ಲಿ ಅತೃಪ್ತಿಯೊಂದು ಬಿಚ್ಚಿಕೊಳ್ಳುತ್ತದೆ. ಕೆಲವರು ಸಂಸಾರ ತ್ಯಜಿಸಿ ದೂರ ಬದುಕಬೇಕಾಗಿ ಬರಬಹುದು. ಉದ್ಯೋಗದಲ್ಲಿರುವವರು ವರ್ಗಾವಣೆಯಿಂದ ಬಳಲುವರು.

ಕುಂಭ

ಉದ್ಯಮದಲ್ಲಿ ಹೆಚ್ಚಿನ ಅಲೆದಾಟ, ಶ್ರಮಗಳಿರುವುದರ ಜೊತೆಗೆ ಸರಕಾರೀ ತೊಂದರೆಗಳೂ ಇರುತ್ತವೆ. ಹಣಕಾಸಿನ ಗಂಟಿನ ಮೇಲೆ ಖರ್ಚಿನ ಪ್ರಹಾರ ನಡೆದೇ ಇದ್ದರೂ ಹದ್ದು ಮೀರಿ ಹೋಗದು. ಕುಟುಂಬ ಜೀವನದಲ್ಲಿ ಕೇಡುಗಳು ಕಾಡುವುದರಿಂದ ಎಲ್ಲರಿಂದ ಮಾತು ಕೇಳಬೇಕಾಗುತ್ತದೆ. ಉದ್ಯೋಗದಲ್ಲಿರುವವರು ತಾಳ್ಮೆ ಮತ್ತು ಸಹನೆಯಿಂದಿದ್ದರೆ ಮಾತ್ರ ಒಂದು ಗುರಿ ಮುಟ್ಟಲು ಸಾಧ್ಯ.

ಮೀನ

ಉದ್ಯಮ ರಂಗದಲ್ಲಿ ಕೆಲವು ತೊಂದರೆಗಳು ಇದ್ದೇ ಇದೆ. ಮನಸ್ಸಿನ ಕೀಳರಿಮೆಯನ್ನು ಕಿತ್ತೆಸೆಯಬೇಕು. ವ್ಯಾಪಾರದಲ್ಲಿ ಪ್ರತಿಸ್ಪರ್ಧಿಗಳು ಸಾಲುಗಟ್ಟಿ ನಿಲ್ಲುತ್ತವೆ. ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಜವಾಬ್ದಾರಿ ಹೊರಬೇಕಾಗಿ ಬರುತ್ತದೆ. ಕುಟುಂಬ ಜೀವನದಲ್ಲಿ ತೃಪ್ತಿ ಇದೆ. ಕೆಲಮಟ್ಟಿನ ಮನಸ್ತಾಪ, ಒಳ ಹೊಗೆಗಳು ಗೋಚರಿಸಿದರೂ ಕೊನೆಯಲ್ಲಿ ಪುಸ್ಸಾಗುತ್ತವೆ.

ನಿಮ್ಮ ಪತ್ರಗಳು

ಸುರೇಶ್‌ರಾವ್,
ಕನಸಿನಕಟ್ಟೆ

5–4–92ರ ಸಂಚಿಕೆಯು ಅಂಜಲಿಯುವರ ಸುಂದರ ವೈಮಾಟದ ಮುಖಪುಟದೊಂದಿಗೆ ಬಹಳ ಸೊಗಸಾಗಿ ಮೂಡಿಬಂದಿದೆ ಹಾಗೂ ತ. ಪು. ವೆಂಕಟರಾಮ್‌ರವರ 'ಪ್ರೇಮ ಮಂಥನ' ಸಂಪೂರ್ಣ ಕಾದಂಬರಿಯು ಬಹಳ ಚೆನ್ನಾಗಿತ್ತು. ಈ ಕಾದಂಬರಿ 'ಒಲವಿನ ಉಡುಗೊರೆ' ಚಿತ್ರದ ರೀತಿಯಲ್ಲಿಯೇ ಮೂಡಿಬಂದಿದೆ. ಮಿನಿಕಥೆ 'ಮುಖವಾಡ' ತುಂಬ ಚೆನ್ನಾಗಿದೆ.

ರಮೀಝು ಬಾನು,
ಮಂಗಳಪೇಟೆ

'ರಾಗಸಂಗಮ' 5–4–92ರ ಸಂಚಿಕೆಯಲ್ಲಿ ಪ್ರಕಟವಾದ ತ. ಪು. ವೆಂಕಟರಾಮ್‌ರವರ 'ಪ್ರೇಮ ಮಂಥನ' 'ರಾಗ ಸಂಗಮ'ದ ಒಂದು ಉತ್ತಮ ಆಯ್ಕೆ. ಕಥಾ ನಾಯಕ ಅರವಿಂದನು ಆಕಸ್ಮಿಕ ಘಟನೆಯಿಂದ ಕುರುಡನಾದಾಗ ಕರುಣೆ ತೋರಿದ ಶಾಂತ ನಿಜವಾಗಿಯೂ ಕರುಣಾಮಯಿ. ಸಂಭಾಷಣೆಯಲ್ಲಿ ಉದ್ಭವಿಸಿ ಬಂದ ಮಾತುಗಳು ಬಹಳ ಅರ್ಥಗರ್ಭಿತವಾಗಿದೆ.

ಹರಿಶ್ಚಂದ್ರ ಡಿ. ಸುವರ್ಣ,
ಮಂಗಳೂರು

ತ. ಪು. ವೆಂಕಟರಾಮ್ ಅವರ 'ಪ್ರೇಮ ಮಂಥನ' ಸಂಪೂರ್ಣ ಕಾದಂಬರಿ ನಮ್ಮ ಮನ ಸೆಳೆದಿದೆ. ಹಾಗೆಯೇ ಧಾರಾವಾಹಿಗಳು ಕೂಡ ಸಂಚಿಕೆಯಿಂದ ಸಂಚಿಕೆಗೆ ಓದುವ ಅಭ್ಯಾಸವನ್ನು ಹೆಚ್ಚಿಸಿದೆ.

ಕೆ. ಲೋಕೇಶ್, ಕೀರ್ತಿ, ಸ್ವಾತಿ, ಚೈತನ್,
ಅಥಣಿ

ಸಂಪೂರ್ಣ ಕಾದಂಬರಿ 'ಪ್ರೇಮ ಮಂಥನ'ವನ್ನು ತ. ಪು. ವೆಂಕಟರಾಮ್ ಅವರು ಬಹಳ ಸೊಗಸಾಗಿ ಬರೆದಿದ್ದಾರೆ.

ಎಸ್. ಪ್ರಕಾಶ್,
ಜಯಪುರ

ತ. ಪು. ವೆಂಕಟರಾಮ್‌ರವರ 'ಪ್ರೇಮ ಮಂಥನ' ಚೆನ್ನಾಗಿತ್ತು. ಇದರಲ್ಲಿ ಅರವಿಂದನ ಪಾತ್ರ ಚೆನ್ನಾಗಿ ಮೂಡಿ ಬಂದಿದೆ. ಸಣ್ಣ ಕಥೆ ರವಿ ಕೋಟ್ಯಾನ್‌ರವರ 'ಮುಖವಾಡ' ಸಕತ್ತಾಗಿತ್ತು.

ಬಿ. ಸನಾವುಲ್ಲಾ,
ಗೌರಿಬಿದನೂರು

ತ. ಪು. ವೆಂಕಟರಾಮ್ ಬರೆದ 'ಪ್ರೇಮ ಮಂಥನ' ತುಂಬ ಚೆನ್ನಾಗಿತ್ತು. ಬಹಳ ನಿರಾಳವಾಗಿ ಓದಿಸಿಕೊಂಡು ಹೋಯಿತು. ಸಣ್ಣ ಕಥೆ 'ಮುಖವಾಡ' ಕೂಡ ತುಂಬ ಚೆನ್ನಾಗಿತ್ತು. ಹೊಸ ಧಾರವಾಹಿ 'ಚಿನ್ನದ ಪುತ್ಥಳಿ' ಬಹಳ ಚೆನ್ನಾಗಿ ಮೂಡಿ ಬರುತ್ತಿದೆ. ನೀರ್ನಳ್ಳಿ ಗಣಪತಿಯವರ 'ಹಾಸ್ಯ ಸಂಗಮ' ಓದಿ ನಕ್ಕು ನಕ್ಕು ಸಾಕಾಯಿತು.

ನಾಮದೇವ ಕಾಮತ್,
ಕಿನ್ನಿಗೋಳಿ

5–4–92ರ ಸಂಚಿಕೆಯಲ್ಲಿ ಅಂಜಲಿಯವರ ಮುಖಪುಟ ಬಹಳ ಬಹಳ ಚೆನ್ನಾಗಿ ಮೂಡಿಬಂದಿದೆ. ತ. ಪು. ವೆಂಕಟರಾಮ್ ಅವರ 'ಪ್ರೇಮ ಮಂಥನ' ಕಾದಂಬರಿ ಕೂಡ ಬಹಳ ಚೆನ್ನಾಗಿ ಇತ್ತು.

ಕೆ. ಕುಮಾರ,
ಕನಗನಮರಡಿ

'ಪ್ರೇಮ ಪರ್ವತ' ಧಾರಾವಾಹಿ ಚೆನ್ನಾಗಿ ಮೂಡಿ ಬರುತ್ತಿದೆ.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53

ಹಾಸ್ಯ ಸಂಗಮ


ಎ.ಮ. ಮಹೇಶ್.



"ಭೂತ ಕಾಲ, ವರ್ತಮಾನ ಕಾಲ, ಭವಿಷ್ಯತ್ ಕಾಲಕ್ಕೆ ಉದಾಹರಣೆ ಕೊಡಿ ಅಂತ ಪ್ರಶ್ನೆ ಕೇಳಿದ್ದಾರಲ್ಲ, ಏನ್ ಉತ್ತರ ಬರ್ದ್ಯೋ?"



"ಪೋಲೀಸರು ವೀರಪ್ಪನ್‌ನನ್ನು ಹಿಂದೆ ಹುಡುಕುತ್ತಿದ್ದರು, ಇಂದು ಹುಡುಕುತ್ತಿದ್ದಾರೆ, ಮುಂದೆಯೂ ಹುಡುಕುತ್ತಲೇ ಇರ್ತಾರೆ ಅಂತ ಬರ್ದೆ."



"ಸಾರ್, ನಿಮ್ಮ ಚಿತ್ರ ಅಂದ್ರೆ ನಂಗೆ ತುಂಬ ಇಷ್ಟ ಸಾರ್. ನಾನು ನಿಮ್ಮ ಫ್ಯಾನ್ ಸಾರ್."



"ಹೌದಾ, ಯಾವ ಕಂಪೆನೀದೂ?"

RAGASANGAMA Weekly 26-4-92 Regd. No. BGW